ಗುಡ್ಡಜ್ಜ



ಶಾಂತನಾಯ್ಕ ಶಿರಗಾನಹಳ್ಳಿ

ಗುಡ್ಡಜ್ಜ

ಕಥಾ ಸಂಕಲನ

ಶಾಂತ ನಾಯ್ಕ, ಶಿರಗಾನಹಳ್ಳಿ

೧೯೯೯

ಅನಿಕೇತ ಪ್ರಕಾಶನ, ಕಾರವಾರ

GUDDAJJA : Stories
Written by Shant Naik, Siraganhalli
Khajibag, Karawar
Published by Aniketa Prakashana
Smt. Dakshayani S. Naik

First Edition ; 1999 Copy Right : Publisher

Pages ; viii + 125 Price ; Rs. 50-00

Size ; Crown 1/8 Copies ; 1000

Printed at ; Kambale Printers, Gadag

ಗುಡ್ಡಜ್ಜ : ಕಥಾ ಸಂಕಲನ

ಲೇಖಕರು : ಶಾಂತ ನಾಯ್ಕ, ಶಿರಗಾನಹಳ್ಳಿ
ಉದ್ಘೋಷಕರು,
ಆಕಾಶವಾಣಿ, ಖಾಜಿಬಾಗ, ಕಾರವಾರ

ಪ್ರಕಾಶಕರು : ಅನಿಕೇತ ಪ್ರಕಾಶನ,
ಶ್ರೀಮತಿ ದಾಕ್ಷಾಯಣಿ ಎಸ್. ನಾಯ್ಕ
ಖಾಜಿಬಾಗ, ಕಾರವಾರ

ಹಕ್ಕುಗಳು : ಪ್ರಕಾಶಕರು

ಮೊದಲ ಮುದ್ರಣ : ೧೯೯೯

ಪುಟಗಳು : viii + ೧೨೫

ಪ್ರತಿಗಳು : ಒಂದು ಸಾವಿರ

ಬೆಲೆ : ೫೦/- (ಐವತ್ತು ರೂ. ಗಳು)

ಮುಖಪುಟ ಕಲೆ : ಸಂಗಮೇಶ ಆರ್ಟ್ಸ್, ಗದಗ

ಮುದ್ರಕರು : ಕಾಂಬಳೆ ಪ್ರಿಂಟರ್ಸ್,
ಇದಗಾ ಕಾಂಪ್ಲೆಕ್ಸ್,
ವಿವೇಕಾನಂದ ರಸ್ತೆ,
ಗದಗ-೫೮೨ ೧೦೧ ✆ ೩೫೨೯೫

ನನ್ನೆರಡು ನುಡಿಗಳು

ಸಾಹಿತ್ಯ ಸಾಗರದೊಳಗೆ ಚಿಕ್ಕದೊಂದು ನಾವೆ ನೂಕುತ್ತ ಹೊರಟಿದ್ದೇನೆ ಸಹೃದಯಿಗರತ್ತ. ತೆರೆಗಳಿಗೆ ಅಪ್ಪಳಿಸಿ ಮುಳುಗುವ ಭಯವೊಂದೆಡೆ, ದೊಡ್ಡ ಹಡಗುಗಳ ಕಂಡು ಅಚ್ಚರಿ ಮತ್ತೊಂದೆಡೆ. ಅಂಜುತ್ತಲೇ ಹೊರಟ ಪಯಣದಲ್ಲಿ ನಿಮ್ಮವರೆಗೆ ತಲುಪಿ, ತಾವು ಓದಿ ನನ್ನೆಲ್ಲಾ ಅನುಭವಗಳನ್ನು ಅನುಭವಿಸುವಾಗ ನಿಮ್ಮ ಅನುಭವಗಳೊಂದಿಗೆ ತಾಳೆಯಾದರೆ ಬರೆದದ್ದು ಸಾರ್ಥಕವಾದೀತು. ಕಥೆಗಳು ಓದಿಸಿಕೊಂಡು ಹೋಗುವುದರೊಂದಿಗೆ ನಿಮ್ಮ ನೆನಪಿನಾಳದೊಳಗುಳಿಯುವವು ಎಂಬುದು ನನ್ನ ಆಶಯ.

ಓದಿ ಪ್ರೋತ್ಸಾಹಿಸಿದ ಹಿರಿಯರಿಗೆ, ಗೆಳೆಯರಿಗೆ, ಬರೆಯಲು ಪ್ರೇರೇಪಿಸಿದ ಗುರುಗಳಿಗೂ, ಕಿರಿಕಿರಿ ಮಾಡುತ್ತಲೇ ಓದಿದ ಹೆಂಡತಿ, ತಿದ್ದಿ-ತೀಡಿ ರೂಪುಕೊಟ್ಟು ಮುದ್ರಣಕ್ಕೆ ನೆರವಾದ ಡಾ. ಅರ್ಜುನ ಗೊಳಸಂಗಿಯವರಿಗೆ, ಮುಖಪುಟವನ್ನು ಚಿತ್ರಿಸಿದ ಗದುಗಿನ ಸಂಗಮೇಶ ಆರ್ಟ್ಸ್ ಅವರಿಗೆ ಹಾಗೂ ಮುದ್ರಿಸಿದ ಕಾಂಬಳೆ ಪ್ರಿಂಟರ್ಸ್ ಗದಗ ಇವರಿಗೆ, ಎಲ್ಲೋ ಹತ್ತರಲ್ಲಿ ಹನ್ನೊಂದಾಗಿ ಬೆರೆತು ಹೋಗಲಿದ್ದ ನನ್ನ ಬೇರ್ಪಡಿಸಿ ಈ ಕಥೆಗಳನ್ನು ಬರೆಯುವಷ್ಟು ಸಶಕ್ತ ಹಂತ ತಲುಪಿಸಿದ ಗುರುಗಳಾದ ಶ್ರೀಯುತ ಶಾಂತವೀರಯ್ಯನವರಿಗೆ ಋಣಿಯಾಗಿದ್ದೇನೆ.

ಶಾಂತ ನಾಯ್ಕ, ಶಿರಗಾನಹಳ್ಳಿ

ಪರಿವಿಡಿ

ಅರ್ಪಣೆ

ಬದುಕನ್ನ ಕಲಿಸಿ,

ಬದುಕನ್ನ ಆರಂಭಿಸುವ ಮುನ್ನ ಅಗಲಿದ

ಅವ್ವ,

ಬದುಕಿನುದ್ದಕ್ಕೂ ಹೋರಾಟ ನಡೆಸಿ–

ನಡೆಸುತ್ತಲೇ ಇರುವ

ಅಪ್ಪನಿಗೆ

ಒಂದೆರಡು ಅನಿಸಿಕೆಗಳು

ಹಲವು ವರ್ಷಗಳ ಹಿಂದೆ ಈ ಕಾಲೇಜಿನಲ್ಲಿ ಓದುತ್ತಿದ್ದಾಗ ನನ್ನ ಪ್ರೀತಿಯ ವಿದ್ಯಾರ್ಥಿಯಾಗಿದ್ದ, ನಂತರವೂ ಗುರು-ಶಿಷ್ಯ ವಿಶಿಷ್ಟವಾದ ಆತ್ಮೀಯತೆಯನ್ನು ಉಳಿಸಿಕೊಂಡು ಬಂದ ಶಾಂತ ನಾಯ್ಕನ ಈ ಮೊದಲ ಕಥಾಸಂಕಲನದ ಬಗ್ಗೆ ನನ್ನ ಒಂದೆರಡು ಅನಿಸಿಕೆಗಳನ್ನು ಇಲ್ಲಿ ಹೇಳುತ್ತಿದ್ದೇನೆ. ಇದು ಈ ಕೃತಿಯ ಸಮಗ್ರ ಅಥವಾ ವಿವರವಾದ ವಿಮರ್ಶೆ ಖಂಡಿತ ಅಲ್ಲ. ಈ ಹುಡುಗ ಬೆಳೆದು ಒಳ್ಳೆಯ ಲೇಖಕನಾಗಲಿ ಎಂಬ ಪ್ರಾಮಾಣಿಕ ಇಚ್ಛೆಯಿಂದ ಅವನ ಸಾಧನೆಯ ಬಗ್ಗೆ ಹಾಗೂ ಇತಿಮಿತಿಗಳ ಬಗ್ಗೆ ಹೇಳುವ ನಾಲ್ಕಾರು ಮಾತುಗಳು, ಅಷ್ಟೆ.

ಇಲ್ಲಿಯ ಕಥೆಗಳನ್ನು ಓದಿದಾಗ ಮೊದಲಿಗೆ ನನಗನಿಸಿದ್ದು – ಈ ಲೇಖಕನ ಅಭಿವ್ಯಕ್ತಿಯಲ್ಲಿ ಪ್ರಾಮಾಣಿಕತೆ ಇದೆ, ವಸ್ತುವಿನ ಆಯ್ಕೆಯಲ್ಲಿ ಸರಳತೆ ಇದೆ, ನೊಂದವರ ಬಗ್ಗೆ ಕಳಕಳಿ ಇದೆ, ಶೋಷಣೆಯ ವ್ಯವಸ್ಥೆಯ ಬಗ್ಗೆ ಈತನಲ್ಲಿ ಮೌನವಾದ ಆಕ್ರೋಶವಿದೆ, ಜೀವನಪ್ರೀತಿಯೂ ಇದೆ ಮತ್ತು ಇವೆಲ್ಲ ಮುಂದೆ ಈತನ ಬೆಳವಣಿಗೆಗೆ ಪೂರಕವಾಗಬಲ್ಲ ಅಂಶಗಳು. ಜೊತೆಗೇ, ಮೊದಲ ಬರಹದಲ್ಲಿ ಸಹಜವಾಗಿ ಕಂಡುಬರುವ ವಿಚಾರಗಳ ಅಪಕ್ವತೆ, ತಂತ್ರದ ಶೈಥಿಲ್ಯ, ಹಿಡಿತಕ್ಕೆ ಸಿಕ್ಕದಿರುವ ಭಾಷೆ, ಇತ್ಯಾದಿ ಮಿತಿಗಳೂ ಕಂಡುಬರುತ್ತವೆ. ಪ್ರಯತ್ನಪಟ್ಟು ಈತ ಈ ಮಿತಿಗಳನ್ನು ದಾಟಬೇಕಷ್ಟೆ.

ಹೆಚ್ಚಿನ ಕಥೆಗಳಲ್ಲಿ ತನಗೆ ತೀರ ಪರಿಚಿತವಾದ ಪರಿಸರ, ಪಾತ್ರಗಳು, ಘಟನೆಗಳನ್ನೇ ಲೇಖಕ ಆಯ್ದುಕೊಂಡಿದ್ದಾನೆ. ಆದ್ದರಿಂದ ವರ್ಣನೆಗಳು ವಿವರವಾಗಿದ್ದರೂ ಅವಾಸ್ತವವೆನಿಸುವುದಿಲ್ಲ. ಛತ್ರದೂಟಕ್ಕಾಗಿ ಬಿದರ ಪಟ್ಟ ತಳಮಳವನ್ನು ಅಥವಾ ಕಮಲಿಯ ಕಳವಳದ ಕ್ಷಣಗಳನ್ನು ಬಣ್ಣಿಸುವಾಗ ಶೈಲಿಯ ಚಿತ್ರವತ್ತತೆ ಗಮನ ಸೆಳೆಯುತ್ತದೆ. ಬಡತನ, ಹಸಿವು, ಅಸಹಾಯಕತೆ, ಹತಾಶೆಗಳಿಂದ ಕಂಗೆಟ್ಟು ಗೌಡನ ಕಾಮಕ್ಕೆ ಬಲಿಯಾಗುವ ಕಮಲಿ, ಗುಡ್ಡಜ್ಜನ ತೃಷೆ ತೀರಿಸಲು ಮುಂದಾಗುವ ಯಂಕವ್ವ, ಸೀರೆಯ ವ್ಯರ್ಥ ಕನಸು ಕಾಣುವ ಕೆಂಚಿ, ಇತ್ಯಾದಿ ಶೋಷಿತ ಮಹಿಳೆಯರ ಮಾನಸಿಕ ವಿಪ್ಲವವು ಹಲವಾರು ಹಂತಗಳಲ್ಲಿ ನಿಜವಾಗಿ ಮನಸ್ಸು ತಟ್ಟುತ್ತದೆ. 'ಘಾತ' ಕಥೆಯ ಸಿಂಗ ಒಬ್ಬ

ಟಿಪಿಕಲ್ ಗಂಡಸಾಗಿ ಯಥಾವತ್ತಾಗಿ ಚಿತ್ರಿತನಾಗಿ ನೆನಪಿನಲ್ಲುಳಿಯುವ ಪಾತ್ರವಾಗುತ್ತಾನೆ. ಮೈಯಲ್ಲಿ ದಮ್ಮಿದ್ದಾಗ ಎಲ್ಲರ ಮೇಲೆ ಜೋರುಮಾಡಿ, ಹೆಂಡತಿಯನ್ನು ಹಿಂಸಿಸಿ, ಹಲವಾರು ಹೆಂಗಸರ ಸಂಗ ಮಾಡಿ ಪೌರುಷ ಮೆರೆದ ಸಿಂಗ ಕೊನೆಗೆ ನಿತ್ರಾಣನಾದಾಗ, ತನ್ನೆಲ್ಲ ಸೇವೆಯನ್ನೂ ಬೇಸರಿಸದೆ ಮಾಡುವ ಹೆಂಡತಿಯೆಂಬ ಮನುಷ್ಯಪ್ರಾಣಿ ಬೇರೊಬ್ಬನಿಗೆ ಬಸಿರಾದಾಗ 'ಆಘಾತ' ಗೊಳ್ಳುತ್ತಾನೆ. ಇಡೀ ಜೀವನ ತಾನು ಎಲ್ಲರನ್ನೂ ಘಾತಿಸುತ್ತಲೇ ಬಂದದ್ದು ಆತನಿಗೆ ತಪ್ಪೆನಿಸುವುದಿಲ್ಲ. ಹೀಗೆ ತನ್ನ ಅಪರಾಧಗಳನ್ನು ಸಹಜವರ್ತನೆಯೆಂದು ಭಾವಿಸಿ, ಹೆಂಡತಿಯ ಸಹಜವರ್ತನೆಯನ್ನು ಅಪರಾಧವೆಂದು ಭಾವಿಸುವ ಗಂಡಸರ ಪ್ರತೀಕವಾಗಿದ್ದಾನೆ ಈ ಸಿಂಗ. ಇಂತಹ ಹಲವಾರು ನೈಜ ಜೀವನಚಿತ್ರಣಗಳು ಈ ಸಂಕಲನದಲ್ಲಿನ ಮೆಚ್ಚತಕ್ಕ ಅಂಶಗಳಾಗಿವೆ.

ಈ ನೈಜತೆ, ಸರಳತೆ, ಪ್ರಾಮಾಣಿಕತೆಗಳು ಲೇಖಕ ತನಗೆ ಹತ್ತಿರವಲ್ಲದ ವಸ್ತುಗಳನ್ನು ಆಯ್ದುಕೊಂಡಾಗ ತಾವಾಗಿ ವಿರಳವಾಗುತ್ತವೆ. ಶಿವಲೀಲಾ ಎಂಬ ಹುಡುಗಿಯ ಸುತ್ತ ಹೆಣೆದ ಕಥೆಯಾಗಲೀ, 'ಒಂದು ಘಟನೆಯ ಸುತ್ತ'ಲಿನ ವಿವರಗಳಾಗಲಿ, 'ಪಯಣಿಗರು' ಕಥೆಯಲ್ಲಿನ ವಿಚಾರಲಹರಿಯಾಗಲಿ ಆತ್ಮವೃತ್ತಾಂತದ ರೂಪ ತಾಳುತ್ತವೆಯೇ ವಿನಃ ಕಥೆಯಂತೆ ಸಂಕೀರ್ಣ ಪ್ರಭಾವ ಬೀರುವುದಿಲ್ಲ.

ಎಲ್ಲ ಹತಾಶೆ, ನಿರಾಶೆ, ಶೂನ್ಯತೆ, ಸೋಲು, ಅವಮಾನ ಇತ್ಯಾದಿಗಳನ್ನು ಹೊರತಾಗಿಯೂ ಈ ಜೀವನದಲ್ಲಿ ಬೆಳಕಿನ ಕಿರಣಗಳಿವೆ, ಮಾರ್ಗವೂ ಇದೆ, ನಂಬಿಕೆಯಂಥ ಮೌಲ್ಯಗಳೂ ಇವೆ ಎಂದು ಲೇಖಕ ಅಭಿಪ್ರಾಯಪಡುತ್ತಾನೆ. ಮಗಳು ಭದ್ರಿಯ ಕೂಗಿನಿಂದ ಮನಕರಗುವ ವೀರ್ಯಾ, ಶಿಕ್ಷೆಯ ಭಯದಲ್ಲೂ ಜಿಲೇಬಿಯ ಸವಿ ಆನಂದಿಸುವ ಡಿಂಗ, ಇತ್ಯಾದಿ ಪಾತ್ರಗಳು ಲೇಖಕನ ಆಶಾ ಭಾವವನ್ನು ಪ್ರತಿಬಿಂಬಿಸುತ್ತವೆ. ಇದು ಆರೋಗ್ಯಕರ ದೃಷ್ಟಿ.

ಶಾಂತ ನಾಯ್ಕನ ಓದು ಮತ್ತು ಅನುಭವ ಇನ್ನೂ ಆಳವಾಗಿ, ವಿಸ್ತೃತವಾಗಿ ಈತ ಒಳ್ಳೆಯ ಕತೆಗಾರನಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

ಧಾರವಾಡ
೨೭, ಜೂನ್ ೧೯೭೯

ವೀಣಾ ಶಾಂತೇಶ್ವರ
ಪ್ರಾಚಾರ್ಯರು
ಕರ್ನಾಟಕ ಕಲಾ ಮಹಾವಿದ್ಯಾಲಯ

ಬಿದರ ಮತ್ತು ಛತ್ರದೂಟ

ಆ ಮೂವರು ಛತ್ರದ ಕಂಪೌಂಡಿನ ಗ್ವಾಡಿ ದಾಟಿ ಹೆದರ್ಕೊಂತ ಒಳಗ ಕಾಲಿಟ್ರು. ತಮ್ಮೊಳಗ ಆಡಕೊಂಡಿದ್ದ ಮಾತಗಳನ್ನ ಮನವರಿಕಿ ಮಾಡಿಕೊಂಡ್ರು. ಡಿಂಗ ಉಳಿದಿಬ್ಬರಿಗಿಂತ ದೊಡ್ಡವನಾದ್ದರಿಂದ ಕಮ್ಮಿ ಹೆದರಿ, ನಡದಿರಬಹುದಾದ ಮದ್ವಿ ತಮ್ಮ ಮನೀದ ಅನ್ನೋಹಂಗ ದಿಮಾಕಿನಿಂದ ಇಬ್ಬರಿಗೂ ಧೈರ್ಯ ಹೇಳ್ತಾ ನಡೀತಿದ್ದ. ಹಿಂದ ಒಂದೆಲ್ಡ ಸಲ, ಹೊಟ್ಟಿ ಹಸದಿದ್ಕ ಯಾರಿಗೂ ಗೊತ್ತಿಲ್ದಂಗ ಉಂಡು ಮದ್ವಿಊಟದ ರುಚಿ ನೋಡಿದ್ದ. ಅದಕ್ಕ ಬಿದರ, ಬೊಮ್ಮರಿಬ್ಬರಿಗೂ ಛತ್ರದ ಊಟಕ್ಕೆ ಮಾರ್ಗದರ್ಶಕನಾಗಿದ್ದ. ಮದ್ಯಾನದ ಸಾಲಿ ಬಿಟ್ಟ ನಂತರ, ಹೊಟ್ಟಿ ಹಸಗೊಂಡು ಸಾಲಿಗೆ ಹೋಗಾಕ ಕಸು ಇಲ್ಲದೆ ಮಕ ಬಾಡಿಸಿಕೊಂಡು ಹಾಸ್ಟೇಲಿನ್ಯಾಗ ಯಾರಾರ ಹುಡ್ರು ತಮ್ಮ ಟ್ರೆಂಕುಗಳಿಂದ ರೊಟ್ಟಿ ತಕ್ಕೊಂಡು ತಿನ್ನುತ್ತಿದ್ರ, ಮಕ ಮಕ ನೋಡ್ಕೊಂತ ಅವರ ಬಾಯಿ ಆಡೋದು, ಅವರು ನುಂಗೋದು ನೋಡಿ ಬಾಯಿಯೊಳಗ ಬಂದ ಹಿಡಿ ಉಗಳನ ಮೆಲ್ಲಗ ಗುಟಕ್‌ಂತ ನುಂಗತಿದ್ದ ಬಿದರ. ಉಗಳು ನುಂಗೋದನ್ನ ಯಾರ ನೋಡಿದ್ರ "ಲೇ ಉಗಳ ಯಾಕ ನುಂಗತಿ, ನಮ್ಮ ಹೊಟ್ಟಿ ನೊಯಿತ್ತೈತಿ" ಎಂದು ಗದರಿಸ್ತಾರಂತ ಉಗಳ ನುಂಗಾಕು ಧೈರ್ಯ ಇಲ್ದ, ಹರಕು ಗೋಣಿಚೀಲ ಹಾಸಿಕೊಂಡ. ರಾತ್ರಿ ಕನಸಿನ್ಯಾಗ ಉಚ್ಚಿ ಹೊಯ್ದು ಕೊಂಡಿದ್ದು ಹಸಿಹಸಿಯಾಗಿತ್ತು. ಘಮ್ ಅಂತ ವಾಸನಿ ಮೂಗಿಗ ಅಡರಿದ್ರು ಸಹಿಸಿಕೊಂಡ, ಹೊಲಸು ದುಪಟಿಯನ್ನ ಮಕದ ಮ್ಯಾಲ ಎಳಕೊಂಡು ನಿದ್ದಿ ಬಂದಿರೋರ ಹಂಗ ಮಕ್ಕೊಂಡ. ಮುಂಜಾನಿ ಹತ್ತಗಂಟೀಗ ಕೊಟ್ಟ ಹಾಸ್ಟಲಿನ ಜ್ವಾಳದಮುದ್ದಿ, ಹುಳ್ಳಿ, ಹುಳಕ ಬದ್ನಿಕಾಯಿ ಸಾರು

ಉಂಡು-ಉಂಡು ನಾಲಗಿ ರುಚಿ ಕೆಟ್ಟು ಕೆರ ಹಿಡ್ದಿತ್ತು. ಮಂಗಳವಾರ, ಶನಿವಾರ ಕೊಡ್ತಿದ್ದ ಓಡಿ ಅನ್ನಕ್ಕ ವಾರದ ತುಂಬ ಕನಸ ಕಾಣ್ತಿದ್ದ. ರೂಮಿನ ಉಳಿದ ಹುಡ್ರು ಹತ್ತಿರ ತಿಂದಿದ್ದ ರೊಟ್ಟಿ-ಚಟ್ನಿ ಸಾಲ ಹೆಚ್ಚಾಗಿದ್ಕ ಬಿದರನನ್ನ ಯಾರೂ ಮಾತಾಡಸ್ತಿರಲಿಲ್ಲಾ. ಅವನ ಮುಂದ ರೊಟ್ಟಿ ತಿಂದರೂ, ಅವನ ಕಡೀಗ ನೋಡ್ತಿರಲಿಲ್ಲಾ. ಅವನಿಗಿಂತ ಸಣ್ಣವನಾದ ಆನಂದ ಬಿದರನನ್ನ ಕರೆದುಕೊಂಡು ಹೊಟೇಲಿಗೆ ಹೋಗಿ ತಾನೊಬ್ಬನೇ ತಿನ್ನುತ್ತಿದ್ದ, ಬಿದರ ಮಾತ್ರ ನೀರು ಕುಡಿದು, ಆನಂದ ತಿಂದಿದ್ದಕ್ಕೆ ಖುಷಿಪಟ್ಕೊಂಡು ಎದ್ದು ಬರ್ತಿದ್ದಾ. ನಲ್ವತ್ತು ಮೈಲಿ ದೂರದ ಶಿರ್ನಳ್ಳಿಯಿಂದ ಸಾಲಿ ಕಲಿಯಾಕಂತ ಫ್ರೀ ಹಾಸ್ಟಲ್‌ಗೆ ಸೇರಿದಂದಿನಿಂದ ಗಂಜಿಯೂ ಗತಿ ಇಲ್ಲದ ಮನಿಕಡೀಗ ಮನಸು ಮಾಡ್ತಿರಲಿಲ್ಲಾ. ವಾರಕೊಂದು ಸಲ ದಾವಣಗೇರಿ ಸಂತೀಗ ಬರೋ ಊರಮಂದಿ ಕೈಯಾಗ ನಾಕಾಣೆ, ಎಲ್ಡು ರೊಟ್ಟಿ ಮಾಡಿ ತಿಂಗಳಿಗೋ, ಎಲ್ಡು ತಿಂಗಳಿಗೋ ಕಳಿಸ್ತಿದ್ದ ಬಿದರನ ಅವ್ವನ ಬುತ್ತಿ ಆಶಿಗ ಪ್ರತಿವಾರ ಹೊಂಡದ ಸರ್ಕಲ್ ಹತ್ರ ಹನಮಾನ್ ಬಸ್ ಕಾಯುಕ ಹೋಗ್ತಿದ್ದ. ಕಳಸಿದ್ರ ಖುಷಿಯಿಂದ ರೇಲ್ವೆಹಳಿ ದಾಟಿ, ಅರುಣಾ ಟಾಕೀಸ್ ಮುಂದ ಹಚ್ಚಿದ್ದ ಸಿನೀಮಾದ ವಾಲ್‌ಪೋಸ್ಟರ ನೋಡಿ ಸಿನೀಮಾ ನೋಡಿದಷ್ಟು ಖುಷಿಯಿಂದ ಗೌರ್ಮೆಂಟ್ ಹೈಸ್ಕೂಲ್ ಮೈದಾನದೊಳಗ ಹಾಸಿ ಹಾಸ್ಟಲಿಗ ಬಂದು ಮುದ್ದಿ ಉಂಡಿದ್ರೂ ಮನಿರೊಟ್ಟಿ ರುಚಿ ನೋಡೋದನ್ನ ಮರಿತಿದ್ದಿಲ್ಲಾ. ಯಾರು ಬರ್ದಿದ್ರ, ಬಂದ ಹುಡ್ರ ಹಿಂದ ಸುತ್ತಿ ಅರ್ಧ ರೊಟ್ಟಿ ಸಾಲಕ್ಕಾಗಿ ಮಸ್ಕಾ ಹೊಡಿತಿದ್ದ. ಏಳನೇ ಕ್ಲಾಸಿನ್ಯಾಗ ಓದುತ್ತಿದ್ದ ಬಿದರ, ಅವರಪ್ಪ ನುಗ್ಲನಿಗೆ ಹನ್ನೊಂದನೆಯ ಮಗ. ರಾಗಿ ಮಸಲ್ವಾಡದಿಂದ ಹಿಡಿದು ಸುತ್ತಲ ಹಳ್ಳಿ ತಿರುಗಿ ಕೆಲ್ಸಮಾಡಿ ಜೀವನ ಮಾಡ್ತಿದ್ದ ನುಗ್ಲನಿಗೆ, ಊರಾಗ ಒಂದಿಬ್ಬರು ಸಾಲಿ ಕಲಿತಿಂದ, ಹಿಂಡಮಂದಿ ಮಕ್ಕಳಾಗ ಹನ್ನೊಂದನೆಯ ಬಿದರ ಸಾಲಿ ಕಲೀಲಿ, ಬಿದರನ ತಮ್ಮ ಡೊಂಬ ಇನ್ನೂ ಸಣ್ಣವ. ಆದ್ದರಿಂದ, ಬಿದರನಿಗೆ ಬ್ಯಾಡಾದ್ರೂ ಸಾಲಿ ಕಲಿಯೋ ಸ್ಥಿತಿ ಬಂತು. ಶಿರ್ನಳಿಯೊಳಗ ಕಿಟ್ಟಣ್ಣ ಮೇಷ್ಟ್ರು ಸರಿ ಕಲಸದಕ್ಕ ಊರ ಹುಡ್ರು ಬ್ಯಾರೆ ಊರಿಗ ಸೇರಿಂದ, ನುಗ್ಲ ತಮ್ಮೂರಿನ ಗಜರ ದಾವಣಗೇರಿ ಫ್ರೀ ಹಾಸ್ಟಲಿನ್ಯಾಗ ಇರೋದು ತಿಳಿದು ಬಿದರನ್ನ ಸೇರಿಸಿದ್ದ. ಅವಾಗ-ಅವಾಗ ಯಾರದಾದರೂ ಕೆಲಸಕ್ಕ ಹೋದಾಗ, ಹೊಲದ ಮ್ಯಾರಿವ್ಯಾಲ ಸಿಕ್ಕ ಅಣಬಿ

ಕಿತ್ತು ಆರ್ಯರ್ಕೇರಿಗ ಮಾರಾಕ ತರ್ತಿದ್ದು, ಅದು ಲಿಂಗಾತ್ರ ಮಂದಿ ಹೊಲ್ದಾಗ ಸಿಕ್ಕ್ರು, ಬ್ಯಾರೆ ಕಾಟಿಗರ ಹೊಲ್ದಾಗ ಸಿಕ್ಕ್ರು ತಿನ್ನೋಮಂದಿ ಕೊಡ್ತಿದ್ದಿಲ್ಲಾ. ಮೂರೋ-ನಾಕು ರೂಪಾಯಿಗ ಮಾರಿ, ನಾಕಾಣೆ ಕೊಟ್ಟ "ಸರಿಗ ಓದ ಮಗಾ, ನೀನಾರ ಹೊಟ್ಟಿತುಂಬ ಉಂಡಿದ್ರ ಸಾಕು. ನೀನ ನೌಕರಿ ಹಿಡಿಯೊತಂಕ ನಾವೇನು ಬದಕಿರಂಗಿಲ್ಲಾ" ಅಂತ ಗುಳಿಬಿದ್ದ ಕಣ್ಣಾಗ ನೀರು ತಂದ್ಕೊಂತಿದ್ದದ್ದು ನೆನಪಾಗಿ, ಯಾರ ಕೂಡ ಕಲಿಯದಂಗ ಬಿದರ ಒಂಟಿಯಾಗಿ ಅಡ್ಡಾಡ್ತಿದ್ದ. ಒಂಬತ್ತನೇ ಕ್ಲಾಸಿನ ಡಿಂಗ, ಬೊಮ್ಮ ಅವನ ಹಂಗ ದೂರದವರು. ಅವರಿಗೂ ಯಾರು ಬರ್ತಿರಲಿಲ್ಲವಾದ್ದರಿಂದ ಬಿದರನನ್ನ ಸಮಜಾಯಿಸ್ತಿದ್ರು. ಮೂವರು ಸಾಲಿ ಬಿಟ್ಟಂದ ಹಾಸ್ಟಲಿನ ಮೈದಾನದಾಗ ಆಟ ಆಡೋದು, ಒಟ್ಟೊಟ್ಟಿಗೆ ಅಡ್ಡಾಡುವುದನ್ನ ರೂಢಿ ಮಾಡಿಕೊಂಡಿದ್ರು. ಮಂಗಳವಾರ ಅನ್ನದ ದಿನ ಮುಂಜಾನಿ ಜಲ್ದಿ ಊಟ ಹಾಕಿದ್ಕ ಮಧ್ಯಾನ ಹೊಟ್ಟಿ ಹಸಿವಾಗಿತ್ತು. ಬಿದರಗ ಸಾಲಿಗ ಹೋಗಾಕ ಮನಸಿಲ್ದ ಮಧ್ಯಾನದ ಪುಸ್ತಕ ತಗಿತಿದ್ದ. ಬೊಮ್ಮ ಬಂದವನ 'ಡಿಂಗ ಕರಿತಿದ್ದಾನಂತ' ಕಿವಿಯೊಳಗ ಹೇಳಿ ಹೋದ. ಹಾಸ್ಟೇಲ ಮುಂದೆ ನಿಂತವರೇ, ಮೋತಿ ವೀರಪ್ಪ ಕಲ್ಯಾಣ ಮಂಟಪದೊಳಗ ನಡಿತಿರೋ ಮದವಿ. ಯಾರಿಗೂ ತಿಳೀದಂಗ ಒಳಗಹೋಗಿ ಮದವಿ ಊಟ ಉಂಡುಬರೋ ವಿಚಾರ ತಿಳಸಿದ. ಬಿದರನಿಗೆ ಏನೂ ತಿಳೀಲಿಲ್ಲಾ. ರಾಗಿಮಸಲ್ವಾಡದ ಮುನಿಯಪ್ಪನ ಒಬ್ಬಳೇ ಮಗಳು ಸರೋಜವ್ವನ ಮದವಿಗ ಇಡಿ ಊರಿಗೆ–ಊರೇ ಸಣ್ಣ-ಪುಟ್ಟ ಹುಡ್ರ ದಂಡು ಮೈಲುದೂರದವರೆಗೆ ಸಾಲು ಕಟ್ಟಿ ಹೋದದ್ದು ನೆನಪಾತು. "ಅಲ್ಲೋ ಡಿಂಗಣ್ಣ ಮಂದಿ ಏನು ಅನ್ನಂಗಿಲ್ಲೇನು" ಎಂದ ಬಿದರ. "ಅನ್ನಂಗಿಲ್ಲಾ ಅಲ್ಲಾ, ಸಿಕ್ರ, ದನಕ್ಕ ಬಡಿಯೋ ಹಂಗ ಬಡಿತಾರ ಅಷ್ಟೆ" ಅಂದ ಬೊಮ್ಮ. "ಏ ಹುಚ್ಚಿ, ಅವನಿಗ ಯಾಕ ಹೆದರಸ್ತಿ ಬಿಡು ಬರಾಕಿಲ್ಲಾ" ಎಂದು ಡಿಂಗ ಬೊಮ್ಮನನ್ನ ಎಳೆದು ಸುಮ್ಮನಿರುವಂತೆ ಸನ್ನೆ ಮಾಡಿದ. "ನಾ ಒಲ್ಲೇ ಸಾಲಿಗ ಹೊಕ್ಕೀನಿ, ಗಣಿತದ ಮೇಷ್ಟ್ರು ಹೊಡಿತಾರ ಸಾಲಿ ತಪ್ಪಿಸಿದ್ರ" ಅಂದವನೇ ತನ್ನ ರೂಮಿಗೆ ಹೋಗಲು ಅನುವಾದ. "ಲೇ ಬಿದರ ಅವನ ಮಾತಿಗ ಹೆದರಬ್ಯಾಡ ಬಾ, ನಾ ಅಲ್ಲೇನು ನಾಕಸಲ ಹೋಗಿ ಉಂಡುಬಂದಿದ್ದು" ಎಂದು ಪುಸಲಾಯಿಸಿ ಸಾಲಿ ಬಿಡಿಸಿದ.

ಮತ್ಮಾಗಾಂಧಿ ಸಾಲಿ ದಾಟಿ ಕಮಲಮ್ಮ ಕಾಲೇಜು, ಪಕ್ಕದ ಗಜಾನನ ಸ್ಟೋರಿನ ಸಂದಿಯೊಳಗಿಂದ ಹಾದು ಪಕ್ಕದ ದೊಡ್ಡ ಬಂಗಲೆಯ ಗೇಟಿನ ಮುಂದೆ ಹಾದು ಹೋಗುತ್ತಿದ್ದಾಗ, ಮನಿಯೊಳಗಿಂದ ದೊಡ್ಡ ನಾಯಿ ಬೌವ್ss ಅಂತ ಬೊಗಳುತ್ತಾ ಓಡಿಬಂತು. ಬಿದರ ಹೆದರಿ ಮುಂದಕ್ಕ ಓಡಿದ. ಅಲ್ಲೆ ಇದ್ದ ದೊಡ್ಡ ಕಲ್ಲಿಗ ಡಿಕ್ಕಿ ಹೊಡದ, ಅವನು ನೆಲಕ್ಕ ಬೀಳದಂಗ ಡಿಂಗ-ಬೊಮ್ಮ ಹಿಡಿದರು. ಯಾಕಂದ್ರ ಅಂವs ಬಿದ್ದಿದ್ರ ಹಾಕಿರೋ ಇದ್ದಿದ್ರಲ್ಲೇ ಹರಿಲಾರದ ಬಟ್ಟಿ ಹೊಲಸಾಗ್ತಿದ್ವು. ನೀರು ಹಾಕ್ಕೊಂಡು, ಎಣ್ಣಿ ಹಚ್ಚಿ ದವರಗತಿಲೇ ಬಾಚಿದ ತಲಿ ಕೂದಲು ಹೊಲಸಾಗ್ತಿದ್ವು. ಯಾವಗಲೂ ಸೋರುತ್ತಿದ್ದ ಮೂಗನ್ನ ಸಿಂಬಳ ಸೀತು ಸ್ವಚ್ಛದಿಂದ ತೊಳಕೊಂಡಿದ್ರು. ಅಮೇರಿಕಾದಿಂದ ಬಂದಿದ್ದ ಹಾಲ ಪೌಡರಿನ ಮಸರು ತಿಂದು ಬೆಳ್ಳಗಳ ಸಂದಿಯೊಳಗ ಕಜ್ಜಿಯಾಗಿ, ತುರಸಿ-ತುರಸಿ ಆಗಿದ್ದ ಗಾಯ ಸರ್ಕಾರಿ ಆಸ್ಪತ್ರಿಗ ತೋರಿಸಿ ಇಂಜೆಕ್ಷನ್ ಮಾಡಿಸಿಕೊಂಡಿಂದ ಪಾಡಾಗಿದ್ವು. ಆದರೂ ಕಪ್ಪು ಕಲಿ ಎದ್ದಕಾಣ್ತಿದ್ರು ಕೈಯನ ಸ್ಟೈಲಿಂದ ಕಿಸೆಯಲ್ಲಿಟ್ಟುಕೊಂಡೆ ನಡೆಯುವುದು, ಎಷ್ಟೆ ತುರಕಿ ಬಂದರೂ ಅಪ್ಪಿ-ತಪ್ಪಿ ಮೈ-ಕೈ ಕೆರದಕೊಳ್ಳಬಾರದಂತ ಡಿಂಗನ ಕರಾರಿಗ ಹೂಂ ಅಂದಿದ್ರು. ತಮ್ಮದೇ ಸಂಬಂಧಿಕರ ಮದ್ವಿ ಅನ್ನೊ ಹಂಗ ರಾಜಾರೋಷಿನಿಂದ ಹೆದರದೆ ಒಳಗ ಹೊಂಟವರನ್ನ ಐವತ್ತು ವರ್ಷದ ಅಜ್ಜಿಯೊಬ್ಬಳು ನಗುತ್ತಲೇ "ಏನೋ ಮಕ್ಕಳ ಎಲ್ಲಿಗೊಂಟ್ರಿ" ಅಂದಳು. ಬಿದರನಿಗೆ ಚಣ್ಣದೊಳಗೆ ಒಂದು ಎರಡು ಹನಿ ಬಂದವು. ಆದರೂ ಸುಧಾರಿಸಿಕೊಂಡ. "ಏನಜ್ಜಿ ನಾವು ಅಡಗಿ ಮನೀಗ ಹೊಂಟೀವಿ" ಎಂದ ಡಿಂಗ ಹೆದರ್ಕೊಂತ. "ಹೌದ ಹೋಗ್ರಿ ಸಣ್ಣ ಮಕ್ಕಳು ಹಸವಾಗಿರಬಹುದು ? ಯಾವ ಸೀಮಿ ಮಂದೀನೋ, ಹೋಗ್ರಿ ಉಣ್ಣಿರಿ" ಎಂದಳು ಅಜ್ಜಿ. ಡಿಂಗ, ಬಿದರ, ಬೊಮ್ಮರಿಗ ಹೋದ ಜನ್ಮ ಬಂದಂಗಾತು. ಕುಂತ ಜನರ ಹಿಂದಿಂದ ಸರದು ಒಂದೊಂದೆ ಕುರ್ಚಿ ದಾಟಿ, ನೀಟಾಗಿ ಬಟ್ಟಿ ತೊಟ್ಟು ದಿಮಾಕಿಂದ ಅಡ್ಡಾಡ್ತಿದ್ದ ತಮ್ಮ ವಯಸ್ಸಿನ ಹುಡ್ರನ ನೋಡಿ ತಮ್ಮ ಪಾಡಿಗ ಮರಗ್ತಾ ಮುಂದಕ್ಕ ಸಾಗಿದ್ರು. 'ಲೇ ಯಾರ್ರೊ ನೀವು' ಎಂದ ಡಿಂಗನ ಓರಿಗೆ ಹುಡಗ. ಡಿಂಗಗ ತಲೆ ತಿರಗ್ತು, 'ಎ ನೀ ಯಾರೋ' ಅಂದಬಿಟ್ಟ. ಕೇಳಿದ ಹುಡಗ ಉಗಳು ನುಂಗತೊಡಗಿದ. ಡಿಂಗನ ಧೈರ್ಯಕಂಡು ಬೊಮ್ಮ, ಬಿದರನಿಗೆ

ಸೋಜಿಗಾತು. ಹುಡಗ ಕಡದಲ್ಲಿ ತುರಸಿಕೊಳ್ಳದೇ ಯಾರೋ ಕರದಿದ್ಕ ಹೋದ. ಮೂವರು ಮಕ-ಮಕ ನೋಡಿಕೊಂಡು ಅಡಗಿ ಮನಿ ಮೆಟ್ಲಲಿ ಳಿದರು, ಅಡಗಿಕೋಣೆಯಿಂದ ಜಿಲೇಬಿ ಕರಿಯೋದು, ಲಾಡು ಕಟ್ಟೋದು ನೋಡಿ ಬಿದರನ ಬಾಯಿಯೊಳಗ ನೀರಿಳಿಯತೊಡಗಿತು. ಡಿಂಗನ ಕಡಿಗ ಆಶ್ಚರ್ಯದಿಂದ ನೋಡಿದ. ಹಾಸ್ಟಲಿನೊಳಗ ಅಣ್ಣಿ ಭಟ್ಟ ದೊಡ್ಡದೊಂದು ಪಾತ್ರಿ ತುಂಬ ಸಾರಿಗ ಒಂದ ಚೊಟಾಕಿನಷ್ಟು ಎಣ್ಣಿ ಹಾಕಿ, ಅದು ಸೀದು ಹೋದ ಮ್ಯಾಲ ಸುಟ್ಟ ಪಾತ್ರಿಯೊಳಗ ಸಾರ ಸುರದು, ಚುಂಯ್ಸ ಅಂದಿಂದ ಇಳಸಿ ತಳಕಟ್ಟು ತಕ್ಕೊಂಡು, ಉಳದ ಎಣ್ಣಿಯಿಂದ ಮತ್ತೊಂದ ಸಲ ವಗ್ಗರಣಿ ಹಾಕ್ಕೊಂಡು ದೊಡ್ಡ ಹುಡ್ರಿಗ ಸ್ವಲ್ಪ ಹಾಕಿ, ಉಳಿದದ್ದನ ಹೆಂಡತಿ ಜೊತಿಗ ಕುಂತು ಉಂಡುಂಡು ಹೊಟ್ಟಿ ಬೆಳಸಿಕೊಂಡಿರೋದನ್ನ ನೋಡಿದ ಬಿದರನಿಗೆ ಹೊಸ ಅನುಭವ ಆಗಾಕತ್ತು.

ಮೂಲಿಯೊಳಗ ಮೂರು ಮಂದಿ, ಆರಮಂದಿ ಕುಂದ್ರೊವಷ್ಟು ಜಗ ಹಿಡಕೊಂಡು ಮುಲಾಜಿಲ್ಲದೆ ಕುಂತು ಎಲಿ ಹಾಕಿಕೊಂಡಿದ್ದರು. ಎಲಿಯಮ್ಯಾಲ ಬಡಸಿದ ಜಿಲೇಬಿ, ಲಾಡು, ಕೋಸಂಬರಿ, ಚಿತ್ರಾನ್ನ, ಚಟ್ನಿ, ಉಪ್ಪಿನಕಾಯಿ, ಹಪ್ಪಳ ಇಷ್ಟನ್ನೂ ಬಿದರ ಯಾವತ್ತೂ ನೋಡಿರಲಿಲ್ಲಾ. ಅವುಗಳ ಹೆಸರು ಅವನಿಗೆ ತಿಳದಿರಲಿಲ್ಲಾ. ಒಬ್ಬರ ಹಿಂದ ಮತ್ತೊಬ್ಬರು ಬಡಿಸ ಬಡಿಸತಿದ್ರು. ಮಂದಿ ನೂಕುನುಗ್ಲು. ಬಿದರ ಮಂದಿ ಮಾರಿ ನೋಡ್ತಿದ್ದಂಗ ಡಿಂಗ, ಬೊಮ್ಮ ಜಿಲೇಬಿ, ಲಾಡುಗೆ ಕೈ ಹಚ್ಚಿದ್ರು. ಬಿದರನಿಗೆ ಏನೋ ತಳಮಳ ! 'ನಮ್ಮ ಸಾಲಿ ಹುಡ್ರು ಏನಾರ ನೋಡಿದ್ರ' ಅಂದ್ಕೊಂತ ಜಿಲೇಬಿ ಮುರದು ಬಾಯಿಯೊಳಗ ಹಾಕಾಕೂ, ಅವನ ಸಾಲಿ ಸಮಾಜದ ಮೇಷ್ಟ್ರು ತಿಪ್ಪೇಸಾಮಿ ಎದರ ಸಾಲಿನ್ಯಾಗ ಕುಂತು, ತಮ್ಮ ಸಾಲಿ ಹುಡಗ ಬಿದರ ಹೌದೋ-ಅಲ್ಲೋ ಅನ್ನೋದನ್ನ ಖಾತ್ರಿ ಮಾಡ್ಕೊಳ್ಳಾಕ ಬಗ್ಗಿ-ಬಗ್ಗಿ ನೋಡ್ತಿದ್ರು. ಬಿದರನ ಎಲಿ ಕೆಳಗಿಂದ ನೀರು ಹರಕು ಹೊಂಟಿತ್ತು. "ಯಾಕಲೇ ಬಿದರ ಕಪ್ಪ ಉಲ್ಡಸಿ ಏನು ?" ಎಂದು ಕೇಳಿದ ಬೊಮ್ಮ. ಜಿಲೇಬಿ ತುಂಡು ಗಂಟಲೊಳಗ ಇಳಿಯದಾತು. ಕುಡದ ನೀರು ಗಂಟಲಾಗ ಸಿಕ್ಕೊಂಡಂಗಾಗಿ 'ಗಕ್ಕ್ಂತ' ಕೆಮ್ಮಿದ. 'ಸಧಾನ ಮೆಲ್ಲಗ ತಿನ್ನಲೇ ಎಬರೇಶಿ' ಎಂದ ಡಿಂಗ. ಬಿದರಗ

ಮಾತ್ರ ಮೈ ಥಳಿ ಬಡಾಕತ್ತು, ಬೆವತಬಿಟ್ಟ. ಮಹಾತ್ಮಾ ವಿದ್ಯಾಶಾಲೆ ಯೊಳಗ ತಿಪ್ಪೇಶಿ ಮೇಷ್ಟ್ರಂದ್ರ ಎಲ್ಲಾ ಹುಡ್ರಗೂ ಮೈ ನಡಗತೈತಿ. ರಂಜಾನ್ ಹಬ್ಬದಾಗ ಮೆಹಬೂಬ ಮಸಿಂದ ರೊಕ್ಕ ಕದ್ದು ಬಿದರಗ ಕೊಟ್ಟು, ಸಿಕ್ಕೊಂಡಾಗ, ಬಿದರನ ಹೆಸರು ಹೇಳಿಬಿಟ್ಟಿದ್ದ. ಮಧ್ಯಾನ ಹೊಟ್ಟಿ ಹಸುವಾಗಿದ್ಕ, ಸಾಲಿ ಪಕ್ಕದ ಮರದ ಸೆಳ್ಳಾಗ ಹಣ್ಣಮಾರೊ ಯಲ್ಲವ್ವನ ಹತ್ರ ಹಣ್ಣು ತಿಂದು ರೊಕ್ಕ ಖರ್ಚು ಮಾಡಿದ್ದ. ತಿಪ್ಪೇಸ್ವಾಮಿ ಮೇಷ್ಟ್ರಿಗ ವಿಷಯ ಗೊತ್ತಾಗಿ, ಬಿದರನ ಬೆನ್ನ ಮೂಳಿ ಮುರಿಯೋ ಹಂಗ ಹೊಡ್ದಿದ್ದು ನೆನಪಾತು. ಕುಂತಲ್ಲಿ ನೆಲ ಬಿರಿತಿರೋ ಹಂಗ ಅನಸ್ತು. ಜಿಲೇಬಿ, ಲಾಡು ಉಂಡಿ ಎಲ್ಲಾ, ಊರಾಗ ಹನ್ಮಂತಿ ಕೂಟಾಗ ಆಡೋ ಮುಂದ ಕಲ್ಲು-ಮಣ್ಣನ್ನ ಎಲಿ ಮ್ಯಾಲಿಟ್ಟು ಇದು ಲಾಡು, ಇದು ಜಿಲೇಬಿ, ಇದು ಪಾಯಸ ಎಂದು ಇಟ್ಟಿಟ್ಟು ತಿನ್ನೊ ಆಟ ಆಡಿದ್ದು ಆದಂಗನಿಸಿತು. ಎಲಿಯೊಳಗಿಟ್ಟ ಕೈ ತನಗ ಗೊತ್ತಿಲ್ದ ಬಾಯಿಗ ಹೊಂಟಿತ್ತು. ಹೊಟ್ಟಿ ಹಸಿವಿನ ಮುಂದ ತಿಪ್ಪೇಸ್ವಾಮಿ ಮೇಷ್ಟ್ರ ಏನು ಮಾಡದಾದರು. ನಾಳೆ ಮೇಷ್ಟ್ರಹತ್ರ ಹೊಡ್ತಾ ತಿಂದ್ರಾತು, ಇವತ್ತಿಗ ಹೊಟ್ಟಿ ತುಂಬಿದರ ಸಾಕು ಅನ್ನೋದು ಗಟ್ಟಿ ಮಾಡಿ ಕೊಂಡವನ ಗಬಗಬ ತಿಂದು ಎಲ್ಲರಿಗಿಂತ ಮದಲು ಜಾಗ ಖಾಲಿ ಮಾಡಿದ. ಡಿಂಗ-ಬೊಮ್ಮರನ್ನ ಬಿಟ್ಟವನ ಹಾಸ್ಟಲಿನ್ನ ಹಿಂದಿನ ಕಾಂಪೋಂಡು ಹಾರಿ ರೊಮಿಗ ಬಂದು ಚೀಲ ಹಾಸಕೊಂಡವನ ಮಕ್ಕೊಂಡ. ಕಣ್ಣು ಮುಚ್ಚಿದ ಕೂಡ್ಲೆ, ತಿಪ್ಪೇಸ್ವಾಮಿ ಮೇಷ್ಟ್ರ ಬೆತ್ತ ಹಿಡಕೊಂಡು ದಬದಬ ಹೇರಿದಂಗಾಗ ತೊಡಗಿತು. ದೊಡ್ಡ ಕಣ್ಣುಗಳನ್ನ ಕೆಂಪು ಮಾಡಿಕೊಂಡು ಉದ್ದುದ್ದ ಮೀಸೆ ಗಳನ್ನ ತೀಡ್ತಾ– "ಯಾಕಲೇ, ಹಾಸ್ಟಲಿನೊಳಗ ಬಿಟ್ಟಿ ಅನ್ನ ಹಾಕೋದು ಕಮ್ಮಿ ಆತೇನು ? ಯಾರ್‍ಯಾರದೋ ಮದವೀಗ ಹೋಗಿ ಸಾಲಿ ಮರ್ಯಾದಿ ತಗಿಶೀರಿ" ಎಂದು ಹೊಡೆಯತೊಡಗಿದರು. ಇಲ್ಲಾ ಸಾ, ನಾನಲ್ಲ ಸಾ, ನಂಗೇನು ಗೊತ್ತಿಲ್ಲಾ ಸಾ, ನಮ್ಮ ಹಾಸ್ಟಲ್ ಹುಡ್ರು ಕರ್‍ಕೊಂಡು ಹೋದ್ರು ಸಾ, ಹೊಡಿಬ್ಯಾಡ್ರಿ ಸಾ, ಯಪ್ಪೊ, ಸತ್ನೊ, ಯವ್ವೋ ಸತ್ನೆ, ಅಯ್ಯೊ ಸಾ, ಇನ್ನೊಮ್ಮೇಟ ಹೋಗಂಗಿಲ್ಲಾ ಸಾ" ಅಂತ ಜೋರಾಗಿ ಚೀರತೊಡಗಿದ. ಅವನಿಗಿಂತ ತಡವಾಗಿ ಬಂದ ಬೊಮ್ಮ, ಡಿಂಗ ಕುತಗಿ ಮಟ ತಿಂದ್ರು ತೇಗನ್ಕೊಂತ ಹಾಸ್ಟಲ ಮುಟ್ಟೋದ್ರಾಗ ಬಿದರನ ಬಡದಾಟ ಸುರು ಆಗಿತ್ತು.

ಇಬ್ರಿಗೂ ಏನನ್ನೋದೆ ತಿಳಿಲಿಲ್ಲಾ. ಡಿಂಗ ಬಿದರನನ್ನ ಜಾಡಿಸಿ ಒದ್ದ-"ಏಳಲೇ ವ್ಯಾಕ, ಹಿಂಗ್ಯಾಕ ಅರಬಾಡಸಾಕತ್ತಿ" ಎಂದ. ಬಿದರನಿಗೆ ಡಿಂಗನ ಮೇಲೆ ಸಿಟ್ಟು ಬಂತು. ಆದ್ರೂ ತೋರಿಗೊಡದೆ, ನಾಳೆ ತಿಪ್ಪೇಸ್ವಾಮಿ ಮೇಷ್ಟ್ರ ಕೈಯಿಂದ ತಪ್ಪಿಸಿಕೊಳ್ಳೊ ವಿಚಾರ ಮಾಡತೊಡಗಿದ. ಡಿಂಗನಿಗೆ ಹೇಳಿದ್ರ ಏನಾರ ಉಪಾಯ ಹೇಳ್ತಾನಂತ ಅವನು ಜಲ್ದಿ ಎದ್ದ ಬರಾಕ ಕಾರಣ ತಿಪ್ಪೇಸ್ವಾಮಿ ಮೇಷ್ಟ್ರು ಎಂದು ನಡೆದದ್ದನ ಹೇಳಿ ಅಳತೊಡಗಿದ.

ಏಳನೇ ಕ್ಲಾಸಿನ ಹುಡ್ರ ಸಾಲಿನ್ಯಾಗ ಎಲ್ರಿಗಿಂತ ಹಿಂದ ನಿಂತಿದ್ದ ಬಿದರ. ತನ್ನ ತರಗತಿ ಶೋಭ, ಸರೋಜ, ರೇಖಾ ಮೂವರು ಪ್ರಾರ್ಥನಿ ಹಾಡು ಹೇಳ್ತಿದ್ರು. ತಿಪ್ಪೇಸ್ವಾಮಿ ಮೇಷ್ಟ್ರು ಕಾಣ್ತಾರೇನಂತ ಕುಳ್ಳ ಬಿದರ ಹಿಮ್ಮಡಿ ಎತ್ತಿ-ಎತ್ತಿ ನೋಡತೊಡಗಿದ. ಈಗ ಕರಿತಾರ, ಆಗ ಕರಿತಾರ, ಕರದು ಇಡಿ ಸಾಲಿ ಹುಡ್ರ ಮುಂದ ಮಾನ ತಗೀತಾರಂತ ಹೆದರ್ಕೊಂತ, ಪ್ರಾರ್ಥನೆ ಮಾಡೋದನ ಮರತು ಕೆಳಗ ಮಕ ಮಾಡ್ಕೊಂಡು ಕಲ್ಲು ಎಬ್ಬತೊಡಗಿದ ಎಡಗಾಲಿನ ಹೆಬ್ಬರಳಿಂದ. ಮದಲನೇ ಸರಸ್ವತಿ ಹಾಡು ಮುಗಿತಿತ್ತು, ತಲೀಗ ರಪ್ಪಂತ ಬಿದ್ದ ಏಟಿಗ ಹೌಹಾರಿದ ಬಿದರ 'ಅಯ್ಯೊ ಯಪ್ಪ' ಎಂದು ಕೂಗಿ ಕೊಂಡ, 'ಇಲ್ಲ ಸಾ ನಾ' ಎಂದು ಕೂಗಿಕೊಂಡು ಹಿಂದಕ್ಕ ತಿರುಗಿದ. ಹಿಂದಿಮೇಷ್ಟ್ರು ಬಸರಾಜಪ್ಪ ಮುಂದಕ ನೋಡುವಂತೆ ಸನ್ನೆಮಾಡಿ ಹೋದರು. ಹೋದ ಜೀವ ಮರಳಿ ಬಂದಂತಾಗಿ, ರಾಷ್ಟ್ರಗೀತೆಯುನ ಎಲ್ಲರ ಜೊತಿಗ ಕೂಡಿಕೊಂಡು ದೊಡ್ಡ ಧನಿ ಮಾಡಿ ಹೇಳತೊಡಗಿದ. ಪ್ರಾರ್ಥನೆ ಮುಗಿತಿದ್ದಂಗ ದಿಗಲು ಹೆಚ್ಚಾಗತೊಡಗಿತು. ತಿಪ್ಪೇಸ್ವಾಮಿ ಮೇಷ್ಟ್ರು ಏಳನೇ ತರಗತಿ ಸಾಲಿನ ಇದರಿಗ ನಿಂತಿರ್ತಾರ. ನನ್ನ ನೋಡಿ ಕರದ್ರ. ಉಚ್ಚಿ ಒತ್ತರಿಸಿ ಬಂದಂಗಾತು. ಮುಂದಿನ ಹುಡುಗರೆಲ್ಲಾ ಓಡಿ ಹೋಗಿದ್ದರಿಂದ ಓಡತೊಡಗಿದ. ತಿಪ್ಪೇಸ್ವಾಮಿ ಮೇಷ್ಟ್ರು ಗಕ್ಕನೇ ನಿಂತ. 'ಹೂಂ, ಓಡು' ಎಂದು ಹೇಳಿದಕ್ಕ ಇನ್ನೇನು ಅರ್ಧಕ್ಕ ಬಂದ ಉಚ್ಚಿಯನ್ನ ತಡಕೊಂಡು ಕ್ಲಾಸಿಗ ಓಡಿದ. ಅವನ ಹಾಸ್ಟಲಿನ ಗಜಾನನನ್ನ ಬಿಗಿಯಾಗಿ ಅಪ್ಪಿಕೊಂಡು ಅಳತೊಡಗಿದ. ಶಾಂತಮ್ಮ ಟೀಚರು ಬಂದಿದ್ಕ ಹುಡ್ರೆಲ್ಲಾ ಮಣಿಮ್ಯಾಲ ಕುಂತ್ರು. ಒತ್ತರಿಸಿ ಬಂದ ಉಚ್ಚಿ ತಡಕೊಂಡು ಕುಂದ್ರಾಕ ನೋಡ್ತಾ, ಆಗಲೇ ಇಲ್ಲಾ. ಟೀಚರ್

ಎಂದು ಒಂದು ಬೆರಳು ತೋರಿಸಿದ. ಯಾವಾಗಲೂ ಹಾಸ್ಟಲ್ ಹುಡುಗರಿಗೆ ಬೊಯ್ಯುತ್ತಿದ್ದ ಶಾಂತಮ್ಮ ಟೀಚರು, ಬೊಯ್ಯದೇ ಹೋಗು ಎಂದಿದಕ್ಕೆ ಖುಷಿಯಿಂದ ಮೆಟ್ಟಿಲು ಇಳಿಯುವಾಗ ಆಯ ತಪ್ಪಿ ಬಿದ್ದು, ಮೆಟ್ಟಿಲುಗಳ ಮೇಲೆ ಉರುಳಿಕೊಂಡು ಕೆಳಗೆ ಬಿದ್ದಾಗ, ಕೆಳಗೆ ನಿಂತಿದ್ದ ತಿಪ್ಪೇಸ್ವಾಮಿ ಮೇಷ್ಟ್ರು ಬಿದರನನ್ನು ಅಂಗಾತ ಎತ್ತಿಕೊಂಡು ದವಾಖಾನೆಗೆ ಓಡಿದರು.

□

ಘಾತ

ಕಾಲನ ಎಳದ ಹಾಕ್ತ, ಎತ್ತ್ಯಾಕ ಬರದ ಕೈಯನ್ನ ತಿರುಚಿ ನಡಿಶಾ ಬರ್ತಿದ್ದ ಸಿಂಗ, ಇಪ್ಪತ್ತೈದರ ಹರೆಯದ ಯುವಕ. ಮಕದ ಮ್ಯಾಲ ಬೆಳದ ಗಡ್ಡದಾಗ ಒಂದೊಂದ ಸಲ ಕೈಹಾಕಿ ಪರಾಪರಾಂತ ಕೆರಿತಿದ್ದ. ಸ್ವಲ್ಪ ಮೇಲೆತ್ತ್ಯಾಕ ಬರ್ತಿದ್ದ ಬಲಗೈಯಿಂದ ಹರಕು ಅಂಗಿ ಕಿಸೆಗೆ ಕೈ ಹಾಕಿ, ಗುದ್ದಮ್ಮನ ಕಟ್ಟಿಮ್ಯಾಲ ಕೆಂಚಿ ಕೇಸಿಗ ಬಂದಿದ್ದ ಇನ್ಸ್‌ಪೆಕ್ಟರ್ ಸಾಹೇಬ್ರು ಸೇದಿ ಎಸದಿದ್ದ ಕೊರಿ ಸಿಗರೇಟನ್ನ ತಗೊಂಡು, ಪಕ್ಕದಾಗ ಗಳೆ ಹೊಡಕೊಂಡು ಹೊಂಟಿದ್ದ ರಾಮದಾಸನ ಹತ್ರ ಕಡ್ಡಿಪೆಟ್ಟಿಗಿ ಇಸ್ಕೊಂಡು, ಸೊಟ್ಟಗೈಯಿಂದ ಬೆಂಕಿ ಹಚ್ಯಾಕ ಕಡ್ಡಿ ಕೆರೆಯತೊಡಗಿದ. ಸಿಂಗನ ಸೆಣಸಾಟ ನೋಡಿದ ರಾಮದಾಸ– "ತಾರೋ ಮರಾಯ ಹಿಂಗ್ಯಾಕ ತಿಣಕತಿ, ಹಚ್ಚಿಕೊಡ್ತಿನಿ" ಅಂದವನ ಹಚ್ಚಿದ. ಇನ್ಸ್‌ಪೆಕ್ಟರ್ ಸೇದಿದ ಭಂಗಿಯಲ್ಲಿ ಸೇದಾಕ ಪ್ರಯತ್ನಿಸ ತೊಡಗಿದ. ಒಂದು ಕಾಲದಾಗ, ಪೂರ್ತಿ ಸಿಗರೇಟ್ ಹಚ್ಚಿ ಸೇದಿ ಹುಡುಗಿಯರ ಮಕದ ಮ್ಯಾಲ ಹೊಗಿ ಬಿಟ್ಟು ಸತಾಯಿಸ್ತಿದ್ದದ್ದು ನೆನಪಾತು.

ಮದವಿಗ ಮುಂಚೆ ಮಿರಿಮಿರಿ ಮಿಂಚತಿದ್ದ ಕರಿ ಎದಿ ಸೆಟಸಿಕೊಂಡು, ಸುತ್ತಮುತ್ತ್ಲ ಹಳ್ಳಿಗಳ ಸಾವ್ಕಾರರ ಕೆಲಸಗಳನ್ನ ಗುತ್ತಿಗಿಹಿಡದು ಮಾಡುತ್ತಿದ್ದ. ಹೆಚ್ಚ ಮಂದಿ ಬೇಕಾದ್ರ ಊರಾಗ ಅಂಡಲಿತಿದ್ದ ಚುಟ್ಟ ಹನಮ, ಕೆಂಚ, ದುರಗರನ್ನ ಒಡಕೊಂಡು ಹೋಗ್ತಿದ್ದ. ಕೆಲಸ ಮಾಡಕ ನಿಂತ ಅಂದ್ರ ಯಾರು ಅವನ ಸರಿಗ ಹೋಗ್ತಿರಲಿಲ್ಲಾ. ಎಲ್ಲರಿಗಿಂತ ಮುಂದ ಸಾಲು ದಾಟಿ ಪಾರಿ, ಪದ್ದಿ ಕೆಲಸಕ್ಕ ಬಂದಿದ್ರ ಅವರ ಎದುರಿಗ ಮಾತ್ರ ಕೊಯ್ಯುವುದನ್ನ ಮಾಡ್ತಿದ್ದ.

ಚಿಕ್ಕಂದಿನಿಂದ ದುಡಿದು ರೂಢಿ ಇದ್ದ ಸಿಂಗನಿಗೆ, ಕೆಲಸ ಮಾಡಿ-ಮಾಡಿ ಗಟ್ಟಿಯಾದ ಮೈ ಬರಿ ದುಡಿತಕ್ಕಷ್ಟೇ ಸೀಮಿತವಾಗಿರದೆ, ಆವಾಗವಾಗ ಜಗಳಕ್ಕೂ ಅಣಿಯಾಗ್ತಿತ್ತು. ಅವನಪ್ಪ 'ಪೂಲ'ನನ್ನ ಎಲ್ಡು ಸಲ ಹೊಡದು ಮನಿ ಬಿಡ್ಸಿದ್ದ. ಅವನವ್ವನಿಗೆ ಒಂದೆಲ್ಡ ಸಲಾ ಹೊಡ್ದು ದಾಖಲೆ ಮಾಡಿದ್ದ. ಸಿಂಗನ ಚಿಕ್ಕಪ್ಪ ಕುಂಟ ರಾಮು ಗಾಂಚಾಲಿ ಮಾಡಿದ್ಕ, ಕಲ್ಲಿಂದ ಹೊಡದು ಜೈಲಿಗೂ ಹೋಗಿ ಬಂದಿದ್ದ. ತನ್ನ ಹರೆದಾಗ 'ನಾನು' ಎಂದು ಮುಂದೆ ಬಂದವನ ಎದಿಕೀಲು ಮುರ್ದಿದ್ದ. ಬಳ್ಳಾಪುರ ಕೆಲ್ಸದಿಂದ ರಾತ್ರಿ ಮನಿಗ ಬರೋಮುಂದ ಟ್ರಾಕ್ಟ್ರಿಯೊಳಗ 'ಪಾರಿ' ಪಕ್ಕದಾಗ ಎಷ್ಟುಮಂದಿ ಕುಂತಿದ್ದರೂ ನುಸಳಿಕೊಂಡು ಎಲ್ಲರನ್ನೂ ತುಳಕೊಂಡು, ಅವಳ ಪಕ್ಕ ಕುಂತು ಊರ ಬರೋದ್ರಾಗ ಹಣ್ಣಗಾಯಿ-ನೀರುಗಾಯಿ ಮಾಡಿಬಿಡ್ತಿದ್ದ. ಕೊನೆಗೊಂದು ದಿನ ಅವಳು ಸಿಂಗನನ್ನ ಒಪ್ಪಿಕೊಂಡಿದ್ದಳು. ಸಿಂಗ ಮಾತ್ರ ಸಿನೀಮಾ, ನಾಟಕ ತೋರಿಸಿ 'ಪಾರಿ'ಯನ್ನ ಸಾಗು ಹಾಕಿದ್ದ. ಅವನ ಸೀತತ್ತಿ ಮಗಳು ಸೋಮ್ಲಿಗ 'ಸೆಟಿಬ್ಯಾನಿ' ಐತಿ ಅಂತ ಗೊತ್ತಿದ್ದು ಅವಳ ರೂಪಕ್ಕ ಮಳ್ಳಾಗಿ ಮದ್ವಿಯಾದ.

ಹೇಣ್ತಿ ಬಂದ ಮ್ಯಾಲ ಬಡತನ ಮತ್ತೊಂದಿಷ್ಟು ಹೆಚ್ಚಾತು. ತನ್ನ ಬಡತನದ ಬಯಕೆಗಳನ್ನ ತಣಿಸಲಾರ್ದಕ್ಕ, ಸಣ್ಣ-ಪುಟ್ಟ ಕಳ್ಳತನ ಮಾಡಿ ಸಿಕ್ಕಿದ್ದ. ಕೋಳಿ ಕದಿಯೋದ್ರಾಗ ಸಿಂಗ ಎತ್ತಿದ ಕೈ. ತಿಪ್ಪಿ ಮ್ಯಾಲ, ಕಣದಾಗ, ಹೊಟ್ಟಿನ ಬಣವಿ ಸಂದಿಯೊಳಗ ಆಡ್ತಿರೋ ಕೋಳಿಗಳನ್ನ ಗಬಕ್ಕಂತ ಹಿಡ್ದು, ಚಂಡು ಮುರ್ದು ಪಂಜಿಯೊಳಗ ಹಾಕ್ಕೊಂಡು ಊರ ಹಿಂದಿನ ಕಬ್ಬಿನ ಹೊಲದ್ದಾಗ ಪುಚ್ಚ ಕಿತ್ತು ಸುಟ್ಟು ಇಡಿ ಕೋಳಿ ತಿಂದು ಮನಿಗ ಬರ್ತಿದ್ದ.

ಮೆಣಸಿನಕಾಯಿ ಸುಗ್ಗಿಗ ರಾತ್ರೋರಾತ್ರಿ ಮೆಣಸಿನಕಾಯಿ ಹರದು ಚಹಾದ ಅಂಗಡಿಗಳಿಗೆ ಮಾರ್ತಿದ್ದ. ಕಲ್ಲಂಗಡಿ, ಕರಬೂಜಿ, ಹತ್ತಿ ಹಿಂಗ ರಾತ್ರಿ ಕದಿಯೋದು. ಮುಂಜಾನೆ ಸಾಚನಾಗಿ ಊರೂರು ಅಲದು ಕೆಲಸ ಮಾಡೋದು ಸಿಂಗನ ದಿನಚರಿಯಾಗಿತ್ತು. ಅವನ ವಿರುದ್ಧ ಯಾರರ ನಡಕೊಂಡ್ರ ಇಡಿ ಹೊಲವನ್ನ ಧ್ವಂಸ ಮಾಡ್ತಾನಂತ ಜನ ಹೆದರಿ, ಸಣ್ಣ-ಪುಟ್ಟ ಕಳ್ಳತನ ಮಾಡ್ತಿದ್ರೂ ಸುಮ್ಮನಿದ್ದು ಬಿಡ್ತಿದ್ರು. ಕದಿಯೋ ಕಾರಭಾರದಾಗ ಯಾವ

ಊರನ್ನೂ ಬಿಡದ ಸಿಂಗ, ಶಿರ್ನಳಿಯನ್ನ ಮಾತ್ರ ಒಂದು ದಿನ ಬಿಟ್ಟು ಹೋಗಿರಲಿಲ್ಲಾ.

ಪಕ್ಕದ ಬೊಮ್ಮನಳ್ಳಿಯಲ್ಲಿದ್ದ ಅವನ ತಂದೆ ತಂಗಿ 'ಸೀತವ್ವ'ನನ್ನ ಸಣ್ಣವನಿದ್ದಾಗ ನೋಡಿದ್ದ. ಅವಳಿಗೆ ಹರೆಯದ ಸುಂದರ ಮಗಳು ಸೋಮ್ಮಿ ಅದಾಳಂತ ಗೊತ್ತಾಗಿದ್ದೆ, ಅವರ ಮನಿಯೊಳಗ ಬಳ್ಳಾಪುರ ದೊಡ್ಡಜ್ಜನ ಎಮ್ಮಿ ಮಣಕ ಕರ ಹಾಕಿಂದ.

ಮೂರು ವರ್ಷಗಳ ಕಾಲ ಮಸಿಬಿಟ್ಟು ಮಾವನ ಮನಿ ಸೇರ್ದ ಸಿಂಗ, ಯಾರ ಮುಂದು ಹೇಳದ ಕಳವಳ. ಮದ್ವಿ ಆದ್ರ ಸೋಮ್ಮಿನೆ ಆಕ್ಕೀನಿ ಅಂತ ಹಟ ಹಿಡ್ದು ಕುಂತಿದ್ಕ, ಹಠಮಾರಿ ಸಿಂಗನ ಮಾತು ತಗದ ಹಾಕಲಾರ್ದ ಅವನಪ್ಪ 'ಫೂಲ' ಸೋಮ್ಮಿಯನ್ನ ಸೊಸಿಯಾಗಿ ಮಾಡಿಕೊಂಡ. ಐದೂವರಿ ಅಡಿ ಎತ್ರ ಮೈಕಟ್ಟಿನ ಸೋಮ್ಮಿ ಸುಂದರಿಯಾದ್ದರಿಂದ ರಸಿಕ ಸಿಂಗನ ತಲಿ ಕೆಡಿಸಿದ್ಲು. ಅಮಾಸಿಗ, ಹುಣಿವಿಗ ಅವಾಗ ಅವಾಗ ಬೆಂಕಿಮುಂದ ಕುಂತ್ರಾಗ ಮಲರೋಗ ಬರ್ತಿತ್ತು. ಮಂಜುನಾಥ ಸ್ವಾಮಿಗ ಹರಕೆ ಹೊತ್ರ ಕಮ್ಮಿ ಆಕೈತಿ ಅಂತ ಊರಾಗ ಯಾರೋ ಹೇಳಿದ್ಕ ಹರಕೆ ಹೊತ್ತಿದ್ರು.

ಹೇಣ್ತಿ ಬಂದಿಂದ ಕಳ್ಳತನ ಕಮ್ಮಿ ಆತು. ಊರ ಮಂದಿ ಮ್ಯಾಲಿನ ಉರತ ಕಮ್ಮಿ ಆದ್ರೂ, ಹೇಣ್ತಿ ಮ್ಯಾಲಿ ಹೆಚ್ಚಾತು. ಯಾರದೋ ಮೇಲಿನ ಸಿಟ್ಟಿಗ ಹೆಣ್ತಿಯನ್ನ ದನಾ ಬಡಿಯೋ ಹಂಗ ಬಡಿತಿದ್ದ. ಒಂದು ಹೆಣ್ಣ ಮಗು ಅಪರೂಪಕ್ಕ ಹುಟ್ಟಿದ್ರೂ ಸಿಟ್ಟು ಮಾತ್ರ ಕಮ್ಮಿ ಆಗಲೇ ಇಲ್ಲಾ. ಸೋಮ್ಮಿ ಬಾಣ್ತಿ ಇದ್ದಾಗ್ಲೆ ಹೊಡತ ತಿಂದಿದ್ಲು. ಹೊಡತ ತಾಳಲಾರದ ಸೋಮ್ಮಿ, ಮಗಳು ಹತ್ತು ತಿಂಗಳವಳಾದಾಗ, ಹುಡಗಿಯನ್ನ ತನ್ನ ಉಡಿಯೊಳಗ ಕಟ್ಟಿಕೊಂಡು ಊರ ಮುಂದಿನ ಭಟ್ಟರ ಭಾವಿ ಹಾರಿದ್ಲು. ಹಾರೋದೇನೊ ಹಾರಿದ್ಲು, ಆದ್ರ ಸಾಯೋದಕ್ಕ ಮನಸಾಗದೆ ಹೆದರಿ ಸೀರಿಯೊಳಗ ಎಲ್ಲವನ್ನೂ ಮಾಡಿಕೊಂಡ್ಲು. ಕಾಲು-ಕೈ ಆಡಿಸಿ ಹೆಂಗೋ ದಡಸೇರಿ, ಪಕ್ಕದಲ್ಲಿದ್ದ ನೀರು ಮೇಲೆತ್ತುವ ಪೈಪನ್ನ ಹಿಡಿದುಕೊಂಡು ಮೇಲೆ ಬರಲಾಗದೆ ಜೋರಾಗಿ ಅಳಕತ್ಲು. ಮಟಮಟ ಮಧ್ಯಾಹ್ನದಾಗ ಬಿದ್ದಿದ್ದ ಸೋಮ್ಮಿ ಮೂರು-ನಾಕು ತಾಸುಗಳಾದರೂ ಅಳತೊಡಗಿದಳು. ಹೊಲಕ್ಕ ಅಡ್ಡಾಡೋ ಮಂದಿ

ಯಾವತ್ತು ಇಲ್ಲದ್ದು ಇವತ್ತ ಭಾವಿಯೊಳಗ ಯಾರ ಅಳ್ತಿರಬಹುದು ? ಅಂತ ಹೆದರಿ ಹತ್ರ ಸುಳಿಲಿಲ್ಲಾ. ಮೂರು ತಿಂಗಳ ಹಿಂದ ಬಾವಿ ಹಾರಿ ಪ್ರಾಣ ಕಳಕೊಂಡಿದ್ದ "ಬಸವಿ ಪನಾರ ದೆವ್ವಾಗಿ ಹಗಲ ಹೊತ್ತಿನ್ಯಾಗ ಅಳಾಕತ್ತೇನಲೆ" ಎಂದು ಭಟ್ಟರ ಹೊಲದ ಪಕ್ಕದ ಹೊಲದ ಕಾಳ ತಿಮ್ಮನನ್ನ ಕೇಳಿದ. "ಅದರ ಸವಾಸ ಯಾಕ ನಡಿ ದಾರಿ ಹಿಡಕೊಂಡು" ಎಂದು ಮೂಲಿಮನಿ ತಿಮ್ಮ ಹೆದರ್ಕಿ ಆದ್ರೂ ತೋರಿಗೊಡದೆ, ಬಾವಿ ದಾಟುವವರೆಗೆ ಭರಾಟಿಯಿಂದ ನಡೆದು ದಾಟಿದ.

ಸೂರ್ಯ ಮುಳಗತ್ತಿದ್ದಂಗ ಬಾವಿಯೊಳಗ ಅಳೋದು ಜೋರಾತು. ಊರಾಗ ಸುದ್ದಿ ಹಬ್ಬಿ ಮಂದಿ ಮಾತಾಡತೊಡಗಿದರು. ಎರಿ ಹೊಲಕ್ಕ ಹರಗಾಕ ಹೋಗಿದ್ದ ಕುಲ್ಡ ರಾಮುಗ ಮಾತ್ರ ಅಳೋದು ಯಾರೋ ಹೆಂಗಸು ಅಂತ ಅನಿಸಿ, ಬಾವಿ ಹತ್ರ ಬಂದು– ಹೆದರ್ಕೆಯಿಂದ್ಲೆ 'ಏ ಯಾರದು' ಎಂದು ಕೂಗಿದ. "ನಾನೋ ಯಣ್ಣಾ, ಸಿಂಗನ ಹೆಣ್ತಿ" ಎಂದು ಅಳೋದನ್ನ ಜೋರು ಮಾಡಿದ್ಲು ಅವನು ಬಿಟ್ಟು ಹೋದಾನೆಂದು. "ಯಾಕಬೇ, ನಿನಗೇನಾಗಿತ್ತು ಸಾಯೋದು" ಎಂದು ಉಟ್ಟ ಲುಂಗಿಪಂಜಿಯನ್ನ ಬಿಚ್ಚಿದವನ ಅವಳ ಕಡೀಗ ಎಸ್ದ. ಒಂದು ಕಣ್ಣು ಸರಿಯಾಗಿ ಕಾಣದಕ್ಕ, ಮುಚ್ಚಿಕೊಂಡವನ ಒಂದೇ ಕಣ್ಣಿನಿಂದ 'ಹಿಡಿ, ಹಿಡಿ' ಎಂದ. "ಏನ ಹೇಳಲಪ್ಪಾ ನನ ಪಾಡು, ಅವನ ಕೈಯಾಗ ಹೊಡ್ತಾ ತಿಂದು ಸಾಯೋದಕ್ಕಿಂತ ಹಿಂಗಾರ ಸಾಯುನಂದ್ರ ಸಾಯಾಕ ಮನಸ ಬರವಲ್ದು" ಎಂದು ಬಿಕ್ಕಳಿಸತೊಡಗಿದ್ಲು. ಮ್ಯಾಲ ಬಂದ ಮ್ಯಾಲ ತನ್ನ ಉಡಿಯೊಳಗ ತನ್ನ ಹತ್ತು ತಿಂಗಳ ಹಸಿಗೂಸು ಇದ್ದಿದ್ದು ನೆನಪಾತು. ಅಳಬೇಕಂದ್ರ ಎದಿ ಕಟ್ಟಿದಂಗಾಗಿ ಕುಸಿದು ಕುಂತ್ಲು. ಸಿಂಗನಿಗ ಸುದ್ದಿ ತಿಳಿಯೋದ್ರಾಗ ಎಲ್ಲಾ ತಣ್ಣಗಾಗಿತ್ತು. ಮುಕ ತೋರಸಾಕ ಆಗದ ಸೋಮ್ವಿ ತೌರಿಗೆ ಹೋದ್ಲು. ದಿನದಿನಕ್ಕೂ ಸಿಂಗನ ಸಿಟ್ಟು ಹೆಚ್ಚಾಗತೊಡಗಿತು. ಅವಳು ಹತ್ರ ಇದ್ದಿದ್ರ ಕೊಂದೇ ಬಿಡುತ್ತಿದ್ದ.

ಆರ ತಿಂಗಳಾದ್ರು ವಾಪಾಸು ಬರೆದ ಹೆಣ್ತಿ ತನಗ ಬ್ಯಾಡ ಅಂತ ಹಠ ಹಿಡ್ದು ಕುಂತ. "ನೋಡು ಸಿಂಗ ಆದದ್ದು ಆತು, ನಿನ್ನ ಮಗ ತೊಡಿಮ್ಯಾಲ ಹೇಸಿಗಿ ಮಾಡ್ಯಾನಂದ್ರ ತೊಡಿ ಕೊಯ್ಯುತ್ತಿ ಏನು ? ಸಿಟ್ಟು ನುಂಗಿಕೊಂಡು ಹೋಗಿ ಅವಳನ್ನ ಕರಕೊಂಡು ಬಂದು ಜೀವನ ಮಾಡು" ಅಂತ ಅವನ ಅಪ್ಪ

ಹೇಳಿದಕ್ಕ, ಏನೂ ಹೇಳದೆ ಕರಿಯಾಕ ಹೊಂಟ. ಚೌಡವ್ವನ ಗುಡಿ ದಾಟಿ ಹೋಟು ಮಾವಿನ ಮರದ ಹತ್ತಿರ ಬಂದಾಗ, ಬೀಡಿ ಸೇದೊ ಚಟ ಆಗಿ ಬೀಡಿ ತೆಗೆದು ಬೆಂಕಿ ಹಚ್ಚಿ ಪಕ್ಕದ ಜಾಲಿಕಂಟಿ ಬುಡಕ್ಕ ಕಾಲ್ಮಡಿಗಂತ ಕುಂತ. ಕುಂತವನು ಮ್ಯಾಲ ಏಳಾಕ ಆಗದೆ ಒದ್ದಾಡತೊಡಗಿದ. ಅವನ ಒದ್ದಾಟ ನೋಡಲಾರದೆ ಶುಕ್ರವಾರದ ಸಂತಿಗ ಹೊಂಟಿದ್ದ ಜನ ಎತ್ತಿ, ತುಂಬಿಗೇರಿ ಹಳ್ಳದಿಂದ ನೀರು ತಂದು ಕುಡಿಸಿ ಕುಂದ್ರಿಸಿದಾಗ ಗೊತ್ತಾತು ಸಿಂಗಗ ಲಕ್ವಾ ಹೊಡದೈತಿ ಅನ್ನೋದು.

ಹರೆದ ಹೆಣ್ತಿ ಪಕ್ಕದಾಗ ಮಲಗೋ ಮುಂಚ ಸಿಂಗನಿಗೆ ಬರಿ ಅವನ ತಾರುಣ್ಯದ ನೆನಪಾಗುತ್ತಿತ್ತು. ಸಣ್ಣವನಿದ್ದಾಗ ಬೆಂಡಿಕಾಯಿ ಹೊಲ ಕಾಯಲು ಹೋಗುತ್ತಿದ್ದದ್ದು, ಅಲ್ಲಿ ಸಾಕಿ ಅವನಿಗಾಗಿ ಕಾದು ಕುಳಿತಿರುತ್ತಿದ್ದುದು, ಒಂದು ಮದ್ಯಾಹ್ನದಾಗ ಸಾಕಿ ಕಲಿಸಿದ ಜೀವನದ ಮೊದಲ ಹೊಸ ಆಟ, ಹಾಸುಹೊಕ್ಕಾಗಿ ಎಷ್ಟೊ ಹರೆಯದ ಹುಡುಗಿಯರ ಹುರುಪನ್ನ ಹೊಸಕಿ ಹಾಕಿದ್ದನ್ನ ಕಣ್ಣು ಬಿಟ್ಟುಕೊಂಡೇ ಅನುಭವಿಸುತ್ತಿದ್ದ. ಕಣ್ಣು ಮುಚ್ಚಿದಾಗ ಕಣ್ಣು ಕಟ್ಟಿದಂತಾಗಿ, ಕನಸಿಗೆ ತೆರೆ ಬಿದ್ದಂತಾಗಿ ಬೆಚ್ಚಿಬಿದ್ದ ಸಿಂಗ ಹಾಸಗಿ ಮ್ಯಾಲಿಂದ ಏಳಾಕ ಪ್ರಯತ್ನಪಟ್ಟ. ಸೋಮ್ಲಿ ಪಕ್ಕಕ್ಕಸರದು ಅವನ ನರಳಾಟ ವನ್ನ ದಿಟ್ಟಿಸಿ ನೋಡತೊಡಗಿದ್ಲು. ಒಂದು ಕಾಲದಾಗ ಎಲಬು ಪುಡಿಪುಡಿ ಮಾಡಿ, ಮೀನಕಂಡಗಳೆಲ್ಲಾ ನೋಯುವ ಹಂಗ ಹೊಡಿತಿದ್ದ ಗಂಡ, ತನ್ನ ಅಸ್ತಿತ್ವಕ್ಕಾಗಿ ಪರದಾಡ್ತಿರೋದನ್ನ ನೋಡಿ ಬಿಕ್ಕಳಿಸತೊಡಗಿದಳು. ಸಿಂಗ ಹೊಳ್ಳಾಡಿ-ಹೊಳ್ಳಾಡಿ ಸಾಕಾಗಿ ಸೋ....ಮ್ಲಿ ಎಂದು ಕೂಗಿದ. ಅವನ ತಲಿ ಕೆಳಗ ಕೈಹಾಕಿ ಮೇಲಕ್ಕೆತ್ತಿದ್ಲು. "ಯಾಕ ಹಿಂಗ ಹೊಳ್ಳಾಡ್ತಿ" ಅಂದ್ಲು. ಸಿಂಗ ಮಿಸಿಯೊಳಗ ನಕ್ಕ. "ಹೂಂ ಇನ್ನೇನು ಮಾಡಿ, ಮೈಯಾಗ ಕಸವಿಲ್ಲದಿದ್ರೂ ಭಾರಿ ಜೋರು ನಿಂದು" ಅಂದ್ಲು. "ಯಾಕ ಹೆಂಗ ಅನಸತೈತಿ ಮೈಯ್ಯಾಗ" ಅಂದ ಸಿಂಗ. "ಹೂಂ ನೋಡೀನಿ ನಿಂದು, ಬಿದ್ಕ" ಅಂತ ಅವನನ್ನ ಹಾಸಗಿ ಮ್ಯಾಲ ದೂಕಿ, ದೀಪ ಆರ್ಸಿ ಹರಕು ಕಂಬಳಿ ಎಳಕೊಂಡು ಅಡ್ಡಾದ್ಲು.

ಯಾರ ಕರಿತಾರೋ ಅವರ ಕೂಡ ಕೆಲ್ಸಕ್ಕ ಹೋಗಿ, ಮೈ ಮುರಿಯೋ ಹಂಗ ಕೆಲ್ಸ ಮಾಡಿ ಬಂದು, ರಾತ್ರಿ ಅಡಗಿ ಮಾಡಿ ಮೂಲ್ಯಾಗ ಮುದ್ದಿಯಾಗಿ ಬಿದ್ಕೊಂಡಿರ್ತಿದ್ದ ಗಂಡನನ್ನ ಎಬ್ಬಿಸಿ, ಹೊರಗ ಅಡ್ಡಾಡಿಸಿಕೊಂಡು ಬಂದು, ಅವನು ಹೇಳಿದ ಮಾತನ್ನ ಕೇಳಬೇಕು. ಅವನು ಕೇಳಿದಾಗೊಮ್ಮೆ ಬೀಡಿ ಹತ್ತಿಸಿ ಬಾಯಿಯೊಳಗಿಡಬೇಕು. ಹೆಚ್ಚು ಕಮ್ಮಿ ಮಾತಾಡಿದ್ರ ಜೊಂಚ ಕೈಯಿಂದ್ಲೆ ಹೊಡಿಯೋದನ್ನ ಸಹಿಸಿಕೊಂಡು ದುಡ್ಡು ಹಾಕಬೇಕು. ಒಂದೊಂದು ಸಲ ಬದಕು ಬ್ಯಾಡ ಅನಿಸಿಬಿಡತೈತಿ. ಆದ್ರ ಸಾಯಾಕೂ ಧೈರ್ಯ ಇಲ್ಲಾ, ಒಂದೊಂದ ಸಲ ಅರ್ಧ ಸತ್ತು ಬದುಕಿಂದ, ಸಾಯೋ ವಿಚಾರ ಕನಸಿನ್ಯಾಗೂ ಮಾಡಂಗಿಲ್ಲಾ. "ಹಾಳು ಮೂಳನ ಮುಸಡಿ ನೋಡಾಕ ಉಳಕೊಂಡಿನೋ ಏನೋ, ಮಗಳು ಸತ್ತಾಗ್ಲೆ ಸತ್ತಿದ್ರ" ಅಂತ ಗೊಣಗಿಕೊಂಡು, ಅವನ ಸ್ವಾಟಿಗ ತಿವದು ಬುತ್ತಿ ಕಟಕೊಂಡು ಹೋಗ್ತಾಳ.

ಸಿಂಗನ ಎದಿಗ ಯಾರೋ ಭರ್ಚಿಯಿಂದ ತಿವಿದಂಗಾಗಿ, ಕಣ್ಣು ಮುಚ್ಚಿ ಬತ್ತಿ ಹೋದ ಕಣ್ಣೀರನ್ನ ಒತ್ತಾಯದಿಂದ ಬರಿಸಿಕೊಳ್ಳಾಕ ಪ್ರಯತ್ನಿಸಿ, ವಿಫಲನಾಗಿ, ಮೂಕವೇದನೆ ತಾಳಲಾಗದೆ ಕೂರಿ ಬೀಡಿ ತೆಗೆದು ಬೆಂಕಿ ಪೆಟ್ಟಿಗೆ ಹುಡುಕಿ ಗೀರಲು ಪ್ರಯತ್ನ ಪಡುತ್ತಾನೆ. ಪಾಲ, ಅವನವ್ವ–ಸಹೋದರರು ಯಾರೂ ಹತ್ತಿರ ಸುಳಿತಿರಲಿಲ್ಲಾ. "ಉರದಾಂವs ಮರಿಯಾಕ ಬೇಕು", "ಮುಕಳ್ಯಾಗ ಕಸು ಇದ್ದಾಗ ಊರ ಮುಂದಿಗ ಎದುರಾಗಿದ್ದ. ಈಗ ನೋಡು ಹ್ಯಾಂಗ ಬಾಲ ಮುದರಿಕೊಂಡು ನಾಯಿಕುನ್ನಿ ಹಂಗ ಮೂಲ್ಯಾಗ ಮಲಗ್ಯಾನ" ಅಂತ ಒಡಹುಟ್ಟಿದವರು ಆಡಿಕೊಂಡಾಗ ಸಾಯಬೇಕು ಅನಿಸಿತು. ಆದ್ರ ಸಾಯೋದಾದ್ರು ಹ್ಯಾಂಗ ? ನೇಣು ಹಾಕ್ಕೊಳ್ಳಾಕ ಕೈಯ್ಯಾಗ ಕಸವಿಲ್ಲಾ, ವಿಷ ತಗೊಳ್ಳಾಕ ಕಿಸೆಯೊಳಗ ರೊಕ್ಕಿಲ್ಲಾ. ಒಂದ ಬೀಡಿ ಸೇದಾಕೂ ಹೆಣ್ತಿ ಹತ್ರ ಹಲ್ಲು ಗಿಂಜಿ ನಿಲ್ಲಬೇಕು. ನೂರಾಎಂಟು ಮಾತಾಡಿ ಎಂಟಾಣೆ ಕೊಡ್ತಾಳ ಅಂತ ತನ್ನ ವಿಚಾರಗಳನ್ನೆಲ್ಲಾ ತಾಳೆ ಹಾಕತೊಡಗಿದ. ಸಾಯೋ ವಿಚಾರ ಬಂದಾಗ ಸಿಂಗನಿಗೆ ಹೆಣ್ತಿ ನೀರಿಗೆಬಿದ್ದು ಸಾಯಾಕ ಆಗ್ದೆ, ಮಗಳನ್ನು ಕೊಂದ ವಿಚಾರ ನೆನಪಾಗಿ.... ಸಾವು ಅಷ್ಟೊಂದು ಭೀಕರನಾ ? ವಿಚಾರ ಮಾಡ್ತಾನ. ಬಿದ್ದುಕೊಂಡಲ್ಲೇ ನೆಲದ ಮಣ್ಣನ್ನ ಕೆದರ್ತಾ ಖುಷಿ ಪಡ್ತಾನ. ದಣಿದುಬಂದ

ಸೋಮ್ಲಿ ನಿದ್ದಿ ಮಾಡಸಂದ್ರ, ಅವಳನ್ನ ಬಿಗಿಯಾಗಿ ಹಿಡಕೊಂಡು ತನ್ನ ಹಳೆ ನೆನಪುಗಳನ್ನ ಕೆದಕಿ ತಗಿತಾನ. ಮೈ ಕಾವೇರಿ ನಿದ್ದಿ ದೂರಾದಂಗಾಗಿ ಗಾಳಿಗಂತ ಅಂಗಳಕ್ಕ ಬರ್ತಾಳ. ಬಹಳ ಹೊತ್ತಿನವರೆಗೆ ಮುಗಿಲನ್ನ ದಿಟ್ಟಿಸಿ ನೋಡ್ತಾಳ. ರಾತ್ರಿಯ ಏಕಾಂತದಾಗ ಮುಗಲಾಗ ಮಲಗಿರೋ ಚಂದ್ರ ಪಕ್ಕಕ ಬಂದು ನಕ್ಕಂಗಾಗಿ ಮೈ ತಂಪು ಆದಂಗಾಗಿ– ಸಿಂಗ ಮಲಗಿರುವುದು ಖಾತ್ರಿ ಮಾಡಿಕೊಂಡು, ಮಾರುದೂರ ಗೋಣಿಚೀಲ ಹಾಸಕೊಂಡು ಅಡ್ಡಾದಳು. ನಸುಕಿನ್ಯಾಗ ಸಿಂಗನ ಕೈ ಬಡದಂಗಾಗಿ ಗಾಬರಿಯಿಂದ ಎದ್ದವಳೆ 'ಹಾಳ ಬೆಳಕರಿತು' ಎಂದು ಗೊಣಗ್ತಾ, ಹೋಗಬೇಕಾದ ಕೆಲಸದ ತಯಾರಿ ಮಾಡತೊಡಗಿದಳು.

"ಊರಾಗೆಲ್ಲಾ ಮಂದಿ ಅಜ್ಜಿ ಹಬ್ಬ ಮಾಡ್ತಾರ" ಸಿಂಗ ವದರಿದ, ಸೋಮ್ಲಿ ಮಾತಾಡ್ಲಿಲ್ಲಾ. ತಂದ ಕುರಿಮರಿಗ ಹುಣಸಿಗಿಡದ ತಪ್ಪಲು ಹಾಕ ತೊಡಗಿದಳು. ನಿನಗೇ ಅಂದೆ– "ಊರ ಮಂದಿ ಹಬ್ಬ ಮಾಡ್ತಾರ" ಅಂದ. "ನಾ ಏನ ಮಾಡ್ಲಿ ಅದ್ಕ" ಅಂದವಳ ಒಳಗ ಹೋಗಿ ನೀರು ಒಡಕ ಪಾತ್ರೆಗೆ ಸುರುವಿ ತಂದು ಮರಿ ಮುಂದಿಟ್ಲು. ಮತ್ತೊಂದ ಸಲ ಗಡ್ಡದಾಗ ಕೈ ಹಾಕಿ ಕೆರಕೊಂಡು– "ಏನಾರ ಸಿ ಮಾಡ್ಬಾರದ ಬಹಳ ದಿನ ಆಗೈತಿ ತಿಂದಿದ್ದು, ಆ ಹಟ್ಟಿ ಗೌಡ ಸತ್ತದಿನ ತಿಥಿಗಂತ ಮಾಡಿದ ಪಾಯಸ ಉಂಡದ್ದು ಬಿಟ್ರೆ ಸಿ ತಿಂದ ನೆಪ್ಪಿಲ್ಲಾ" ಅಂದ. ಸೋಮ್ಲಿಗ ಏನು ಹೇಳಬೇಕೊ ತಿಳಿದಾತು. ಪಾಡಿದ್ದಾಗ ಹಬ್ಬ ಅಂದ್ರ ಭಲೇ ಹುರುಪಿಂದ ಸಂತಿ ಮಾಡಿ, ಕೊಂಡಜ್ಜಿ ಕೊಟ್ರಪ್ಪನ ಹತ್ರ ಸಾಲ ತಂದಾದರೂ ಸೀರೆ ಕೊಡಸ್ತಿದ್ದ ಗಂಡ, ಒಂದ ಹೊತ್ತಿನ ಊಟಕ ಗತಿ ಇಲ್ದಂಗ ಆದ್ನಲ್ಲಾ ಎಂದು ವ್ಯಥೆಪಟ್ಳು, ತನ್ನ ಪಾಡಿಗೆ ಮರುಗದೆ ಸೊಟ್ಟ ಗಂಡನ ಕೂಡ ಬಡದಾಡಕೊಂತ, ಬದುಕನ್ನ ಪ್ರೀತಿಸ್ತಾ, ಬರೋದೆಲ್ಲಾ ಒಳ್ಳೆದಕ್ಕ ಅಂತ ಅವರವ್ವ ಹೇಳಿದ ಮಾತು ಜ್ಞಾಪಿಸ್ಕೊಂಡ್ಳು.

ಅವನು ಒಂದೇ ಕೈಯಿಂದ ಬೋರಿನಿಂದ ನೀರು ತರೋದು, ಕೆರಿ ಏರಿ ಹಿಂದ ಒಂದೊಂದೆ ಮುಳ್ಳ ಕಟ್ಟಿಗೆಗಳನ್ನ ಕೊಯ್ದು ತರೋದು, ಸೋಮ್ಲಿ ತಂದಿದ್ದ ಕುರಿಮರಿಯನ್ನ ಅವರಿವರ ಹೊಲ್ದಾಗ ಆಡಿಸ್ಕೊಂಡು ಬರತೊಡಗಿದ. ಮರಿ ಆಡ್ತಾ–ಆಡ್ತಾ ದೊಡ್ಡದಾದಿಂದ ಅದ್ರ ಕಸು ಹೆಚ್ಚಾತು. ಅದು

ಜೋರಾಗಿ ಎಳಿತಂದ್ರ, ಒಂದೇ ಕೈಯಿಂದ ಎಳದು ಜಾಡಿಸಿ ಒದಿತಿದ್ದ. ಮರಿ ದೊಡ್ಡದಾಗಿ ಒಂದ ಕತ್ರಿಗ ಬಂದಾಗ, ಮಾರಿ ಮತ್ತೆರಡು ಮರಿಗಳನ್ನ ತರಾನಂತ ಹವಣಿಸುತ್ತಿದ್ದಾಗಲೇ ಅವನ ಹೆಂಡತಿ ದೇಹಸ್ಥಿತಿಯೊಳಗ ಏನೋ ಬದ್ಲಾವಣೆ ಆಗ್ಯೆತಿ ಅನ್ನೋ ಗುಮಾನಿ ಬರತೊಡಗಿತು.

ಮೂರುಹೊತ್ತು ಅದೇ ಚಿಂತೆ. ತನ್ನ ಹೆಂಡತಿಯೊಳಗ ಏನು ಬದ್ಲಾವಣೆ ಆಗಿರಬಹುದು ? ಅವಳ ಮಕ ದಿಟ್ಟಿಸಿ ನೋಡ್ದಾ. ಹೊಟ್ಟಿ ಗಾತ್ರ ಹೆಚ್ಚಾಗಿತ್ತು. ಅವಳನ್ನ ಮುಟ್ಟಬೇಕಂತ ಹೋದ, ಆಗಲಿಲ್ಲಾ. ಮತ್ತೊಂದ ಸಲ ಕಣ್ಣು ಮುಚ್ಚಿಕೊಂಡು ಮಲಗಾಕ ನೋಡ್ದ, ನಿದ್ದಿ ಹತ್ರ ಸುಳಿಲಿಲ್ಲಾ. ಎದ್ದವನ ಮತ್ತ ಅವಳ ಕಡೀಗ ನೋಡತೊಡತದ. ಹೌದು ಇದೇ ಸೋಮ್ವಿ, ಎಂಟ ವರ್ಷನ ಆಗಿರಬಹುದು ? ಯಾವತ್ತು ಯಾ ಊರಿಗೂ ಹೋಗದವ, ಮನಿಯೊಳಗ ಯಾರು ಇಲ್ಲಾ, ದೊಡ್ಡಜ್ಜನ ಎಮ್ಮಿ ಮಣಕ ಈದ್ಯೆತಿ, ಗಿಣ್ಣದ ಹಾಲು ಕೊಟ್ಟು ಬಾ ಅಂತ ಅವ್ವ ಹಠ ಹಿಡಿದಿದಕ್ಕ ಸೀತತ್ತೆ ಮನೆಗೆ ಹೋಗಿದ್ದೆ. ಮೈ ನೆರತು ದುಂಡ–ದುಂಡಗ, ಕೆಂಪ–ಕೆಂಪಗ, ಕರಿಲಂಗ, ಕರಿದಾವಣಿ ಉಟ್ಕೊಂಡು ನೀರ ಕೊಡ ಹಿಡ್ಕೊಂಡು ಹೊಂಟಿದ್ಲು. ಕಣ್ಣು ಅವಳು ಮರಿ ಆಗೋವರಿಗ ಬಿಟ್ಟು ಬಿಡದ ನೋಡ್ತಿದ್ವ. ಅತ್ತೆ ಬಂದು ಸಿಂಗ ಅಂತ ಕೂಗದ್ಕ ಬೆಚ್ಚಿಬಿದ್ದಿದ್ದೆ. ಇಡಿ ರಾತ್ರಿ ನಿದ್ದಿ ಬರವಲ್ದು. ಅವಳು ಮಾತನಾಡಿದ್ರ, ಅವಳ ಕಾಲ್ಗೆಜ್ಜಿ ಸದ್ದಾದ್ರ ಗೊತ್ತಿಲ್ದೆ ಅವಳ ಕಡಿ ನೋಡ್ತಿದ್ದೆ. ಶಿರ್ನಳಿ ಬಿಟ್ಟ ಒಂದು ದಿನ ಬ್ಯಾರೆ ಊರಾಗ ಇದ್ದಿದ್ದಿಲ್ಲಾ. ಆದ್ರ ಸೀತತ್ತೆ ಒಂದೇ ಮಾತು ಹೇಳಿದ್ಕ ಉಳಕೊಂಡಿದ್ದೆ. ಮನಿಯೊಳಗ ಜಗಳ ಮಾಡಿ ಅದೇ ಸೋಮ್ವಿನ ಮದವಿಯಾಗಿದ್ದೆ.... ಒಂದ ಸಲ ಉಸಿರೆಳದು ಬಿಟ್ಟು, ಬೀಡಿ ಸೇದಬೇಕೆನಿಸಿ ಹುಡುಕಾಡಿದ ಸಿಗಲಿಲ್ಲಾ.... ಮತ್ತದೇ ವಿಚಾರ– ಏನೋ ಬದ್ಲಾವಣೆ, ಏನಿರಬಹುದು ? ಬಸರೇನಾದರೂ ಆಗಿರಬಹುದೇ ?.... ಇರಲಿಕ್ಕಿಲ್ಲಾ, ಯಾಕೋ ಕಳವಳ ಹೆಚ್ಚಾತು. ಜುಲುಮಿಯಿಂದ ಎದ್ದವನ ಬಾಗಲವರಿಗ ಹೋಗಿ ಬಂದ. ದಿಂಬ ತಗೊಂಡು ಬಾಯಿ ಮುಚ್ಚಿ ಕೊಂದು ಬಿಡ್ಲೇನು ಅನಸತು. ಎಲ್ಡು ಕೈಗಳನ್ನ ತಗೊಂಡು ಮುಖ ಮುಚಿಕೊಂಡ. ಕೈಲಾಗದ ನನಗ ಗಂಡಸಿನಂಗ ದುಡ್ದು ಹಾಕ್ತಾಳ. ನಾನಾರ ಎಷ್ಟು ದಿನ

ಸುಖ ಕೊಟ್ಟೇನಿ ? ಮದ್ವಿ ಆದ ಹೊಸ್ದರಲ್ಲಿ ಬರಿ ಹೊಡಿತಿದ್ದ. ಒಂದು ಮಗುವಿನ ತಾಯಿಯಾದ್ರೂ ಬಿಡಲಿಲ್ಲಾ, ಕಡೀಗ ಆ ಮಗುವನ್ನ ಕಳಕೊಂಡೆ. ಕಣ್ಣು ತೇವಗೊಂಡವು. ಹಾಸಗಿ ಮ್ಯಾಲ ಅಂಗಾತ ಮಕ್ಕೊಂಡು ಹೆಣ್ತಿವಿಚಾರ ಮರಿಯಾಕ ಹಳೆ ನೆಪ್ಪುಗಳನ್ನ ಮೆಲಕು ಹಾಕತೊಡಗಿದ.

ಮನಿ ಮಂದಿ ಜಾತ್ರಿಗ ಹೋದಾಗ ಪಕ್ಕದ ಮನಿ ಪದ್ದಿ ಮನೀಗ ಮಲಗಾಕ ಬಂದದ್ದು, ಮುಂಗೋಳಿ ಕೂಗಿದಾಗ ಪಕ್ಕದಲ್ಲಿ ಮಲಗಿಕೊಂಡಿದ್ದು ಸಿಂಗನ ಅಕ್ಕ ಗಿರಜಿ, ಕೂಲಿಗ ಹೋಗಾಕಂತ ರೊಟ್ಟಿ ಸುಡಾಕ ಎದ್ದಿದ್ಲು. ಅದನ್ನೇ ಕಾಯ್ತಿದ್ದ ಪದ್ದಿ ಸಿಂಗನನ್ನ ತಬ್ಬಿಕೊಂಡಿದ್ದು, ಮುಂದೆ ಅದೇ.... ಸೋಮ್ಲಿ ಹೆದ್ರಿ ಎದ್ದು ಕೂಗಿದಳು. ಗಂಡ ಎಚ್ಚರಾಗಿರೋದನ್ನ ನೋಡಿ 'ಹಾಳದ ಕನಸು' ಎಂದವಳ ಅವನ ಕಡಿಗ ನೋಡಿ- "ಯಾಕ್ರಿ ನಿದ್ದಿ ಹತ್ತಿಲ್ದೇನು, ದೀಪ ಆರ್ಸಿ ಮಕ್ಕೊಳ್ರಿ" ಎಂದವಳ ದೀಪ ಆರಸಿ, ಪಕ್ಕಕ್ಕ ಬಂದು ಅವನ ಮ್ಯಾಲ ಕೈ ಹಾಕಿ ಮಲಗಿದಳು. ಎಂದು ಇಲ್ಲದ್ದು ಇವತ್ತು ಬಂದೈತಿ ಇಕೀಗ, ಏನಿರಬಹುದು ? ಹೊಟ್ಟೆಯೊಳಗ ಬೆಳಿತಿರೋ ಪಾಪದ ಪಿಂಡ. ಮುಂದೆ ಊಹಿಸದಾದ. ಇಡೀ ಮೈ ಎಲ್ಲಾ ನಡುಗಿ ತಣ್ಣಗಾಗುತ್ತಿರೊ ಅನುಭವ ಆಗತೊಡಗಿತು.

ಪಕ್ಕದಾಗ ತನ್ನ ಹುಟ್ಟಿಸಿದ ತಂದಿ-ತಾಯಿ- ಸಿಂಗ, ಹೆಂಗದಿ ಅಂತ ಒಂದ ದಿನಾನಾರ ಬಾಯಿತುಂಬ ಮಾತಾಡಿಸಲಿಲ್ಲಾ. ಮಿಟುತ್ತಾ, ತೆವಳುತ್ತಾ ಹೆಜ್ಜಿ ಹಾಕಾಕ ಆಗದೆ, ಬೋರವೆಲ್ ಹೊಡೆದು ನೀರು ತರೋದನ್ನ ನೋಡಿ ನೋಡದಂಗ ಪಕ್ಕಕ್ಕ ಮಕ ತಿರಗಿಸಿಕೊಂಡು ಹೋಗೊ ಅಪ್ಪ. ಕುರಿಮರಿ ಜೋರಾಗಿ ಎಳದು ಬೀಳಿಸಿದಾಗ ಅರ್ಧ ಗಂಟೆವರಿಗ ಏಳಾಕ ಪ್ರಯತ್ನಿಸಿದಾಗ, ಯಾರೋ ಪುಣ್ಯಾತ್ಮ ಸಹಾಯ ಮಾಡುವಾಗ ಪಕ್ಕದಾಗೆ ಹಾದು ಹೋಗೋ ತಮ್ಮಂದಿರು ನನಮ್ಯಾಲ ಸೇಡು ತೀರಿಸ್ಕೊಳ್ಳಾಕತ್ಯಾರ. ಆದ್ರ.... ಇವತ್ತಿಗೂ ನನ್ನ ಊನಕ್ಕ ಜಿಗುಪ್ಸೆ ಪಟ್ಟುಕೊಳ್ಳದೆ, ಪಾರ್ಶಿ ಹೊಡೆದಾಗಲೇ ಯಾವನ್ನಾರ ಹರೆಯದ ಹುಡುಗನ ಹಿಂದೆ ಓಡಿ ಹೋಗದೆ, ತನ್ನ ಕುಂಟ ಕಾಲಿಗೆ ಕೋಲಾಗಿ ನಿಂತಿರೋ ಸೋಮ್ಲಿ. ಅವನ ಎದಿಯೊಳಗ ಗೊಂದಲ ಉಂಟಾಗಿ, ಕಣ್ಣೀರು ತುಳಕಿ ಅವಳ ಮಕದಮ್ಯಾಲ ಬಿದ್ವು. "ಹೊತ್ತಿಲ್ಲದ ಹೊತ್ನ್ಯಾಗ ಮಳಿ

ಬಂತಲ್ಲ ಇದ್ರ ಒಸಡಗಾ" ಅಂತ ಎದ್ದವಳ ಹೊರಗ ಹೋಗಿ ನೋಡಿದ್ಲು. ಮೋಡಿಲ್ಲ, ಮಳಿ ಆಕಾರಿಲ್ಲಾ. ಅವಳಿಗೊಂದು ಅನುಮಾನ ಬಂತು– "ಸಿಂಗ ಅಳ್ತಿರಬಹುದೆ ?" ಇಲ್ಲಾ, ಯಾರ ಸತ್ರು ಆಂವs ಅಳೋದಿಲ್ಲಾ. ಮದ್ವಿಯಾಗಿ ಒಂದು ತಿಂಗಳಾಗ ಕುಂಟರಾಮು ಮಾಮು ನನ್ನ ಕಲ್ಲಿಂದ ಚಚ್ಚಿ ರಕ್ತ ಬಂದ್ರು ಮರುಗದವನು, ನಾನು ಬಾಣತಿ ಇದ್ದಾಗಲೇ ಹೊಡದವ ಅವನ್ಯಾಕತ್ತಾನು ? ಸೆರಗಿನಿಂದ ಗಾಳಿ ಹೊಡಕೊಂಡು ಅವನ ಕಡೀಗ ನೋಡದೆ ಮಗ್ಗಲಾದಳು. ಸಿಂಗ ಮಾತ್ರ ಏನೇನೋ ವಿಚಾರದೊಳಗ ಮುಳಗಿದ್ದ.

"ಹೊತ್ತ ಹೊಂಟದ್ದು ಕಾಣವಲ್ದೇನೋ" ಅಂತ ಸೋಮ್ಲಿ ಅಂದಾಗ ಸಿಂಗನಿಗೆ ಎಚ್ಚರಾತು. "ಇವತ್ತು ಷಣಿವಾರ, ದುಗ್ಗತ್ತಿಯೊಳಗ ತರಾವರಿ ಕುರಿ ಬರ್ತಾವ. ಇದನ್ನ ಮಾರಿ ಸಣ್ಣದೊಂದ ಮರಿ ಖರೀದಿ ಮಾಡಿಕೊಂಡ ಬಾ. ಉಳದ ರೊಕ್ಕ ಹಂಗ ವಾಪಾಸ ತಾ, ಮುಂದ ಜರೂರ ಕೆಲ್ಸ ಐತಿ" ಅಂತ ಮಾತಾಡ್ತಿದ್ದ ಹೆಣ್ತಿ ಮಾತಿಗ ನಿದ್ದಿ ಹಾರಿ ಹೋತು. ಎದ್ದು ಕುಂತ. ಒಂದಸಲ ಆಕಳಿಸಿ, ಎಡಗೈಯನ್ನ ಒತ್ತಾಯದಿಂದ ಮೇಲೆ ಮಾಡಿದ. 'ಶಿವ-ಶಿವ' ಎಂದವನ ಎದ್ದು ಹರಕು ಲುಂಗಿಪಂಜಿಯನ್ನ ಸಿಗಸಿಕೊಂಡು, ಮಣ್ಣಿನ ಸ್ವಾರಿಯಿಂದ ನೀರು ತಗೊಂಡು ಗೋಡಿಗ ಚೆಲ್ಲಿ, ಬಲಗೈ ಬಳ್ಳಿಂದ ಗ್ವಾಡಿ ಮಣ್ಣು ತಗೊಂಡವನ ಗಸಾಗಸಾ ಹಲ್ಲ ತಿಕ್ಕಿದ. ನೀರು ಹಾಕ್ಕೊಂಡು ಮುಕ್ಕಳಿಸಿ ಉಗುಳಿದ. ಒಂದೆರಡ ಸಲಾ ಮಾಡಿ ನ್ಯಾಲಗಿ ಮ್ಯಾಲ ಬೆರಳಾಡಿಸಿ ಕ್ಯಾಕರಿಸಿ ಉಗುಳಿ, ಇದ್ದ ನೀರು ಕಾಲಮ್ಯಾಲ ಸುರವಿಕೊಂಡು ಅರ್ಧ ಪಾದ ತೋಯಿಸಿ ಕೊಂಡು ಒಳಗ ಹೋಗೋದ್ರಾಗ ಹೆಣ್ತಿ ಬುತ್ತಿ ಕಟಗೊಂಡು ಕೆಲ್ಸಕ್ಕ ಹೋಗಿದ್ಲು. ತನ್ನ ಪಾಲಿನ ಎಲ್ಡು ರೊಟ್ಟಿ ಪುಟ್ಟಿಯೊಳಗ ಬಿದ್ದಿದ್ವು. ತಟ್ಟಿಯೊಳಗ ಹಸಿಮೆಣಸಿನಕಾಯಿ ಕಿವುಚಿ ತಾನರ್ಧ ಹಾಕಿಕೊಂಡು, ಇನ್ನರ್ಧ ಸಿಂಗಗ ಉಳಿಸಿ ಹೋಗಿದ್ಲು. ರೊಟ್ಟಿ ತಿನ್ನೋ ಮನಸಾಗಲಿಲ್ಲಾ, ಮಡಚಿ ಹರಕು ಟವಲಿನೊಳಗ ಸುತ್ತಿಕೊಂಡವನ ಕುರಿ ಹಿಡಕೊಂಡು ದುಗ್ಗತಿ ದಾರಿ ಗುಂಟ ನಡದ.

ಸಿಂಗನ ಮರಿ ಚಲೋ ಇದ್ದಿದ್ಕ, ರಂಗಜ್ಜ ಜಲ್ದಿ ಗಿರಾಕಿ ಕರ್ಕೊಂಡು ಬಂದು ಮಾರಸ್ದ, ಮತ್ತ ಒಂದು ಸಣ್ಣ ಮರಿನೂ ಕೊಡಸ್ದ. ಸಣ್ಣ ಮರಿ ಹಿಡಕೊಂಡು ಜಯುನ ಚಹಾದಂಗಡಿಗ ಬಂದಾಗ ಹಸಿವಾದಂಗ ಅನಸತು.

ಕುರಿ ಸಂತಿಗ ಬಂದ ಮಂದಿ ಅಂಗಡಿಯೊಳಗ ಬಹಳ ಇದ್ದಿದ್ದರಿಂದ ಮೂಲಿ ಯೊಳಗ ಕುಂತ, ಬಳ್ಳಾಪುರದ ಕೂಲಿಗ ಹೋಗುವಾಗ ಕೂಲಿ ಕೆಲಸದವರು ಮೇಸ್ತ್ರಿ ಸಿಂಗನಿಗೆ ಚಹಾ, ಖಾರ, ಮಿರ್ಚಿ ತಿನ್ನಾಕ ಕಾಡಸ್ತಿದ್ದದ್ದು ನೆನಪಾತು. ಈಗ ನಾನ ಮಂದಿ ತಿನ್ನೋದ ನೋಡಿ ಗುಟಕು ನುಂಗೋ ಕಾಲ ಬಂದೈತಿ ಅಂದಕೊಂಡ. ಹತ್ರ ರೊಕ್ಕ ಇದ್ದಿದ್ದರಿಂದ ಚಾ ಕುಡಿಬೇಕು ಅನಿಸಿತು. ಸೋಮಿ್ಲ ಹೇಳಿದ ಮಾತು ನೆನಪಾತು, ಚಾ ಬೇಡವೆನಿಸಿ, ಟವಲಲ್ಲಿ ಸುತ್ತಿ ಕೊಂಡು ಬಂದಿದ್ದ ರೊಟ್ಟಿ ಬಿಚ್ಚಿ, ಯಾರು ನೋಡಿದರೂ ತನಗೇನಾಗದು ? ಎಂದವನೆ ಗಬಗಬ ತಿನ್ನತೊಡಗಿದ. ಜಯಪ್ಪನ ಹತ್ರ ಒಂದ ಗ್ಲಾಸು ನೀರು ಇಸ್ಕೊಂಡು ಕುಡದವನ, ಎಂಟಾಣಿ ಕೊಟ್ಟು ಮುದ್ದಣ್ಣನ ಅಂಗಡಿಯೊಳಗ ಫೈಜ್ ಬೀಡಿ ತಗೊಂಡು, ಮರಿ ಹಿಡ್ಕೊಂಡು ಊರದಾರಿ ಹಿಡದ.

ಹೊಸ ಮರಿ ದಿನೆ-ದಿನೆ ಬೆಳಿತಿದ್ದಂಗ, ಸೋಮಿ್ಲ ಮೈಗಾತ್ರ ಬದಲಾಗ ತಿರೋದನ್ನ ನೋಡಿಯೂ ನೋಡದಂಗ ಅಡ್ಡಾಡತೊಡಗಿದ. ರಾತ್ರಿ ಅವಳು ಅವನ ಪಕ್ಕದಾಗ ಮಲಗಿದ್ರ, ಕಷ್ಟಪಟ್ಟು ಎದ್ದು ಬ್ಯಾರೆ ಕಡೀಗ ಮಲಗ ತೊಡಗಿದ.

ಸೋಮಿ್ಲಗ ಗಂಡನ ಕಳವಳ ತಿಳಿಯದಾತು. ಅಡ್ಡಾಡಾಕ ಆಗದೇ ಕೂಲಿಗ ಹೋಗೋದು ನಿಲ್ಲಿಸಿದ್ಲು. ಉಪವಾಸ ಮಲಗಾಕ ಆಗದ್ದಕ್ಕ, ಸಿಂಗ ಸಣ್ಣ ಹುಡುಗರ ಸಂಗಡ ಒಂದೇ ಕೈಯಿಂದ ಕಳೆ ಕೀಳಾಕ, ಹತ್ತಿ ಬಿಡಸಾಕ ಹೋಗತೊಡಗಿದ. "ಯಾವದೂ ಸ್ಥಿರ ಅಲ್ಲಾ" ಎಲ್ರಿಗಿಂತ ಮದ್ಲು ದಾಟಿ ಮರದ ನೆಳ್ಳಾಗ ಕುಂತಿದ್ದ ಬಾಬುಗ ಹೇಳ್ದ ಸಿಂಗ. ನಾನು ನಿನ್ನಂಗ ಹುಡುಗಿರ ಸಂಗಡ ಜಿದ್ದ ಕಟ್ಟಿ ಗೆದ್ದ ಕಥಿಯನ್ನ ಬಣ್ಣ ಬಳದು ಹೇಳತೊಡಗಿದ. "ಈಗ ಏನಾತು ಬಾ-ಬಾ" ಎಂದು ಬಾಬು ಅಂದಿದ್ದು ಅವಮಾನ ಆದಂತಾಗಿ, ಕೈ-ಕಾಲು ಬಡೀತಾ ಹತ್ತಿಗಿಡದಾಗ ಮುಂದ ಬರಾಕ ಅವಸರ ಪಟ್ಟು ರಪ್ಪಂತ ಬಿದ್ದ. ಯಾರರ ನೋಡ್ಯಾರೇನಂತ ಆ ಕಡೆ ಈ ಕಡೆ ನೋಡಿ, ಹತ್ತಿ ಗಿಡದ ಕೊಂಬಿ ಹಿಡಕೊಂಡು ಎದ್ದ. ತನ್ನ ಪಾಡನ್ನ ಕಂಡು ಅಸಹ್ಯವಾಗತೊಡಗಿತು. "ಈ ಹಾಳಮನಿ ಸಾವು ಜಲ್ದಿ ಬಂದು ಈ ನರಕದಿಂದ ಪಾರ ಮಾಡಬಾರ್ದು" ಉಸರಿದ.

ದೂರದ ಊರ ಕಡಿಂದ ಯಾರೋ "ಸಿಂಗ, ನಿನ್ನ ಹೆಣ್ತಿ ಗಂಡ ಹಡದಾಳೋ" ಅಂತ ಕೂಗ್ತಿರೋದು ಕೇಳಿಸಿದರೂ, ಕೇಳಿಸಿಕೊಳ್ಳದಂಗ ನಾಟಕ ಮಾಡತೊಡಗಿದ. ಪರವಾಗಿಲ್ಲ, ಲಕ್ವಾ ಹೊಡ್ದು ಹೆಳವನಾದ್ರು ಚಲೋ ಕೆಲ್ಸ ಮಾಡ್ಯಾನ ಅಂತ ಲೋಕಿ, ರಾಮು, ಬುಡ್ಡಿ ಮಾತಾಡೋದು ಕೇಳಿಸಿಕೊಂಡಾಗ ಇದ್ದಕಿದ್ದಂಗ ಎದಿಯೊಳಗ ನೋವು ಕಾಣಿಸಿಕೊಳ್ತು. ಯಾರದೋ ಪಿಂಡವನ್ನ ನೋಡಲು ಹೆದರಿದ. ಕೈ-ಕಾಲು ನಡುಗತೊಡಗಿದವು. ತಲೆಯೊಳಗ ಬುಳುಬುಳು ಅನ್ನತೊಡಗಿತು. ಸುಧಾರಿಸಿಕೊಂಡು ಕಾಲು ಎಳೆಯುತ್ತಾ ಮನೆಗೆ ಬಂದ. ಕಾಲು ಒಳಗ ಇಟ್ಟು, ಯಾರದೋ ಆಗಿರಬಹುದಾದ ಪಿಂಡ ನೋಡಲಾಗದೆ 'ಅಯ್ಯೋ' ಅಂತ ಕೂಗಿಕೊಂಡವನ ನೆಲಕ್ಕ ಬಿದ್ದ. ಏನೋ ಹೇಳಬೇಕೆಂದು ಬಾಯಿ ತೆಗದ, ಸೋಮ್ಲಿ ಹೆದರಿ ಗಂಡನ್ನ ಎತ್ತಾಕ ಎದ್ಲು. "ನೀ ಬರಬ್ಯಾಡ, ಹಸಿ ಮೈ ಐತಿ" ಅಂತ ಅವನವ್ವ ಹೇಳಿದಕ್ಕ, ಕುಂತಲ್ಲಿಂದಲೆ ಗಂಡನ ನರಳಾಟ ನೋಡತೊಡಗಿದ್ಲು. ದಿನದ ನರಳಾಟಕ್ಕಿಂತ ಭಿನ್ನವಾಗಿತ್ತು. ಕೂಗಾಕ ಬಾಯಿ ತಗದ್ಲು, ಅಷ್ಟರಾಗ ಸಿಂಗನ ಕೈಕಾಲು ಆಡುವುದು ನಿಂತಿದ್ವು. ಮುಕ ಸೊಟ್ಟಾಗಿತ್ತು. ಪೂರ್ತಿಯಾಗಿ ತೆರಕೊಂಡಿದ್ದ ಕಣ್ಣುಗಳು ತನ್ನದಲ್ಲದ ಕೂಸಿನ ಕಡೀಗ ತಿರಸ್ಕಾರದ ನೋಟ ಬೀರಿರೋ ಹಂಗಿತ್ತು.

□

ಕಮ್ಲಿಯ ಕಳವಳದ ಕ್ಷಣಗಳು

ಪಕ್ಕದಾಗ ಮಲಗಿದ ಠಾಕು ಉಚ್ಚಿ ಹೊಯ್ದು ಸೀರಿ ತೋಯಿಸಿದ್ದಕ್ಕೆ ಕಮಲಿಗ ಎಚ್ಚರಾತು. ಹಗಲೆಲ್ಲಾ ರಾಗಿ ಕೊಯ್ಯೋದು, ಗಂಡ್ಸರ ಸಮನಾಗಿ ಕೆಲಸ ಮಾಡಿ ರೋಸಿಹೋಗಿದ್ದ ಜೀವಕ್ಕೆ ಆರಾಮ ತಗೋಳಾನಂತಿದ್ದೆ ಕಮಲಿ, ಠಾಕು ಮಾಡಿದ ರಾಡಿಗ ಬ್ಯಾಸತ್ತು "ಥೂ ಇದರ ಓಸಡಗ್ಲಿ, ಉಚ್ಚಿ ಹೊಯ್ದದಲ್ಲಯವ್ವ" ಅಂತ ದರದರನ ಎಳದು ಒಂದು ಗುದ್ದಿದಳು. ಹೊಡ್ತಕ್ಕ 'ಹೂಂ' ಅಂದ ಠಾಕುನ ಎಳದು ನೆಲದಮ್ಯಾಲ ಉಲ್ಡಿಸಿ, ದೀಪಾ ಹಚ್ಚಾಕ ಕತ್ಲಾಗ ಕೈ ಆಡಸಿದ್ಲು. ಕೈಗೆ ಏನೋ ಮೆತ್ತಂದ ಬಡದಂಗಾಗಿ, ಗಬಕ್ಕನ ಕೈತಕ್ಕೊಂಡು ವಾಸ್ನಿ ನೋಡಿದ್ಲು. "ಥೂ, ಇದರ ಹೆಣ ಎತ್ಲಿ, ಹೇತಕೊಂಡೈತಲ್ಲಯವ್ವಾ ಇದು" ಅಂತ ಇನ್ನೊಂದು ಪಕ್ಕಕ್ಕ ಮಲಗಿದ್ದ ಯಂಗಟನ್ನ ಜಾಡಿಸಿ ಒದಿಬೇಕು ಅಂತ ಹೋದ್ಲು. ಪರದೇಶಿ ಮಕ್ಕಳ ಪಾಡು ನೋಡಿ ರೋಸಿ ಹೋಗಿದ್ದ ಕಮಲಿ– "ಯಾಕ ಹಲ್ಕಟ, ಹಿಂಗ್ಯಾಕ ಚಣದಾಗ ಹೇತಕೊಂಡಿ" ಅಂದ್ಲು. "ಸಾಲ್ಯಾಗ ಕೊಟ್ಟ ಹಿಟ್ಟು ತಿಂದಿದಿನಬೇ, ಹೊಟ್ಟಿ ಭರ್ತಿ ಹಸೀತು ಅದ್ಕ, ಹೊಟ್ಟಿ ನೊಯ್ಯಾಕ ಹತ್ತೈತಿ" ಅಂದ.

"ಏನ ಮಕ್ಕಳ, ಯವ್ವ ಜೀಂವಕ ಮುಳ್ಳು, ಹುಟ್ಟಿದ ಸಂಗಾಟ ಸತ್ತ ಹೋಗ್ಲಿಲ್ಲ ನೋಡು" ಅನ್ಕೊಂತ, ಬಳ್ಳಿಗ ಹತ್ತಿದ್ದ ಹೊಲಸನ್ನ ಸೀರಿಲೆ ಒರಸ್ಕೊಂತ, ಒಣಪಾಟಿ ಚೀಲ ತಂದು ಠಾಕುನ ಎತ್ತಿ ಕುಕ್ಕಿದಳು, ಯಂಗಟನ್ನ ಎಳದು. ಅಲ್ಲೆ ಮೂಲ್ಯಾಗ ಬಿದ್ದಿದ್ದ ಕಾಗದ ತಗೊಂಡು ತಿಕಾ ಒರಸಿ, "ಸತ್ತರ ಹೋಗ್ಲಿಲ್ಲ ನೋಡಿದು ಸಸಿ ಕಾಡ್ದಂಗ ಕಾಡತೈತಿ" ಅನಕೊಂತ, ಹರಕ ಪಂಜಿ ತುಂಡು ನಾಗುಂದಗಿ ಮ್ಯಾಲ ನೇತಾಡಕತ್ತಿತ್ತು. ಅದನ್ನ ಎಳಕೊಂಡು

ಸೀರಿ ಬಿಚ್ಚಿ ಒಗದ್ಲು. ಹಳೆ ಪಂಜಿ ಸುತಕೊಳತಿದ್ದಂಗ, ಹಳೆ ನೆನಪು ಅವಳಿಗ ಅರಿವಿಲ್ಲದಂಗ ಗರಗರಿಯಾಗಿ ಕಣ್ಣ ಮುಂದ ಬಿಚ್ಚಿಕೊಳ್ಳಹತ್ತಿದವು.

ಹದಿನಾರ ವರ್ಷಕ್ಕ ಮೈ–ಕೈ ತುಂಬಿಕೊಂಡ ಕಮಲಿನ ನೋಡಾಕಂತ ಐದಾರು ಮಂದಿ ಹುಡ್ರು ಬಂದ ಹೋದ್ರು. ಧರ್ಮಜ್ಜ ಮಾತ್ರ, ಮಹೇಶಿ ಹತ್ರದ ಸಂಬಂಧಿ ಅಂತ ಅವಸಿಗ ಕೊಟ್ಟು ಮದ್ವಿಮಾಡಿದ. ವರ್ಷಕ ಒಂದರಂಗ ಎಲ್ಡ ಮಕ್ಕಳನ್ನ ಹುಟ್ಟಿಸೋದ್ರಾಗ, ಸೊಂಟದ ಕಸವನ್ನ ಕಳಕೊಂಡ ಮಹೇಶಿ ಹೇಣ್ತಿ ಕಾಟ ತಡಿಲಾರದ, ಹೆಂಡಾ ಕುಡಿಯಾಕ ಹೇಣ್ತಿನೂ ಬೇಕಾರ ಒತ್ತಿ ಇಡಾಕ ತಯಾರಾಗಿದ್ದ. ಆದ್ರ ಆ ದಿನ ಬರೋವರಿಗ ವಿಧಿ ಅವನ್ನ ಬದಕಿಸಲಿಲ್ಲಾ. ಹೆಂಡ, ಸರಾಯಿ, ಭಟ್ಟಿಸರಾಯಿ, ಬ್ರಾಂಡಿ ಅಂತ ಸಾಲಾ ಮಾಡಿ ಸಿಕ್ಕಂಗ ಕುಡದು, ಹೆಂಡ ಕುಡದು ಸತ್ತ ಸರಣಿ ಸಾವಿನ್ಯಾಗ ಮಹೇಶಿನೂ ಸತ್ತಹ್ವಾದ. ಸಾಯೋದೇನೊ ಬಹಳ ಸುಲಭದಿಂದ್ಲ ಸತ್ತ. ಆದ್ರ ಹರೆವಯಸ್ಸಿನ ಹೇಣ್ತಿ ಕಮಲಿ ಆಶಿಗ ಬೆಂಕಿ ಹಚ್ಚಿಹ್ವಾದ.

ಮಹೇಶಿ ಬದಕಿದಾಗ್ಲ, ಕಮಲಿ ಎದಿಗ ಕೈ ಹಾಕಿದ್ದ ಅವಳ ಮೈದುನ ಚಿನ್ಯಾನಂತ ನೂರಾರು ಜನರ ಮನಸ ಕೆಡಸೋ ದೇಹ ಕಮಲಿ ಹತ್ರ ಇದ್ದಿದ್ದರಿಂದ, ಭರಮಗೌಡ ಮಹೇಶಿ ಸತ್ತ ಸುದ್ದಿ ಕೇಳಿ, ರಂಡಮುಂಡಿ ಚಂದ್ರಿ ಹತ್ರ ಬಂದು ಅಡ್ವಾನ್ಸ ಕೊಟ್ಟು ಹೋಗಿದ್ದ. ಚಂದ್ರಿ, ಮಹೇಶಿ ಸತ್ತಿಂದ ಕಮಲಿಗ ತ್ರಾಸ ಮಾಡ್ಲಿಲ್ಲ. ಗಂಡ ಕಳಕೊಂಡ ರಂಡಮುಂಡೇರ ಬಾಳು ಏನು ಅನ್ನೋದು ಅವಳಿಗ ತಿಳಿದಿತ್ತು, ಆಕೀನು ಹದಿಹರೆದಾಗ ಗಂಡ ಚಂದ್ಯಾನ ಕಳಕೊಂಡು, ದೊಡ್ಡಮಗ ಮಹೇಶಿನ ಬೆಳಸಿ, ಇದ್ದ ಒಂದು ಎಕರಿ ಹೊಲ್ದಾಗ ಮರ್ಯಾದಿ ಇಂದ ಜೀವನ ಸಾಗಿಸಬೇಕು ಅಂತ ಪ್ರಯತ್ನಪಟ್ಲು. ಹಾಳ ಮನಸ್ಸು, ಎಷ್ಟು ಹೇಳಿದ್ರು ಕೇಳಲಿಲ್ಲಾ. ಗಂಡನ ಕಳಕೊಂಡಿಂದ ಮಾತಾಡಿಸದ ಮಂದಿ ಮಾತಾಡಿಸಿ ಸನಿಕ ಬರಾಕತ್ರು. ಅವರ ಮನಸಿನ ತಾಕಲಾಟದಾಗ ಶೀಟೆತೀರಸ್ಕೊಂಡ ಜನ, ಚಂದ್ರಿಗ ಒಂದ ಪಟ್ಟಾನ ಕಟ್ಟಿದ್ರು. ಅದಕ್ಕ, ಚಂದ್ರಿ ಕಮಲಿಗೆ ಯಾವುದ ಕಡಿವಾಣ ಹಾಕಲಿಲ್ಲಾ. ಒಂಟಿ ಹೆಣ್ಣು ಸಮಾಜದಾಗ ಬದಕಾಕ ಆಗೋದಿಲ್ಲಾ. ನೂರಾ ಎಂಟು ಹಾಳು ಕಣ್ಣುಗಳು

ಕಿತ್ತ ತಿನ್ನೋ ಹಂಗ ಮೈ-ಮನಸಿನ ಮ್ಯಾಲ ಹರದಾಡತಾವ ಅಂತ ಗೊತ್ತಿತ್ತು. ಆದರ ಯಾವುದಕ್ಕೂ ಒತ್ತಾಯಾ ಮಾಡ್ಲಿಲ್ಲಾ.

ಕಮಲಿ ಮನಸಿನ ಎಲ್ಲಾ ಎಲ್ಲೆಗಳನ್ನು ಮೀರಿ ಬದಕಾಕ ಪ್ರಯತ್ನಿಸಿದ್ಲು. ಗಂಡ ಸತ್ತು ನಾಕ ವರ್ಷಗಳ ಕಳೆದವು. ಪಕ್ಕದ ಊರಗಳಿಗೆ ಹೋಗಿ ಕೂಲಿ ಮಾಡಿ ಮಕ್ಕಳನ್ನ ಸಾಕತಿದ್ಲು. ಅಷ್ಟರಾಗ ನಾಕೈದು ಬಲತ್ಕಾರಗಳಿಗೆ ಬಲಿಯಾಗಿದ್ಲು. ಗಂಡ ಸತ್ತೋಳು ಅಂತ ಅವಳ ಮ್ಯಾಲ ಅಪವಾದ ಬಂದವು ಏನಃ ಗುಟರ್ ಹಾಕೋ ಗಂಡು ಗೂಳಿಗಳಿಗೆ ಏನು ಆಗ್ಲಿಲ್ಲಾ. ಕಾಪಿ ಸೀಮಿಗ ಮೇಗ್ಯಾ ಮೇಸ್ತ್ರಿ ಹಿಂದ ಬೀಜ ಹರಿಯಾಕಂತ ಹೋದಾಗ, ಎಷ್ಟೋ ದಿನದಿಂದ ಕಣ್ಣಿಟ್ಟಿದ್ದ ನಾಗ ಕತ್ಲಾಗ ಕಮಲಿನ ಹೊತಕೊಂಡ ಹೋಗಾಕ ಪ್ರಯತ್ನಪಟ್ಟ. ಹರೆಯದ ಕಮಲಿ ಅವನ ಪ್ರಯತ್ನಕ ಒಳಗಾಗದ ಜಾಡಿಸಿ ಒದ್ದು, ಕಾಲಮರಿ ಹಿಡಕೊಂಡು ನಿಂತಿದ್ಕ, ನಾಗ ಕಾಫಿ ಸೀಮಿ ಬಿಟ್ಟು ಓಡಿಬಂದಿದ್ದನು. ಹಗಲು-ರಾತ್ರಿ ದೇಹಕ, ಮನಸಿಗ ನೆಮ್ಮದಿ ಇಲ್ದ ಎಷ್ಟೊ ರಾತ್ರಿಗಳು ಮುಲಕಾಟದಾಗ ಮುಗದ ಹೋದವು. ರಾತ್ರಿ ಕತ್ಲಾತಂದ್ರ ಮನಸಿನ್ಯಾಗ ಉದ್ಭವಿಸೋ ಬೆಳಕನ್ನ ಗಬಕ್ ಅಂತ ಆರ್ಸಿ, ಮಹೇಶಿ ಹಂಗಿರೋ ಮಕ್ಕಳನ್ನ ಬಿಗಿಯಾಗಿ ಅಪ್ಪಿಕೊಂಡು, ತಣ್ಣೀರನ್ನ ಗಟಗಟಂತ ಕುಡ್ದು ಮಕ್ಕೊಂಡು ಬಿಡ್ತಿದ್ಲು. ಚಿನ್ಯಾ, ನಾಗ, ಭರಮನಗೌಡನಂಥ ಆಸಿಬುರುಕ ಮಂದಿ ಚಿತ್ತಾ ಮಾತ್ರ ಕಮಲಿಯ ಹರೆಯದ ದೇಹದ ಮ್ಯಾಲಿತ್ತು.

ಯಮ್ವಾ ನಾ ಬಯಲಕಡಿಗ ಹೋಗತಿನಬೇ, ಹೊಟ್ಟಿ ತೊಳಸ್ದಂಗ ಆಗಾಕತ್ತೈತಿ ಅಂತ ಜೋರಾಗಿ ಕೂಗಿದಕ. ಕಮಲಿ ಕನಸ ಕಂಡವಳಂಗ ಬೆಚ್ಚಿ ಬಿದ್ಲು. ಯಂಗಟ– "ನಾ ಸಾಯ್ತಿನಿ ಬೇ, ನಾ ಸಾಯ್ತಿನಿ" ಅಂತ ಲಬ್ ಲಬ್ ಹೋಯಕೋಳಾಕತ್ತಿದ್ದ. ಏಳಯಪ್ಪಾ, ಏಳು ಅಂತ ಎದಿಮಟ ಬೆಳೆದ ಮಗನ್ನ ಬಾಚಿ ತಬ್ಬಿಕೊಂಡ್ಲು. ಹಗಲೆಲ್ಲಾ ಕೆಲ್ಸ ಮಾಡಿದ್ದು ಮರತಹೋತು. ಹಿಂದಮುಂದ ಮಾಡ್ದ ಅರ್ಧ ಹೊತಕೊಂಡು, ಅರ್ಧ ಎಳಕೊಂಡು ಯಂಗಟನ್ನ ಮನಿ ಹೊರಾಗ ತಂದ್ಲು. ಯಂಗಟ ತಿಣಕಾಕತ್ತಿದ್ದ. ಕಮಲಿಗ ನಿದ್ದಿ ಒಂದ ಕಡಿಗ, ಹುಡುಗನ ಚಿಂತಿ ಒಂದ ಕಡಿಗ, ಏನೂ ಹೊಳಿದಂಗಾತು. ಯಮ್ಮಾ, "ನಾ ಬದಕಂಗಿಲ್ಲ ಬೇ, ನಾ ಸಾಯ್ತೇನಿ" ಅಂದ. ಕಮಲಿಗ ದಿಕ್ಕು ತಿಳಿದಂಗಾತು.

ಎದಿಯಾಗ ಯಾರೋ ತಿವದಂಗಾತು. ಹುಟ್ಟಿದಾಗಿಂದ ಇದ ಪಿಕಲಾಟ, ಒಂದ ದಿನನಾರ ಕಣ್ಣೀರಿಲ್ದ ಬದಕ್ಲಿಲ್ಲಾ. ದುಃಖ ಉಮ್ಮಳಿಸಿ ಬಂತು– "ಇಲ್ಲ ಯಪ್ಪಾ, ನಿಂಗ ಏನೂ ಆಗೋದಿಲ್ಲಲಾ, ನಾ ಅದೀನಿ, ಬೆಳಗರಿಯೋದ್ರಾಗ ದವಾಖಾನಿಗೋಗಿ ನಿನ್ನ ತೋರಸ್ತೀನಿ" ಅಂದ್ಲು. ಯಂಗಟ ನಿತ್ರಾಣಾದ. ಶಕ್ತಿ ಇಲ್ಲದ ಮ್ಯಾಲೆದ್ದು, ತಲಿ ತಿರಗಿ ಬಿದ್ದಬಿಟ್ಟ. ಕಮ್ಲಿ ಅರಬಾಡಿಸಿ ಯಂಗಟನ್ನ ಹೊತಕೊಳ್ಳಾಕ ಹೋದ್ಲು. ಆಗಲಿಲ್ಲಾ, ಹಂಗ ದರದರಾ ಎಳಕೊಂಡು ಮನಿಗ ತಂದ್ಲು. ಧೈರ್ಯ ಸಾಲದಾತು. "ಯಂಗಟನ ಜೀವ ಹೊಂಟೈತ ಬೇ ಯತ್ತಿ, ಎಲ್ಲಿದ್ದಿ ಬಾ" ಅಂತ ಜೋರಾಗಿ ಅಳಾಕತ್ಲು. ಜಿರಲಿ ಬಣ್ಣದ ಚಿನ್ನ್ಯಾ ಎದ್ದವನ– "ಕಮಲಿ, ಏ ಕಮಲಿ, ಯಾಕ, ಯಾಕ, ಏನಾತು, ಯಾಕ ಅಳಾಗತ್ತಿ" ಅಂತ ಸಮಾಧಾನ ಮಾಡಾಕ ನೋಡ್ದ. ಅವನ ಮುಂದ ಹೇಳಿದ್ರ ಅಂವ ಏನೂ ಮಾಡೋದಿಲ್ಲಾ ಅಂತ ಆಕೀಗ ಗೊತ್ತಿದ್ದರಿಂದ ಅವನ ಮುಂದ ಏನೂ ಹೇಳ್ಳಿಲ್ಲಾ.

ಎದಿ ಎದಿ ಬಡಕೊಂಡ ಅಳ್ತಿದ್ದ ಕಮಲಿ ಅವತಾರಕ್ಕ ಗಾಬರಿಂದ ಎದ್ದ ಚಂದ್ರಿ– "ಯಾವನಲೋ ಅವನು ರಂಡಮುಂಡಿ ಹೆಂಗ್ಸ ಮನಿ ಕದಾ ಬಡದೋನೂ" ಅಂತ ಶುರು ಮಾಡಿದ್ಲು. ಯತ್ತಿ "ಯಂಗಟ ಸಾಯಾಕತ್ಯಾನವ್ವಾ, ನನಮನಿ ಕದಾ ಯಾರೂ ಬಡಿಲಿಲ್ಲಾ" ಅಂತ ಹೇಳಿದಾಗ, ಚಂದ್ರಿಗ ಪರಿಸ್ಥಿತಿ ಅರಿವಾತು. ಎಲ್ಲಿ, ಎಲ್ಲದಾನವಾ ಅಂತ ಹಿಂದ–ಮುಂದ ನೋಡದ, ಎಮ್ಮಿಕರ ಕಟ್ಟಿದ್ದು ಕಾಣದ, ತುಳದು ಚಂದ್ರಿ ದಬ್ ಅಂತ ಅಂಗಾತ ಬಿದ್ಲು. ಎದ್ದವಳ ಮೊಮ್ಮಗನ್ನ ನೋಡಾಕ ಓಡಿದಳು. ಯಂಗಟನ ಕಣ್ಣುಗುಡ್ಡಿ ತೆಳಗ-ಮ್ಯಾಲ ಆಡಾಕತ್ತಿದ್ದವು. "ಅಯ್ಯೋ, ಬದಕೋದಿಲ್ಲ ಈ ಕೂಸು ಕಮಲಿ, ಮದ್ಲ ನಡಿ ದವಾಖಾನಿಗ, ಎತ್ತ ಕೂಸನ್ನ" ಅಂದ್ಲು. ಅರೇ ಹೊಟ್ಟಿ ಉಂಡು ಬದಕಿದ್ದ ಕಮ್ಲಿ ಇಪ್ಪತ್ತೈದು ವರ್ಷಕ್ಕೆ, ನಲವತ್ತು ವರ್ಷದ ಹೆಣ್ಣುಮಗಳಂಗ ಕಾಣ್ತಿದ್ಲು. "ಹ್ಯಾಂಗಾರ ಮಾಡಿ ಆ ಭರಮನಗೌಡ್ರ ಮನಿಮಟ ಎತ್ತಿಕೋ, ಅವರ ಕಾಲಿಗ ಬಿದ್ದು ಬೇಡಕೋ, ನನ್ನ ಕೂಸನ್ನ ಉಳಸ್ರಿ ದಣಿ ಅಂತ". ಕಮಲಿ ಚಂದ್ರಿಯನ್ನೊಮ್ಮೆ ನೋಡಿದಳು. "ನನ್ನ ಮಾರಿ ನೋಡಬ್ಯಾಡ ತಂಗಿ, ದೇವರಾಣಿಗೂ ನಿನ್ನ ಕೈ ಬಿಡೋದಿಲ್ಲಾ ಸಾವುಕಾರ್ರು" ಅಂದ್ಲು.

ಕಮಲಿಗ ನೆತ್ತಿ ಉರದಂಗಾತು. ಆದ್ರ, ಪರಿಸ್ಥಿತಿ ಮೀರಿ ಹೊಂಟೈತಿ. ಕೈಯಾಗ ಕಾಸಿಲ್ಲಾ, ಮೈಯ್ಯಾಗ ಉಸಿರಿಲ್ಲಾ, ಈ ಪರಿಸ್ಥಿತಿ ಕಮಲಿದು. ವಿಚಾರಗಳ ತಾಕಲಾಟದಾಗ ಒಂದು ತೀರ್ಮಾನಕ ಬಂದ್ಲು– "ಏನಾರ ಮಾಡಿ ನನ್ನ ಮಗನ್ನ ಉಳಸಬೇಕು". ಗಂಡ ಸತ್ತ ದಿನದಿಂದ ಹೇಸಿ ಬದಕು ಬಯಸಲಿಲ್ಲಾ. ಆದ್ರ ಜೀವನ್ದಾಗ ಇಂಥ ಪರೀಕ್ಷದ ಕಾಲ ಬರ್ತೈತಿ ಅಂನ್ಕೊಂಡಿದ್ದಿಲ್ಲಾ. ಎಷ್ಟೋ ವರ್ಷಗಳಿಂದ ಕಾದಕೊಂಡು ಬಂದಿದ್ದ ಈ ಮೈ ಮಾರೊ ಕಾಲ ಹಿಂಗ ಬರ್ತೈತಿ ಅನ್ಕೊಂಡಿರ್ಲಿಲ್ಲಾ. ಮೊಗ್ಯಾ ಮೇಸ್ತ್ರಿನಾರ ಬಂದಿದ್ರ, ಕೆಲ್ಸಕ್ಕ ಬರ್ತಿನಿ ಅಂತ ರೊಕ್ಕ ಇಸ್ಕೋಬಹುದಿತ್ತು. ಕಮಲಿ ಮನಸು ಒಂದು ನಿಮಿಷ ಒದ್ದಾಡಹತ್ತಿತು.

ಕೊರಿ ಬೀಡಿಗ ಬೆಂಕಿ ಹಚ್ಚಿ ಬಾಯೊಳಾಗ ಇಡಾಕತ್ತಿದ್ದ ಚಿನ್ಯಾ– ಹಿಂಗ ಆಗಬೇಕು ಈ ಸೊಕ್ಕಿನ ಹೆಂಗಸಿಗ, ಗಂಡಸರು ಅಂದ್ರ ಮಾರ ದೂರ ಸರಿತಾಳ; ಯಾಕ ನಾ ಏನ ಕಮ್ಮಿ ಅದೀನಿ, ನನ್ನ ಯಾಕ ಇಟ್ಕೊಬಾರದು ಅನ್ಕೋತಿದ್ದಂಗ ಒಂದು ವಿಚಾರ ಹೊಳಿತು. ಹ್ಯಾಂಗೂ ತೆಲಗಿ ದವಾಖಾನಿಗ ಹೋಗಾಕ ಕರಿತಾಳ, ಹೋಗಿ ಬರೋ ಮುಂದ– ಅಂತ ಏನೇನೋ ಕನಸು ಕಾಣಾಕತ್ತಿದ್ದ. ಚಂದ್ರಿ ಸ್ವಾಟಿಗ ತಿವದು– "ಏ ಜಿರ್ಲಿಯಂತೋನ ಹಿಂಗ್ಯಾಕುಂತಿ, ಎದ್ದಬಂದು ಕೂಸನ್ನ ಭರಮನಗೌಡ್ರ ಮನಿವರೆಗ ಎತಗೊಂಡ ನಡಿ ಸಾಯಾಕತ್ತೈತಿ, ಅಲ್ಲಿಂದ ಗಾಡಿ ಕಟಗೊಂಡು ದವಾಖಾನಿಗ ಹೋದ್ರಾತು" ಅಂದ್ಲು. "ಏ, ನನ್ನೇನು ಆಕಿ ಆಳ ಮಾಡಿ ಏನು ? ಕೆಲ್ಸ ಇರೋ ಆಕಿನ್ಽ ಒಂದಮಾತು ಹೇಳವಳ್ಳು, ಕೆಲ್ಸಕ್ಕ ಬಾರದ ಹೆಂಗ್ಸ ಹತ್ರ ನನ್ದೇನು ಕೆಲ್ಸ" ಅಂದವನ ಎದ್ದು ಹೂವಿ ಚಹದಂಗಡಿ ಕಡಿ ನಡದ.

ಚಿನ್ಯಾಗ ಓಡಿ ಶಾಪಾ ಹಾಕಿದ್ಲು ಕಮ್ಲಿ. "ಬಾರ ಗಂಡ್ಸ, ಹೊತ್ತಿಲ್ಲದ ಹೊತ್ತಿನ್ಯಾಗ ಎದಿಗ ಕೈಹಾಕು, ನಿನ ಮನಿ ಕದಾ ಕಟ್ಟ, ನಿನ್ನ ಹೆಣ ಹೊರ್ಲಿ". ಯಂಗಟನ ಆರಭಾಟಕ್ಕ ಗಾಬರಿ ಆತು. ಇಬ್ರೂ ಕೈ-ಕೈ ಹಿಸಕಾಕತ್ತಿದ್ರೂ, ಕಮಲಿಗ ದುಃಖ ತಡಿಯಾಕ ಆಗವಲ್ದು. ಮಾತಾಡದ ಮುಸಿಮುಸಿ ಅಂತ ಅಳಾಕ ಸುರು ಮಾಡಿದಳು. ಕಮಲಿ, ಹಿಂಗ ಬಿಟ್ರ ಪರಿಸ್ಥಿತಿ ಕೈಮಿರಿ ಹೊಕ್ಕೈತಿ. ಹಿಡಿ ಅವನ್ನ ಅಂತ ಯಂಗಟನ ಕಾಲುಗಳನ್ನ ಹಿಡದಳು ಚಂದ್ರಿ.

ಹ್ಯಾಂಗೋ ಮಾಡಿ ಕತ್ತ್ಲಾಗ ಸಾವರ್‍ಸಿಕೊಂಡು ಗೌಡ್ರ ತ್ವಾಟದ ಮನಿಗೆ ಬಂದ್ರು. ಬೇಲಿ ಹೊರಗಿಂದ್ಲ ಗೌಡ್ರ, ದಣಿಗಳ ಅಂತ ಚಂದ್ರಿ ಎತ್ತರದ ಧನಿಯೊಳಗ ಕೂಗಿದ್ಲು. ಗೌಡ್ರ ಎಲ್ಡು ನಾಯಿ ಕೊಂದಬಿಡೋ ಹಂಗ, ಬಗಳಕೊಂತ ಬೇಲಿ ಕಡಿಗ ಬಂದವು. ಇನ್ನೇನು ಬೇಲಿ ಜಿಗದು ಹಿಡಿತಿದ್ದವು, ಆಟರಾಗ ಭರಮನಗೌಡ್ರು ಓಡಿಬಂದು ನಾಯಿಗಳನ್ನ ಒದರಿದರು. ನಾಯಿಗಳು ಹಿಂದಕ ಹೋದವು. ಚಂದ್ರಿ, ಕಮಲಿ ಇಬ್ರೂ ಬಾಗಲ್ದಾಗ ನಿಂತಿರೋದ ನೋಡಿ ಗೌಡಗ ಆಶಿ ಹುಟ್ಟಿತು. ಏನಾತ ಚಂದ್ರವ್ವ ಇಟೊತ್ತಿಗ ಬಂದ್ರಿ, ಅಂದ. “ಹೂಂ ರಿ ಧಣಿ, ಕಮಲಿ ಮಗಗ ಹುಷಾರಿ ತಪ್ಪೈತ್ರಿ, ದವಾಖಾನಿಗ ಹೋಗಬೇಕ್ರಿ” ಅಂದ್ಲು ಚಂದ್ರಿ. “ಅದಕ ನಾ ಏನ ಮಾಡ್ಲಿ” ಅಂದ್ರು ಗೌಡ್ರು. ಹೋಗ, ಗೌಡ್ರ ಕಾಲ ಓಡಕೊಂಡು ಬೇಡು ಹೋಗು ಅಂತ ದೂಕಿದ್ಲು. ಕಮಲಿ ಮೈ ಮುಳ್ಳಾತು. ಕಾಲುಗಳು ಮುಂದ ಎತ್ತಿ ಇಡಾಕ ಆಗ್ಲಿಲ್ಲಾ. ಎಷ್ಟೋ ದಿನಗಳಿಂದ ಇಂಥ ಅವಕಾಶ ಕಾಯಕತ್ತಿದ್ದ ಗೌಡಗ, ಒಳಗೊಳಗ ಖುಷಿ ಆತು. “ಇರ್‍ಲಿ, ಏಳ ಕಮಲಿ” ಅಂತಾ ಎರಡು ಭುಜಗಳನ್ನ ಬಿಗಿಯಾಗಿ ಹಿಡದು ಮೇಲೆತ್ತಿದ. ಕಮಲಿಯ ಮೈ, ಮನಸು ಹೊಲಸಾದವು ಅನಸತು. ಭರಮನಗೌಡನ ತಲಿ ತಿರಗದಂಗಾತು. ಇಂತಹ ಬಡತನದಾಗೂ ಏನ ಛಂದದಾಳ ಈಕಿ, ನಮ್ಮವು ಅದಾವು, ಇಪ್ಪತ್ನಾಲ್ಕು ತಾಸು ಹಂದಿ ತಿಂದಂಗ ತಿಂದು ರಾಗಿಮುದ್ದಿ ಆಗ್ಯಾವ. ಗೌಡನ ಮನಸು ಚಡಪಡಸಾಕತ್ತು. ಮನಿ ಮುಂದಿನ ಕಟ್ಟಿಮ್ಯಾಲ ಮಲಗಿದ್ದ ರಾಮುನ ಜಾಡಿಸಿ ಒದ್ದು– “ಏಳಲೇ, ಜನ್ರ ಕಷ್ಟ–ಸುಖ ಏನು ಗೊತ್ತಾಗೊದಿಲ್ಲೇನು ನಿನಗ” ಅಂತ ಮನಿಯೊಳಗ ಹೋಗಿ ನೂರರ ಗರಿಗರಿ ಎರಡು ನೋಟುಗಳನ್ನ ಹಿಡಕೊಂಡು ಬಂದ್ರು. “ಲೇ ರಾಮ್ಯಾ, ಜಲ್ದಿ ಎತ್ತ ಬಿಚ್ಚಿ ಚಕ್ಕಡಿ ಕಟ್ಟು, ಕಮಲಿ ಮಗಗ ಹುಷಾರಿಲ್ಲ. ಚಂದ್ರಿನ ಕರಕೊಂಡು ದವಾಖಾನಿಗ ಹೋಗಿ ಬಾ. ಈ ಕತ್ಲಾಗ ಕಮಲಿ ಮತ್ಯಾಕ, ಏನಂತಿ ಚಂದ್ರವ್ವ” ಅಂದ್ರು. ಆಕಿ ಮತ್ಯಾಕ ಬಿಡ್ರಿ, ಅಂದ್ಲು. ಕಮಲಿಯ ಕಳ್ಳು ಕಿತ್ತ ಬಂದಂಗಾತು. ತನ್ನ ಹೊಟ್ಯಾಗಿಂದ ಹುಟ್ಟಿದ ಮಗ ಸಾವು–ಬದುಕಿನ ನಡುವ ಸೆಣಸಾಡತಿದ್ರ, ಗೌಡ ತನ್ನ ಚಟಕ್ಕಾಗಿ ತಾಯಿ–ಮಗನ್ನ ದೂರ ಮಾಡಾಕತ್ತಿರೋದನ್ನ ನೆನದು ದುಃಖಾತು. ಹ್ಯಾಂಗಾರ ಆಗ್ಲಿ, ಯಂಗಟ ಬದುಕಿದ್ರ ಸಾಕು, ಅನ್ನೊ ಹುಚ್ಚ ಆಶಿ ಅವಳ ಬಾಯಿ ಬಂದಮಾಡ್ತು.

ಚಂದ್ರಿ, ಹೊಟ್ಟಿನೋವಿಂದ ಮ್ಯಾಲ-ಕೆಳಗ ಜಿಗದಾಡ್ತಿರೊ ಯಂಗಟನ, ತನ್ನ ಮಡಿಲಾಗ ಬಿಗಿಯಾಗಿ ಅಪ್ಪಿಕೊಂಡಿದ್ದಳು. ರಾಮ್ಯಾ ಚಕ್ಕಡಿ ಪರಿದವನs ಎತ್ತಗಳನ್ನ ಗದರಿಸಿದ. ಯಂಗಟ ಯವ್ವಾ-ಯವ್ವಾ ಅಂತ ಕೂಗತ್ತಿದ್ದ. ಕಮಲಿಗ ಸಹಿಸಾಕಾಗಲಿಲ್ಲಾ, ಯಂಗಟ-ಯಂಗಟ ಅಂತ ಓಡಿದ್ಲು. ಆದ್ರ ಯಂಗಟನ ಧನಿಯ ಮಾರ್ದನಿ ಮಾತ್ರ ತುಂಬಿತ್ತು. ತಲಿಯೊಳಗ, ಯಂಗಟ ಹಾರಿ-ಹಾರಿ ಬೀಳ್ತಿದ್ದ ದೃಶ್ಯ ತುಂಬಿತ್ತು.

ನಡಿ ಕಮಲಿ ಒಳಗ ಅಂತ ಭರಮನಗೌಡ ಎಚ್ಚರಿಸಿದಕ್ಕ, ಹಾಂ ಅಂದವಳ ಗೌಡನ್ನ ಹಿಂಬಾಲಿಸಿದಳು. ತನ್ನ ಅಸಹಾಯಕತೆ ಬಗ್ಗೆ ಜಿಗುಪ್ಸೆ ಆತು. ಎಂಥ ಪರಿಸ್ಥಿತಿಯೊಳಗ ತಾನು ಬದುಕಿದ್ದೇನಿ, ಅದೇ ಯಂಗಟನ ಅಪ್ಪಾ ಬದಕಿದ್ರ.... ಅಳು ಬಂತು. ತಡಿಲಾರದ ಮಹೇಶಿ ಪಂಜಿನ ಬಾಯಿಗಡ್ಡ ಇಟ್ಟು ಬಿಕ್ಕಿದಳು. ಅಷ್ಟೊತ್ತಿಗಾಗಲೇ ಚಕ್ಕಡಿ ರಾಮಚಂದ್ರಪ್ಪನ ಏರಿ ಹೊಲ ದಾಟಿ ತೆಲಗಿ ದಾರಿ ಮ್ಯಾಲಿತ್ತು.

ಕಮಲಿಯ ಖಿನ್ನತೆಯನ್ನ ಕಂಡ ಗೌಡ "ಕಮಲಿ, ಜೀವನ್ದಾಗ ಸಾವು-ನೋವು, ಕಾಯಿಲೆಗಳೆಲ್ಲಾ ಸಹಜ. ಈಗ ಆಗಿರೋದಾದ್ರು ಏನು ? ಯಂಗಟಗ ಎಲ್ಲಾ ಆರಾಮ ಆಕ್ಕೈತಿ, ನೀ ಇನ್ನ ಚಿಂತಿ ಬಿಡು" ಅಂದ. ಕಮಲಿಗ ಮಾತ್ರ ಇದ್ಯಾವುದ್ರ ಪರಿವೆಯೇ ಇಲ್ದ, ಯಂಗಟನ ಸ್ಥಿತಿಯನ್ನ ನೆನಸ್ಕೊಂಡು ಮುಸಿಮುಸಿ ಅಳ್ತಿದ್ದಳು. ಭರಮನಗೌಡಗ ಏನ ಮಾಡಬೇಕೊ ತಿಳೀದಂಗಾತು. ಅಲ್ಲೆ ಪಕ್ಕದಾಗಿದ್ದ ಹಣ್ಣಿನ ತಟ್ಟಿ ತಂದಿಟ್ಟ "ತಗೋ ಕಮಲಿ, ಧೈರ್ಯವಾಗಿರು, ಅವನಿಗೆ ಏನೂ ಆಗೋದಿಲ್ಲಾ ನಾನಿದ್ದೇನಿ. ನೋಡು, ನಿನ್ನಿದಿರಿಗ ಎಲ್ಡನೂರು ರೂಪಾಯಿ ಕೊಟ್ಟೆ. ಎಟಾರ ಖರ್ಚಾಗಲಿ, ನಾ ಕೊಡ್ತೇನಿ" ಅನ್ಕೊಂತ ಅವಳ ಭುಜದ ಮ್ಯಾಲ ಕೈ ಇಟ್ಟ. ನೂರು ಚೇಳು ಮೈಮ್ಯಾಲ ಅಡ್ಡಾಡದಂಗಾಗಿ ಕಮಲಿ ಎದ್ದು ಓಡಬೇಕು ಅಂದಕೊಂಡ್ಲು, ಆದರ ಏಳಾಕ ಆಗ್ಲಿಲ್ಲಾ. ಮನಸಿನ ಸಂಯಮ ಕಳಕೊಳ್ಳಾಕತ್ತಿದಳು. ನಾಕೈದು ವರ್ಷಗಳಿಂದ ಪರಪುರುಷರ ಸ್ಪರ್ಶ ಇಲ್ದ ಒಣಗಿದ ಹುಲ್ಲಿನಂಗ ಆಗಿದ್ದ ಮನ್ಸಿಗ ವಿಚಿತ್ರ ಅನ್ಸಾಕತ್ತಿತ್ತು. ಹಿಂದ ಯಂಗಟ, ಯವ್ವ-ಯವ್ವ ಅಂತ ಕೂಗಿದಂಗಾಗಿ ಎದ್ದುನಿಂತಳು. ಸಾಯ್ತಿರೋ ಮಗ ಒಂದು ಕಡೆ,

ತನ್ನ ಮನಸಿಗೆ ವಿರುದ್ಧವಾದ ವರ್ತನೆ ಸಹಿಸಿಕೊಳ್ಳಾಕ ಆಗ್ದ, ಅಯ್ಯೋ ಬದುಕೇ, ಹೆಣ್ಣನ್ನ ಎಂತಹ ಅಮಾಯಕ ಸ್ಥಿತಿಗ ತಂದೊಡ್ಡತಿ. ಅಂತ ಅನ್ನೋ ತಿದ್ದಂಗ, ಅವಳ ಯಾವ ವಿಚಾರಗಳಿಗೂ ಅವಕಾಶ ಕೊಡ್ದ, ಭರಮನಗೌಡ ಅವಳನ್ನ ಹಾಸಿಗವ್ಯಾಲ ತಂದ ಮಲಗಿಸಿ ಆಕ್ರಮಣವೆಸಗಿದ್ದ, ಅವಳ ಚರ್ಮದ ಕೂಡ ಯುದ್ಧ ನಡಸಿದ್ದ. ಕಮಲಿ ಮನಸು ಮಾತ್ರ ಯಂಗಟನ ನೋವಿನ ಸುತ್ತ ಸುತ್ತುತ್ತಿತ್ತು. ಅವನ ನೋವಿನ ವಿಚಾರದಾಗ, ಅವಳ ಮೈಯನ್ನ ಹರಿದು-ಹರಿದು ತಿನ್ನುತ್ತಿದ್ದ ಗೌಡನ ಕಡಿಗ ಲಕ್ಷ್ಯ ಹೋಗಲಿಲ್ಲಾ. ಯಂಗಟ ಯವ್ವಾ-ಯವ್ವಾ ಅಂದಂಗಾಗುತ್ತಿತ್ತು. ಭರಮನಗೌಡ ಕಮಲಿ ಮೈಮ್ಯಾಲ ಬಿದ್ದಕೊಂಡಿದ್ದು, ಯಂಗಟ ಅವಳ ಮೈ ಮ್ಯಾಲತ್ತಿ ಮಲಿ ಉಣ್ಣೊ ಅನುಭವ ಆಗತೊಡಗಿತು.

ಎಷ್ಟೋ ಹೊತ್ತಿನವರಿಗ ಗೌಡ ಕಮಲಿಯ ದೇಹದ ಸವಿ ಸವಿದು-ಸವಿದು ಸಾಕಾಗಿ ಎದ್ದುಹೋದ. ಕಮಲಿ ಮಹೇಶಿಯ ಹರಕ ಪಂಜಿಯನ್ನು ಸುತಕೊಂಡು ಅರಿವಿಲ್ಲದೇ ಎದ್ಲು. ಆಗ್ಲೆ ಮುಂಗೋಳಿ ಕೂಗಿ ಚುಮುಚುಮು ಬೆಳಕು ಹರದಿತ್ತು. ರಾತ್ರಿ ಹೋಗಿದ್ದ ಚಕ್ಕಡಿ ತಿರುಗಿ ಬರೋ ಸಪ್ಪಳ ಕೇಳಸಾಕತ್ತಿತು. ಕಮಲಿಗ ಒಮ್ಮಿಗ ಎಚ್ಚರಾತು. ಒಂದೇ ನೆಗೆತಕ್ಕ ಬೇಲಿ ಹತ್ರ ಓಡಿಬಂದ್ಲು. ಯಂಗಟ-ಯಂಗಟ ಅಂತ ಹುಚ್ಚಿ ಹಂಗ ಆವೇಶದಿಂದ ಮಗನ್ನ ನೋಡಾಕ ಓಡಿದ್ಲು. ಚಂದ್ರಿ ಎದಿ ಬಡತಾ ಒಂದ ನಿಮಿಷ ನಿಂತಂಗಾತು. ರಾತ್ರಿ ನಡದ ಕರ್ಮಕ್ಕ ತಾನs ಕಾರಣ ಅಂತ ಚಂದ್ರಿಗ ಅಪರಾಧಿ ಭಾವ ಕಾಡಾಕತ್ತು. ಕಮಲಿನ ಕಣ್ಣೆತ್ತಿ ನೋಡೊ ಧೈರ್ಯ ಇಲ್ದ, "ಕಮಲಿ, ಯಂಗಟ" ಅಂತ ಬಾಯಿಯೊಳಗಿಂದ ಮಾತು ಹೊರಗ ಬರ್ಲೆ ಇಲ್ಲಾ. ಯಂಗಟ ತಣ್ಣಗ ಮಲಗಿದ್ದ. ಅವನ ಮಕ ನೋಡಿದ ಕಮಲಿಗ, ರಾತ್ರಿ ಅವಳ ಎದಿಗ ಜಾಡಿಸಿ ಒದಿತಿದ್ದ ಕೂಸಿನಂಗ ಕಂಡ. ಗೌಡನ ಮುಖ ನೆನಪಾತು. ಕಮಲಿ ಮಕಾ ಬಿಳಚಿಕೊಂಡತು. ಆಕೀಗ ಈಗ ಅಳು, ನಗು ಎಲ್ಲಾನೂ ಒಂದೇ ಅನಸಾಕತ್ತು. ಅವಸರದಿಂದ ಓಡಿ ಬಂದ ಭರಮನಗೌಡ ತಣ್ಣಗ ಮಲಗಿದ್ದ ಯಂಗಟನ್ನ ನೋಡಿ, ಕಮಲಿ ಮಕಾ ನೋಡಾಕ ಧೈರ್ಯ ಆಗದ ಹಂಗs ಹಿಂದಕ ಸರದ. ಕಮಲಿ ಮಾತ್ರ, ಯಂಗಟನ ಸತ್ತ ದೇಹನ ಒಬ್ಬಳೇ

ಎತ್ತಿಕೊಂಡು ತನ್ನ ಗುಡಿಸಲ ಕಡಿಗೆ ನಡದ್ಲು. ಯಂಗಟನ ಸತ್ತ ದೇಹನ ಬಿಗಿಯಾಗಿ ಅಪ್ಪಿಕೊಂಡಾಗಲೆಲ್ಲಾ, ಭರಮನಗೌಡ ಅವಳ ದೇಹನ ಅಪ್ಪಿಕೊಂಡು ಮುದ್ದಾಡಿದಂಗಾಗತಿತ್ತು. ಚಿನ್ಯಾ, ರಾಮು, ಚಂದ್ರಿ ಹುಚ್ಚರಂಗ ಅಳೋದನ್ನ ನೋಡಿ ವಿಷಾದದ ನಗಿ ನಕ್ಕಳು.

ಯಂಗಟನ ಎತ್ತಿಕೊಂಡು, ಕೈಯ್ಯಾಗೊಂದು ಸಲಕಿ ಹಿಡಕೊಂಡು ಸ್ಮಶಾನದ ಕಡಿ ನಡದಳು. ಚಂದ್ರಿ, ರಾಮು, ಚಿನ್ಯಾ ಮಕ ಮಕ ನೋಡಿ ಕೊಂಡು, ಪರಿಸ್ಥಿತಿ ತಿಳಕೊಂಡು ಕಮಲಿ ಬೆನ್ನತ್ತಿದರು. ಈಗ ಯಾರು ಅಳವಲ್ರು, ಮಾತಾಡವಲ್ರು. ಚಿನ್ಯಾ ಗುಂಡಿ ತಗದು– "ಕಮಲಿ, ಬಾ ಯಂಗಟನ ಒಳಗ ಮಲಗಸು ಅಂದಿದಕ್ಕ, ಎದಿ ಹೊಡ್ದ ಹೋದಂಗಾಗಿ, ಯಂಗಟ, ಬಿಟ್ಟುಹೊಂಟೆಯಲ್ಲೋ ಮಗನ, ನಾ ಯಾರ ಸಲವಾಗಿ ಬದಕ್ಲಿ ಇನ್ನ. ನಾನ ದವಾಖಾನಿಗೆ ಬಂದಿದ್ರ ನಿನ್ನ ಸಾಯಾಕ ಬಿಡ್ತಿದ್ದಿಲ್ಲಾ, ಬಿಡ್ತಿದ್ದಿಲ್ಲಾ ಯಂಗಟಾ.... ಕೂದಲನ್ನ ಹಿಡಿದು ಕಿತ್ತಕೊಳ್ಳಾಕ ಪ್ರಯತ್ನಿಸಿದಳು. ಚಂದ್ರಿಗ ಏನು ಹೇಳಬೇಕು ತಿಳಿದಂಗಾತು. "ಸಮಾಧಾನ ಮಾಡ್ಕೊ ಕಮ್ಲಿ, ಸಾಯೋದು ಅವನ ಹಣೆಬರದಾಗ ಬರ್ದಿತ್ತು, ಸತ್ತ". ಕಮ್ಲಿಗ ಎಲ್ಲಿತ್ತೊ ಸಿಟ್ಟು– "ಏ ಹೋಗ ಮುದಿ ಬೇವರ್ಸಿ, ಆ ಗೌಡನ ತೋಮ್ಲಾ ತಿಂದು, ನನ್ನ ಭಾಡು ತಿನ್ನಾಕ ಹೋಗಿ, ನನ್ನ ಮಗನ್ನ ಕೊಂದೆಯಲ್ಲೇ, ನೀನು ಒಂದ ಹೆಣ್ಣಾ" ಅಂತ ಕೈಗ ಸಿಕ್ಕ ಕಲ್ಲ ತಗೊಂಡು ಹೊಡಿಯಾಕ ಬಂದ್ಲು. ಚಿನ್ಯಾ, ರಾಮು ಕಲ್ಲು ಬಿಡಸಿದರು. "ಕಮಲಿ, ಒಬ್ಬ ಅಂತೂ ಸತ್ತಾ, ಇನ್ನೊಬ್ಬ ಅದಾನ ಠಾಕು, ಅವನ ಸಂಬಂಧನಾದ್ರೂ ನೀ ಬದಕಬೇಕು" ಅಂದ ರಾಮು. "ಹೌದು ರಾಮು, ಆ ಗೌಡನ ಸೂಳಿ ಆಗಿ, ಈ ಚಿನ್ಯಾನ ಇಟಕೊಂಡು, ಇವನಂತ ನೂರಾರು ಗಂಡಸ್ರಿಗ ಕದಾ ತಕ್ಕೊಂತ ಬದುಕಬೇಕು, ಅಲ್ಲಾ...." ಕಮಲಿ ಎದ್ದವಳೇ ಬಡಬಡ ಯಂಗಟನ ಹೆಣದ ಮ್ಯಾಲ ಮಣ್ಣ ಮುಚ್ಚಿ, ದೂರ ಸರದು ಬಿಕ್ಕಿ ಬಿಕ್ಕಿ ಅತ್ತಳು. ಅವಳೀಗ ತೃಪ್ತಿ ಆಗೋವರಿಗೂ ಅತ್ಲು.

ಈಗ ಕಮಲಿ ಮನೀಗ ಚಿನ್ಯಾ, ಭರಮನಗೌಡ, ನಾಗ ಎಲ್ಲಾರ್ರ ರಾತ್ರಿ ಕತ್ಲಾದಿಂದ ಬಂದ–ಬಂದ ಹೊಕ್ಕಾರ. ಆದ್ರ ಕಮಲಿಗ ಮಾತ್ರ ಅವರೆಲ್ರೂ ಅಕಿ ಪಕ್ಕ ಮಲಗದಾಗ, ಯಂಗಟ ಮಕ್ಕೊಂಡಂಗ ಅನಸತೈತಿ. ಅವರನ್ನ ಮುಟ್ಟಿದಾಗ, ಯಂಗಟನ್ನ ಹೆಣದ ಗುಡ್ಡಿ ಮುಟ್ಟಿದಾಂಗ ಅನಸತೈತಿ. □

ಗುಡ್ಡಜ್ಜ

ಮೂರಡಿ ಕಾಲು, ನಾಕಡಿ ಮೈ, ಏಳಡಿ ಎತ್ತರದ ನರಪೇತಲ 'ಗುಡ್ಡಜ್ಜ' ಊರಾಗ ಬಂದ್ರ, ಊರನಾಯಿಗಳೆಲ್ಲಾ ಅವನಹಿಂದ ದಂಡಯಾತ್ರೆ ಮಾಡ್ತಾವ. ಕಡ್ಡಿಕಾಲು, ಊದಿಸಕಡ್ಡಿಯಂತ ಕೈ, ಹೆಗಲಮ್ಯಾಲ ಕರಿ ಕಂಬಳಿ, ಅದರ ಮ್ಯಾಲೊಂದು ಸಣ್ಣ ಕೊಡ್ಲಿ ಹಾಕ್ಕೊಂಡು, ಬೆನ್ನ ಹಿಂದ ಇಳಿಬಿಟ್ಟ ಕಲ್ಲಿಯೊಳಗ ಒಂದ ಸಣ್ಣ 'ಚಾ' ಪಾತ್ರಿ, ಲೋಟ, ತಾಟು ಸದಾ ಸಿದ್ಧ. ಶಂಕ್ರಸಳ್ಳಿ ಮರಿಯಪ್ಪನ ಕುರಿ ಕಾಯೋ 'ಗುಡ್ಡಜ್ಜ', ಹುಟ್ಟಿದ್ದು ಗೊತ್ತಿಲ್ಲದ ಮರಿಯಪ್ಪನ ಕುರಿಮಂದೆಯೊಳಗ ಬೆಳದಿದ್ದ. ಆಕಾರದಪ್ಪಿದ ದೇಹ ಕಂಡು ಮದ್ವಿ ಚಿಂತಿ ಬಿಟ್ಟು, ಅನ್ನ ಹಾಕಿದ ದಣಿ ಮರಿಯಪ್ಪನs ಸರ್ವಸ್ವ ಅಂತ ಕುರಿ ಕಾಯೋ ನಾಯಿ-ಕುರಿಗಳ ಜೊತಿಗ ತಾನೂ ಒಬ್ಬ ಅಂದ್ಕೊಂಡಿದ್ದ.

ಗುಡ್ಯಾ- ಗುಡ್ಡಣ್ಣ- ಗುಡ್ಡಜ್ಜ- ಆದಿಂದ ಎತ್ತರ ಹೆಚ್ಚಾಗಿ ಬೆನ್ನು ಬಗ್ಗಿತ್ತು. ಬೇತಾಳದಂಗ ಬೆಳದಿರೊ ಗುಡ್ಡಜ್ಜ ಅರವತ್ತೈದಕ್ಕ ಕಾಲಿಟ್ಟಾಗ ನೆರತ ಕೂದ್ಲ, ಗುಳಿ ಬಿದ್ದ ಕಣ್ಣು, ಸಣ್ಣಹುಡ್ರು ಚಿಟಾರನೆ ಚೀರೊ ಹಂಗಿದ್ದ. ಶಿರ್ನಳಿ ಸುತ್ಲ ಬಡವರ ಹೊಲಗಳನ್ನ ಎಂಟು-ಒಂಬತ್ತು ರೂಪಾಯಿ ಕೊಟ್ಟು ಹೆಬ್ಬಟ್ಟ ಒತ್ತಿಸ್ಕೊಂಡು, ಒಳಗ ಮಾಡ್ಕೊಂಡು ಸುತ್ಲಹಳ್ಳಿಗ ಸಾವ್ಕಾರಾಗಿದ್ದ ಮರಿಯಪ್ಪನ ಹಿರಿಮಗ ಡಾಕ್ಟ್ರಾಗಿದ್ದು ದೊಡ್ಡಸುದ್ದಿ. ಊರಸುತ್ನ ಹೊಲಗಳಿಗ ಕುರಿ ತರಬಾಕ ಬಂದಾಗ 'ಗುಡ್ಡಜ್ಜ' ಊರಾಗಿನ ಒಂದು ಅಂಗಡಿ ಬಿಡದ ಚಾ ಕುಡಿತಿದ್ದ. ಬಂಗಾರಿ, ಅಡ್ರಳ್ಳಿ ಕ್ರಾಸ್ ಬಿಟ್ಟು ಬಂದಮ್ಯಾಲ ಗಾರಿಕಟ್ಟಿ ಪಕ್ಕದಾಗ ಗುಡ್ಲ ಕಟ್ಟಿ ಚಾದಂಗಡಿ ಇಟ್ಟಿದ್ಲು. ನೋಡೊ ವಯಸ

ಕಳಕೊಂಡಿದ್ದು ಮನಸಿನ ತಾಕಲಾಟ ತಾಳಲಾರ್ದ ದಿನಕೆಂಟ ಸಲಾ ಎಡತಾಕ್ತಿದ್ದ. ಕೆರಿ ಅಂಗಳದಾಗ ಕುರಿ ಬಿಟ್ಟು, ಸಣ್ಣ ಹುಡಗರನ ಗದರಿಸಿ "ಕಾಯಿರಲೇ ಸರಿಯಾಗಿ, ತ್ವಾಳಗೀಳ ಬಂದೀತು" ಅಂತ ಹೇಳಿ, ಅವನ ಹಿಂದ ಬೆನ್ನತ್ತಿದ ಚಂಪಿ ನಾಯಿಯನ್ನ ಗದರಿಸಿ "ಏ ಹೊಕ್ಕಿ ಇಲ್ಲಾ, ಕುರಿ ಕಾಯಲೆ ಲೌಡಿ ಅಂದ್ರ ಊರಾಗ ಬರ್ತಾಳಂತ" ಗದರಿಸಿ ಕಲ್ಲು ಬೀಸಿ, ಬಾರಿಕದ ಪರಸನಂಗಡಿಗ ಬಂದು ಹಲ್ಪಿ ಹೊಡಿತಿದ್ದ.

ಸಂಜಿಮುಂದ ರಾಮಚಂದ್ರನಂಗಡಿ ಹೆಂಡ, ಲಿಂಗನ ಮನಿಯಾಗ ಸರಾಯಿ ಸೇವಿಸಿ, ಇದ್ದಬಿದ್ದ ಚಟಗಳನ್ನೆಲ್ಲಾ ಶಿರ್ನಳಿಯೊಳಗ ತಿರಸ್ಕೊಂಡು ದೊಡ್ಡಿಕಡಿಗ ಹೋಗ್ತಿದ್ದ. ಬಿಡಾಡಿ ತೆಲಗರ ದುರ್ಗಿ ಅದ್ಯಾವದೋ ಊರಿಂದ ಬಂದು, ಚಕ್ಲಿ ರಾಮುನ ಮನಿ ಪಕ್ಕ ಅಂಗಡಿ ಇಟ್ಟಿಂದ ಮೆಟ್ರಿಕ್‌ನ್ಯಾಗ ಮೂರಸಲ ಲಾಗ ಹೊಡ್ದು, ಊರಾನ ಹುಡುಗಿಯರಿಗ ತಲೆನೋವಾಗಿದ್ದ ಕುಂಟ ರಾಮು ಮಂದಿ ಇಲ್ಲದ್ದ ನೋಡಿ ಗುಡ್ಲಾಗ ಹೊಕ್ಕೊಂತಿದ್ದ. ಅವನ ಸವಾಸ ಮಾಡ್ಯಾಳಂತ ಬಸ್ಯಾ ಅವಾಗವಾಗ ಬುಸ್‌ಗುಟ್ತಿದ್ದ. ಅಕಿ ಸ್ವಾರಸ್ಯದ ಸುದ್ದಿ ಕೇಳಿದ್ದ ಗುಡ್ಡಜ್ಜ, ಕುರಿ ಹಾಲ ಕೊಡೊ ನೆವ ಮಾಡಿ ಗಿಡ್ಡನ ದುರ್ಗಿ ಗಲ್ಲಕ ಕೈಹಾಕಿ ಬೊಯ್ಯಿಸ್ಕೊಂಡಿಂದ ಅರಗಾಗಿ ಅಡ್ಡಾಡತೊಡಗಿದ.

ಗಂಡನ್ನ ಬಿಟ್ಟಬಂದ ಚಿಕ್ಕಿ, ಸೋಮ್ಲಿ, ಸಿದ್ಧಿ ಸಾಲಿಗ ಮನಿ ಮಾಡ ಕೊಂಡು, ಮರ್ವಾದಿಯಿಂದ ಕತ್ಲಾದಿಂದ ಕರಾಮತಿ ಕೆಲ್ಸ ಮಾಡಿಕೊಂಡಿದ್ದಿದ್ದನ್ನ ಕೇಳಿದ ಗುಡ್ಡಜ್ಜ "ಒಂದ ಕೈ ನೋಡೆಬಿಡಾನಂತ" ಸೆಟದು ನಡಿಯಾಕ ಹೋಗಿ ಬೆನ್ನಿನ್ನರ ಚಳಕ್‌ಂತ ಉಳಕಿದ್ಕ, ನಾಗಪ್ಪನ ಕುಟಾಗ ಬಿಸೆಕಲ್ ಗೂಟ ಬಡಸ್ಕೊಂಡು, ಏಳಾಕಾಗ್ದೆ-ಮಲಗಾಕಾಗ್ದೆ ಮೂರವಾರ ಮುಲಕಾಡಿ ಮಕ್ಕೊಂಡಿದ್ದ. "ಏನ್ ನಸೀಬ ನನ್ದು, ಏನಾರ ಮಾಡಾಕ ಹ್ವಾದ್ರ ಏನಾರೊಂದು ಆಗಿರತೈತಿ"– ಒಂದೊಮ್ಮಿ ಬಂಗಾರಿನ ನೋಡಾಕ ಹೋಗಿ, ಬಗ್ಗಿ ನಡಿಯುದೆ ಆಕಿ ಬಾಗ್ಲ ಬಡಸ್ಕೊಂಡು ಹಣಿ ಹೊಡಕೊಂಡಿದ್ದ. ಚಿಕ್ಕ ಮನೀಗ ಹೋಗಾನಂದ್ರ ಸೊಂಟಾನ ಹಿಡ್ಕೊಂತು ಅಂತ ತನ್ನೊಳಗ ಮಾತಾಡ್ಕೊಂಡ. ತನ್ನ ಎತ್ತರದ ಮೈಕಟ್ಟೆ ಮಾರಕವಾಗಿ, ನೋಡಿದ ಹುಡುಗಿಯರೆಲ್ಲಾ – ಬಾಳ ಉದ್ದ ಅದಾನು ಅಂತ ಮೂತಿಗ ತಿಪ್ಪಂಗ ಹೇಳಿಂದ

ಹೆಣ್ಣಿನ ಮ್ಯಾಲಿನ ಮೋಹ ಕಳಕೊಂಡು, ಕುರಿದಡ್ಡಿನs ತನ್ನ ಹೇಣ್ತಿ ಅಂತ ತಿಳ್ಕೊಂಡು, ಮನುಷ್ಯ ಸಹಜ ಬಯಕೆಗಳನ್ನೆಲ್ಲಾ ಗಂಟ ಕಟ್ಟಿ ಹೊಳಿಯಾಗ ಎಸದು, ಮಳಿಗಾಲ-ಚಳಿಗಾಲ ಅನ್ನದ ಕಂಬಳಿ ಹೊತ್ಕೊಂಡು ಗಡದಾಗಿ ಮಕ್ಕೊಂಡುಬಿಡ್ತಿದ್ದ. ಮರಿಯಪ್ಪನ ಮನಿ ರಾಗಿ ಮುದ್ದಿ ತಿಂದು, ಕುರಿ ಹಾಲು ಕುಡ್ದು, ಕೊಬ್ಬಿದ ನಾಯಿ ಪಕ್ಕದಾಗ ಕಂಬಳಿ ಕಾವಿನಾಗ ಅವಿತಕೊಳ್ತಿದನ್ನ ಬಿಗಿಯಾಗಿ ತಬ್ಬಿಕೊಂಡು ಕನಸಿಂದ ಹೊರಗ ಬಂದಬಿಡ್ತಿದ್ದ.

ಕಳಕೊಂಡ ವಯಸಿಗ ಮರಗದ ಗುಡ್ಡಜ್ಜ– ಹುಟ್ಟಿದ ಊರು, ತಾಯಿ-ತಂದಿ ಕುರತು ತಲಿನ ಕೆಡಿಸಿಕೊಂಡಿರಲಿಲ್ಲಾ. ಮದವಿ ಆಗಲಿಲ್ಲಾ ಅನ್ನೊ ವಿಷಯ ಅವಾಗವಾಗ ಕಾಡ್ತಿದ್ರೂ, ಕುರಿ ಹಾಲಿಗ ಬರೋ ಹೆಂಗಸರನ್ನ ಕಂಡು ಕೆಂಡ ಕಾರತಿದ್ದ. ಅವನ ಸಿಟ್ಟನ್ನ ಬೊಯ್ದು ತೀರಿಸ್ಕೊಂಡಬಿಡ್ತಿದ್ದ. ಊರೂರು ಅಲದು ಸೇಂದಿ–ಸರಾಯಿ, ಕಂಡದ ರುಚಿ ಕಂಡಿದ್ದ ಗುಡ್ಡಜ್ಜ– ಹರಿಹರ, ದಾವಣಗೇರಿಗ ಹೋಗಿ ಅದ್ಯಾವಳೊ ಮಾವನ ಮಗಳು ಅದಾಳಂತ ಒಂದೂರ ಕ್ಯಾಂಪಿನ್ಯಾಗ ವಸ್ತಿಹೊಡ್ದು ಬರ್ತಿದ್ದ. ದುಡದ ದುಡ್ಡು ಗಂಟ ಕಟ್ಟಿ, ಕೈಪೆಟಿಗಿಯೊಳಗಿಟ್ಟು ಬೀಗ ಹಾಕ್ಕೊಂಡು ಅಡ್ಡಾಡ್ತಿದ್ದ. ವರ್ಷಕ್ಕೊಂದು ದೊಡ್ಡ ಕುರಿ ಮತ್ತದರ ಮರಿ, ಉಂಡೂಟ, ಕಂಬಳಿ ಅವನ ಪಗಾರ. ಹಿಂಗ ಮಾಡಿ ಮಾಡಿ ಇಪ್ಪತ್ತು ಕುರಿ ಸ್ವಂತದವನ್ನ ಮಾಡಿಕೊಂಡಿದ್ದ.

ಅವಾಗಿನ್ನು ಮಾಗಿಕಾಲ ಸುರು ಆಗಿತ್ತು. ಕೊಂಡಜ್ಜಿ ಮುಸಲ್ಪಾಡದಿಂದ ನೆಟ್ಟಿಗ ಕುರಿಗಳನ್ನ ಶಿರ್ನಳ್ಳಿ ಕೆರಿ ಏರಿ ಹಿಂದ ಹೊಡಕೊಂಡು ಬಂದಿದ್ರು. ಗುಡ್ಡಜ್ಜ ಮುದ್ದಿ ಉಂಡು ಹುಣಸಿಮರದ ಕೆಳಗ ಕಂಬಳಿ ಹಾಸಿ ಅಡ್ಡಾಗಿದ್ದ. ಯಾರೋ ಗುಡ್ಡಜ್ಜ ಅಂದಂಗಾಗಿ ಗಡಬಡಿಸಿ ಎದ್ದ. ಅವನ ಪಕ್ಕದಾಗ ನಲವತ್ತರ ನಡುವಯುಸ್ಸಿನ ಗುಂಡುಗುಂಡಾದ ಯಂಕವ್ವ, ಹಸರು ಸೀರಿ ಉಟ್ಟು, ಹರದ ಸೀರಿಯೊಳಗಿಂದ ಕಾಣ್ತಿದ್ದ ನಸುಗೆಂಪಾದ ಮೈ ಗುಡ್ಡಜ್ಜನ ಇಳಿಗಣ್ಣಿಗೂ ಮೋಹಕವಾಗಿ ಕಾಣ್ತಿತ್ತು. ಭಾಳ ಹೊತ್ತು ಗುಡ್ಡಜ್ಜಗ ಮಾತ ಹೊರಡಲಿಲ್ಲಾ. ಯಂಕವ್ವ ಆರಡಿ ಇರಬಹುದು ? ಹ್ವಾದ ಮುಂಗಾರಿನ್ಯಾಗ ಮರಿಯಪ್ಪನ ಹೊಲ್ದಾಗ ತ್ವಗರಿ ಕೊಯ್ಯಾಕ ಬಂದಾಗ ಬಾಳ ಸಲಗಿಯಿಂದ ಮಾತಾಡಿದ್ಲು. ಆವಾಗ ಗುಡ್ಡಜ್ಜನ ಮನಸ್ಸಿನ್ಯಾಗ ಯಂಕವ್ವನ ಕುರಿತು

ಏನೆಲ್ಲಾ ಬಯಕೆಗಳು ಹುಟ್ಟಿದ್ವು. ಯಂಕವ್ವ ಮತ್ತೊಮ್ಮೆ "ಏ ಗುಡ್ಡಜ್ಜ, ತಲಿ ನೊಯಿಸಾಕತ್ತೈತಿ, ಸ್ವಲ್ಪ ಹಾಲ ಹಿಂಡಿ ಕೊಡಾಕ ಹೇಳು" ಅಂದ್ಳು. ಗದರಸಬೇಕು ಅಂತ ತುದಿನಾಲಗಿಗ ಬಂದ ಮಾತು ಹೊರಗ ಹೊರಡಲಿಲ್ಲಾ. "ಏನಂದಿ ಯಂಕವ್ವ ಹಾಲ, ಲೇ ರಾಮ್ಯಾ ಯಂಕವ್ವಗ ಹಾಲಂತ, ಆ ದಬಗಿ ಕುರಿ ಹಿಡ್ದು ಹಿಂಡಕೊಡು" ಅಂತ ಒದರಿ ಹೇಳ್ದ. "ನೀ ಹಿಂಗ ಎಲ್ರಿಗೂ ಹಾಲು ಕೊಡ್ತಿರು, ಮರಿ ಉಪಾಸ ಸಾಯಿತಾವ" ಎಂದ ರಾಮ್ಯ. "ಲೇ ಮಗನ, ಹೇಳ್ದಷ್ಟು ಕೇಳಲೇ" ಅಂತ ಗದರಿಸಿದ ಗುಡ್ಡಜ್ಜ. ವರ್ಚಗಣ್ಣಿಂದ ಯಂಕವ್ವನ ಕಡಿ ನೋಡಿ, ತನ್ನ ದರ್ಪ ತೋರಸೊ ನಾಟ್ಕ ಮಾಡ್ದ. "ಏ ಯಾಕ ನಿಂತಿ ಯಂಕವ್ವ ಕೂಡಬಾರ್ದ", ಬಾ ಇತ್ಲಾಗಂತ ಕಂಬಳಿ ಹಾಸ್ದ. "ಇರ್ಲಿ ಬಿಡಪ್ಪ" ಅಂದವಳ, ಗುಡ್ಡಜ್ಜಗ ಕೈ ಬಡಿಸಿದವಳ ಪಕ್ಕದಾಗ ಕುಂತ್ಲು. ಗುಡ್ಡಜ್ಜನ ಮೈ ಕಾವೇರಾಕತ್ತು. ಒಂದ ನಿಮಿಷ ಏನೇನೊ ಆತು, "ಏ ಜಲ್ದಿ ಹಿಂಡಲೇ ಬೇವರ್ಸಿ" ಅಂತ ಕೈ ಮ್ಯಾಲೆತ್ತಿ ಆಕೀಗ ತಾಗಿಸ್ದ. ಕರೆಂಟ್ ಹೊಡ್ದಂಗಾಗಿ ಬೆವರ ಬಿಡಾಕತ್ತು. ಭಾಳ ಹೊತ್ತು ವರ್ಚಗಣ್ಣಿಂದ ಕೊಬ್ಬಿರೋ ಯಂಕವ್ವನ ಎದಿ ನೋಡಿ, ಆಕಿ ಉಸಿರಾಟದ ಕ್ರಿಯೆಯನ್ನ ಗಮನಿಸತೊಡಗಿದ. ಮನಸು ಚಡಪಡಸತೊಡಗ್ತು– ಹಾಳಾದ ಹುಡಗ, ಜಲ್ದಿ ಹಾಲ ಹಿಂಡಕೊಂಡು ಬರಗಿರ್ತಾನೋ ಏನೋ; "ಲೇ ರಾಮ್ಯ, ಆ ಬಿಂಗಿ ಕುರಿನ ಆಟ ಹಿಂಡಲೇ ಹಾಲು ಸಾಕಾಂಗಿಲ್ಲೇನೊ" ಅಂತ ಯಂಕವ್ವನ ಕಡಿ ನೋಡ್ದ. ಯಂಕವ್ವ ಒಂದಸಲಾ ನೋಡಿದ್ಲು. ಗುಡ್ಡಜ್ಜನ ರಕ್ತ ಪೂರ್ತಿ ತಲಿಮಟ ಬಂದಂಗಾಗಿ ಮೈ ಬಿಸಿ ಆತು. ಗಟ್ಟಿ ಮನಸು ಮಾಡಿ "ಯಂಕವ್ವ, ನಿನ ಗಂಡ ಔಟಹನಮು ಎಲ್ಲಿಗ ಹೋಗ್ಯಾನ, ಬಾಳ ದಿನಾತು ಕಂಡಿಲ್ಲಾ, ಊರಾಗ ಅದಾನ ಇಲ್ಲಾ, ಎತ್ತಿನ ದಲಾಲಿ ಅಂತ ಪ್ಯಾಟಿಗ ಹೋಗ್ಯಾನಂತ" ಪೀಠಿಕೆ ಹಾಕ್ದ. "ಅಯ್ಯ, ಅವನೆಲ್ಲಿ ಊರಾಗಿರ್ತಾನಪ್ಪ, ಗೌಡ್ರಿಗ ಎಲ್ಡ ಎತ್ತ ತರಾಕಂತ ಗೆಣಸಿಗ ಹೋಗ್ಯಾನ. ಬರೋದ ಇನ್ನೂ ಎಂಟ ದಿನಾನೋ ಇಲ್ಲಾ ತಿಂಗಳೋ ಯಾರಿಗೊತ್ತು ?" ಅನ್ನೋದ್ರಾಗ, ರಾಮ್ಯಾ ಹಾಲಿನ ಬಟ್ಲ ಹಿಡಕೊಂಡು ಏರಿ ಹತ್ತಿದ್ದ. "ಇಲ್ಲಿಟ್ಟ ಹೋಗು, ಆ ಕಾಳಪ್ಪನ ಹೊಲ್ದ ಕಡಿ ಹೋಗು, ಭಾರಿ ಕೆಟ್ಟ ಮನಷ್ಯಾ, ಕುರಿ ಬಿದ್ರ ಮುಸಲ್ಪಾಡ ದಡ್ಡಿಗ ಹಾಕ್ತಾನ ನಡಿ ಓಡು" ಅಂತ ರಾಮ್ಯಾಗ ಗದರಿಸಿದ. ರಾಮ್ಯಾ ಏರಿ ಇಳಿದಿಂದ,

ಹೆದರ್ಕೊಂತ್ಲ, ಹಾಲಿನ ಬಟ್ಲಿಗ ಕೈ ಹಾಕ್ತಿದ್ದ ಯಂಕವ್ವನ ಕೇಳ್ದ– "ಏನ ಯಂಕವ್ವ, ನಾನು ಚಾ ಕುಡಿಯಾಕ ಬರ್ಲೇನವ್ವ" ಅಂತ ಗುಳಂ ಅಂತ ಉಗಳು ನುಂಗ್ದ. ಅದನ್ನೆ ಕಾಯ್ತಿದ್ದ ಯಂಕವ್ವ– "ಬಾರಪ್ಪ, ಯಾರ ಬ್ಯಾಡ ಅಂತಾರ ಒಂದರ್ಧ ಗಂಟಿ ಬಿಟ್ಟು ಬಾ, ಚಾ ಮಾಡಿರ್ತೀನಿ ಕುಡಿವಂತ" ಅಂದ್ಲು. ಗುಡ್ಡಜ್ಜಗ ನಿಧಿ ಸಿಕ್ಕಂಗಾಗಿ, ನೆತ್ತಿ ಗಡ್ಡಕ್ಕ ಕೈ ಹಾಕಿ ಕೆರಿಯಾಕತ್ತಿದ. ಕುಂಟ ರಾಮು ವರ್ಣನೆ ಮಾಡಿದ್ದು ನೆಪ್ಪಾತು. ಏ ಗುಡ್ಡಜ್ಜ, ಕುರಿ ಹೊಂಟವು ಬಾ ಅಂತ ರಾಮ್ಯಾ ಒದರಿದ್ಕ ಎಚ್ಚರಾಗಿ, ಕಂಬಳಿ ಕೊಡವಿಕೊಂಡು ಹೆಗಲ ಮ್ಯಾಲ ಒಕ್ಕೊಂಡು ಕುರಿ ಕಡಿ ಹೊಂಟ. ಅವನ ಮನಸು ಮಾತ್ರ ಯಂಕವ್ವನ ಹಿಂದ–ಹಿಂದ ಸುತ್ತಾಕತ್ತಿತ್ತು. ಭಟ್ರ ಭಾವಿಯೊಳಗ ನೀರ ಕುಡಿಸಿ, ಸಂಗ್ಯಪ್ಪನ ಹೊಲ್ದಾಗ ಕುರಿ ತರಬಿದವನs ತಿಮ್ಮಪ್ಪನ ಹೊಲ್ದಾನ ಸಂದ್ಯಾಗಿಂದ ದೊಡ್ಡಮನಿ ರಾಮನ ಕಣ್ದಾಗಿಂದ ರಂಗೋಲಿ ಚೆಂದ್ಯಾನ ಹಿತ್ಲಾಗ ಹಾದು ಯಂಕವ್ವನ ಮನಿಗ ಬರೋದ್ರಾಗ ಮನಸಿನ್ಯಾಗ ನೂರಾಎಂಟು ಅಲೆಗಳೆದ್ದಿದ್ವು. ಅವಾಗವಾಗ ಸತಾಯಿಸೊ ಯಂಕವ್ವನ ಎದಿ ಗುಡ್ಡಜ್ಜಗ ತಾಳ್ಮೆ ತಪದಂಗಾತು. ಅವಸರದಿಂದ ನಡಿಯಾಕ ಹೋಗಿ ಕಲ್ಲಿಗ ಎಡವಿದ– "ಥೂ ಆವನವ್ವ ಅಪಶಕನಾತು" ಅಂದವನ, ಕ್ಯಾಕರಿಸಿ ಕಲ್ಲಿನ ಮ್ಯಾಲ ಉಗಳಿ ಒಂದ ನಿಮಿಷ ನಿಂತ. ಯಾರಾರ ನೋಡ್ಯಾರಂತ ಓತಿಕಾಟದಂಗ ಆ ಕಡಿ, ಈ ಕಡಿ ಗೋಣು ಹೊಳ್ಳಿಸಿ, ಯಾರೂ ಇಲ್ಲದ್ನ ಖಾತ್ರಿ ಮಾಡಕೊಂಡವನ ಯಂಕವ್ವನ ಮನಿ ಒಳಗ ಕಾಲಿಟ್ಟ. "ಯಂಕವ್ವ, ಯಂಕವ್ವ" ಅಂತ ಮೆಲುಧನಿಯೊಳಗ ಕೂಗಿದ. ಮಂದಿ ಕೇಳಿಸ್ಕೊಂಡೀತು ಅಂತ ಅವನ ದಾರಿ ಕಾಯ್ತಿದ್ದ ಯಂಕವ್ವ, ಮನಿಯಾಗಿದ್ದ ಎಂಟೊಂಬತ್ತ ವರ್ಷದ ಚೆನ್ನಿಯನ್ನ ಹೊರಗ ಹಾಕಿದ್ಲು. ಬಾ ಒಳಗ ಬಾರಪ್ಪ, ಕುತ್ಕೊ ಅಂತ ಗೋಣಿತಟ್ಟು ಹಾಸಿದ್ಲು.

ಚಾದ ಕಪ್ಪು ಕೊಡೊ ಮುಂದ ಕೈ ಹಿಡದ್ರ ಹ್ಯಾಂಗ ಅಂತ ಗುಡ್ಡಜ್ಜ ಮನಸಿನ್ಯಾಗ ಪಿಲ್ಯಾನ್ ಹಾಕ್ತಿದ್ದ. ಗುಡ್ಡಜ್ಜ ಬಂದಿಂದ ಚಾ ತಯಾರಿ ನಡಿಸಿದ್ಲು ಯಂಕವ್ವ ಬೇಕಂತ್ಲೆ. ಯಂಕವ್ವನ ನೋಡಿದ ತಕ್ಷಣ ನಡುಹಗಲಿ ನ್ಯಾಗ ವಿಚಲಿತಗೊಳ್ಳಾಕತ್ತು. ಯಂಕವ್ವನ ಎತ್ತರದ ನಿಲವು, ಗೋದಿ ಮೈ ಬಣ್ಣ, ತುಂಬಿದ ಎದಿ, ಹರದ ಸೀರಿಯೊಳಗ ಕಾಣ್ತಿದ್ದ ಮೈ ನೋಡಿದವನ

ಏನೋ ವಿಚಾರ ಮಾಡ್ದ, ಸಣ್ಣಗ ಮೈ ಕಾವೇರಾಕತ್ತಿತು. ಎದ್ದವನ ಬಾಗಲದ ಕಡಿ ನಡ್ದ. "ಚಾ ಆತು ಕುತ್ಕೊ" ಅಂದ್ಲು ಯಂಕವ್ವ. ಎದ್ದವನು ಗಸಕ್ಕಂತ ಕುಂತ. ಮತ್ತವೆ ವಿಚಾರಗಳು, ತಡಿಯಾಕ ಆಗ್ದ, ಅಂಬೆಗಾಲ ಹಾಕ್ಕೊಂತ ಬಂದು ಬಾಗಲ ಹಾಕಿದ. ಯಂಕವ್ವ ಗುಡ್ಡಜ್ಜನ ಕಡಿ ದಿಟ್ಟಿಸಿ ನೋಡಿದ್ಲು. ಮುದಿಯಾ ಜೋರದಾನ ಬಿಡು ಅಂದ್ಕೊಂತ, ಒಲಿ ಊದಿ ಬೆಂಕಿ ಹೆಚ್ಚ ಮಾಡಿದ್ಲು. ಗುಡಸಲೊಳಗಿಂದ ಇಳಿಬಿದ್ದಿದ್ದ ಸೂರ್ಯನ ಬೆಳಕು, ಹೆಚ್ಚಾದ ಬೆಂಕಿ ಬೆಳಕಿನ್ಯಾಗ ಯಂಕವ್ವ ಮತ್ತೊಂದಿಷ್ಟು ಚೆಂದ ಕಂಡ್ಲು. ಬೆಲ್ಲಾ ಕುದ್ದಿಂದ ಚಾ ಪುಡಿ ಇದ್ದ ಚಾಚೀಟು ಹರದು ಒಲಿಗ ಹಾಕಿ, ಪುಡಿಯನ್ನ ಡಬರಿಗ ಹಾಕಿದ್ಲು. ಹೆಸರು ಕುಡ್ದಿಂದ ಕುರಿ ಹಿಂಡಿ ತಂದಿದ್ದ ಹಾಲನ್ನು ಡಬರಿಗ ಸುರವಿ, ತಾಮ್ರದ ಚೆರಗಿಗ ಬಟ್ಟಿ ಅಡ್ಡ ಕಟ್ಟಿ ಸೋಸಿ, ಸೀಳಿರೊ ಸ್ಟೀಲಿನ ಗಲಾಸಿಗ ಸುರುವಿ, ಅದ್ರಾಗ ಚಲೊ ಇರೊ ಗಲಾಸನ್ನ ಮುದ್ಕನ ಮುಂದಿಟ್ಲು. ಚಾ ಹಿರ್‍ಕೊಂತ ಮುದ್ಕ ಮಾತಿನ ಧಾಟಿ ಬದಲಿಸಿ ತನ್ನ ಹಳೆ ಪುರಾಣ ತಗದ. ಚೆನ್ನಿ, ಲಚ್ಚಿ, ಚಿಕ್ಕಿಯರನ್ನ ನಡು ಮಾಡಿಕೊಂಡು ಮಾತಾಡತೊಡಗಿದ. ಯಂಕವ್ವಗ ಮುದ್ಕನ ಆಶಿ ಗೊತ್ತಾತು. ಮುದ್ಕ ಏನ ತಾನೆ ಮಾಡ್ಯಾನು ? ಬದ್ಲಿಗ ಒಂದ ಕುರಿ ಕೊಟ್ನಂದ್ರ, ಅದನ್ನ ಸಾಕಿ ಎಂಟು-ಹತ್ತು ಮಾಲುಗಳನ್ನ ಮಾಡಬಹುದು ಅಂದಕೊಂಡ್ಲು. ಮುದಕನ ಗೂರು ತುಂಬಿದ ಉಸರಾಟ.... ಗುರ್-ಗುರ್‌ಂತ ಜೋರಾತು. ಯಂಕವ್ವ ಮಾತ್ರ ಗುಡ್ಡಜ್ಜನ ಬಗ್ಗೆ ಯಾವ ಕೆಟ್ಟ ವಿಚಾರನೂ ಮಾಡಿರ್ಲಿಲ್ಲಾ. ಆದ್ರ ಮುಂದ ಮದ್ವಿ ಆಗಬೇಕಿದ್ದ ಕೆಂಚಿ, ಮಾಳಿಯರ ಸಲವಾಗಿ ತಾನೇನಾರ ಮಾಡಬೇಕು.

ಔಟಹನಮ ಮೈ ಮುರದು ಕೆಲಸ ಮಾಡಿದವನs ಅಲ್ಲಾ. ಅವರಿವರ ಹಿಂದ ಎತ್ತಿನ ದಲಾಲಿ ಮಾಡಿ, ಬಂದ ರೊಕ್ಕನೆಲ್ಲಾ ಹೆಂಡಕ ಸುರಿತಾನ. ಕೆಂಚಿ, ಮಾಳಿ ಮೈ ನೆರತು ಮೂರ್‍ನಾಕ ವರ್ಷಗಳಾದ್ವು. ಯಾವಾಗರ ಚಕಾರ ಶಬ್ದ ಎತ್ತಿರಲಿಲ್ಲಾ. ಯಂಕವ್ವ ಸುದ್ದಿ ತಗದ್ರ "ಲೇ ಯಂಕಿ, ನಾ ಮನಿಗ ಬರಬೇಕೊ ಬ್ಯಾಡ ಹೇಳು. ಊರೂರು ತಿರಗಿ ದಣದ ಬಂದಿರ್ತೀನಿ. ಬಂದೊತ್ತಿಗ ನಿನ ರಾಗ ಸುರು ಮಾಡ್ತಿಯಲ್ಲೇ ನಿಮ್ಮವ್ವನ, ಹಲ್ಲ ಮುರಿತೀನಿ ನೋಡಂತ" ದಬದಬ ಬೆನ್ನಿಗ ಗುದ್ದಿ ಮನಿ ಬಿಟ್ಟು ಹೆಂಡದಂಗಡಿಯೊಳಗ

ಉಲ್ದಿಬಿಡ್ತಿದ್ದ. ಮಾನಕಂಜಿದ ಯಂಕವ್ವ ಅವತ್ತಿಂದ ಅವನ ಮುಂದ ಮಕ್ಕಳ ಮದ್ವಿ ವಿಷ್ಯಾನ ಎತ್ತಿರಲಿಲ್ಲಾ.

ಹೆಂಗಾರ ಹಿರಿ ಮಗಳು ಕೆಂಚಿ ಮದ್ವಿ ಆದ್ರ ಸಾಕು. ಕುಲ್ಡ ರಾಮು ಅವಾಗವಾಗ ಮನಿ ಕಡಿ ಬಂದು ಕೆಂಚಿ ಕೂಡ ಸಲಗಿಂದ ಮಾತಾಡ್ಕೊಂತ ಕುಂತ ಬಿಡ್ತಿದ್ದ. ನಾಳೆ ಏನಾರ ಹೆಚ್ಚು-ಕಮ್ಮಿ ಆದ್ರ, ಊರಾಗ ಬಾಳೆ ಮಾಡೋದು ಕಠಿಣ ಆದೀತು ಅಂತ, ಕೆಂಚಿ ಮದ್ವಿ ವಿಚಾರದಾಗ ಮುದಕ ಎದಿಗ ಕೈ ಹಾಕಿದ್ದು ಗೊತ್ತಾಗ್ಲಿಲ್ಲಾ. ಅವಳಿಗ ಗೊತ್ತಿಲ್ದಂಗ ಆಕ್ರಮಣ ಮಾಡಿದ್ದ. ಯಂಕವ್ವಾಗ ಹೇಸಗಿ ಅನಸತೊಡಗಿತು. ಮೈ ಮ್ಯಾಲ ಮುಳ್ಳು ನಿಂತಂಗಾಗ್ತಿತ್ತು. ಕೊಸರಕೊಬೇಕಂತ ಮುದಕನ್ನ ಬಿಗಿಯಾಗಿ ಹಿಡಕೊಂಡ್ಲು, ಇನ್ನೇನು ಎತ್ತಿವಗಿಬೇಕು ಅನ್ನೋದ್ರಾಗ ಎದಿಮಟ ಬೆಳದ ನಿಂತ ಹಿರಿಮಗಳು ಕೆಂಚಿ ಮಕ ನೆನಪಿಗ ಬಂದಂಗಾಗಿ, ಕೈ ಸಡಲಿಸಿ ನೆರತ ಕೂದಲಾಗ ಕೈ ಬಳ್ಳು ಹಾಕಿದ್ಲು. ರಗಸಪಟ್ಟ ನಾರಿನಂತ ಕೂದಲು ಬಳ್ಳಿಗ ಅಂಟಿಕೊಂಡಾಗ ಹೊಲಸು ಅನಸಿದ್ರು, ಮುದಕನ ಮನತೃಪ್ತಿಗಂತ ಮನಸನ್ನ ಗಟ್ಟಿ ಮಾಡಿಕೊಂಡ್ಲು. ಬಿಗಿಯಾಗಿ ಕಣ್ಣುಮುಚ್ಚಿದ್ಲು, ತಡಿಯಲಾಗದೆ ಕಣ್ಣೀರು ಹೊರಗ ತುಳಕಿದವು. ಮುದಕ ದೆವ್ವದಂತ ಯಂಕವ್ವನ ಎದಿಮ್ಯಾಲ ತನ್ನ ಶಕ್ತಿ ಸಾದಸಬೇಕೆಂದು ಕೊಂಡವನ ಜೋರಾಗಿ ಶಕ್ತಿಪ್ರದರ್ಶನ ನಡಸಿದ್ದ. ಏಳುಬೀಳೊ ತೆರಿಗಳಂಗ ತೆವಳಾಕತ್ತಿದ್ದ. ಉಸಿರು ಬಿಗಿ ಹಿಡ್ದಾಗ ಗೂರು ಗುರ್-ಗುರ್‌ಂತಿತ್ತು. ಯಂಕವ್ವಾಗ ಸಹಿಸಿಕೊಳ್ಳಾಕಾಗದೆ ಮತ್ತೊಂದ ಸಲ ಜೋರಾಗಿ ಹಿಡದ್ಲು. ಅವಳ ಹಿಡ್ತಕ ಮುದ್ಕ ನಲಗಿದ.

ಇದ್ದಕಿದ್ದಂಗ ಯಂಕವ್ವಾಗ ಉತ್ಸಾಹದ ಚಿಲುಮಿ ಉಕ್ಕತೊಡಗಿತು. ಮುದ್ಕನನ್ನ ಬಿಗಿಯಾಗಿ ಅದುಮಿದ್ಲು. ಅವಳ ಬಿಗಿ ತಾಳಲಾರ್ದೆ, ಗೂರು ತುಂಬಿದ ಲ್ವಾಳಿ ಬುದಕ್ಕಂತ ಗಂಟ್ಲಿಗ ಬಂದಂಗಾಗಿ ಕೆಮ್ಮಾಕತ್ತ. ಯಂಕವ್ವಾಗ ಹುಚ್ಚು ಹಿಡಿಯಾಕತ್ತು. ಅವಳು ಮೈಮ್ಯಾಲ ಹಿಡ್ತ ಕಳ್ಕೊಂಡಿದ್ಲು. ತಾನೇನು ಮಾಡ್ತಿನಿ ಅನ್ನೋದು ತಿಳಿತಿರ್ಲಿಲ್ಲಾ. ಮೈ ಬಿಸಿ ಏರಾಕತ್ತಿತ್ತು. ಮುದ್ಕನ ಸೊಂಟ ಹಿಡದವಳ ಮತ್ತೊಂದ ಸಲ ಬಿಗಿಯಾಗಿ ಅಮುಕಿದ್ಲು. ಮುದ್ಕನ ಸೊಂಟದ ಎಲಬು ಲಟಕ್‌ಂತು. ಗೂರಿನ್ಯಾಗ 'ಅಯ್ಯವ್ವ' ಅಂದಿದ್ದ

ಮುದ್ಕ. ಮುದ್ಕನ ಮೈಬೆವತು ಧೋತ್ರ, ಅಂಗಿ, ಮೈಯಂಗಿ ಒದ್ದೆಯಾಗಿದ್ವು. ಯಂಕವ್ವ ಬುಸಗುಟ್ಟಾಕತ್ಲು. ಕಣ್ಣು ಉರಿಯಾಗಿದ್ವು. ಏನ ಮಾಡಿದ್ರು ಸಮಾಧಾನ ಆಗವಲ್ದು. ಸಿಟ್ಟು ತಡಿಯಾಕಾಗ್ದ "ಏ ನೀ ಯಾ ಗಂಡ್ಸೊ, ಒಂದು ಹೆಣ್ಣು ಆಳಾಕ ಆಗ್ದವ; ದೊಡ್ಡ ಗಂಡಸಿನಂಗ ಬಂದಿಯಲ್ಲಾ" ಅಂದವಳ ಮುದಕನ್ನ ಕೆಳಗ ಕೆಡವಿದವಳ, ಮೈಮ್ಯಾಲ ದೆವ್ವ ಬಂದವರಗತಿ ಮುದಕನ ಮೈಮ್ಯಾಲ ಉಲ್ಡಾಡಕತ್ಲು. ಗೂರು ಗಂಟಲೊಳಗ ಸಿಕ್ಕೊಂಡು ಗರ್-ಗರ್ ಅಂತ ಶಬ್ದ ಮಾಡಾಕತ್ತ. ಗಂಟಲಾಗ ಉಸರ ಕಟ್ಟಿದಂಗಾಗಿ ತೇಲಗಣ್ಣ್-ಮೇಲ್‌ಗಣ್ಣ ಮಾಡಿಕೊಂಡು- "ಅಯ್ಯೊ ಸತ್ನವ್ವ, ಒಂದ ಗಲಾಸ ನೀರು ಕುಡಿತೀನಿ" ಅಂತ ಕನಲಿದ. ಯಂಕವ್ವಗ ಮೈ ಮ್ಯಾಲ ಪ್ರಜ್ಞಿ ಇರಲಿಲ್ಲಾ, ಎದ್ವಾತದ್ವಾ ಉಲ್ಡಾಡ್ತಿದ್ಲು. ಮುದಕ ಚೀರಿದ್ದು ಕೇಳಲಿಲ್ಲಾ. ಮುದಕನ ಮೈ ಯಾವಗಲೋ ತಣ್ಣಗಾಗಿತ್ತು. ಅಪ್ಪಿತಪ್ಪಿ ಮುದಕನ ಎದಿಗ ಯಂಕವ್ವನ ಕೈ ಬಡಿತು. ನೀರು ಕುಡಿತೀನಿ ಅಂತ ಕೂಗಿಕೊಳ್ತಿದ್ದ ಮುದಕನ ಮಾತು ಕೇಳ್ತು. ಹಿಡಿತ ಸಡಲಿಸಿದಳು. ಅದನ್ನ ಕಾಯ್ತಿದ್ದ ಗುಡ್ಡಜ್ಜ, ಯಂಕವ್ವ ಎದ್ದು ನೀರ ತರಾಕ ಹೋಗಿದ್ದ ತಡ, ಒಂದ ಕೈಯ್ಯಾಗ ಧೋತ್ರ ಹಿಡಕೊಂಡು ಕದ ತಕ್ಕೊಂಡು ಹೊರಗ ಓಡಿ ಬಂದವನ ಧೋತ್ರ ಸರಿ ಮಾಡಿಕೊಂಡು, ಎದಿ ಹಿಡಕೊಂಡು, ನೋವಾದ ಸೊಂಟನ ಒಂದ ಕೈಯಿಂದ ಒತ್ತಿಕೊಂಡು ಬಂದ ದಾರಿ ಹಿಡದ.

ಓರಿಮುಗಳು ಕೆಂಚಿ ಮದವಿ ಕನಸು ಕಾಣ್ತಿದ್ದ ಯಂಕವ್ವ, ಗುಡ್ಡಜ್ಜನ ಹೇಡಿತನಕ ಹಣಿ ಹಣಿ ಬಡಕೊಂಡು ಅಳಾಕತ್ಲು. ಹೊರಗ ಎಟೊತ್ತಿಂದ ಕುಂತಿದ್ದ ಚೆನ್ನಿ, ಗುಡ್ಡಜ್ಜ ಬಾಗಲ ತಗದಿಂದ "ಯವ್ವಾ ಮುದಕ ಯಾಕ ಓಡಿ ಹೋದ್ನಬೇ, ಕೈಯ್ಯಾಗ ಧೋತ್ರ ಹಿಡಕೊಂಡಿದ್ದ" ಅಂದ್ಲು. ಮುದಕನ ಕುರಿ ಕನಸು ನನಸಾಗದ, ದುಃಖ ಹಾರಿಹೋತು. ಅವಮಾನ ಆದಂಗಾಗಿ ಚೆನ್ನಿಯನ್ನ ಹಿಡಕೊಂಡು- "ಹನಮಂತದೇವರ ಗುಡಿ ಕಡಿಗ ಆಡಾಕ ಹೋಗ ಲಾವ್ವಿ ಅಂದ್ರ ಇಲ್ಲಿ ಕುಂತ ಏನ್ಮಾಡ್ತಿದ್ಯೆ ಮೂಳಿ" ಅಂತ ಹಿಗ್ಗಾಮುಗ್ಗಿ ಹೊಡ್ದು, ಮುದಕನ ಗಂಡಸತನಕ್ಕ ಹಿಡಿ ಶಾಪಾ ಹಾಕಿದ್ಲು. ಒಂದ ಕುರಿನಾರ ಕೊಟ್ಟಿದ್ರು ನಿಮ್ಮಕ್ಕನ ಮದ್ವಿ ಆಕ್ಕಿತ್ತು. ಅವನ ಕದಾ ಕಟ್ಲಿ, ಬಿಡಸ್ಕೊಂಡು

ಓಡಿ ಹೋದ. ಲೋ ಗುಡ್ಡ್ಯಾ ಹೋಗಲೊ ಎಲ್ಲಿಗ ಹೊಕ್ಕಿ, ಬರ್‍ರಿ ಮಗನ, ಮತ್ತ ಬರ್‍ರಿ ಅಂತ ಲಟಕಿ ಮುರಿಯಾಕತ್ಲು. ಆವತ್ತಿನಿಂದ ಯಂಕವ್ವ ಮತ್ತೆಂದಾದರೂ ಗುಡ್ಡಜ್ಜ ಬಂದಾನು ಅಂತ ಕಾಯ್ತ ಬಾಗಲದ ಮುಂದ ಕುಂತು ನೋಡ್ತಾಳ. ಒಂದ ಕುರಿಯಿಂದ ಹತ್ತೆಂಟು ಕುರಿಗಳಾದಂಗಾಗಿ, ಅವುಗಳನ್ನ ತನ್ನ ಕಿರಿಮಗಳು ಚೆನ್ನಿ ಕಾಯಾಕ ಹೋಗೊಹಂಗ ಕನಸು ಕಾಣ್ತಾ, ಅವಾಗವಾಗ ಕುರಿ ಬೆದರಸೊ ಹಂಗ ನಾಯಿ ಬೆದರಿಸಿ, ನಾಯಿ ಅಂತ ಗೊತ್ತಾಗಿ ಮನಸಿಗಾದ ನೋವು ಮರೆಮಾಚಿಕೊಂಡು, ಕಸಬರಗಿ ಅಂಡಿಂದ ನಾಯಿಬೆನ್ನಿಗ ದಬದಬ ಗುದ್ದತಾಳ.

□

ಕೆಂಚವ್ವನ ಸೀರಿ ಕನಸು

ಮುಂಗೋಳಿ ಕೂಗಿದಾಗಲೇ ಪ್ರಾರಂಭವಾಗಿತ್ತು ಕೆಂಚಜ್ಜಿಯ ದಮ್ಮು, "ಕಂವ್ss ಕಂವ್ss" ಅಂತ ಒಂದೇ ಸಮ ಬಡಕೊಳ್ಳಹತ್ತಿತ್ತು. ಮುದುಕಿ ಹೊಟ್ಟಿಯೊಳಗ ಸಂಗಟ ಎದ್ದು ಒಂದ ತಾಸ ಆದ್ರೂ ಕಮ್ಮೀನ ಆಗವಲ್ದು ಕೆಮ್ಮು. ಆ ಕಡೆಯಿಂದ ಈ ಕಡೆ, ಈ ಕಡೆಯಿಂದ ಆ ಕಡೆ ಹೊಳ್ಳ್ಯಾಡಿ-ಹೊಳ್ಳ್ಯಾಡಿ ಸಾಕಾಗಿ "ಯಾಕಾರ ಬದುಕಿನವ್ವ ನಾನು" ಅಂತ ಸಣ್ಣಗ ಕೂಗಿಕೊಂಡಳು. ಮುದುಕಿಯ ಕೆಮ್ಮಿನ ಗದ್ದಲದಾಗ ಕೆಂಚವ್ವಗ ಎಚ್ಚರಾತು. ಜೋರಾಗಿ ಒಮ್ಮೆ ಆಕಳಿಸಿ, ಶಿವ-ಶಿವ ಪರಮಾತ್ಮಾ, ಕಾಪಾಡಪ್ಪ ಅಂತ ದೀಪ ಹುಡಕಾಡಕಂತ ಎದ್ದಳು. ನಿದ್ದಿಗಣ್ಣಾಗ ಕೊನೆಗೆ ಮಲಗಿದ್ದ ಹನುಮನ ಕೈ ತುಳಿದಳು. ಆ ರಭಸಕ್ಕ ಹನುಮ- "ಅಯ್ಯೊ ಯಪ್ಪ ಸತ್ನೊ" ಅಂತ ಜೋರಾಗಿ ಕಿರುಚಿಕೊಂಡ. "ಏ ಹನ್ಮಣ್ಣ, ನೀ ಇಲ್ಲಿ ಮಲಗಿ ಏನು ? ಕತ್ಲದಾಗ ಕಾಣಲಿಲ್ಲಾ, ತುಳದಬಿಟ್ಟೆ ನನ್ನಮಗನಾ" ಅಂತ ತಲೆ ನೇವರಿಸುತ್ತ ರಮಿಸಲು ನೋಡಿದಳು, ಪ್ರಯೋಜನವಾಗಲಿಲ್ಲಾ, ಅವನ ಚೀರಾಟಕ್ಕೆ ಕಣ್ಣು ಬಿಟ್ಟ ಬಸಪ್ಪ, ಕಡ್ಡಿಪೆಟ್ಟಿಗೆ ತೆಗೆದು ಭರ್ ಅಂತ ಕಡ್ಡಿ ಗೀರಿ- "ಯಾವನ್ಲೇ, ಯಾರಾರ ಸತ್ತರೇನು ? ಹಂಗ್ಯಾಕ ಸತ್ತೋರಗತಿ ಹೊಯ್ಕೊಳ್ಳಾಕ ಹತ್ತಿ, ಸುಮ್ಮನ ಬಿದ್ಕೋ" ಎಂದು ಮಗ್ಗಲು ಹೊರಳಿ ಹೆಂಡತಿ ಮ್ಯಾಲಿ ಕೈ ಹಾಕಿದ. ಹಾಸಗಿ ಮ್ಯಾಲ ಇಲ್ಲದ್ದಕ್ಕ ಮತ್ತೊಮ್ಮೆ ಕಡ್ಡಿ ಗೀರಿದ. ಕೆಂಚವ್ವ ದೀಪ ಮುಂದ ಹಿಡಿದಳು. "ಏ ನಿಂಗ ಬುದ್ಧಿ ಐತಿಲ್ಲಾ, ದೆವ್ವ ಏಳೋ ವ್ಯಾಳೆದಾಗ ಏಳತಿಯಲ್ಲ ? ದೆವ್ವಗುಟ್ಟಿದಾಕೆ, ನಿಮ್ಮಪ್ಪಂದ ನಾಕ ಎತ್ತಿನ ಕಮತ ಐತಿ. ಅದಕ್ಕ ಭಾರ್‍ಯಾಡಿ ಕೆಲಸ ಮಾಡಾಕ ಎದ್ದಿ ? ಬಾ-ಬಾ

ಮಕ್ಕೊ ಬಾ" ಆಂ....ಅಂತ ಆಕಳಿಸಿ ಕಣ್ಣು ಮುಚ್ಚಿದ. "ಹೂಂ, ನಿನಗ ಮಾಡಾಕ ಬ್ಯಾರೆ ಕೆಲಸಿಲ್ಲಾ ಮಲಗತಿ. ಎಲ್ಡನೆ ಕೋಳಿ ಕೂಗೋದ್ರಾಗ ಗೌಡ್ರಹೊಲ್ದಾಗ ಇರಬೇಕು. ಹಾಳಾದ ಈ ಸೀರಿ ಹತ್ತಿಗಿಡದಾಗ ಸಿಕ್ಕೊಂಡು ಹರದು ಮೈ ಕಾಣಾಕ ಹತ್ತೈತಿ. ಹೊಲ್ದಾಗ ಗೌಡ್ರಮಗ ಕದ್ದ ಕದ್ದ, ಸೀರಿ ಹರದು ಮೈ ಕಾಣೋದನ್ನ ನೋಡತೈತಿ ಬೇವರ್ಸಿ. ಬಡವರ ಹೆಣ್ಣ ಮಕ್ಕಳು ಅಂದ್ರೆ ಏನ ತಿಳಗೋಂಡೈತೋ ಏನೋ" ಎಂದಳು ಕೆಂಚವ್ವ.

"ಏ ನಿನ ಪುರಾಣ ಸಾಕ ಬಾರ, ಮಕ್ಕೊ ಬಾ" ಅಂತ ಕೆಂಚವ್ವನ ಸೀರಿ ಹಿಡಿದು ಎಳೆದ ಬಸಪ್ಪ. ಮೊದ್ಲ ಹರದ ಸೀರಿ ಛರ್ ಎಂದಿತು. ಕೆಂಚವ್ವ– "ಏ ನಿನ ಮಕಾಡ ಎಲ್ಲೆ ಹಿಂಗ್ಯಾಕ ದನ ಎಳೆದಂಗ ಎಳಿತಿ ? ಬರೋದು ಕಾಣವಲ್ದೇನು ಕಣ್ಣಿಗ. ನಿನ್ನ ಹೆಣ ಯಾವಾಗ ಎತ್ತಾರೋ, ಆ ದೇವ್ರಿಗs ಗೊತ್ತು. ನನ ಮೈ ಮುಪ್ಪ ಮಾಡಿರೋದು ಇನ್ನೂ ಸಾಕಾಗಿಲ್ಲೇನ ನಿನಗ. ಹಂದಿಮರಿ ಹಂಗ ಹತ್ತ-ಹನ್ನೆರಡು ಹುಟ್ಟಿದರೂ ಬುದ್ಧಿ ಬರವಲ್ದು. ದುಡದ–ದುಡದ ಸಾಕಾತು, ಸಾವಾರ ಬರಬಾರದ ನನಗ" ಎಂದಳು. "ಕೆಂಚಿ, ಈ ಬಡತನಕ್ಕ, ಈ ರಸಿಕತೆಗ ಏನ ಸಂಬಂದೈತಿ ? ಏನೋ, ಬಡತನದಾಗ ಹುಟ್ಟೇನಿ, ಆಟss.... ಬ್ಯಾರೆ ಯಾದ್ರಾಗ ಕಮ್ಮಿ ಅದೀನಿ ಹೇಳು ?" ಎಂದು ಮೀಸೆ ಮೇಲೆ ಕೈಯಾಡಿಸಿದ ಬಸಪ್ಪ.

ಗೂರಿನಿಂದಾಗಿ ಕೆಂಚಜ್ಜಿಯ ಕೆಮ್ಮು ಜೋರಾಯಿತು. ಒಂದೇ ಸಮನೆ ಕೆಮ್ಮಾಕೆ ಹತ್ತಿದಳು. ಕತ್ತಲು ಹರಿದು ಬೆಳಗಾದಂತೆ ಕ್ರಮೇಣ ಕಡಿಮೆ ಯಾಗಿತ್ತು. ಕೆಮ್ಮಿ-ಕೆಮ್ಮಿ ನಿಶ್ಯಕ್ತಳಾಗಿದ್ದ ಮುದುಕಿ, ಉಸುರಿಲ್ದ "ಕೆಂಚವ್ವ, ಏ ಕೆಂಚವ್ವ" ಅಂತ ಗಂಟಲದಾಗ ಕೂಗಕೊಂತಿತ್ತು. ಹನುಮ "ಯವ್ವಾ ಬೇ ಮುದುಕಿ ಒದರತೈತಿ" ಅಂದಾಗ, ಹರಕ ಸೀರಿ ಗಂಟ ಹಾಕತಿದ್ದ ಕೆಂಚವ್ವ ಹಂಗs ಬಿಟ್ಟು ಓಡಿದಳು. "ಏನವ್ವ, ಕಮ್ಮಿ ಆಗೈತಾ ಏನಾರ ? ಎಂದಳು. ಅದಕ್ಕೆ ಅಜ್ಜಿ "ಎಲ್ಲಿ ಕಮ್ಮಿ ಆಕೈತಿ ನನ್ನತಾಯಿ, ನನ್ನ ಜೀಂವಾ ತಗೋವರಿಗ ಹ್ಯಾಂಗ ಕಮ್ಮಿಯಾದೀತು ?" ಎಂದಳು. ಸರ್ಕಾರದವರು ಊರಿಗೊಂದೊಂದು ಅಂಗನವಾಡಿ ಪ್ರಾರಂಭ ಮಾಡಿದಾಗ ಅನಾಥ ಮುದುಕೇರು ಬದಕ್ಕೊಳ್ಳಿ ಅಂತ ಊರಿನವರss ಉಪ್ಪಿಟ್ ಮಾಡಾಕಂತ ಸೇರ್ಸಿದರು. ಹಿಂಗ-ಹಂಗ ಮೀಟಿಂಗಿಗ

ಉಡಕೊಳ್ಳಾಕಂತ ತಂದಿದ್ದ ಸೀರಿ ಮುಂದ ಮುದಡಿ ಬಿದ್ದಿತ್ತು. ಕೆಂಚವ್ವ ಮುದುಕಿನ ಮಾತಾಡಸ್ತಾ-ಮಾತಾಡಸ್ತಾ ಬಿದ್ದ ಸೀರಿಮ್ಯಾಲ ಗಮನ ಹರಿಸಿದ್ಲು. "ಈ ಮುದುಕಿ ಗೊಟಕ್ ಅನಬಾರ್‍ದ ಇವನೌನ್, ಒಂದ ಚಲೋ ಸೀರಿನಾರ ಸಿಗತೈತಿ" ಅಂತ ಸೀರಿಯೊಳಗ ಸೇರಿಕೊಂಡ್ಲು. "ಒಂದ ಕಪ್ಪ ಚಹ ಮಾಡಿ ಕೊಂಡು ಬಾ" ಅಂತ ಮುದುಕಿ ನಾಯಿ ಬೊಗಳೊ ಹಂಗ ಗದರಿಸಿದಾಗ ಎಚ್ಚರಾಗಿ 'ಆತಬೇ' ಅಂತ ಗಡಬಡಿಸಿ ಎದ್ದು ಓಡಿದಳು.

ಕಣ್ಣಾಗಿನ ಪಿಚ್ಚು ತಗ್ಯಾಕ ಆಗದ ಹುಡುಗರು ಅವ್ವಾ ಅಂತ ಅಳಾಕ ಹತ್ತಿದ್ವು. ಒಲ್ಯಾನ ಬೂದಿ ತಗದು, ಸಣ್ಣ ಪಾತ್ರಿ ಒಲಿಮ್ಯಾಲಿಟ್ಟು ಒಂದ ಚಂಬು ನೀರ ಸುರುವಿ, ಹಸಿರ ಕಾರ್ಡಿನೋರ ಕೊಟ್ಟ ಸಕ್ಕರಿ ಚೀಲದಾಗಿಂದ ಸುರವಿ "ಲೋ ಬೀರಾ ಒಲಿಮುಂದ ಕಟಗಿ ಹಾಕು, ನಾ ಹಾಲ ಹಿಂಡಕೊಂಡ ಬರ್‍ತೀನಿ" ಅಂತ ವಾಟೆ ತಗೊಂಡು ಹೊರಟಳು. "ಹೂಂ ಬೆ" ಅಂತ ಒಂದೇ ಕಣ್ಣಿಂದ ನೋಡಕೊಂತ, ಇನ್ನೊಂದ ಕಣ್ಣಿನ ಪಿಚ್ಚು ತಗ್ಯಾಕ ಪ್ರಯತ್ನ ನಡೆಸುತ್ತಾ ಒಲಿಮುಂದ ಬಂದು ಕಟಗಿ ಚಾಚಿ ಎರ್‍ಡೂ ಕಾಲ ಆನಸ್ಕೊಂಡುಕುಂತ.

"ಸಣ್ಣವ್ವ ಒಂದ ಹನಿ ಹಾಲಕೊಡವ್ವ ಕೆಂಚಜ್ಜಿಗೆ ಒಂದೀಟ ಚಾ ಅಂತ, ಮಾಡಿಕೊಡ್ತೀನಿ". "ಐ ಸತ್ತಿಲ್ಲೇನ ಆ ಮುದುಕಿ, ರಾತ್ರಿ ಸಾಯೋಹಂಗ ಕೆಮ್ಮತಾಳ, ವದರ್‍ತಾಳ, ಗುಸ್-ಗುಸ್ ಅಂತ ಬೆಕ್ಕನಂಗ ಮಾಡತಾಳ, ರಾತ್ರಿ ಸತ್ತೇ ಹೋತ ಅಂದಕೊಂಡಿದ್ದೆ ಬಿಡ" ಎಂದಳು ರಾಮವ್ವ. "ಸತ್ತರ ಪಾಡಿತ್ತ ಬಿಡಬೇ, ದಿಕ್ಕಿಲ್ದ ಹಿಂಗ ಏಸದಿನ ಬದಕಿದ್ರೇನು ? ಯಾರಮ್ಯಾಲ ಜೀವಾ ಹಿಡದೈತೋ ಪಾಪ ಮುದುಕಿ" ಅಂದಳು ಕೆಂಚವ್ವ. ಆದ್ರ ಕೆಂಚವ್ವ ಮಾತ್ರ ಮೂಲ್ಯಾಗ ಬಿದ್ದಿದ್ದ ಸೀರಿ ಕಡಿಗs ಇತ್ತು. "ತಗೋ ತಂಗಿ, ಯಾರ ಹಣೆಬರ ಏನೈತೋ" ಅಂತ ಹಾಲ ಸುರವಿದ್ರಳು ರಾಮವ್ವ. "ಬರ್‍ತಿನಬೇ ಸತ್ಹೋದೀತು ಮುದುಕಿ. ಆಟ್ರ್ಯಾಗ ಒಂದ ಹನಿ ಚಾನಾರ ಬಿಡ್ತೀನಿ. ಇಲ್ದಿದ್ರ ದೆವ್ವ ಆದಾಳು" ಎಂದು ಕೆಂಚವ್ವ ಅವಸರದಿಂದ ಬಂದ್ಲು.

"ಏಟೋತ್ತs ನಮ್ಮವ್ವ ನಿನ್ನ ಕಾಯೋದು" ಅಂತ ಗಡದ್ದಾಗಿ ಎದ್ದ ಕುಂತಿದ್ದ ಮುದುಕಿನ ನೋಡಿ ಸಂಕಟಾತು ಕೆಂಚವ್ವಗ. "ಇವ್ನವ್ವನ, ಮುದುಕಿ ಸಾಯುತಾಳಂತ ನಾ ತಿಳ್ಕೊಂಡೀನಿ, ಎದ್ದ ಕುಂತಾಳಲ್ಲಾ, ಬೆರಕಿ ಮುದುಕಿ"

ಅಂತ ತಪಸಾಕ ಹತ್ತಿದ್ಳು ಕೆಂಚವ್ವ ಮನಸಿನ್ಯಾಗ. "ಕೆಂಚವ್ವಾ, ಎಲ್ಲಿ ನಿನಗಂಡ, ಹೋಗಿ ನಮ್ಮ ದೂರದ ಸಂಬಂಧಿ ಮಲ್ಲಪ್ಪನ್ನ ಕರದ ಬರಾಕ ಹೇಳವ್ವಾ, ಇನ್ನ ಹೆಚ್ಚ ದಿನ ಬದಕೋದಿಲ್ಲಾ. ಈ ಮನ್ಯಾಗಿನ ಸಾಮಾನ ನಾ ಸತ್ತಮ್ಯಾಲ ತಗೊಂಡ ಹೋಗಲಿ" ಅಂದ್ಳು. ಮುದುಕಿ ಮಾತಕೇಳಿ ಕೆಂಚವ್ವಗ ನಿರಾಶ್ಯಾತು. ಅನಾಥ ಮುದುಕಿ ಅಂತ ಇಷ್ಟ ದಿನ ಆರೈಕಿ ಮಾಡಿದರ ಇದs ಏನ ಇಕಿ ಕೊಟ್ಟಿದ್ದು ? ಯಾರ ಏನ್ ಬೇಕಾರ ಒಯ್ಯ್ಲಿ, ನನಗ ಮಾತ್ರ ಆ ಸೀರಿ ಬಿಟ್ಟಹ್ಯಾದ್ರ ಸಾಕ. ಹ್ಯಾಂಗರ ಮಾಡಿ ಅದನ್ನ ಮುಚ್ಚಿಟ್ರ ಹ್ಯಾಂಗ ? ಹನಮಗ ಹೇಳಿದ್ರ ಹೆಂಗೂ ತಂದ ಬಿಡ್ತಾನ ತಡಿ. "ಕೆಂಚವ್ವ, ನನ್ನ ಕೈಲಿ ತಡಿಯಾಕ ಆಗವಲ್ದು, ನಾ ಸಾಯ್ತೀನಿ, ನಾ ಸಾಯ್ತೀನಿ" ಎಂದು ಅಜ್ಜಿ ಕೂಗಿಕೊಂಡಿತು. ಅಯ್ಯೋ ಈಗs ಸಾಯಬಾರ್ದ ? ಯಾರು ಇಲ್ಲಾ. ಸತ್ತಿಂದ ಮದ್ಲು ಸೀರಿ ಒಯ್ದು ಸ್ವಾರ್ಯಾಗ ಮುಚ್ಚಿಟ್ಟು, ಮುಂದ ಅಳೋದು ಪಳೋದು ಅಂತ ಗಟ್ಟಿ ನಿರ್ಧಾರ ಮಾಡಿದಳು. ಮ್ಯಾಲಿನ ಮಾತಿಗ– "ಹಿಂಗ್ಯಾಕ ಅಂತಿಬೇ ? ನಿನಗೇನೂ ಆಗೋದಿಲ್ಲಾ, ನೀ ಈಗ ಸಾಯೋದಿಲ್ಲ ಸುಮ್ನಿರು. ನಾ ಗೌಡರ ಹೊಲಕ್ಕ ಹತ್ತಿ ಬಿಡಿಸಾಕ ಹೋಗಿ ಬರ್ತೀನಿ. ಮುಂಜಾನಿ ಕೂಲಿ ಐತಿ. ಒಂದೀಟ ಹಿಟ್ಟೈತಿ, ಅಂಬ್ಲಿ ಮಾಡಾಕ ಹೇಳೀನಿ ನಿಂಗಿಗೆ, ತರ್ತಾಳಾ ಕುಡಿ" ಅನ್ಕೋಂತಾ ಆಸೆಗಣ್ಣುಗಳಿಂದ ಸೀರಿನೊಮ್ಮೆ ನೋಡಿ ಹೊರಟಳು.

ಕೆಂಚವ್ವ ಎಲ್ಲರಿಗಿಂತ ಮುಂದಿದ್ಳು. ಹತ್ತಿಬಿಡಿಸಿ ಉಡ್ಯಾಗ ಹಾಕ್ಕೊಂತ ಹೊಂಟವಳಿಗ ಮುದುಕೀ ಸೀರಿ ನೆನಪಾಗಾಕ ಹತ್ತ. ಛೇ, ನಾ ಹನಮ್ಯಾಗಾರ ಸೂಕ್ಷ್ಮ ಹೇಳಿ ಬರ್ಲಿಲ್ಲಾ. ನಾ ಬಡಕೊಂಡೆ– ಕುಡದ ಹಾಳ ಮಾಡಬ್ಯಾಡ ನಿನ್ನ ಮಕಡ ಎತ್ಲಿ, ಜ್ವಾಳಾ ಮಾರಕೊಂಡು ಹಸರ ಕಾರ್ಡಿನ ಸೀರಿನಾರ ತರಾನಂತ. ಜ್ವಾಳಾ ಮಾರಿ ಹಿಂಡ ಹುಡ್ರಿಗ ಒಂದೊಂದ ತುಂಡ ಬಟ್ಟಿ ತಗೋಳದ್ರ್ಯಾಗ ನನ್ನ ಸೀರೀ ಕತಿ ಮುಗದಿತ್ತು. ಹೂಂ, ದೇವ್ರs ಗತಿ. ಮುದಕಿ ಸಂಬಂಧಿಕರು ಬರೋದ್ರ್ಯಾಗ ಸೀರಿ ಬ್ಯಾರೆ ಇಡಬೇಕು ಅಂತಾ ವಿಚಾರ ಮಾಡ್ತಾ ಹೊರಟಿದ್ದ ಕೆಂಚವ್ವಗ, ಬೀರಾ ದಮ್ಮ ಹತ್ತಿ ಓಡಿ ಬರೋದು ಕಾಣಸ್ತು. "ಯವ್ವಬೇ.... ಅಜ್ಜೀನ ನೋಡಾಕ ಯಾರೋ ಬಂದಿದ್ರ"

ಎಂದ ತಕ್ಷಣ ಕೆಂಚವ್ವನ ಉಸಿರೇ ನಿಂತಂಗಾತು. ಬರೋಮುಂದ ನೆನಪ ಆಗಬಾರ್ದ ಹಾಳಾದ್ದು, ಹನಮಗ ಹೇಳಿದ್ರ ಕೆಲಸ ಮುಗಿಸಿಬಿಡ್ತಿದ್ದ. "ಹೂಂ ಮುಂದೇನಾತು ಬೊಗಳಲಾ" ಎಂದು ಕೂಗಿದಳು. "ಮತ್ತ, ಮತ್ತ" ದವಮ್ಮಾರಿಸಿಕೊಂತ ಹೇಳ್ತಿದ್ದ ಬೀರನ ಮ್ಯಾಲ ಸಿಟ್ಟುಬಂದು ಒಂದು ಗುದ್ದಿದಳು. "ಲೋ ಜಲ್ದಿ ಹೇಳಬಾರ್ದ ಏನಾತು", "ಅಜ್ಜ ಇದ್ದಲ್ಲಾ ಆಕಿ ಸತ್‌ಹ್ವಾದ್ಲು" ಎಂದು ಒಂದೇ ಉಸಿರಿನಲ್ಲಿ ಹೇಳ್ದ. "ಅಯ್ಯೋ, ಮುಂಜಾನ್ಯಾರ ಪಾಡ ಇದ್ದಲ್ಲೋ" ಅಂತ ಚೀರಾಡುತ್ತಾ, ಹತ್ತಿ ಉಡಿಯನ್ನು ಬಿಚ್ಚಿ ಇಟ್ಟವಳು ಮನಿ ಕಡಿ ಓಡಿದಳು.

ಮನಿ ತುಂಬ ಮುದುಕಿ ಸಂಬಂಧಿಕರು ತುಂಬಿಕೊಂಡಿದ್ದರು. ಕಾಲಿಡಾಕ ಜಗ ಇಲ್ದಂಗ ತುಂಬ್ಯೆತಿ. ಬದುಕಿದ್ದಾಗ ಮಾತಾಡಸಾಕ ಬರ್ಲಾರದ ಬೇವರ್ಸಿ ಮಂದಿ, ಈಗ ಹ್ಯಾಂಗ ಬಂದ್ಯೆತಿ ನೋಡು, ಏನಾರ ಗಂಟ ಇಟ್ಟು ಸತ್ತಾಳೋ ಮುದುಕಿ ಅಂತ ಕೆಂಚವ್ವನ ಒಡಲಾಗ ಕಿಚ್ಚು ಹಚ್ಚಿದಂಗಾತು. ಮಂದಿ ನೋಡಿ ಗೋಣ ಎತ್ತಿ ಅತ್ಲಾ ಗಿತ್ಲಾಗ ಹುಡುಕಾಕ ಹತ್ತಿದ್ಲು ಕೆಂಚವ್ವ. ಯಾರೋ ಹೆಣಮಗಳು ಅಳೋದ ನಿಲ್ಸಿ "ಏನ್ ಹುಡಕಾಕ ಹತ್ತಿ ತಂಗಿ ?" ಅಂತ ಕೇಳಿ ಬಿಟ್ಟಳು. "ಏಸಿಲ್ಲ ಬಿಡಕ್ಕ, ನಮ್ಮ ಹುಡುಗ ಅದಾನೇನಂತ ನೋಡ್ದೆ" ಅಂತ ಹೇಳಿ ಜಾಗ ಖಾಲಿ ಮಾಡಿದಳು. ಮನ್ಯಾನ ಸಣ್ಣ ಹುಡುಗರಿಗೆ ಏನೂ ತಿಳಿಯದೆ ಮೂಲ್ಯಾಗ ಕುಂತಿದ್ದವು. ಎಲ್ಲಾ ಓಂಗ್ಯಾಕ ಕುಂತಾರಂತ ವಿಚಾರ ಪ್ರಾರಂಭಾತು. "ಮುದುಕಿ ಕೆಮ್ಮಿ-ಕೆಮ್ಮಿ ಬ್ಯಾಸರ ತರಸ್ತಿತಲ್ಲಾ, ಇವತ್ಯಾಕೊ ಕೆಮ್ಮವಲ್ದು" ಅಂತ ಸಣ್ಣ ಮಾರ್ಯಾ ಬಂದು ಕೇಳಾಕ ಹತ್ತಿದಕ್ಕ, ಕೆಂಚವ್ವಗ ಖರೇನ ದುಃಖ ಉಮ್ಮಳಿಸಿ ಜೋರಾಗಿ ಅಳಲು ಸುರುಮಾಡಿದಳು. ಮಂದಿ ಎಲ್ಲಾ ಕೆಂಚವ್ವನ ಕಡೆ ಗಮನ ಹರಿಸಿತು. ಕೆಂಚವ್ವನ ದುಃಖ ಸೀರಿ ಕಾಣದಕ್ಕೊ ಇಲ್ಲಾ ಇಷ್ಟು ದಿನ ಸಾಕಿದ ಮುದುಕಿ ಒಮ್ಮಿಗೇ ಬಿಟ್ಟು ಹ್ವಾದಲಲ್ಲಾ ಅಂತಾನೋ. ಆದರೆ ಅವಳ ಮನದಾಳದಿಂದ ದುಃಖದ ಸೆಲಿ ಮಾತ್ರ ಪುಟಿದಿತ್ತು. ಬಂದ ಸಂಬಂಧಿಕರು ವಿಚಾರ ನಡೆಸಿದ್ದರು. ಮುದುಕಿ ಏನೇನು ಬಿಟ್ಟು ಹೋಗ್ಯಾಳಂತ ಬಸಪ್ಪ ಸೂರ ನೋಡಾಕ ಹತ್ತಿದ್ದ. ದಿನಾ ಮುಂಜಾನಿಂದ ಸಂಜಿಮಟ ಗುರ್-ಗುರ್, ಕಂವ್-ಕಂವ್ ಅಂತ ಕೆಮ್ಮುತ್ತಾ ತನ್ನ ಲೋಕದಾಗ ತಾನ ಬಿದ್ದಿರ್ತಿದ್ದ ಮುದುಕಿ ಇವತ್ತು ಹಾಂ, ಈ ಲೋಕಾನ ಬಿಟ್ಟುಹ್ವಾದಳು.

"ಲೋ ಬಸವಾ, ಕೆಂಚವ್ವಗ ಒಂದ ಛಲೋ ಸೀರಿ ತಂದು ಕೊಡಬಾರ್ದ. ಕತ್ತಿ ದುಡದಂಗ ದುಡಿತಾಳ. ನಾನು ನೋಡೀನಿ, ಮದ್ವಿ ಆಗಿ ಎಷ್ಟು ವರ್ಷ ಗಳಾದವ್ರ, ಹೆಂಡತಿ ಅಂತ ಪ್ರೀತಿಯಿಂದ ಮಾತಾಡಿದ್ದು, ಬೇಕು-ಬ್ಯಾಡಗಳನ್ನು ಕೇಳಿದ್ದು ?" ಅಂತಾ ಬುದ್ಧಿ ಹೇಳ್ತಿದ್ದ ಮುದುಕಿ ಮೌನಾಗಿಬಿಟ್ಟಳು. "ಅಯ್ಯೋ ದೇವ್ರ ಎಷ್ಟು ಕಟಕ ನೀನು ? ಇದs ಊರಾಗ ನಮ್ಮವ್ವ-ನಮ್ಮಪ್ಪ ಬಂಧುಬಳಗ ಇದ್ರೂ, ಅನಾಥನಂತಿದ್ದ ನಂಗ ಎಲ್ಲಾ ಕೊರತೆ ತುಂಬಿಕೊಂಡಿದ್ದ ಒಂದು ಬಡಕಲು ಜೀವಾನೂ ಉಳಿಸಲಿಲ್ಲಾ ನೀ" ಅಂತ ನಿಟ್ಟುಸಿರು ಬಿಟ್ಟಾ.

ಹುಡುಗರೆಲ್ಲಾ ಆಟ ಆಡ್ತಿದ್ದರು. ದೊಡ್ಡವರೆಲ್ಲರೂ ಮೂರು ದಿನದ ಕಾರ್ಯಕ್ಕೆ ಬರ್ತೀವಿ ಅಂತ ಹೊರಟಿದ್ದರು. ಬಸಪ್ಪಗ ಮನಿ ಖರೀದಿ ತಗೋ ಅಂದಿದ್ದರು. ಇಷ್ಟುದಿನ ದಿಕ್ಕಿಲ್ಲದ ಮುದುಕೀಗ ಇಷ್ಟು ಸಂಬಂಧಿಕರ ಬಳಗ ಐತಿ ಅಂತ ಗೊತ್ತಾಗಿದ್ದs ಈಗ, ಸತ್ತಮ್ಯಾಲಾದ್ರೂ ಬಂದ್ರಲ್ಲಾ. ಆದರ ಕೆಂಚವ್ವನ ಮನಸು ಬ್ಯಾರೆ ಕಡೀನ ಇತ್ತು. ಮುದುಕೀ ಸೀರಿ ಉಟಕೊಂಡು ಕೆಂಚವ್ವ ಸಂತಿಗ್ಹೋಗೋ ಕನಸು ಕಾಣತಿದ್ಲು. ಸಾಮಾನೆಲ್ಲಾ ಗಂಟ ಕಟ್ಟಿ ಹೊತಕೊಂಡಿದ್ದ ಹೆಣಮಗಳು ಕೆಂಚವ್ವನ ಹತ್ರ ಬಂದು "ಹೋಗಿ ಬರ್ತೀನಕ್ಕಾ" ಅಂತ ನಮಸ್ಕಾರ ಮಾಡಿದಾಗ ಕೆಂಚವ್ವ ವಾಸ್ತವಕ್ಕೆ ಬಂದ್ಲು. ಕಣ್ಣು ಗಂಟಿನ ಮ್ಯಾಲ ಬಿತ್ತು. ಗಂಟಿಂದ ಇಳಬಿದ್ದ ಸೀರಿ ಕಂಡ ಕೆಂಚವ್ವಗ, ತನ್ನ ಪ್ರಾಣನs ಗಂಟಿನಾಗ ಕಟ್ಟಿದಂಗ ಅನಸಾಕತ್ತು. ಗಂಟು ಹೊತ್ತವಳು ಮರಿಯಾಗೋ ವರಿಗೂ ಕೆಂಚವ್ವ ಗಂಟನ್ನ ದಿಟ್ಟಿಸಿ ನೋಡಾಕ ಹತ್ತಿದಳು. ನೋಡ್ತಿದ್ದಳು, ದೂರ-ದೂರ, ದೂರದವರೆಗೆ ಗಂಟು ಮರೆಯಾಗೋವರೆಗೂ.

□

ಶಿವಲೀಲಾ ಅಂಬೋ ಹುಡ್ರಿ

ಮುದಲಿನ ಡೆಸ್ಕಿನಾಗ ಮುದಲಿ ಜಾಗದ ಮ್ಯಾಲ ಕುಂತಿದ್ದ ಅಡವಿಗೆ ಪಾಠದ ತಲಿ-ಬುಡಾನ ಅರ್ಥ ಆಗಲಿಲ್ಲಾ. ಶಾಂತವೀರ ಲಕ್ಚರರು "ನೀ ಬೋ ಶಾಣ್ಯಾ ಅದಿ, ಕತಿ ಬರೀತಿ, ಕವನ ಬರೀತಿ ಧಾರವಾಡಕ ಹೋಗಿ ಸೇರು" ಅಂದಿದ್ಕ ಅಡವಿ ಉರ್ಫ್ ಅಡಿವೆಪ್ಪ ಚಿಂತೆಗೊಳಗಾಗಿದ್ದ. "ಹ್ಯಾಂಗರಿ ಸರ, ಅಲ್ಲಿಗ ಹೋಗಿ ಬಿ.ಎ. ಇಂಗ್ಲೀಷ್ ಮಾಡಂತೀರಿ, ನಂಗಾರ ಇಂಗ್ಲೀಷ್ ಗ್ಯಾನ ಅಷ್ಟಕಷ್ಟ" ಅಂತ ರಗಳಿ ತಗದಿದ್ದ. "ನೋಡು ಅಡಿವೆಪ್ಪ ನಿಂದು ಎಸ್.ಸಿ. ಕಾಸ್ಟ. ಬಿ.ಎ. ಇಂಗ್ಲೀಷ್ ಮಾಡಿ, ಎಂ.ಎ. ಇಂಗ್ಲೀಷ್ ಮಾಡಿದೆಂದ್ರ ನೌಕರಿ ಗಡಾನ ಸಿಗತೈತಿ. ಮತ್ತ ಧಾರ್ವಾಡದಾಗ ಇದ್ದಿ ಅಂದ್ರ ಕವಿಗಳ್ದು, ಕತೆಗಾರ್ದು ಪರಿಚಯು ಆಗಿ ನಿನ್ನ ಸಾಹಿತ್ಯ ಹೆಚ್ಚತೈತಿ" ಅಂತ ಮೂರ ತಾಸು ಉಪದೇಶ ಮಾಡಿಂದ, ಮನವರಕಿ ಮಾಡಕೊಂಡ ಅಡವೆಪ್ಪ ಹರಪನಳ್ಳಿಯಿಂದ ನೆಟ್ಟಗ ಊರಿಗ ಹೋದವನ "ಕರೆಂಟ್ ತಂತಿ ಹಿಡಿಲೋ, ದಾರ್ವಾಡಕ್ಕ ಓದಾಕ ಕಳಸ್ತಿರೋ" ಅಂತ ಮನಿ ಮುಂದಿಗ ಬೆದರಕಿ ಹಾಕಿ, ಮಹಾ ಹಠವಾದಿ ಅವನಪ್ಪ 'ತೊರಗ'ನಿಗ ಹೇಳಿ ಒಪ್ಪಸಿ, ಹೂಂ ಅನ್ನೋವಂಗ ಉಪಾಸ ಧರಣಿ ಮಾಡಿದ. ಅಡವೆಪ್ಪನ ಅವ್ವ ಮಾದೇವಿ, ಮಗನ ಭವಿಷ್ಯದ ಬಗ್ಗೆ ಕನಸು ಹೆಣಿಯಾಕತ್ಲು. ರಿಜೆಲ್ಟ ಬಂದಾಗ ಎಪ್ಪತ್ತೊಂದು ಪರ್ಸೆಂಟ್ ಅಂದ್ರ ಡಿಸ್ಟಿಂಗ್‌ಷನ್ ಅಂದ್ಕೊಂಡ ತಿರಗಾಡಿ ದಾರ್ವಾಡಕ ಹೋಗಾಕ ಸಿದ್ಧ ಆದ. ಕಾಲೇಜ ವತಿಯಿಂದ ಮೈಸೂರು, ಬೆಂಗಳೂರು, ಶ್ರೀರಂಗಪಟ್ಣ, ಬೇಲೂರ-ಹಳೇಬೀಡು, ಹಂಪಿ, ಹೊಸಪೇಟಿ. ಕಾಫಿಸೀಮಿ ಎಲ್ಲಾ ನೋಡಿದ್ದ. ಆದ್ರ ಉತ್ತರ ಕರ್ನಾಟಕಕ್ಕ ಮಾತ್ರ ಹೆಜ್ಜಿ ಇಟ್ಟಿರಲಿಲ್ಲಾ. ಅಡವೆಪ್ಪನ

ಊರ್ನ್ವನ ಆದ ಅಂಜೇನಿ ಹತ್ವರ್ಷಕ ಮುಂಚೆಗ ಎಂ.ಕಾಂ. ಮುಗಿಸಿ ಬಂದು ಊರಾಗ ಉಸಾಬರಿ ಮಾಡ್ತಿದ್ದ. ಎಪ್ಪತ್ತೊಂದು ಪರ್ಸೆಂಟ್ ತಗೊಂಡಿದ್ದ ಅಡವಿಗೆ, ಧಾರ್ವಾಡಕ ಹೋಗೋ ದಾರಿ ಹೇಳ್ದ. ಹುಬ್ಬಳ್ಳಿ ಬಸ್‌ನಿಲ್ದಾಣದಾಗ ಇಳದು, ದಾರ್ವಾಡಕ ಹೋಗೋ ಬಸ್ ಹಿಡಕೊಂಡು, ದಾರ್ವಾಡ ಬಸ್ ಸ್ಟಾಂಡಿನ್ಯಾಗ ಇಳ್ಕೊಂಡು ಕರ್ನಾಟಕ ಕಾಲೇಜಿಗ ಹೋಗಾಕ ಬಸ್ ಹಿಡಿಬೇಕು, ಆ ಕಾಲೇಜಿಗ ಬಸ್ಸ ಅದಾವು, ಬಾಯಿ ಐತಿ ಕೇಳ್ಕೊಂತ ಹೋಗು. ಕರ್ನಾಟಕ ಕಾಲೇಜಿನ್ಯಾಗ ಅಂತ್ರೋಪಾಲಜಿಯೊಳಗ ನನ ಗೆಳೆಯ ತಾರಾಚಂದ ಅಂತ ಲಚ್ಚರ್ ಅದಾನು, ಅವನಿಗ ನನ್ನ ಹೆಸರು ಹೇಳು. ಸಾಯಾ ಮಾಡ್ತಾನಂತ ಮಾರ್ಗದರ್ಶನ ಮಾಡಿಂದ, ಕಿರ್ಲೋಸ್ಕರ್ ಕಂಪನಿಯೊಳಗ ಕೆಲ್ಸ ಮಾಡ್ತಿರೋ ಅಡವಿ ಅಣ್ಣ ಹರಕದ್ದು ಹ್ಯಾಂಡಬ್ಯಾಗ್ ಕೊಟ್ಟು- "ಲೇ ಅಡವಿ, ಇಕ್ಕ ಈ ಹ್ಯಾಂಡಬ್ಯಾಗ್ ತಗೋ, ಎಲ್ಲ್ಯಾರ ಡಾಕುಮೆಂಟ್ ಕಳ್ಕೊಂಡಿ" ಅಂತೇಳಿದ್ದ. ಬ್ಯಾಗನ್ನ ಹಿಡ್ಕೊಂಡು, ಅವನ್ದೆ ಹಳೆ ಅಂಗಿ ಹಾಕ್ಕೊಂದು, ಹರಕು ಪ್ಯಾಂಟನ್ನ ಮುಚಕ್ಕೊಂಡು ಹುಬ್ಬಳ್ಳಿ ದಾಟಿ, ದಾರ್ವಾಡಕ ಬಂದು ಯೂನಿವರ್ಸಿಟಿಗ ಹೊಂಟ ಬಸ್ ಹತ್ತಿದಾಗ ಉಸರು ಬಿಟ್ಟಿದ್ದ. ಪಕ್ಕದಾಗ ನಿಂತಿದ್ದ ಹುಡುಗನಿಗ ಗೋಗರ್ದ- "ಯಣ್ಣಾ, ಕರ್ನಾಟಕ ಕಾಲೇಜ ಬಂದ್ರ ಹೇಳಂತ".

ಹರ್ಕ ಬ್ಯಾಗನ್ನ ಕಾಣ್ದಂಗ ಹಿಡ್ಕೊಂಡು, ಕರ್ನಾಟಕ ಕಾಲೇಜಿನ ಸ್ಟಾಪ್‌ನ್ಯಾಗ ಇಳ್ದ ಗೋಣೆಗ. ಕೆಂಪಕೆಂಪನ ಸುಂದರ ಹುಡಗಿಯರ ಗುಂಪು ಇದ್ರಾತು. ಮುದ್ಲಿನ ವರ್ಷ ಪಿ.ಯು.ಸಿ. ಸೈನ್ಸ್‌ನ್ಯಾಗ ಗೋತಾ ಹೊಡ್ದಿಂದ, ಆರ್ಟ್ಸ ಮಾಡಾಕ ದಾವಣಗೇರಿ ಬಿಟ್ಟು ಹರಪನಳ್ಳಿಗ ಬಂದಾಗ, ಕೆಂಪನ ಹುಡಗಿ ಗೀತಾ ಅನ್ನಾಕಿ ಇರೋ ಬಿ. ಡಿವಿಜನ್ನಿಗ ಸೇರಿದ್ದು ನೆಪ್ಪಾತು. "ಹಾಳಾದ ದೇವ್ರು, ಹುಡಗ್ಯಾರಿಗ ಒಂದ ನಮೂನಿ ಬಣ್ಣ, ಒಂದ ನಮೂನಿ ಮುಕ, ಮೂಗು ಕೊಟ್ಟಿರ್ತಾನ. ಈ ಹುಡ್ರಿಗ ಒಂದ ಥರಾ, ಅದ್ರಾಗೂ ನಮ್ಮ ಮಂದಿಯೊಳಗಂತು ಮಾರಿ ಅನ್ನೋದು ಎಕ್ಕಡದ ಅಟ್ಟಿ ಇದ್ದಂಗ ಇರ್ತತೆ" ಅಂದ್ಕೊಂತ, ಹರಪನಳ್ಳಿ ಹಂಗ ಕೆಳಗ ಚೆಂಡ ಹಾಕ್ಕೊಂಡ ನಡಿಯೋ ಮುಂದ ಹೆಂಗಸಿಗ ಹಾದು "ಯಾಕ್ಲ, ಕಣ್ಣು ನೆತ್ತಿ ಮ್ಯಾಗ ಬಂದಾವೇನು" ಅಂತ ಕೇಳಿದ್ಕ, "ಇಲ್ಲಮ್ಮ ತೆಪ್ಪಾತು" ಅಂದ. ಯಾಕೋ ನಿಮ್ಮಮ್ಮ ಕಂಡಂಗ

ಕಾಣ್ತೆನೇನು ? ಯಾಪ್ರೂರ್‍ನ್ನೋನು" ಅಂದ್ಲು. 'ಹರಪನಳ್ಳಿ' ಅಂದವನ ಕಪಾಳ ಸೇವೆ ಆದೀತಂತ ಕಾಲಿಗ ಬುದ್ಧಿ ಹೇಳ್ದ. ಗೇಟು ದಾಟಿದ್ದ ತಡ, ಮಳಿ ರೊಂಯ್ss ಅಂತ ಹಿಡ್ಕೊಂತು. ಹರಕು ಬ್ಯಾಗನ್ನ ಅಂಗಿಯೊಳಗ ಮುಚ್ಕೊಂಡವನ ಓಡಿದ.

"ಬಟಾ ಬಯಲು, ಎಲ್ನೋಡಿದ್ರು ಜಾಲಿ. ವಾ, ಏನ ಗಿಡಗಳಪ್ಪ, ಕೆಂಪ ಬಿಲ್ಡಿಂಗು, ಮ್ಯಾಲ ಹೆಂಚು, ಹತ್ತಾಕ ಎಂಥ ಅಗಲನ ಮೆಟ್ಲು" ದಂಗಾದ ಅಡವಿ. ಒಂದ ಸಲಾ ಮ್ಯಾಗತ್ತಿ ಕೆಳಗ ಇಳ್ದ. ಎಲ್ಲಿಗ ಹೋಗ ಬೇಕು, ಏನ್ಮಾಡಬೇಕು ಅನ್ನೋದು ತಿಳಿದಂಗಾತು. ಹುಡಗರು-ಹುಡಗಿಯರು ಗುಂಪು-ಗುಂಪಾಗಿ ಅಡ್ಯಾಡತೊಡಗಿದ್ರು. ಅಲ್ಲೆ ಪಕ್ಕದಾಗ ಹೊಂಟಿದ್ದ ಹುಡಗಗ ಕೇಳ್ದ- "ಇಲ್ಲಿ ಫಾರಂ ಎಲ್ಲಿ ಕೊಡ್ತಾರ್ರಿss" ಅಂದ. "ಯಾ ಫಾರಂ" ಅಂತ ಸಂಶಯದಿಂದ ನೋಡ್ದ ಹುಡಗ. "ನಾನು ಬಿ.ಎ. ಮದ್ಲ ವರ್ಷಕ್ಕ ಸೇರಬೇಕ್ರಿ, ಅದಕ್ಕ ಅಡ್ಮಿಷನ್ ಫಾರಂ" ಅಂದ. "ಅಪ್ಲಿಕೇಶನ್ ಬನ್ನಿ" ಅಂತ ಮ್ಯಾಗ ಕರ್ಕೊಂಡ ಹ್ವಾದ. ಅಗೋ ಅಲ್ಲಿ ಅಂದವನ ಹೋಗಿಬಿಟ್ಟ. ನೂರ ಮಂದಿ ಪಾಳೆ ನಿಂತಿದ್ರಾಗ, ಎಲ್ರಿಗಿಂತ ಹಿಂದ್ಕ ನಿಂತ ಅಡವಿ. ಅವನ ಸರತಿ ಬಂದಾಗ ಹೊಟ್ಟಿ ಹಸ್ಕೊಂಡಿತ್ತು. ತುಂಬೋದು ತಲಿ-ಬುಡಾ ತಿಳಿಯದ, ತಾರಾಚಂದ ಲಚ್ಚರ್ ಶೋಧನೆ ನಡಸಿದ.

"ಹಲೋ ಮಿಸ್ಟರ್ ಅಡವಿ" ಅಂತ ನಾರಾಯಣಾಚಾರ್ ಅಂದಾಗ, ಹೌಹಾರಿದ ಅಡವಿ ಕಕ್ಕಾವಿಕ್ಕಿಯಾಗಿ ಇಡಿ ಕ್ಲಾಸಿಗ್ ಕ್ಲಾಸೆ ಗೊಳ್ಳಂತ ನಗ್ತಿರೋದನ್ನ ಕೇಳಿ ಸುಸ್ತಾದ. 'ಏನ್ಸಾ' ಅಂತ ಎಲ್ಡು ಕೈ ಕಟ್ಕೊಂಡು ವಿನಯದಿಂದ ಎದ್ದು ನಿಂತ್ಕೊಂಡ. ನಾರಾಯಣಾಚಾರ್ರಿಗೆ ಸಾಕಾಗಿ ಹೋಗಿತ್ತು, sit down ಎಂದು ಸೆಕ್ಸ್‌ಪೀಯರ್‌ನ "ಮರ್ಚಂಟ್ ಆಫ್ ವೆನ್ನಿಸ್" ನಾಟಕ ಸುರುಮಾಡಿದ್ರು. ಒಂದ ಗಂಟೀಗ ಬೆಲ್ ಹೊಡ್ದಿಂದ ಎದ್ದವನ ಪುಸ್ತಕ ಅಮುಚ್ಕೊಂಡು ದುಡುದುಡುಂತ ಇಳ್ಕೊಂಡು, ಕೆಳಗಿನ ಕನ್ನಡ ಬೇಸಿಕ್ ಕ್ಲಾಸಿಗ ಕುಂದ್ರಾಕ ಓಡತೊಡಗಿದ. ಆರಾಧಿಮಠ ಮೇಷ್ಟ್ರ ಪಾಠ ಕೇಳಿಂದ ಶಾಂತವೀರಯ್ಯರ ನೆನಪಾತು. ಅವರಿಗೂ-ಇವರಿಗೂ ಹೋಲ್ಕಿ ಮಾಡ್ದ, ಇಟ್ರು ವಂದ ಅನಿಸಿ, ಎದ್ದು ಹಾಸ್ಟಲ್ ಲಿಸ್ಟ್ ಹಚ್ಯಾರೇನಂತ ನೋಡಾಕ

ಹೊಂಟ. ಹರಪನಹಳ್ಳಿಯವನ ಆದ ಜಯದೀಪ– “ಲೇ ಆಡವಿ, ನಿನಗೊಂದು ಪತ್ರ” ಅಂತೇಳಿ ಕೊಟ್ಟ. “ನಂಗ ಯಾರ‍್ರಿ ಬರಿಯೋರು, ಊರಿಂದ ರೊಕ್ಕ ನಿನ್ನೆನಾರ ಬಂದೈತಿ” ಅಂತ ಹರದು ನೋಡಿದ. ಎದಿ ಬಡಕೊಳ್ಳಾಕತ್ತು. ಯಾವದೋ ಹುಡುಗಿದು, ಬಂದ ಹದನೈದು ದಿನಾ ಆಗಿಲ್ಲಾ, ಏನಪ್ಪ ಇದು ಅಂದ್ಕೊಂಡು, ಪತ್ರನ ಹಂಗ ಕಿಸೆದಾಗ ಹಾಕ್ಕೊಂಡು, ತಾನು ಉಳ್ಕೊಂಡಿದ್ದ ಪಯೋನಿಯರ್ ಹಾಸ್ಟೆಲಿನ ಲಕ್ಷ್ಮಣನ ರೂಂ ಕಡೀಗ ಹೊಂಟ.

ಕರ್ನಾಟಕ ಕಾಲೇಜಿಗ ಸೇರಿ ಮೂರು ತಿಂಗಳಾತು. ಅಡಿವೆಪ್ಪ ತಾನಾಯ್ತು, ತನ್ನ ಪಾಠ, ಕಾಲೇಜು. ಯಾರ ಉಸಾಬರಿಗೂ ಹೋಗದೆ ಲೈಬ್ರರಿ, ಸೀನಿಯರ್ ಹುಡ್ರ ಹತ್ರ ಹಳೆ ನೋಟ್ಸ್ ತಗೊಂಡು ಅಭ್ಯಾಸ ಮಾಡತೊಡಗಿದ. ದಿನ ಬದಲಾದಂಗ ಅವನ ಬಟ್ಟಿ-ಬರಿ, ನಡೆ-ನುಡಿ ಬ್ಯಾರೆ ಆದವು. ದಾರ‍್ವಾಡಕ್ಕ ಬರೋ ಮುಂದ ಒಂದ ದಿನ ಶಾಂತವೀರಯ್ಯ ಲಚ್ಚರು ಹೇಳಿದ್ರು– “ನೋಡು ಅಡಿವೆಪ್ಪ, ದೊಡ್ಡ ಪಟ್ನಕ್ಕ ಕಲಿಯಾಕಂತ ಹೊಂಟಿ. ಇಲ್ಲಿ ಎಲ್ಲ ಅವಕಾಶ ಅದಾವ ನಿನಗ. ಒಂದು– ನೀ ಕೆಟ್ಟ ಹುಡ್ರ ಕೂಟಾಗ ಕಲ್ತು ಜೀವ್ನ ಹಾಳಮಾಡ್ಕೋಳುದು; ಇನ್ನೊಂದು– ಒಳ್ಳೆಯವರ ಸವಾಸಕ್ಕ ಬಿದ್ದು ಬುದ್ಧಿವಂತ್ನಾಗಿ ನೀ ಕಲ್ತಿರೊ ಕಾಲೇಜಿಗ ಹೆಸರ ತರೋದು”. ಅಡವಿಗ ಏನು ಹೇಳಾಕೂ ತಿಳಿದ ಕೋಲೆಬಸವನ ಹಂಗ ಗೋಣು ಹಾಕಿದ್ದ. ಅದು ಅವನಿಗ ಪದೇ ಪದೇ ಕಾಡತಿತ್ತು. ಕ್ಲಾಸೀಗ ಹೋದ ಮದ್ಲನೇ ದಿನ ಭೆಟ್ಟಿಯಾಗಿದ್ದ ಬ್ರಾಂಬ ಹುಡ್ಗ ಮಲ್ಲ, ಐನೋರ ಹುಡ್ಗ ಹಿರೇಮಠ ಅಡವಿಯನ್ನ ಗುಗ್ಗು ಅಂತ ತಿಳ್ಕೊಂಡು, ಹರಕ-ಮುರಕ ಇಂಗ್ಲೀಷ್‌ನ್ಯಾಗ ಠಸ್-ಪುಸ್ ಅಂತೇಳಿ ಮಾತಾಡ್ತಿದ್ದುದು ಅಡಿವೆಪ್ಪಗ ಹೆದ್ರಿಕಿ ಹುಟ್ಸಿತ್ತು. ಗೋಕಾವಿ ಲಚ್ಚರ್ ಮಾತ್ರ “ಇಂಗ್ಲೀಷ್ ಅಂದ್ರ ದೊಡ್ಡಲ್ಲಾ ತಮ್ಮಾ, ಅದ್ಕೇನು ಅಬಬ್ಬ ಅನ್ಮೇಡಾ” ಅಂತ ಧೈರ್ಯ ಹೇಳಿಂದ ಹಗರಾಗಿದ್ದ.

ಅಡವೆಪ್ಪ ಜಿನ್‌ಪ್ಯಾಂಟ್ ಹಾಕೋವರಿಗ ಬದ್ಲಾಗಿದ್ದ. ಮನಿ ಕಡೀಗೂ ಪರಿಸ್ಥಿತಿ ಸುಧಾರಿಸಿದ್ಕ ಕೇಳಿದಷ್ಟು ರೊಕ್ಕ ಕೊಡತಿದ್ರು. ತನ್ನ ಹೆಸರ ಕೇಳಿ ನಗ್ತಿದ್ದ ದೇಶಪಾಂಡಿ ಅನ್ನೊ ಹುಡ್ಗಿಯನ್ನ ಒಂದ ಸಲಾ ನೋಡಬೇಕಂತ ತಿರಗಿದ. ಆದ್ರ ಮೂಲಿಯೊಳಗ ಕುಂತಿದ್ದ ಹುಡಗಿ ದಿಟ್ಟಿಸಿ ನೋಡ್ದಂಗಾಗಿ,

ಮತ್ತೊಂದ ಸಲಾ ತಿರಗಲಿಲ್ಲಾ. ಕ್ಲಾಸ್ ಬಿಟ್ಟು ಪೆಟ್ಲಿಳಿತಿದ್ದ ಅಡಿವೆಪ್ಪನನ್ನ ಯಾರೋ ಕೂಗಿದಂಗಾಗಿ ಹೊಳ್ಳಿ ಮ್ಯಾಲ ಹೋದ. 'ಏನ್ರಿ' ಅಂದ. "ತಗೊಳ್ರಿ ನಿಮ್ಮ ಪತ್ರ" ಅಂತ ಒಂದು ಹಳೇ ಕವರ್ ಕೊಟ್ಟವನಽ ಹೋದ ಆ ವ್ಯಕ್ತಿ. ಅಡಿವೆಪ್ಪನ ಕೈ ನಡಗತೊಡಗಿದವು. "ಇದೇನ್ ಗಾಚಾರಪ್ಪ" ಅಂದವನ, ಸುಣಗಾರ ಚಂದ್ರನನ್ನ ಹುಡಕ್ಕೊಂಡು ಅವನ ಕ್ಲಾಸಿಗ ಹೋದ. ಅವನ ಹುಡಕೋದ್ರಾಗ ಪೂರ್ತಿ ಬೆವತಿದ್ದ. "ಏನ್ಲೆ ಅಡವಿ ಸಮಾಚಾರ, ಹಿಂಗ್ಯಾಕ ಬೆವತಿ" ಅಂದ. "ಏ ಬಾರೋ ಮರಾಯ, ನಿನಗ ಒಂದ ವಿಷಯ ಹೇಳ್ತಿನಿ" ಅಂದ. ಪ್ರಿನ್ಸಿಪಾಲರ ರೂಂ ಎದ್ರಿಗ, ಕನ್ನಡ ಕ್ಲಾಸಿನ ಪಕ್ಕದಾಗ ಫಿಲಾಸಫಿ ತರಗತಿ ನಡಿಯೋ ಹತ್ರ ಕರ್ಕೊಂಡು ಹ್ವಾದ. "ಏನ್ಲೇ ಅಂಥ ವಿಷ್ಯಾ", "ಬಾರೋ ಹಂಗೆಲ್ಲಾ ಹೇಳಂಗಿಲ್ಲಾ" ಅಂದವನ ಹಳೇ ಕವರ ತಗದು ಅದ್ರಾಗಿಂದ ನೋಟ್‌ಪುಸ್ತಕದ ಎಂಟ ಹಾಳಿ ತಗ್ದ.

ಪ್ರೀತಿಯ ಅಡಿವೆಪ್ಪ,

ನಾನು ಎಷ್ಟು ಸಾರಿ ನಿಮ್ಮ ಕಡೆಗೆ ನೋಡುತ್ತೇನೆ, ನೀವು ಒಂದು ಸಾರಿ ಯಾದರೂ ನನ್ನ ಕಡೆ ನೋಡುವುದಿಲ್ಲಾ. ಹಾಂ ! ನಾನು ಮರೆತಿದ್ದೆ. ನನ್ನ ರೋಲ್ ನಂಬರ್ ೩೬. ಹೆಸರು ಹೇಳಿಬಿಡಲೇ, ಇಲ್ಲಾ ಉಪನ್ಯಾಸಕರು ಕೂಗುವಾಗ ನೀವೆ ಕಂಡುಹಿಡಿಯುತ್ತಿರೋ ? ನಿಮ್ಮ ಎತ್ತರದ ನಿಲುವು, ದುಂಡುಮುಖ, ಉದ್ದಕೂದಲು, ಕೊರಳಲ್ಲಿನ ಕರಿ ದಾರ, ನಿಜವಾಗಿಯೂ ನೀವು ಮಿಥುನ್ ಚಕ್ರವರ್ತಿ ಹಾಗೇ ಇದ್ದಿರಾ. ಅಷ್ಟೊಂದು ಗಡಿಬಿಡಿಯಾಕೆ? ತರಗತಿ ಬಿಟ್ಟೊಡನೇ ದಡದಡಂತ ಮತ್ತೊಂದು ತರಗತಿಗೆ ಓಡಿಬಿಡುವಿರಿ. ನಿಮ್ಮೊಂದಿಗೆ ಮಾತನಾಡಲು ನಾನು ಎಷ್ಟು ತವಕ ಪಡುತ್ತೇನೆ ಎಂಬುದು ನಿಮಗೆ ಹೇಗೆ ತಿಳಿದೀತು ? ನಾನು, ನನ್ನ ಗೆಳತಿಯರು ನಿಮ್ಮ ಬಗ್ಗೆ ಮಾತನಾಡುತ್ತಿರುತ್ತೇವೆ. ಸಾಧ್ಯವಾದರೆ ವಿಜ್ಞಾನ ವಿಭಾಗದ ಹಿಂದೆ ಕಾಯುತ್ತೇನೆ ಬಂದು ನೋಡಿ.

"ಏನಲೇ ಚಂದ್ರ ಇದು" ಅಂದ ಅಡವಿ, ಚಂದ್ರ ನಕ್ಕವನ ಮುಂದೆ ಓದಿದ.

ಮನ್ನೆ ಲೈಬ್ರರಿಯಲ್ಲಿ ಪುಸ್ತಕ ಆರಿಸುತ್ತಿದ್ದಾಗ ನಿಮ್ಮನ್ನ ಗಮನಿಸಿದೆ, ವ್ಯರ್ಥವಾಯಿತು. ನೀವು ನನ್ನ ಕಡೆ ನೋಡಲಿಲ್ಲಾ. ಬಹುಶಃ ನಿಮಗೆ

ಹುಡುಗಿಯರನ್ನ ಮಾತನಾಡಿಸುವಷ್ಟು ಧೈರ್ಯವಿಲ್ಲಾ ಎನಿಸುತ್ತದೆ. ನಾನು ತೆಳ್ಳಗೆ ಬೆಳ್ಳಗೆ ಸುಂದರವಾಗಿದ್ದೇನೆ. ಗುಂಗರುಗೂದಲು, ನಿಮಗೆ ಇಷ್ಟವಾಗುತ್ತೇನೆ ಎಂಬ ನಂಬಿಕೆ ನನಗಿದೆ. ನಾನು ಗೋಕಾವಿ ಸರ್ ಪೀರಿಯಡ್‌ನಲ್ಲಿ ನಿಮ್ಮ ಪಕ್ಕದ ಬೆಂಚಿನಲ್ಲಿ ಕೂಡುತ್ತೇನೆ, ನೋಡ್ತಿರಾ ತಾನೆ.

ಇಂತಿ ನಿಮ್ಮ ರೋಲ್ ನಂ. ೩೬

ಅಡಿವೆಪ್ಪನಿಗೆ ಸಾಕಾತು. ಚಂದ್ರ ಮಾತ್ರ ನಗ್ತಿದ್ದ. "ಹೇಳಲೇ ಚಂದ್ರ ಏನ ಮಾಡ್ಲಿ" ಅಂದ. "ಲೇ ಅಡವಿ ಫನ್ ಚಾನ್ಸ್‌ಲೇ ಸಿಂದು, ಹುಡಗಿ ಪತ್ರ ಬರದ್ಯಾಳಂದ್ರ ಬಾರಿ ಬಿಡಲೇ ಸಿಂದು". "ಲೇ ಮಳ್ಳ ನಂದ ನನಗ ಆಗ್ಯೆತಿ, ಹುಡಗಾಟ ಆಡ್ತಿ ಅಲ್ಲಲೇ. ಪರೀಕ್ಷ ಸನೀಗ ಬಂದೈತಿ. ಹಿಂಗಾರ ನಾ ಊರಿಗ ಹೊಕ್ಕೀನಪ್ಪಾ. ಅಲ್ಲೇ ಎ.ಡಿ.ಬಿ , ಗಿ.ಡಿ.ಬಿ. ಕಾಲೇಜಿನ್ಯಾಗ ಹಚ್ಚಿ, ಊರಾಗ ಏನಾರ ಕೆಲ್ಸಾನೂ ಆಕ್ಕೈತಿ" ಅಂದ ಅಡಿವೆಪ್ಪ. ಚಂದ್ರಗ ನಾಚಿದಂಗಾಗಿ, "ಲೇ ಅಡವಿ ಬುದ್ದಿಗಿದ್ದಿ ಐತಿಲ್ಲಾ, ಯಾವಾಳೋ ಪತ್ರ ಬರದಿದ್ಕ ನೀ ಯಾಕ್ಲೆ ಹೊಕ್ಕಿ ? ನೀ ಸುಮ್ಮಕಿರು ನಾ ಅಲ ಮಾಡ್ತೀನಿ. ನೀ ಹೆದರಬ್ಯಾಡ, ನಿನ ಪಾಡಿಗ ನೀ ಮಾಬೂಲಿ ಎರಿಸೀಮಿ, ಅಶೋಕ ಚೌದರಿ ಹತ್ರ ಓದು. ತಲಿ ಕೆಡಿಸ್ಕೊಬ್ಯಾಡಾ" ಅಂದ.

ಮದಲ ವರ್ಷ ಬಿ.ಎ. ಪರೀಕ್ಷದ ರಿಜಲ್ಟ್ ಬಂದಾಗ, ಅಡಿವೆಪ್ಪ ಮಾರ್ಕ್ಸ್‌ಕಾರ್ಡ್ ತಗೊಂಡವನ ಉದಯ ಹಾಸ್ಟಲಿನ ರೂಂ ನಂ. ೦೩ ಕ್ಕ ಹ್ವಾದ. ಅವನವ್ವ ಮಾದೇವಿ, ದಾನವ್ವನ ಗೆಣೆಯ ಚಾದಂಗಡಿ ಭಟ್ಟ ಗೋವಾದಿಂದ ತಂದಿದ್ದ ಹಳೆ ಸೂಟ್ಕೇಸ್ ಕೊಡ್ಸಿದ್ಲು. ನಾಕು ಮೂಲಿ ಮುರ್ದು, ಯಾ ಕಡಿಂದ ಎತ್ತಿದ್ರು ಬರೋ ಹಂಗ ಇದ್ದ ಸೂಟ್ಕೇಸಿನ ಬುಡಕ್ಕ ಇಟ್ಟು ಗಪ್ಪಾದ. ಲೈಬ್ರರಿಯೊಳಗ ಇಪ್ಪತ್ನಾಕ ತಾಸ ಗದಗಿನ ಶೈಡಿಗ ಗೈಡನ್ನ ಇಂಗ್ಲೀಷ್‌ನಾಗಿರೋದನ್ನ ಕನ್ನಡದಾಗ ಬರ್ಕೊಂಡು, ಉರಹೊಡ್ದಿದ ಚೌದರಿ ಎರಡನೇ ವರ್ಷಕ್ಕ ಡಿಪಾರ್ಟಮೆಂಟ್ ಸೆಕ್ರೆಟರಿ ಆಕ್ಕಾನಂತ, ದೇಶಪಾಂಡಿ ಅನ್ನೋ ಹುಡಗಿಯಿಂದ ಹಿಡದು ಎಲ್ರೂ ಮಾತಾಡ್ತಿದ್ದಿದ್ದು, ಪಾಪ ಫೇಲಾಗಿದ್ದ. ಮಾತೆತ್ತಿದ್ರ ಇಂಗ್ಲೀಷ್‌ನಾಗ ಉಲಿತಿದ್ದ ಕಾನ್ವೆಂಟ್ ಕುಳಗಳೆಲ್ಲಾ ಮೇಜರ್ ಇಂಗ್ಲೀಷ್‌ನಾಗ ನೂರ ದಾಟಿರಲಿಲ್ಲಾ. ಹರಪನಳ್ಳಿ ಜಯದೀಪ,

ಅಸುಂಡಿ ಬಸುಕಾಕ ಎಂಬತ್ತು ತಗೊಂಡು ಪಾಸಾಗಿದ್ರು. ಅಡವಿ ತಲಿ ತಿಂತಿದ್ದ ರೋಲ್ ನಂ. ೩೬ ನೆನಪಾದಳು. ಅವಾಗಲೇ ಗೋಕಾವಿ ಲಚ್ಚರು ಯಾರ ಮಾರ್ಕ್ಸ್ ಜಾಸ್ತಿ ಐತಿ ಎದ್ದ ನಿಲ್ರಿ ಅಂದಾಗ, ಯಾರೂ ನಿಲ್ಲೋ ಧೈರ್ಯ ಮಾಡಲಿಲ್ಲಾ. ಮದಲ ಸಾಲಿನ್ಯಾಗ ಕುಂತಿದ್ದ ಅಡವೆಪ್ಪಗ ಕೇಳಿದ್ರು ಗೋಕಾವಿ ಲಚ್ಚರು– Mr. ಅಡವೆಪ್ಪ, ನಿಮ್ಮ ಅಂಕ ಎಂದಾಗ "ನೂರಾ ಪದಿನೇಳು ಸಾ" ಎಂದಾಗ, ಉಳದ ಹುಡ್ರು ಗಲಾಟೆ ಮಾಡೋದನ್ನ ನಿಲ್ಲಿಸಿದ್ರು. ಹಿಂದಿನ ಸೀಟಿನಿಂದ ಹಿರೇಮಠ "ವ್ಹಾ ಅಡವಿ, ಪರವಾ ಇಲ್ಲಾ ಸಂಚುರಿ ದಾಟಸಿ" ಅಂದಿದ್ಕ, ಹುಡುಗಿಯರೆಲ್ಲಾ ಗೊಳ್ಳಂತ ನಕ್ಕಿದ್ಕ ಅವಮಾನ ಆದಂಗಾಗಿ ಕುತ್ಕೊಂಡ.

ಒಸ್ಸರಿ ಕ್ಲಾಸಿಗ ಹೊಂಟಿದ್ದ ಅಡವಿಯನ್ನ ನೋಡಿದ ಅವನ ತರಗತಿ ಹುಡುಗಿಯರು ಮಾತಾಡ್ತಿರೋದನ್ನ ನೋಡಿದ. ಮೆಟ್ಲಿಳಿಯೋ ಮುಂದ ಅಸುಂಡಿ ಬಸವಾ, ಜಯದೀಪ, ಅವನ ಬೆಂಚಿನ ಹುಡ್ರು ಮಾತಾಡೋದು ಕೇಳಿಸಿಕೊಂಡಾಗ ಮಾತ್ರ ಅವನ ಕಾಲು ಚಲಿಸದಾದವು. ಅಯ್ಯೊ ಪಾಪ, ನಾನು ಏನೇನೋ ತಿಳ್ಕೊಂಡಿದ್ದೆ. ರೋಲ್ ನಂ. ೩೬ ಅಂದ್ರ, ಶಿವಲೀಲಾ ಅನ್ನೊ ಹುಡುಗಿ ಕೆಟ್ಟವಳು, ನನ್ನ ತಲಿ ಕೆಡಸಾಕ ನೋಡಿದ್ಲು ಅಂದಕೊಂಡಿದ್ದೆ. ಆದ್ರ ನಾನು ಓದಬಾರ್ದು, ತಲಿ ಕೆಡಸ್ಕೊಂಡು ಹುಡಗಿ ಹಿಂದ ಅಡ್ಡಾಡಬೇಕು ಅಂತ ಈ ಹುಡ್ರು ಮಾಡಿರೋದು ಇದು ಅಂತ ತಿಳಿದಾಗ, ಬಿ.ಎ ಒಂದ್ರಾಗ್ಲಿ ಮೇಜರ್ ವಿಷಯದೊಳಗ ಕ್ಲೀನ್ ಬೋಲ್ಡಾಗಿ, ಕಾಲೇಜು ಬಿಡೋ ಹಂತ ದೊಳಗಿದ್ದ ಶಿವಲೀಲಾ ಅನ್ನೋ ಹುಡಗಿ ಹತ್ರ ಹೋಗಿ ಕ್ಷಮೆ ಕೇಳಬೇಕು ಅನ್ಕೊಂಡು ಚಂದ್ರನ ಕಡಿ ಹೊಂಟಿದ್ದ ಅಡಿವೆಪ್ಪ, ವಿಜ್ಞಾನ ವಿಭಾಗದ ಹಿಂದ ಏನೋ ಬುಸುಗುಡೋದನ್ನ ಕೇಳಿ ನಿಂತ. ಸುತ್ತ ನೋಡ್ದ, ಹೃದಯಬಡಿತ ನಿಂತಂಗಾತು. ಶಿವಲೀಲಾ ಅನ್ನೊ ಹುಡುಗಿ ಭಗವತಿಗೌಡನ ತೆಕ್ಕಿಯೊಳಗ ತೇಲಾಡ್ತಿದ್ಲು. ಅಡಿವೆಪ್ಪ ಓಡಿದ, ಓಡಿದ. ಉದಯ ಹಾಸ್ಟೆಲ್‌ನ ತನ್ನ ಕೋಣೆಯೊಳಗ ಕಾಟಿನ ಮ್ಯಾಲ ಅಂಗಾತ ಬಿದ್ಕೊಂಡು ಕಣ್ಣು ಮುಚ್ಚಿ ನಿದ್ದಿ ಮಾಡೋಹಂಗ ನಾಟ್ಕ ಮಾಡತೊಡಗಿದ.

□

ಬ್ರೆಡ್, ಬೇಕರಿ ಮತ್ತು ಅವನು

ಕೆಲ್ಸದ ಒತ್ತಡದಿಂದಾಗಿ ಸಂಜಿಮುಂದ ಒಂದೊಂದ ದಿನ ಅಡಗಿ ಮಾಡಿಕೊಳ್ಳಾಕ ಬ್ಯಾಸರ ಆಗೋದಕ್ಕ ಬ್ರೆಡ್ ಜಾಂ ತಿಂದು, ಒಂದ ಗ್ಲಾಸ್ ಚಾ ಕುಡ್ದು ಮಲಗೋದು ಬಹಳ ಹಿಂದಿನ ರೂಢಿ ಅವನಿಗೆ. ಅವನೊಬ್ಬ ಸಾಮಾನ್ಯ ಮನುಷ್ಯ, ಆದ್ರ ಜನರ ಬಗ್ಗೆ ಕಳಕಳಿ ಹೊಂದಿದವ. “ಬಡತನಕ್ಕ ಕಾರಣ ಅಂದ್ರ ನಿಮ್ಮಲ್ಲಿರೋ ಜಡತ್ವ” ಅಂತ ಯಾವದೋ ಹಳ್ಳಿಯೊಳಗ ಭಾಷಣ ಮಾಡಿದ್ದಕ್ಕ ಮಂದಿ ಚಪ್ಪಾಳಿ ತಟ್ಟಿದ್ದು ನೆನಪಿಸಿಕೊಳ್ತಾನ. ಕಾಲೇಜಿನ ಹುಡ್ರಿಗ ಪಾಠ ಮಾಡೋ ಮೇಷ್ಟ್ರಾದ್ದರಿಂದ, ಮಾತಿಗೇನು ಕೊರತೆ ಇರ್ಲಿಲ್ಲಾ. ಅವನೊಬ್ಬ ವಿಚಿತ್ರ ಹಾಡುಗಾರ, ಅವನ ಹಾಡಿಗ ಮಂದಿ ತಾವಾಗೇ ಬರ್ತಿದ್ರು. ಆಂದೋಲನ ಅಂದ್ರ ಕೆಲಸ ಬಿಟ್ಟು ಮುಂದಾಗ್ತಿದ್ದ. ಆ ಊರಿನ ಪ್ರತಿ ಮನಿಯ ಗೋಡಿಗಳಿಗೂ ಅವನ ಹಾಡಿನ ಪರಿಳಿತಗಳು ಗೊತ್ತಾಗಿದ್ವು. ಹರೆಯದ ಹುಡುಗಿಯರ ಮನಸಿನೊಳಗ ಹಾಡು ಪ್ರೀತಿಯಾಗಿ ಹೆಪ್ಪುಗಟ್ಟುತ್ತಿತ್ತು. ಅವನು ವಿಚಾರ ಮಾಡುತ್ತ ಪ್ರತಿದಿನ ತರ್ತಿದ್ದ ಬ್ರೆಡ್ ಅಂಗಡಿ ಮುಂದೆ ಬಂದ ನಿಂತಾಗ, ಬಾಗಲ ಹಾಕಿರೋದು ನೋಡಿ ಸುತ್ತಲೂ ನೋಡ್ದ. ಸಾಲಿನ ಕೊನೆಯೊಳಗ ಹೊಸದಾಗಿ ಆರಂಭವಾಗಿದ್ದ ಬೇಕರಿಗೆ ಹೋದ. ಇಪ್ಪತ್ತರ ಹರೆಯದ ಅಪರಿಚಿತ ಹುಡಗಿ ಮೋಹಕ ನಗೆ ಬೀರಿ, ಬಹಳ ಹಿಂದಿನಿಂದಲೂ ಪರಿಚಯ ಇರೋ ಹಂಗ ತೋರಿಸತೊಡಗಿದ್ಲು. ಅವನು ವಿಚಾರ ಮಾಡಲಿಲ್ಲಾ, ಬೇಕರಿಯೊಳಗ ಕುಂತಿದ್ದ ಧಡೂತಿ ಮುದ್ಕ ಒಳಗ ಹೋದ್ದರಿಂದ ಅವಳು ಮಾತಿಗಾರಂಭಿಸಿದ್ಲು. “ನೀವು ಪ್ರೊಫೆಸರ್ ಶಂಕರಸಿಂಗ್ ಅಲ್ವಾ ! ನಾ ನಿಮ್ಮ ಬಗ್ಗೆ ಭಾಳ ಕೇಳಿನಿ, ಇಲ್ಲಿಗ ಬರೋ

ಹರೆಯದ ಹುಡುಗಿಯರು ಬರಿ ನಿಮ್ಮ ವಿಷಯಾನೇ ಮಾತಾಡ್ತಾರ. ಒಂದೆಲ್ಡ ಸಲ ನೀವು ಹಾಡಿದ ಹಾಡುಗಳನ್ನ ಕೇಳಿನಿ– ಚೆನ್ನಾಗಿ ಹಾಡ್ತಿರಿ" ಎನ್ನುತ್ತಾ ಮಾತಿಗಾರಂಭಿಸಿದಳು. "ಬಹಳ ದಿನಗಳಿಂದ ನನ್ನ ಕುರಿತು ಯೋಚಿಸ್ತಿರೋ ಹಾಗಿದೆ" ಎಂದುಕೊಂಡ. ಅವಳ ಪ್ರಶ್ನೆಗಳಿಗೆ "ಹಾಂ, ಹೂಂ" ಎಂದು ಉತ್ತರಿಸಿದ್ದ. ರೂಂ ಕಡೆಗ ಹೆಜ್ಜಿ ಹಾಕತೊಡಗಿದ. ದಾರಿಯೊಳಗ ಅವನ ತಲಿತುಂಬ ಬೇಕರಿ ಹುಡಗಿಯ ವಿಚಾರಗಳು ತುಂಬಿಕೊಳ್ಳತೊಡಗಿದವು. "ಎಲ್ಲೋ ಸಂತೆಮಾಳದಾಗ, ಬಸ್ಟ್ಯಾಂಡಿನ್ಯಾಗ ಇಲ್ಲಾ ಹಳಪ್ಯಾಟಿ ಎಲಿಗಾರ ಓಣಿಯೊಳಗ ಹಾಡ ಹಾಡೋದನ್ನ ಕೇಳಿರಬೇಕು. ನಾ ಯಾಕ ವಿಚಾರ ಮಾಡಬೇಕು ?" ಅಂದ್ಕೊಂಡವನ ಸರಸರ ನಡಿಯತೊಡಗಿದ.

ಹುಡುಗರು ಕಾಯುತ್ತಿದ್ರು. ಪಾಠದ ನಡುವೆ ಎರಡು ಸಲ ಬೇಕರಿ ಹುಡಗಿ ಉದಾಹರಣೆ ಕೊಟ್ಟಿದ್ದ. ಹುಡುಗರಿಗೆ ಅರ್ಥವಾಗದೆ ಹೂಂ ಗುಟ್ಟಿದ್ದರು. ಅವನು ಎಷ್ಟು ಮರಿಬೇಕಂದ್ರು ಮತ್ತದೇ ನೆನಪು. ಕಾಲೇಜಿನಲ್ಲಿ ಮಾಡಬೇಕಾಗಿದ್ದ ಪಾಠದ ತಯಾರಿ ನಡಸಿ ಎದ್ದಾಗ ಹೊಟ್ಟೆ ಹಸದಂಗಾಗಿ ಅಡಗಿ ಮನಿಯೊಳಗ ಇಣುಕಿದ. ನೆಲದ ಮೇಲೆ ಇಟ್ಟಿದ್ದ ಬ್ರೆಡ್ ಪ್ಯಾಕಿಗೆ ಇರುವಿ ಮುತ್ಕೊಂಡಿದ್ವು. ಹುಡುಗಿಯ ನೆನಪಾತು."ನೀವು ಚೆನ್ನಾಗಿ ಹಾಡ್ತಿರಾ" ನನ್ನ ಹಾಡನ ಎಲ್ಲಿ ಕೇಳಿರಬಹುದು ? ಅವಳನ್ನ ಕೇಳಬೇಕಾಗಿತ್ತು. ಮತ್ತೊಂದಾದ್ರು ಕೇಳಿದರಾಯ್ತು ಅಂದವನೆ, ಬ್ರೆಡ್ಡಿಗೆ ಜಾಂ ಹಚ್ಚಿ ತಿನ್ನುವ ನಾಟ್ಕ ಮಾಡಿ, ಹೊಟ್ಟಿತುಂಬಾ ನೀರು ಗುಟಕರಿಸಿ ಅಡ್ಡಾದ. ಹಳೇ ವಿಚಾರ ಮರುಕಳಿಸಿದವು. ಜನ ತಮ್ಮದನ್ನ ಕೇಳೊ ಧೈರ್ಯ ಯಾವಾಗ ಮಾಡ್ತಾರು ? ತಮ್ಮ ಹಕ್ಕು ಎಂದು ಗೊತ್ತಿದ್ದಾಗ್ಯೂ ಹಿಂಜರಿತಾರ. ಅವರ ತಲಿಯೊಳಗ ವಿಚಾರದ ಕಲ್ಪನೆ ತುಂಬಬೇಕು. ಬಹಳ ದಿನಗಳು ಹೋಗಬೇಕು. ಮಾರ್ಕ್ಸ್‌ನ ಪುಸ್ತಕ ತೆಗೆದುಕೊಂಡು ಓದತೊಡಗಿದ. ಯಾಕೋ ಆಸಕ್ತಿ ಹುಟ್ಟಲಿಲ್ಲಾ. ಹಳೇ ಹಿಂದಿ ಹಾಡುಗಳನ್ನ ಕೇಳಲು ರೇಡಿಯೋ ತಿರುಗಿಸಿದ. ಹಾಡಿನ ಕೂಡ ಧನಿಗೂಡಿಸಿ ನಿದ್ದಿಗಾಗಿ ಪ್ರಯತ್ನಿಸತೊಡಗಿದ. ನಿದ್ದಿ ಯಾವಾಗ ಹತ್ತಿತೋ ! ಎದ್ದಾಗ ಶಿವಣ್ಣ ಮೇಷ್ಟ್ರು ರೂಂ ಹೊರಗ ನಿಂತು ಕಾಯುತ್ತಿದ್ರು.

ಅವನು ಓಂದಿರುಗಿದಾಗ, ಅವನಿಗೆ ಅರಿವಿಲ್ಲದೆ ಕಾಲು ತಾವಾಗೇ ಬೇಕರಿ ಕಡಿಗೆ ಒಯ್ಯತೊಡಗಿದವು. ಅದೇ ಹುಡಗಿ ಮತ್ತದೇ ಮೋಹಕ ನಗೆ, ಕಣ್ಣು-ಮನಸು ತೆರೆದು ವ್ಯಕ್ತಪಡಿಸದೆ ಸ್ವಾಗತಿಸಿದಳು. ಮೂಲಿಯೊಳಗ ಕುಂತಿದ್ದ ಧಡೂತಿ ಮುದುಕ ನಗಲು ಹವಣಿಸಿದ. "ನೀವು ಹಿಂಗ್ಯಾಕ ಬೀದಿಯೊಳಗ ಹಾಡಬೇಕು ?" ನೇರಪ್ರಶ್ನೆ ಅವನು ನಿರೀಕ್ಷಿಸಿರಲಿಲ್ಲಾ. "ಜನರಿಗೆ ತಿಳುವಳಿಕೆ ಹೇಳಾಕ" ಅಂದ. "ಜನ, ನೀವು ಹೇಳೊ ಹಾಡಿಗ, ಮಾಡೋ ನಾಟ್ಕಕ ಮೋಜು-ಮಜಾಂತ ತಿಳ್ಕೊಂತಾರ" ಅಂದ್ಲು. "ಜನ ಯಾವುದನ್ನ ನಿಜಂತ ತಿಳಿತಾರ ಹೇಳಿ" ಎಂದು ತನ್ನ ಆಂದೋಲನವನ್ನ ಸಮರ್ಥಿಸಿಕೊಳ್ಳಾಕ ನೋಡ್ದ. "ಆವತ್ತು ಸಂತಿಯೊಳಗ ನಿಮ್ಮ ಹಾಡ ಕೇಳ್ದೆ, ನಾಟ್ಕ ನೋಡ್ದೆ. ನೀವೊಬ್ಬ ಅದ್ಭುತ ಕಲಾವಿದ. ಯಾವ ಹಾಡನ ಹೇಳಿದ್ರು ಲಯಬದ್ಧವಾಗಿ ಹಾಡ್ತಿರಾ, ಸಂಗೀತಾ ಕಲ್ತಿರಾ" ಅಂದ್ಲು. ನಮ್ಮಪ್ಪ ಕುಡದು ನಮ್ಮವ್ವಗ ಹೊಡಿತಿದ್ದಾಗ, ಅವಳ ಸಂಕಟದ ರೋಧನೆಯಿಂದ ಕಲ್ತೆನಿ. ನಮೂರಾಗ ಗೌಡ್ರು ಕೂಲಿಮಾಡೋ ಜನರಿಗೆ ಸಾಲ ಕೊಟ್ಟು, ವಾಪಾಸ ಕೊಡದಕ್ಕ ಮೈಮ್ಯಾಲ ಬಾಸಾಳ ಮೂಡೋ ಹಂಗ ಹೊಡ್ದದ್ದನ್ನ ನೋಡಿ, ಅವರ ಎದಿಯೊಳಗ ಹುಟ್ಟಿರಬಹುದಾದ ಕಿಚ್ಚು ಹಾಡಾಗಿ ನನ್ನ ಎದಿಯೊಳಗ ಕಾಡ್ತಿತ್ತು. ಅದೇ ರಾಗ ಸಂತ್ಯಾಗ, ಜಾತ್ರಿಯೊಳಗ ಹಾಡಾಗಿ ಹೊರಹೊಮ್ಮತೈತಿ" ಅಂದ. "ನೀವು ವಿಚಿತ್ರ ಮನುಷ್ಯರಪ್ಪಾ, ಯಾವುದಕೋ ಯಾವದನ್ನೋ ಸಂಬಂಧ ಕಟ್ತಿರಾ. ಆದ್ರ, ನೀವು ತಿಳ್ಕೊಂಡಂಗ ಮಂದಿ ಇಲ್ಲಾ. ನಿಮ್ಮ ಬೀದಿನಾಟ್ಕ ನೋಡಿ ನಕ್ಕು, ನಿಮಗ ಏನೋ ಸರ್ಕಾರದ ಸವಲತ್ತೈತಿ ? ಅದ್ಕ ಹೊಟ್ಟಿ ಪಾಡಿಗ ಡೊಂಬರಾಟ ಮಾಡ್ತಾರಂತ ತಿಳ್ಕೊಂತಾರ ವಿನಃ, ಯಾಕೆ ? ಏನು ? ಅನ್ನೋ ವಿಚಾರ ಮಾಡೊದಿಲ್ಲಾ" ಅಂದ್ಲು. "ಅದೇ ಅವರ ದೌರ್ಬಲ್ಯ. ಇವತ್ತಿಗೂ ಬೇರೆಯವರು ಅವರನ್ನ ಉಪಯೋಗಿಸಿಕೊಳ್ತಿರೋದು, ಮೂಲಭೂತವಾಗಿ ವಿಚಾರಶಕ್ತಿ ಇಲ್ಲದಿರೋದು- ಈಗ ನೀವೇ ನೋಡಿ, ಒಂದ ಸಲ ನಮ್ಮ ಡೊಂಬರಾಟ ನೋಡಿ ಇಷ್ಟೊಂದು ವಿಷಯಗಳನ್ನ ನೀರ ಕುಡ್ದಂಗ ಸರಳವಾಗಿ ಮಾತಾಡಿದ್ರಿ" ಅಂದ. "ಅದು-ಅದು" ಅಂತ ತೊದಲ ತೊಡಗಿದ್ಲು. "ಅದೇ ನಮ್ಮ ಡೊಂಬರಾಟದ ಉದ್ದೇಶ. ನೀವು, ನಿಮ್ಮಂತ ಸ್ಥಿತಿವಂತ ಜನರು ಮೊದಲು ನಗ್ತಿರಾ, ಆಮೇಲೆ ಅವರ ಬಗ್ಗೆ ವಿಚಾರ

ಮಾಡ್ತಿರಾ ಅಷ್ಟೇ ಸಾಕು" ಅಂದ. ಮುದುಕ ನಡುವೆ ಬಾಯಿ ಹಾಕಿ– ನಿನ್ನೆ ಹಾಲಿನವನಿಗೆ ಕೊಟ್ಟ ರೊಕ್ಕದ ಲೆಕ್ಕ ಕೇಳತೊಡಗಿದ. ಅವನು ಅವನಿಗಾಗಿ ತೆಗೆದಿಟ್ಟಿದ್ದ ಬ್ರೆಡ್ ಪ್ಯಾಕ್ ತಗೊಂಡು ಹೊರಟ. ಅವಳಿಗೆ ಏನೋ ಕಳಕೊಂಡಂಗಾಗಿ, ಅವನು ಮರಿ ಆಗೋವರಿಗ ನೋಡ್ತಿದ್ಲು.

ಶಂಕ್ರಗೌಡರ ಮನಿ ದಾಟಿಂದ ನೆನಪಾತು, ಬ್ರೆಡ್ ರೊಕ್ಕ ಕೊಟ್ಟಿನೋ ಇಲ್ಲೋ ? ಛೇ ! ಎಂತ ಕೆಲ್ಸ ಮಾಡ್ದೆ ? ಮಾತಿನ ನಡವಿ ರೊಕ್ಕ ಕೊಡೋದ ಮರ್ತಿನಿ. ವಾಪಾಸ ಹೋದ್ರ ಹೆಂಗ ? ಹುಡ್ರು ಪಾಠಕ್ಕ ಕಾಯ್ತಿರ್ತಾವ. ನಾಳೆ ಕೊಟ್ರ ? ಅವಳು ಮತ್ತ ಬೇರೆ ಏನಾದ್ರೂ ತಿಳ್ಕೊಂಡ್ರ ? ಅವನು ವಾಪಸಾದ. ಸಿನಿಮಾ ಟೆಂಟಿನ ಮಾಳವಾಡೆ ಮನಿವರಿಗ ಬಂದಾ, ಹೋದ್ರ ಮುದ್ಕ ಇರಬೇಕು ? ಪದೇ ಪದೇ ಹೋಗೊದ್ಕ ಏನಾರ ತಿಳ್ಕೊಂಡು, ಅವಳಿಗೆ ತ್ರಾಸ್‌ಕೊಟ್ಟ್ಯಾನು ? ಬ್ಯಾಡ, ನಾಳೆ ಕೊಟ್ರ ಆಯಿತು ಅಂದ್ಕೊಂಡು ಸರಾಯಿ ಅಂಗಡಿ ಮೂಲಿಂದ ವಾಪಾಸಾದ. ನನಗ ಯಾವತ್ತೂ ಬೀದಿಯೊಳಗ ನಿಂತ ಹಾಡ ಹೇಳಾಕ ನಾಚ್ಕಿ ಅನ್ಸೋದಿಲ್ಲಾ. ಯಾಕಂದ್ರ, ನಮ್ಮಪ್ಪ ಹೆಬ್ಬಟ್ಟಿ ಒತ್ತಿ-ಒತ್ತಿ ಛೇರ್ಮನ್ ಹನ್ಮಪ್ಪಗ ಹೊಲ ಹಾಕಿ, ಇವತ್ತಿಗೂ ಅವನ ಸಾಲ ಒಂದಕ್ಕೆರಡು, ಮೂರು, ನಾಕು ಅದೆಷ್ಟ ಪಾಲೈತೊ? ಮುಂಜಾನಿಂದ ಸಂಜಿಮಟ ದುಡಿಯೋ ಚಿನ್ನಿ, ಬಾಬುಶ ರಾತ್ರಿ ಬಂದಿಂದ ಕುಡ್ದು ಉಪಾಸ ಮಲ್ಗತಾರ. ಅವರ ಮಕ್ಕಳು ತಿನ್ನೋದನ್ನ ನೋಡಿ ಗುಟಕ ನುಂಗ್ತಾರ. ಮುಂಜಾನಿಗ ಹೋದ್ರ ರಾತ್ರಿ, ರಾತ್ರಿ ಒಂದೇ ಮನಿಯೊಳಗ ಕಳಿಯೋದು. ಮತ್ತ ಅದೇ ಬೆಳಗಾದ್ರ ಎಂಟೋ, ಹತ್ತೊ ಮೈಲಿ ನಡಿಯೋದು, ನಮ್ಮವ್ವ ಹಿಂಗs ದುಡದು-ದುಡದು ಸತ್ತ ಹೋದ್ಲು. ಒಂದ ದಿನ ನೆಮ್ಮದಿಯಿಂದ ಹೊಟ್ಟಿ ತುಂಬ ಉಂಡು, ತೃಪ್ತಿ ನಗಿ ನಕ್ಕಿದ್ದನ್ನ ನಾ ನೋಡಿಲ್ಲಾ, ಕನಿಷ್ಠಪಕ್ಷ ಈ ಮಂದಿ, ಈ ಮಂದಿ. ತನ್ನ ರೂಂ ಬಂದಿದ್ದರಿಂದ ಎಲ್ಲಾ ಮರೆತು, ಹುಡುಗರಿಗ ಪಾಠ ಹೇಳಾಕ ತಯಾರಿ ಮಾಡತೊಡಗಿದ.

ಒಂದು ವಾರ ಕಳಿದಿತ್ತು ಬೇಕರಿ ಕಡಿ ಹೋಗ್ಲ. ಅವಳಿಗ ಕೊಡೋ ಐದು ರೂಪಾಯಿ, ಐನೂರು ಮಾತುಗಳನ್ನ ಸಹಿಸ್ಕೊಳ್ಳೊ ಹಂಗ ಮಾಡತೈತೊ

ಏನೊ ಅಂದ್ಕೊಂಡು ಬೇಕರಿ ಕಡಿ ನಡ್ದ. ಧಡೂತಿ ಮುದ್ಕ ಕುಂತಿದ್ದ. ಬ್ರೆಡ್ ತಯಾರಿ ಮಾಡ್ತಿದ್ದ ಅವಳು ಯಾಕೋ ಹೊರಗ ಬಂದವಳು, ಅವನನ್ನ ನೋಡಿ ಮೈದಾ ಹಿಟ್ಟನ್ನ ಕಲ್ಸಿದ ಕೈಯಿಂದೇ ಮಾತಿಗ ನಿಂತ್ಲು. ಮುದ್ಕ ಪಕ್ಕಕ ಬಂದ. "ಕಳದ ಸಲಾ ಬಂದಾಗ ನಾನು ರೊಕ್ಕ ಕೊಡೋದನ್ನ ಮರ್ತಿದ್ದೆ" ಅಂದ. "ಇಲ್ಲಾ ಮೇಷ್ಟ್ರೆ, ಕೊಟ್ಟೀರಿ" ಅಂದ್ಲು. "ನನಗ ನೆನಪೈತಿ, ನಾನು ಮರಿಯೋದಿಲ್ಲಾ. ಆದ್ರ ಮಾತಿನ ಗಡಿಬಿಡಿಯೊಳಗ ಹಂಗೆ ಹೋಗಿದ್ದೆ" ಅಂದ. ಅವಳು ಮಾತ್ರ ಕಡ್ಡಿ ಎಲ್ಡ ತುಂಡ ಮಾಡೋ ಹಂಗ ಸಾರಾಸಗಟಾಗಿ ನಿರಾಕರಿಸಿದ್ಲು. ಅವನಿಗೆ ಮುಜುಗರ ಅನ್ನಿಸ್ತು. ಅಲ್ರಿ ಮೇಷ್ಟ್ರೇ, ನೀವೇ ಹಿಂಗಂದ್ರ ಹ್ಯಾಂಗ ? ಕೊಟ್ಟೀರಿ. ಮುದ್ಕ ಕೆಟ್ಟ ಕಣ್ಣಿಂದ ನೋಡ್ತಿದ್ದ, ಅವನ್ಯಾರು ? ಈ ಹುಡುಗಿ ಅಪ್ಪ ? ಅಜ್ಜ ? ಯಾರಿರಬಹುದು ? ಅಷ್ಟೆಲ್ಲ ದೂರ ಹೋಗೋದು ಬ್ಯಾಡ ಅಂದ್ಕೊಂಡು ಅವಳ ಕಡಿಗ ನೋಡ್ದ. "ನೀವು ಗಂಡಸರೇ ಹಂಗ, ದಬ್ಬಾಳಿಕೆ ಗುಣದವರು" ಅಂದ್ಲು. "ಅದ್ರಲ್ಲಿ ದಬ್ಬಾಳಿಕೆ ಎಲ್ಲಿ ಬಂತು ? ನಾನಂತೂ ಅದಕ್ಕ ಭಿನ್ನ. ಇಬ್ರೂ ಸೃಷ್ಟಿಯೊಳಗ ಹುಟ್ಟಿದವರೇ. ಗಂಡು ಸೃಷ್ಟಿಗೊಂಡ ದಿನಾನೇ ಹೆಣ್ಣು ಸೃಷ್ಟಿ ಆಗ್ಯಾಳ. ಅದ್ರಲ್ಲಿ ದಬ್ಬಾಳಿಕೆ, ದರ್ಪ ಎಲ್ಲಿ ಬಂತು ? ತಿಳವಳಿಕೆ ಮುಖ್ಯ. ಗಂಡ್ಸು, ಹೆಂಗ್ಸು ದೈಹಿಕವಾಗಿ ಎಲ್ಡು ಲಿಂಗಗಳು ವಿನಃ ಅವುಗಳಲ್ಲಿ ಒಂದು ಮೇಲು, ಅದು ತಾನು ಗಂಡು ಶ್ರೇಷ್ಠ ಅಂತ ತಿಳಿಯೋದಾಗ್ಲಿ, ಹೆಂಗಸು ತಾನು ಕನಿಷ್ಠ ಅಂತ ತಿಳ್ಕೊಂಡು, ತನ್ನ ಸುತ್ತಲೂ ತಾನೇ ಸಂಕುಚಿತ ಭಾವನೆಯ ಬಲಿಯನ್ನ ನೇಯೋದು ಎಷ್ಟು ಘೋರ ತಪ್ಪು ಗೊತ್ತಾ ?" ಅಂದ, "ಅಯ್ಯೋ ಮೇಷ್ಟ್ರೆ, ನೀವು ಪಾಠ ಹೇಳಿಕೊಡಾಕ ಮಾತ್ರ ಲಾಯಕ್ಕು. ನಿಮ್ಮ ಮಾತುಗಳು ಪ್ರಯೋಗ ಮಾಡ್ತಿರಾ, ಖಂಡಿತ ಸಾಧ್ಯವಿಲ್ಲಾ. ಸಮಾನ ಬಲಗಳು ಬದಕಲಿಕ್ಕಾಗೋದಿಲ್ಲಾ. ಬೇಕಾದ್ರ ನ್ಯೂಟನ್ ನಿಯಮನ ಮತ್ತೊಂದ ಸಲ ಓದಿ" ಅಂತ ಹೇಳೋವಾಗ ಅವಳ ಧನಿಯೊಳಗ ಅತೃಪ್ತಿ, ಅಸಮಾಧಾನ; ಏನೋ ನೋವೈತಿ ಅಂತ ಅನಿಸ್ತು. ಬದಕೇ ಹಿಂಗ. ಎಲ್ಲಿಂದ ಎಲ್ಲಿಗ, ಯಾವ ಮೂಲಿಗ ಕರ್ಕೊಂಡು ಹೊಕ್ಕೈತಿ ಅಂತಾನೇ ಗೊತ್ತಾಗೋದಿಲ್ಲಾ ಅಂತ ಸಮಾಧಾನ ಹೇಳಾಕ ಪ್ರಯತ್ನಪಟ್ಟ. ಭಟ್ಟಿ ಮ್ಯಾಲ ಕೇಕ ಮಾಡ್ಲಿಕ್ಕಿಟ್ಟಿನಿ ಅಂದವಳೇ ಒಳಗ ಓಡಿದ್ಲು.

ಅವನಿಗೊಂದು ಹೊಸ ಸುಳಿವು ಸಿಗ್ತು. ಸಿಕ್ಕಾಪಟ್ಟೆ ಹಣ ಗಳಿಸ್ತಿರೋ ಬೇಕರಿ ಇದು. ಯಾವಾಗ್ಲೂ ತಂದೆ-ಮಗಳು ಕುಂತಿರ್ತಾರ. ಆದ್ರ ಆ ಹುಡಗಿಗೆ ಇಂತಹ ವಿಚಾರಗಳು. ಅವಳ ಹಿಂದಿನ ಬದುಕs ನಾ ತಿಳ್ದಿಲ್ಲಾ. ಅದಕ್ಯಾಕ ತಲಿ ಕೆಡಸ್ಕೊಬೇಕು ? ಆದ್ರ ಅವಳು ನಾಳ ತಿಳ್ಕೊಂಡಾಳ. ಭಂಡಾರಿ ಹೋಟ್ಲ ಹತ್ರ ಬಳಗಾರ ಮಾಸ್ತ್ರ ಅವನ ದಾರಿ ಕಾಯ್ತ ನಿಂತಿದ್ರು. ಅವನನ್ನ ನೋಡಿದವರ– "ನಿನ್ನ ಖೋಲಿಗ ಹೋಗಿದ್ದೆ, ನೀನು ಹೊರಗ ಹೋಗಿ ಅಂತ ಗೊತ್ತಾಗಿ ಬಂದೆ. ಬರ್ರಿ ಹಂಗಾರ, ಒಂದೀಟು ಚಹ ಕುಡ್ದ ಮಾತಾಡನು" ಅಂತ ಹೋಟಲಿಗೆ ನಡ್ದರು. "ಹೇಳಿ ಮಾಸ್ತ್ರ, ಏನ ವಿಚಾರ" ಅಂದ. "ಅದೇ ಶಂಕ್ರಪ್ಪ, ಆ ಹುಡುಗರು" ಅಂತ ಹೇಳಾಕ ಹಿಂದ-ಮುಂದ ನೋಡಿದ್ರು. "ಯಾವ ಹುಡ್ರು, ದುಂಢಸಿ ದ್ಯಾಮು ಮತ್ತ ಶಿಗ್ಗಾಂವ ನಾಗಿ ಇಬ್ರೂ ಬ್ಯಾರೆ-ಬ್ಯಾರೆ ಜಾತಿಯವರು. ಇದು ಮದ್ಲ ಹಳ್ಳಿ. ನೀ ಏನಾರ ಮಾಡಕ ಹೋದಿ ಅಂದ್ರು, ಜನ ನಿನ್ನ ವಿರುದ್ಧ ಎದ್ದ ನಿಲ್ತಾರ" ಅಂದ್ರು. "ಅದೇ ಮೇಷ್ಟ್ರೆ, ಇದು ಆ ಹುಡ್ಗ–ಹುಡ್ಗಿಗ ಸಂಬಂಧಿಸಿದ ವಿಷಯು. ನಾವ್ಯಾಕ ಇದ್ರಾಗ ತಲಿ ಹಾಕೋದು ? ನಾವು ಮೂಕ ಪ್ರೇಕ್ಷಕರು. ಅವರೀಗ ಯಾರು ಮುಟ್ಟದಂಗ ನೋಡ್ಕೋರು" ಅಂದ್ರು. "ಅಲ್ರಿ, ಇದ್ರಾಗ ತಪ್ಪೇನೈತಿ ? ಅವನು ಹುಡ್ಗ, ಅವಳು ಹುಡ್ಗಿ. ಮಧ್ಯದಾಗ ನಾನು, ನೀವು ಯಾರು ?" ಅಂದ. ಬಳಗಾರ ಮೇಷ್ಟ್ರು ಮಕ–ಮಕ ನೋಡ್ತಿದ್ರು.

ಆ ಹುಡುಗನ ಕೇಸಿನ ಸಲವಾಗಿ ಪೋಲೀಸರು ಅವನನ್ನ ವಿಚಾರಣೆ ಮಾಡಿದ್ರಿಂದ ಅವನು ಬೇಕರಿಗೆ ಹೋಗಿರ್ಲಿಲ್ಲಾ. ತನ್ನೂರಿಗ ಹೋಗೊ ವಿಚಾರ ಬ್ಯಾರೆ ಮಾಡತೊಡಗಿದ. ಮದ್ವಿ ಆಗು–ಆಗು ಅಂತ ಗಂಟ ಬಿದ್ದಿರೋ ಅಪ್ಪ–ಅವ್ವ. ತಮ್ಮಗ ಮದ್ವಿ ಮಾಡ್ರಿ ಅಂತ ಅವನು. ಅವನ ತಮ್ಮ, ಹಿರಿಯಣ್ಣ ಮನ್ಯಾಗಿರೋವಾಗ ನಾನು ಚಿಕ್ಕವನು. ಮದ್ವಿನs ಆಗಾಕೊಲ್ಲೆ ಅಂತ ನಿರಾಕರಿಸ್ದರಿಂದ, ಮನೀಕಡಿ ಹೋಗೋದು ಕಮ್ಮಿ ಮಾಡಿದ್ದ. ಯಾವದೋ ಕೆಲ್ಸದಿಂದ ಬಂದ ಹುಡುಗರಿಗ, ಅವರ ಕೆಲಸ ಮುಗ್ಸಿ ಕಳ್ಸೊದ್ರಾಗ ಹೊತ್ತಾಗಿತ್ತು. ಮದ್ಯಾನ್ನದ ಊಟಾನು ಸರಿ ಆಗಿರ್ಲಿಲ್ಲ. ಪಾತ್ರಿ ತೊಳಿ, ನೀರ ತಾ ಅಂತ ಯಾರ ಮಾಡ್ತಾರ ? ಮತ್ತ ಸೀಮೆಣ್ಣಿ ಸ್ಟೌ ಹಚ್ಕೋದಂದ್ರ

ತಲಿ ಬ್ಯಾಸರ ಅಂದವನ, ಬಹಳ ದಿನದಿಂದ ಹೋಗಿದ್ದರಿಂದ ಆ ಹುಡುಗಿ ಮೋಹಕ ನಗಿ ನೋಡಬೇಕನಸ್ತು. ಎದ್ದವನ ಜೆಪ್ಪಿ ಮುಟ್ಕ್ಯೊಂಡು ಬೇಕರಿ ಕಡಿ ನಡ್ದ.

ಅವನಿಗ ನಿರಾಶಿ ಆತು. ಏನೋ ಹೇಳಾಕ ಬಾಯಿ ತಗ್ದ. "ಓ ಬರ್ರಿ, ನೀವು ಯಾವದೋ ಕಾಲೇಜಿನ್ಯಾಗ ಪ್ರೊಫೆಸರ್ ಇರಬೇಕು ? "ಏನು ಬ್ರೆಡ್ ಬೇಕಿತ್ತ ಬನ್ನಿ" ಮುದ್ಕ ಅಂದ. "ನಿಮ್ಮ ಮಗಳು ಊರಿಗ ಹೋಗ್ಯಾರ" ಅಂತ ಕೇಳ್ದ. "ಓ ಅದ, ಅಲ್ಲ ಮಾರಾಯ್ರಿ, ಅವಳು ನನ್ನ ಹೆಂಡ್ತಿ. ಹುಬ್ಳಿಗ ಹೋಗ್ಯಾಳ, ನಾಳೆ ಬರ್ತಾಳ" ಅಂದ. ಅವನಿಗ ನಿಂತ ನೆಲ ಕುಸ್ದಂಗಾತು. "ಛೆ, ಯಾಕ ಹಿಂಗ" ರೊಕ್ಕದ ಆಸಿಗ ಈ ಮಂದಿ ಏನೆಲ್ಲಾ ಮಾಡ್ತಾರ. ಸ್ವಂತ ಮಗಳನ್ನ ನಾಳೆ-ನಾಡಿದ್ದು ಸಾಯೋ ಮುದ್ಕಗ ಗಂಟ ಕಟ್ಟ್ಯಾರ. ಆ ಹುಡುಗಿ ಆಸಿಗ ಬೆಂಕಿ ಇಟ್ಟಾರ. ಇಂಥ ಚಿಕ್ಕ ವಯಸ್ಸಿನ್ಯಾಗ ಎಂತ ನೋವನ್ನ ಅನುಭವಿಸ್ತಿದಾಳ ಹುಡುಗಿ ? "ಏನ್ರಿ ಪ್ರೊಫೆಸರ್, ನನ ಹೆಂಡ್ರು ಕಲ್ತಾರ, ಭಾರಿ ಹುಷಾರದಾರ. ನಿಮ್ಮ ಜೋಡಿ ಮಾತಾಡ್ತಾರಲ್ಲ" ಎಂದು ಘರ್ಜಿಸುವ ಧನಿಯಲ್ಲಿ ನಕ್ಕ. ನಗೊ ಮುಂದ ಅವನ ಗುಡಾಣದಂಥ ಹೊಟ್ಟಿ ಎದ್ದೆದ್ದು ಕುಣಿಯಾಕತ್ತು. ಅವನಿಗೆ ನೋವಾತು, ಇವನು ಆ ಹುಡಗಿಗ ಏನು ತಾನೆ ಕೊಡಬಲ್ಲ ? ಪ್ರೀತಿ, ಸುಖ, ಹೋಗಲಿ ತಾಯ್ತನ. ಇವನೇನೋ ಸ್ವಲ್ಪ ದಿನ್ದಾಗ ಸತ್ತ ಹೋಕ್ಯಾನ. ಅವಳ ದಿಕ್ಕು, ಮತ್ತೊಬ್ಬನ ಸ್ವತ್ತು. ಮಾತಾಡಕಾಗ್ಲಿಲ್ಲಾ. ಬ್ರೆಡ್ ತಗೊಂಡು ರೊಕ್ಕ ಕೊಟ್ಟ. "ಪರವಾಗಿಲ್ಲ, ನನ್ನ ಹೆಂಡ್ರು ತಗೊಳೋದಿಲ್ಲಾ". ನಾನು, ಛೆ-ಛೆ, ಅವ್ರು ಯಾವತ್ತೂ ಹಂಗ ಮಾಡಿಲ್ಲ ರಾಯರೇ. ನಾನು ಇನ್ನೊಬ್ಬರ ಋಣದಾಗ ಇರಾಕ ಇಷ್ಟ ಪಡೋದಿಲ್ಲಾ. ನನ್ಗ ಚೆನ್ನಾಗಿ ಸಂಪಾದ್ನೆ ಇದೆ ಎಂದು ನಿಲ್ಲದೆ ಹೊರಟೆ.

ಮೂರ ದಿನದಿಂದ ಒಂದೇ ವಿಚಾರ ಕೊರಿಯಾಕತ್ತು. "ಈ ವ್ಯವಸ್ಥೆಯೊಳಗ ಎಲ್ಲೋ ತಪ್ಪೈತ್ರಿ", ಅದನ್ನ ಸರಿ ಮಾಡಬೇಕು. ಒಡತನದ ಧಗಿಯೊಳಗ ಬೆಂದ ತಂದಿ-ತಾಯಿ, ಮಗಳ ಮನಸಾಕ್ಷಿಯನ್ನ ಕೊಂದು, ಅವಳಿಗ ಇಷ್ಟ ಇಲ್ಲದ ಅವನ ಜೋಡಿ ಬದಕು ಅಸಾಧ್ಯ ಆದ್ರೂ ಒತ್ತಾಯ ಮಾಡಿ ಮದ್ವಿ ಮಾಡಿದಾಗ- ಆತ್ಮವಂಚನೆಯಿಂದ, ಮುಳ್ಳಿನ ಹಾಸಗಿ ಮ್ಯಾಲ

ಮಲಗೋ ಹಂಗ, ದಿನ ತಮ್ಮ ಜೀವನನ ಕಳಿಯೋ ಇವರುಗಳ ಬದಕು ಎಷ್ಟು ಕಠಿಣ ? ಒತ್ತಿ ಹಿಡ್ದಂಗ ಅವನೊಳಗಿನ ಬಯಕೆ ಚಿಮ್ಮತೊಡಗಿತು. ಹಿಂದೆ ಅವಳು ಮದ್ವಿಯಾದ ಹೆಂಗಸು, ನಾ ಯಾಕ ಭೆಟ್ಟಿಯಾಗಬೇಕು ? ಅನ್ನೊ ಪ್ರಶ್ನೆ ಕಾಡತೊಡಗಿತು. ಆದ್ರೂ ಮನಸ್ಸು ತಡೀಲಿಲ್ಲಾ, ಹೊರಟ. ದಾರಿಯೊಳಗ ಯಾರ್ಯಾರೊ ಕಂಡ್ರು, ಅದ್ಯಾವ್ದೂ ಲಕ್ಷಕ ಬರ್ಲಿಲ್ಲಾ. ನೆನಪಿನ ತುಂಬ ಅದೇ ಹುಡುಗಿ. ಆಕೆ ಅವನಿಗಿನ್ನೂ ಹುಡುಗಿಯಾಗಿದ್ಲು.

ಧಾರವಾಡ ಮಾಸ್ತರ ಅಂಗಡಿ ದಾಟಿ ಜೈ ಮಾತೆ ಫೈನಾನ್ಸ್ ಹತ್ರದಿಂದ ರಾಮಾ ಫರ್ಟಿಲೈಜರ್ ಕಡಿಗ ಬಂದ. ಮಾಳವದೆ, ಕೋಳಿವಾಡರ ಅಂಗಡಿ ಸಂದಿಯೊಳಗಿಂದ ಬೇಕರಿಗ ಹೊಂಟ. ಬೇಕರಿ ಕದ ಹಾಕಿತ್ತು. ಅವನಿಗೆ ಏನೇನೊ ವಿಚಾರಗಳು ಬರಾಕತ್ವು. ಯಾಕಿರಬಹುದು ? ಒಂದೇ ಪ್ರಶ್ನೆ.... ಯಾಕೆ ? ತಲಿ ಕೊಡವಿಕೊಂಡು ಅಪ್ಪಣ್ಣ ಅಂಗಡಿಯೊಳಗ ಚಹ ಕುಡಿಯಾಕ ಕುಂತ. ಅವನ ಪಕ್ಕದ ಸೀಟಿನಲ್ಲಿ ಕುಂತಾಂವ ಪೇಪರ್ ಓದ್ತಿದ್ದ. ಇಸ್ಕೊಂಡು ಕಣ್ಣಾಡಿಸಿದ, ಯಾಕೋ ಅಕ್ಷರಗಳು ತಲಿಯಾಗ ಹೋಗ್ಲಿಲ್ಲಾ. ಪದೇ ಪದೇ ಅವನು ಬೇಕರಿ ಹತ್ರ ಇರ್ತಿದ್ದನ್ನ ನೋಡಿದ, ಯಾರೋ ಒಬ್ಬ ಪಕ್ಕದವನಿಗೆ ಹೇಳತೊಡಗಿದ- "ಪಾಪ, ಬೇಕರಿ ಹುಡಗಿ ನೇಣು ಹಾಕ್ಕೊಂಡು ಸತ್ಲಂತ" ಅಂದ. ಅವನ ಕಿವಿ ಚುರುಕಾದ್ವು. ಪೇಪರ್ ಕೈ ಬಿಟ್ಟಿವ, ಗಬಕ್ ಅಂತ ಕೈಗೆತ್ತಿಕೊಂಡ. ಕೈಗಳು ನಡಗಾಕತ್ತಿದ್ವು. ತುಟಿ ಕಿವಿ, ಕಣ್ಣು ವಿಚಿತ್ರ ಪ್ರತಿಕ್ರಿಯೆ ನಡ್ಸಿದ್ವು. ಸುತ್ತಲೂ ನಿಶ್ಶಬ್ದ ಆದಂಗ ಅನ್ಸಿತು. ಕಣ್ಣಿನ ಮುಂದ ಸ್ಪಷ್ಟ ಚಿತ್ರಣ ಮೂಡಿತ್ತು. ಅದೇ ಆ ಹುಡಗಿಯ ಮೋಹಕ ನಗಿ ದೊಡ್ಡದಾಗಿ, ದೊಡ್ಡದಾಗಿ ಗಹಗಹಿಸಿ ನಗೊ ಹಂಗ ಕೇಳಸ್ತು. ಪಕ್ಕದವನ ಮಾತು ಮುಂದವರ್ದಿತ್ತು- "ಮತ್ತಿನ್ನೇನು ಮಾಡ್ಯಾಳು ? ಮುದ್ಕ ಗಂಡ. ಯಾವನೋ ಕಾಲೇಜ ಮಾಸ್ತರಂತ, ಗುಟ್ಟಿಂದ ಭೆಟ್ಟಿ ಆಕ್ತಿದ್ಲಂತ". ಅವನಿಗೆ ತಲಿ ಸಿಡಿತಿರೋ ಅನುಭವ ಆಗತೊಡಗಿತು. "ಆ ಮುದ್ಕ ಒಂದ ದಿನ ಇಬ್ರನ್ನೂ ಹಿಡ್ದನಂತ. ಸಹಿಸಿಕೊಳ್ಳದ ಮಳ್ಳಿ ನೇಣು ಹಾಕ್ಕೊಂಡು ಸತ್ಲಂತ" ಅಂದ. "ನಮಗ್ಯಾಕ ಬೇಕು ಗಸಿಸಾ, ನಾವು ದುಡಕೊಂಡು ತಿನ್ನೊ ಮಂದಿ" ಅಂದ್ಕೊಂತ ಎದ್ದು ಹೋದ್ರು. ಅವರು ಹೋಗೊವರಿಗ ಅವನಿಗ ಏಳಾಕ

ಮನಸಾಗ್ಲಿಲ್ಲಾ. ಏಳಲು ಕಾಲಾಗಿನ ಶಕ್ತಿ ಉಡಗಿಹೋದಂಗ ಅನ್ಸ ತೊಡಗಿತು. ಹೆಜ್ಜಿ ಕಿತ್ತಿ ಹಾಕಾಕ ಆಗದ, ಶಕ್ತಿಯನ್ನ ಒಟ್ಟುಗೂಡಿಸಿ ರೂಂ ಕಡಿ ನಡ್ದ.

ಮಕ್ಕೊಂಡು, ಮ್ಯಾಲ ತಿರಗ್ತಿದ್ದ ಫ್ಯಾನನ್ನ ನೋಡತೊಡಗಿದ. ತನ್ನ ಸುತ್ತ ತಿರಗ್ತಿರೋ ಸುಳ್ಳು ಸುದ್ದಿಗಳು ತನ್ನನ್ನು ಯಾವ ಮಟ್ಟಕ್ಕ ತರ್ತ್ಯಾವೊ ಅನ್ನೋದು ಅವನ ತಲಿ ತಿನ್ನತೊಡಗಿತು. ಆದ್ರ ಅವಳು ಯಾಕ ಸತ್ತಿರ ಬಹುದು? ಇಲ್ಲಾ, ಆ ಮುದ್ಕ ಕುತಗಿ ಹಿಚಕಿ ಕೊಂದಿರಬಹುದೇ? ಏನೇನೊ ವಿಚಾರಗಳು. ಎಲ್ಲಾ ವಿಚಾರಗಳಿಗ ಪೂರ್ಣ ವಿರಾಮ ಇಟ್ಟು ಹೋದ ಹುಡಗಿ, ಅವನ ಬದಕಿನ್ಯಾಗ ಹೊಸ ಪುಟ ತೆರೆದು ಹೋಗಿದ್ಲು. ವಿಚಾರಗಳಿಂದ ಹೊರಗ ಬರಾಕ ಗುದ್ದ್ಯಾಡ್ತಿದ್ದ. ಹೊರಗ ಯಾರೋ ಅವನ ರೂಮಿನ ಕದಾ ಬಡ್ದಂಗಾಗಿ ಮೇಲೇಳಾಕ ಪ್ರಯತ್ನಿಸ್ತಿದ್ದಂಗ, ಒಳಗ ಪೋಲಿಸರು ಬಂದಿದ್ರು.

□

ಓಡಿ ಹೋದವರು

ನಮ್ಮೂರಿನ ಸುತ್ತಮುತ್ತ ಐದಾರು ವರ್ಷಗಳಿಂದ ನಾನು ಕೇಳುತ್ತಿರುವ ಸುದ್ದಿಗಳಿವು. ಓಡಿ ಹೋದವರು, ಕಾಣೆಯಾದವರು, ಯಾರು ? ಯಾಕೆ ? ಎಲ್ಲಿಗೆ ? ಎಷ್ಟು ದಿನ ? ಎಷ್ಟು ವರ್ಷ ? ಎಷ್ಟು ಜನ ? ಅಯ್ಯೋ, ಅದೆಲ್ಲಾ ದೊಡ್ಡ ರಾಮಾಯಣ ಬಿಡ್ರಿ ಅಂತ, ನನ್ನಲ್ಲಿ ಕುತೂಹಲ ಹುಟ್ಟಿಸಿ ಹಾಗೆಯೇ ಹೊರಟ ಪಕ್ಕೀರನ ಕೊಳಪಟ್ಟಿ ಹಿಡದು ಬಾರಿಸಬೇಕು ಎನಿಸಿತು. ಸಣ್ಣ ಸುದ್ದಿಯಾದರೂ ಮೈಯೆಲ್ಲಾ ಕಿವಿಯಾಗಿ ಕೇಳುತ್ತೇನೆ. ನಾ ಏನಾದರೂ ಮೊದಲು ಹೇಳು ಅಂತ ಕೇಳಿದ್ನೆ, ಅವನs ಹೆಣ್ಣುಮಕ್ಕಳ ಡಾಗೆ ಬಂದು ಭಾರಿ ಗುಟ್ಟಿನ ವಿಷಯವೆಂಬಂತೆ ಪ್ರಾರಂಭ ಮಾಡಿದ್ದ. ನಮ್ಮೂರ ಗೌಡರ ಸೊಸಿ, ಅವರ ಮನಿಯೊಳಗ ಕೆಲಸ ಮಾಡುತ್ತಿದ್ದ ಮಾದರ ಭರಮನ ಜೊತಿಗ ಓಡಿ ಹೋದಳಂತೆ. ಪದ್ದಿ ದುರಗನ ಹಿಂದ ಹೋಗಿದ್ದು, ಚಂದ್ರ ರೂಪ್ಲಿನ ಓಡಿಸಿಕೊಂಡು ಹೋಗಿ, ಧರ್ಮನ ಅಣ್ಣ ಮಾಂತ ಇರೋ ಭದ್ರಾವತಿ ಬೆಲ್ಲದ ತಯಾರಿಕೆ ಕಂಪನಿಯೊಳಗ ಕೆಲ್ಸಕ್ಕ ಸೇರಿಕೊಂಡು ಅಲ್ಲೇ ಮನಿ ಮಾಡಕೊಂಡಾರ. ಅವು ಎಲ್ಲಾ ದೊಡ್ಡ ಸುದ್ದಿಗಳೇನು ಅಲ್ಲಾ. ಆದರೆ ನಮ್ಮೂರ ಗೌಡರ ಸೊಸಿ ಮಾದರ ಭರಮನ ಜೊತೆಗೆ ಓಡಿಹೋದದ್ದೇ ದೊಡ್ಡ ಸುದ್ದಿಯಾಗಿತ್ತು. ಇಡೀ ಪ್ರಪಂಚಕ ಸುದ್ದಿಗೊತ್ತೈತಿ, ನಿನಗ ಗೊತ್ತಿಲ್ಲಾ ಅಂದ್ರ ಹೇಗ ಡಿಂಗಣ್ಣ ಅಂದ ಪಕ್ಕೀರ. ಇಲ್ಲಪ್ಪ ನನಗ ಯಾವ ಸುದ್ದಿನೂ ಗೊತ್ತಿಲ್ಲಾ. ನಾನು ಹುಬ್ಬಳಿ ಪ್ಲಾಸ್ಟಿಕ್ ಕಂಪನಿಯೊಂದ್ರಲ್ಲಿ ಕೆಲಸ ಮಾಡಕೊಂಡದೀನಿ ಅಂದೆ; ನಾನು. ಅದು ನನಗ ಗೊತ್ತು ಬಿಡು. ಅಂದ್ರೆ ನೀನು ಈಗ ಊರಿಗ ಬಂದಿ ಅಂದಂಗಾತು ಅಂದ ಪಕ್ಕೀರ. ಅದೇ ನಮ್ಮೂರ ಪಟ್ಟಿ ಗೌಡ ಅದಾನಲ್ಲಾ,

ಅವನ ಸೊಸಿ ಮನಿಯೊಳಗಿನ ಬಂಗಾರ, ನಗನಾಣ್ಯ ತಕ್ಕೊಂಡು ರಾತೋರಾತ್ರಿ ಭರಮುನ ಕರ್ಕೊಂಡು ಓಡಿಹೋದಳಂತ ಅಂದ. ಅವನು ಹೇಳಿದ ವಿಷಯ ಕುತೂಹಲ ಕೆರಳಿಸಿತು. ಇವನು ಬೆರಕಿ ಪಕ್ಕೀರ. ಇವನು ಯಾವತ್ತೂ ಹೊಟ್ಟೆಗ ಸಮಾಧಾನ ಆಗೋ ಹಂಗ ಬೀಳದೇ ಬಾಯಿನೇ ಬಿಡೋ ಮಗ ಅಲ್ಲ ಅಂತ ಗೊತ್ತಿತ್ತು ನನಗ.

ಹೆಂಡ, ಸಾರಾಯಿ ಅಂಗಡಿಗ ಹೋದ್ರ ಸರಿಯಾಗಿ ಚೆಂಡ ಬೀಳೋದು ಖಾತ್ರಿ ಆಗಿ– ಪಕ್ಕೀರಣ್ಣ, ಬಾ ಇಲ್ಲಿ ಎಂದೆ. ದೂರದಲ್ಲಿ ಗೌಡರ ಸಂಬಂಧಿ ಯೊಬ್ಬ ನಮ್ಮ ಕಡೆ ಬರುತ್ತಿದ್ದ. ಪಕ್ಕೀರನ ನಾಲಿಗೆ ತಡವರಿಸತೊಡಗಿತು. ನಾನು ಸ್ವಲ್ಪ ಕುಲಮಿ ಕಡೆ ಹೋಗಿ ಬರ್ತೀನಿ, ಪೀರು ಸಾಬನಿಗೆ ಕುಡಗೋಲು ಕೊಟ್ಟರೆ ನಾಳೆ ರಾಗಿ ಕೊಯ್ಯೋದು ಐತಿ, ನೀನು ಇಲ್ಲೇ ಇರು, ನಾನು ಹೋಗಿ ಬರ್ತಿನಿ ಅಂದ. ಸುದ್ದಿಯ ಬಿಸಿ ತಾಗಿಸಿ, ನಾಲಿಗೆಗೆ ಬುದ್ಧಿ ಹೇಳಲು ನೋಡಿದ ಅವನನ್ನ ಉಪಾಯದಿಂದ ಬಲಿಗೆ ಬೀಳಸಬೇಕೆಂದುಕೊಂಡೆ. ಅವನು ಕೇಳಲಿಲ್ಲಾ. "ಏ, ಇಲ್ಲಿವರೆಗೆ ನನಗೆ ಗೊತ್ತಿಲ್ಲದ ಸುದ್ದಿಯನ್ನ ಹೇಳಿ ಕುತೂಹಲ ಹುಟ್ಟಿಸಿ, ಈಗ ಜಾರಿಕೊಳ್ಳಾಕ ನೋಡ್ತಿದ್ದಿಯಲ್ಲಾ, ಸರೀನಾ" ಎಂದೆ. "ನೀನೇನಾದ್ರೂ ಹೇಳದಂಗಿರು ನೋಡು ನಿನ್ನ ಫಜೀತಿ. ನೆಟ್ಟಗೆ ಗೌಡ್ರ ಹತ್ರ ಹೋಗಿ– ಗೌಡ್ರೆ ನಿಮ್ಮ ಸೊಸಿ ಹೋದದ್ದು ನಿಜನಾ ? ಅದು ಆ ಪಕ್ಕೀರಗ ಗೊತ್ತೈತಿ ನೋಡ್ರಿ ಅಂತ ಹೇಳ್ತಿನಿ" ಅಂತ ಹೆದರಿಸಿದೆ.

ಸಂತಿ ಪ್ಯಾಟಿ ಹತ್ರದ ಬಂಗಾರಪ್ಪನ ಚಹದಂಗಡಿಗೆ ಕರೆದುಕೊಂಡು ಹೋಗಿ ಕುಂದ್ರಿಸಿ ಬಿಸಿ-ಬಿಸಿ ಮಂಡಕ್ಕಿ, ಮಿರ್ಚಿ, ಚಹ ಹೇಳಿದೆ. ಬಂಗಾರಪ್ಪನ ಅಂಗಡಿ ಮೂಲೆಯೊಳಗ ಹೆಂಡತಿ ಕಳೆದುಕೊಂಡಿದ್ದ ಗೌಡ, ಅರ್ಧ ಮುಖ ಮುಚ್ಚಿಕೊಂಡು ಕುಂತಿದ್ದ. ಪಕ್ಕೀರ ನೋಡಿದವನೇ ಹಾವು ತುಳಿದವನ ಹಾಗೆ ಪಾರಿ ಬಾಗಿಲಿಗೆ ಬಂದ. ನಿಧಾನವಾಗಿ ನಡಿ ಏನೂ ಆಗೋದಿಲ್ಲಾ, ನಾ ಇದೀನಿ ಎಂದೆ. ಕೈ ಮುಗಿದು ಬೇಡಿಕೊಳ್ಳತೊಡಗಿದ. ನಾನು ಪೂರ್ತಿ ವಿಷಯ ತಿಳಿಯದೇ ಬಿಡಲು ತಯಾರಿರಲಿಲ್ಲಾ. ಯಾಕಂದ್ರ, ಅದೇ ಗೌಡ ಪಂಚಾಯ್ತಿ ಎಲೆಕ್ಷನ್ನಿನ್ಯಾಗ ಗೆದ್ದು, ಪ್ರಧಾನ ಆಗಿ ಲಕ್ಕಿಗ, ಭೀಮಿಗ, ರೊಡ್ಡಿಗ ಮನೆ ಕಟ್ಟಿಸಿ ಕೊಡ್ತಿನಿ ಎಂದು ಹೇಳಿ, ಪೀರ್ಯಾನ ಸಹಾಯದಿಂದ ನಮ್ಮೂರ

ರಂಡಮುಂಡೇಯರು ಗಂಡ ಉಳ್ಳವರನ್ನ ಯಾರನ್ನೂ ನೋಡದೇ ಪೀರ್ಯಾ, ಕುಂಟ ಕುಬ್ಯಾನ ಸಹಾಯದಿಂದ ಬಾತಿಯ ಯಲ್ಲವ್ವನ ಡಾಭಾದಲ್ಲಿ ಪೂರ್ತಿ ಒಂದು ಚಿಕಿನ್ ತಿನ್ನಿ, ಎರಡು ಕ್ವಾಟರ್ ಬ್ರಾಂದಿ ಕುಡಿಸಿ, ಹಳೆ ಮೋಡ್ಕ ಕಾರಿನಲ್ಲಿ ಡ್ರೈವರ್ ಹತ್ತಿರ ಕುಳಿತುಕೊಳ್ಳಲಿಕ್ಕ ಸೀಟು ಕೊಟ್ಟು, ಹಿಂದಿನ ಸೀಟಿನ ತುಂಬಾ ಲಚ್ಮಿ, ಲಕ್ಕಿ, ಭೀಮಿಯರಿಗಾಗಿ ಮೀಸಲಿಟ್ಟು ಸುತ್ತಲಿನ ಹಳ್ಳಿಗಳಿಗೆಲ್ಲಾ ತಾನೊಬ್ಬನೇ ಗಂಡು, ಉಳಿದವರು ನಾಮರ್ದಗಳೆಂದು ತಿಳ್ಕೊಂಡಿದ್ದ. ಯಾವಾನೋ ಸರ್ಪ, ಬಿಂಗ ಅನ್ನೊ ಕಂಡ ತಿನ್ನೊ ಮಂದಿ ಸಾಕಿ ನಾಗಲಾಪುರದಿಂದ ಓಡ್ಸು ಇಂಗಳಗುಂದಿ, ಶಂಕ್ರನಳ್ಳಿತನಕ ತನ್ನದೇ ಸಾಮ್ರಾಜ್ಯ ಅಂತ ತಿಳಿದು ದರ್ಪ ನಡೆಸಿದ್ದ.

ನಮ್ಮೂರ ಬಸವಿ ಭದ್ರ ಮತ್ತು ಅವನ ಗೆಳೆಯ ಚಾರ್ಲಿಯರನ್ನ ಗುಟ್ಟಾಗಿ ಗೆಳೆತನ ಮಾಡಿಕೊಂಡು, ಇಬ್ರಿಗೂ ಒಳಗೊಳಗ ದ್ವೇಷ ಹುಟ್ಟು ಹಾಗೆ ಮಾಡಿ, ಚಾರ್ಲಿ ಎಂಟ ಜನರನ್ನ ಸೇರಿಸಿ ಹಿಂಗ್ರಳ್ಳಿ ದಾರಿಯೊಳಗ ಕೊಂದ ನಂತರ, ಗೌಡನ ಮೇಲೆ ಗುಮಾನಿಯಾಗಿ ಅರೆಸ್ಟ್ ಮಾಡೋ ಮುಂದ, ರೆಡ್ಡಿ ಇನ್ಸ್‌ಪೆಕ್ಟರ್ ಕಾಲು ಮುರಿಯಲು ಹೋಗಿ, ಬಂದೂಕು ತೋರ್ಸಿದಕ್ಕ ಹೆದರಿ ಹತ್ತಸಾವಿರ ಕೊಟ್ಟು ಶರಣಾಗಿದ್ದ ಹಳೆ ಹುಲಿ, ಪೂರ್ತಿಯಾಗಿ ಮೂಲಿಗುಂಪಾದದ್ದು ಕಂಡು ಅಯ್ಯೋ ಎನಿಸತೊಡಗಿತು. ಬಡವರ ಹೆಣ್ಣು ಮಗಳು ಅವರ ಕೂಲಿಗೆ ಹೋದರೆ ಮರ್ಯಾದೆಯಿಂದ ಮನೆ ಸೇರುತ್ತಿರಲಿಲ್ಲಾ. ಅವನು–ಅವನ ಹಾಗೆ ಅವನ ಕಿರಿಯ ತಮ್ಮಂದಿರು ಸಹ ಅಣ್ಣನ ದರ್ಪದಾಗ, ತಮ್ಮ ಅಂದಿನ ಸೊಕ್ಕನ ತೋರಿಸಿ ಗೂಳಿಹಾಗೇ ಮೆರಿತಿದ್ರು.

ಚಹ ಬೇಡಾ, ನಿನ್ನ ತಿಂಡಿನೂ ಬೇಡಾ. ನನ್ನ ಕೈ ಬಿಡು. ನಾ ಅರ್ಜೆಂಟ್ ಹರಿಹರಕ್ಕ ಹೋಗಬೇಕು ಅಂದ. ನಿಲ್ಲು ಮಹರಾಯ, ಯಾರಾದರೂ ಹಿಂಗ ಅರ್ಧ ವಿಷಯ ಹೇಳಿ ಸುಮ್ಮನಿರ್ತಾರೇನು ? ನೀನೇ ಹೇಳು ಎಂದು ಅವನನ್ನೇ ಕೇಳಿದೆ. ಆ ವಿಷಯ ತಗೊಂಡು ನೀ ಏನ ಮಾಡ್ತಿ? ಊರಿಗೆ ಹೋದ್ರ ಎಲ್ಲರ ಬಾಯಿಯೊಳಗೂ ಇದೇ ವಿಷಯ, ಅಲ್ಲಿ ಎಲ್ಲಾ ತಿಳಿಯುತ್ತೆ ಅಂದ ಡಿಂಗಣ್ಣ. ಗೌಡಪ್ಪ ನನಕಡೀಗ ನೋಡಾಕತ್ತ್ಯಾನ, ಕೈ ಬಿಡು, ಅದೋ ಕಣ್ಣ ಪಿಳಕಸದೆ ನೋಡ್ತಾನ. ಅವನ ಕಲ್ಲಿಮೀಸಿ ನೋಡಿ

ಹೆದರಿಕೆ ಆಗುತ್ತೆ. ಅವರ ವಿಷಯ ನಿನಗ ಗೊತ್ತಿಲ್ಲ ಅಂದ. ಅದಕ್ಕೆ ಅಲ್ಲೇನಪ್ಪ ನಿನಗ ಗಂಟ ಬಿದ್ದಿರೋದು, ನೀನಾರ ಚಣ್ಣದಾಗ ಹೇತಕೊಳ್ಳಾಕತ್ತಿ ಎಂದೆ. ಇಲ್ಲ ಮಹಾರಾಯ, ಅವರು ಭಾರಿ ಕೆಟ್ಟ ಜನ. ಅವರ ಸುದ್ದಿ ಯಾಕೆ ಅಂತ ದುಗ್ಗತ್ತಿ ದುರ್ಗವ್ವನ ಕಡಿ ಕರೆದುಕೊಂಡು ಹೋದ. ಆ ಗೌಡ ಅಂದ್ರ ಚಂದ್ರಗೌಡ, ಅವರಪ್ಪ ಹನಮನಗೌಡ, ಅವರಜ್ಜ ವೀರಭದ್ರಗೌಡ. ಯಾರೋ ಅವರ ಹೊಲ್ದಾಗ ಕಳ್ಳತನ ಮಾಡಿದರೆ, ಸೊಪ್ಪಿನ ದಂಟನ ಬಣವಿ ಯೊಳಗ ಜೀವಂತ ಹಾಕಿಸಿ ಬೆಂಕಿ ಹತ್ತಿಸಿದ ನೀಚ ಜನ ಅವರು. ಬೇಕಾರ ಮನಿ ಮುರಿಯೋ ಕೆಲಸ ಮಾಡಬಹುದು ? ಬಡವರು ಮಾಡೋ ಹಂಗಿಲ್ಲಾ. ನೀನs ನೋಡು– ಪದ್ದಿ, ರಾಮಿ, ಲಚ್ಮಿ ಒಬ್ರ–ಇಬ್ರ, ನಮ್ಮೂರ ಎಲ್ಲಾ ಹೆಣ್ಣುಗಳ ರುಚಿ ನೋಡ್ಯಾನ. ಅವನ ಹೆಂಡತಿ ಮತ್ತೇನು ಮಾಡ್ತಾಳ ? ಅವಳನ್ನ ನೋಡಬೇಕಿತ್ತು ಡಿಂಗಣ್ಣ, ಕರ್ಪೂರದ ಗೊಂಬೆ ಇದ್ದಂಗ ಇದ್ಲು. ತೆಳ್ಳಗ ಬೆಳ್ಳಗ– ಅಂತ ಹೆಣ್ಣನ್ನ ನಾ ಕನಸಿನೊಳಗೂ ನೋಡಿಲ್ಲಾ ಬಿಡು. ಚಂದ್ರನ ತಂಗಿ ಮಂಜಿ, ಸುಶೀಲನೂ ಬಾಳ ಚಲುವಿಯರು. ನಾವು ಅವರ ಕೆಲಸಕ್ಕಂತ ಹೋದಾಗ ನೀರು, ಮಜ್ಜಿಗಿ ಕೊಡ್ತಿದ್ರು. ಅವರಪ್ಪ ಹನುಮನಗೌಡ ಅದನ ಕಂಡು, ಮನಿಮುಂದ ಹಾದು ಹೋಗೋದನ್ನ ಬಿಡಿಸಿದ. ಅವರ ಮನಿ ವಾಡೆ ಹತ್ತಿರ ಯಾರಾದರೂ ನಮ್ಮ ಹುಡುಗಿರು ಕಂಡರೆ ಹರಿಹಾಯ್ತಿದ್ದ. ಈಗ ಮನಿ ಯಾರು ಅಡ್ಯಾಡಬಾರದು ಅಂತ ದೊಡ್ಡದೊಂದು ನಾಯಿ ಸಾಕಿದ್ದಾನೆ ಎಂದು ಯಾವುದೋ ಹಳೆ ದೊಗಲು ವಿಷಯುಗಳನ್ನ ಪೋಣಿಸಿ-ಪೋಣಿಸಿ ಹಳೆಯ ವಿಚಾರಗಳಿಗೆ ಹೊಸ ಚಾಲನೆ ಕೊಡಲು ಹವಣಿಸಿ, ಹೊಸ ವಿಚಾರವಾದ ಚಂದ್ರೇಗೌಡನ ಹೆಂಡತಿ ಜಾನಕಿ ಓಡಿ ಹೋದದ್ದನ್ನ ಮಾತ್ರ ಹೇಳಲೇ ಇಲ್ಲ.

ಪಕ್ಕೀರಣ್ಣ, ಸಾಕು ನೀ ಹೋಗಿನ್ನ. ನಾಲ್ಕಾಣಿ ಕೊಟ್ಟು ಸುರು ಮಾಡಿಸಿದ್ರೆ ಎಂಟಾಣಿ ಕೊಟ್ಟು ನಿಲ್ಲಿಸುವವರೆಗೆ ನಿಲ್ಲಿಸೋ ಮನುಷ್ಯನೇ ಅಲ್ಲಾ ನೀ ಅಂದೆ. ಅಷ್ಟೇ ಬೇಕಾಗಿತ್ತು– ಎದ್ದು ಚೀಲ ಮುದರಿ ಎಡಗೈ ಬಗಲಾಗ ಸಿಗಸಕೊಂಡು, ಲುಂಗಿಪಂಜಿ ಮೇಲೆತ್ತಿ ಕಟ್ಟಿ ಹೊರಟ. ಎಳದು ನೆಲಕ್ಕ ಒಗಿಬೇಕನಸ್ತು. ಕೈ ಹಿಡದು ಜಗ್ಗಿ ಕುಂದ್ರಿಸಿ ನೇರ ವಿಷಯಕ್ಕೆ ಬಾ ಅಂದೆ. ಕುರಬರ ಚೌತಿ ಲಿಂಗಾಯ್ತರ ಹುಡುಗ ಪಂಚನ್ನ ತಗೊಂಡು ಹೋಗಿದ್ದು

ಯಾರೋ ಬಸ್ಸ ತುಂಬ ಮಾತಾಡ್ಕೊಂತಿದ್ರು. ಬಾಡಿ ಕಬ್ಬಿನ ಹೊಲದಾಗ ಓದಾಕ ಬರದ ಅಪ್ಪಗ ನಂಬಿಸಿ ಅದೇನು ಮಾಡಿದ್ರೊ, ನಾನು ಹರೆದ ವಯಸ್ಸಿಗ ಬರೋವರಿಗ ಅವರ ಮನಿ ದನಾ ಕಾದೀನಿ ಅಂದ. ಅದಕ್ಕ "ನನಗ ಗೊತ್ತು, ಹೇಳು" ಎಂದೆ. ಎಂಥ ಗಂಡಸಿನ ನಿದ್ದೆಯನ್ನು ಕೆಡಿಸೋ ರೂಪವತಿ ಜಾನಕಿ. ಚಂದ್ರು ಬರಿ ಕೂಲಿ ಹೆಂಗಸರ ಸವಾಸ ಮಾಡ್ತಿದ್ದ. ಒಂದ ದಿನ ನಾನು ಅವನ ದನದ ಕೊಟಗಿಂವೊಳಗ ಮಲಗಿದ್ದೆ. ಆ ಹುಡುಗಿ ಜಾನಕಿ, ಗೌಡನ ಮ್ಯಾಲಬಿದ್ದು ಹೊರಳ್ತಾ ಅವನ ಸಂಗಕ್ಕ ಆತುರಪಡತೊಡಗಿದಳು ಅಂದ. ಅಲ್ಲೋ, ನೀ ಅಷ್ಟೊತ್ತಿನೊಳಗ ಯಾಕ ಹೋಗಿದ್ದೆ ಅಂದೆ. ಹಾಳು ಚಟ, ನಾನು ಆವಾಗ ಮದವಿ ಆಗಿರಲಿಲ್ಲಾ. ನನಗಾರ ಮೈ ಕಾವು ವಿಪರೀತ ಹೆಚ್ಚಾಗತೊಡಗಿತು ಅಂದ. ಹೂಂ ಸಾಕು, ನೀನು ನಿನ್ನ ದನ್ನ ನಿಲ್ಲಿಸು, ಚಂದ್ರನ ಸುದ್ದಿಗ ಬಾ ಅಂದೆ. ಅದೇ ಅವನು ಬೇರೆ ಹೆಣ್ಣಿನ ಸವಾಸ ಹೊಂದಿದರ, ಅವಳು ಎಷ್ಟು ದಿನ ಹೀಗೆ ಸುಮ್ಮನಿದ್ದಾಳು ? ಮಾಂಸ ತಿಂದು ತನ್ನ ರಟ್ಟಿ ಮುರದು ದುಡಿತಿದ್ದ, ಮೈ ಬೆಳೆಸಿಕೊಂಡಿದ್ದ ಮಾದರ ಹುಡುಗನ್ನ ನೋಡಿದ್ಲು. ಬಲಿ ಬೀಸಿ, ಅದೇನು ಮೋಡಿ ಮಾಡಿದಳೋ ಏನೋ, ತಿಂಗಳ ಹಿಂದ ಕೊರಚರ ಹಟ್ಟಿ ಸುಂಕನ ಕಡಿ ಜನ ಊರಿಗ ಬಂದು, ಹಂಚಿನ ಮನಿ ಚೆನ್ನನ ಮನಿ ನುಗ್ಗಿದರು ಅಂತ ಜನ, ಕಳ್ಳರನ್ನ ಹಿಡಿಯಾಕ ನಾಕು ದಿಕ್ಕಿಗೂ ಓಡಿದರು. ಅದೇ ಸಮಯ ಕಾಯುತ್ತಿದ್ದ ಇಬ್ಬರು, ಬೆಳದಿದ್ದ ಜೋಳದ ಹೊಲಗಳೊಳಗೆ ಮರೆಯಾಗಿ ಹೋದವರು ಪತ್ತೆ ಇಲ್ಲ ಎಂದು ನನ್ನ ಮರ್ಜಿ ಕಾಯದೇ ಪಕ್ಕೀರಣ್ಣ ಜಾಗ ಖಾಲಿ ಮಾಡಿದ್ದ.

ನಾನು ಅವನನ್ನ ತಡಿಲಿಲ್ಲಾ.... ಆದರೆ ನನ್ನ ಮನಸಿನಲ್ಲಿಯ ಕುತೂಹಲ-ಕಾಕತಾಳೀಯ ಭಾವನೆಯನ್ನ ಮಾತ್ರ ತಡೆಯಲಾಗಲಿಲ್ಲಾ. ಇವರೆಲ್ಲಾ ಹಿಂಗ ಯಾಕ ಓಡಿ ಹೋದರು ? ಜಾತಿ-ಧರ್ಮದ ಗೊಂದಲ, ಶ್ರೀಮಂತ-ಬಡತನ-ದಲಿತ ಎಂಬ ಶ್ರೇಣಿಕೃತ ವ್ಯವಸ್ಥೆ ಎಲ್ಲಿವರೆಗೆ ಬೆಳೆಯುತ್ತದೆಯೋ ಈ ಗೌಪ್ಯ ಗುಪ್ತವಾಗೇ ಆಸ್ಫೋಟಗೊಳ್ಳುತ್ತದೆ.

ಕಬ್ಬಿನ ತೋಟದಾಗ ಕಬ್ಬು ಕದಿಯೋ ಮುಂದ ಸಿಕ್ಕದಕ್ಕ, ಹೆಡಮುರಗಿ ಕಟ್ಟಿ ತಂದು ದಂಡ ಕಟ್ಟಿ, ಹುಡಗಿನ ಬ್ಯಾರೆ ಹುಡಗಗ ಕೊಟ್ಟು ಮದ್ವಿ

ಮಾಡಿದ್ರಂತ. ಹೈಸ್ಕೂಲಿನ ಕನಕಪ್ಪ ಮೇಷ್ಟ್ರು, ಪತ್ನೆ ಕ್ಲಾಸಿನ ಚೆಂದ್ರಿನ ಕರ್ಕೊಂಡು ಊರಬಿಟ್ಟು ಹನ್ನೆರಡ ವರ್ಷ ಆದ್ರೂ ಸುದ್ದಿ ಇಲ್ಲಾ. ಯಾರೋ ಹೇಳ್ತಿದ್ರು– ಚೆಂದ್ರಿ ಮನಿ ಮಂದಿ ಸೇರಿ ಹುಡುಕಿ ಇಬ್ಬರನ್ನೂ ಕೊಂದು ಅಲ್ಲೇ ತುಂಗಭದ್ರೆಯೊಳಗ ಎಸದು ಬಂದಾರು ಅಂತ. ಹದಿನಾರು ವರ್ಷದ ಪ್ರೇಮ ವಿಷ ಕುಡ್ದು ಸಾಯಾಕ ಹೊಂಟದ್ದು, ಅವಳ ತಮ್ಮ ನೋಡಿ ಬದಕಿಸಿದ್ದು– ಒಂದು ಬಿಡಿಸಲಾಗದ ಸಮಸ್ಯೆಯಾಗಿ ಉಳಕೊಂಡಿದೆ. ರೇಖಾ ನೇಣು ಹಾಕ್ಕೊಂಡು ಸತ್ತಿದ್ದು ಊರ ತುಂಬ ದೊಡ್ಡ ಸುದ್ದಿ. ಗಂಡ ಸಾಮು ಕೊಡದ ಸುಖಕ್ಕ ಅವನ ತಮ್ಮ ಕೊಟ್ಟಿದ್ದು, ಅವನ ಹತ್ರ ಸುಖ ಕಾಣ್ತಾ ಗಂಡನ ಮರತಿದ್ಕ, ಗಂಡ ಕೊಂದು ನೇಣಹಾಕ್ಯಾನಂತ ಜನ ಸುದ್ದಿ ಮಾಡಿದ್ರು. ಸುದ್ದಿಗಳು ಬಾಯಿಯಿಂದ ಬಾಯಿಗೆ ನಿಮಿಷದೊಳಗ ಹಬ್ಬಿ ಗಬ್ಬೆಬ್ಬಿಸುತ್ತಾವ.

ವಿಚಾರದಿಂದ ಹೊರಗ ಬಂದಾಗ ಪಕ್ಕೀರಣ್ಣನ ಸಿಗರೇಟು ಮುಗಿದಿತ್ತು. ಪಕ್ಕೀರಣ್ಣ ವಿಚಿತ್ರ ಮನುಷ್ಯ. ಅವನ ಬಾಯಿ ನಾರುತ್ತಿತ್ತು. ಬಟ್ಟೆ–ಮೈ ಯಾವುದೂ ಸ್ವಚ್ಛ ಇಲ್ಲಾ, ಯಾವಾಗ ಮೈ ತೊಳಿತಿದ್ನೋ ಮಹರಾಯ. ಆದ್ರ ಅವನು ಸಿಗರೇಟು ಸೇದುವ ಧಾಟಿ ಮಾತ್ರ ವಿಚಿತ್ರವಾಗಿತ್ತು. ಸೇದುತ್ತಾ-ಸೇದುತ್ತಾ ಅದರಲ್ಲೇ ಲೀನನಾಗಿರೋ ಹಂಗ ಅನಿಸತಿತ್ತು. ಅವನು ಸಿಗರೇಟ್ ಸೇದುವ ಭಂಗಿ ನೋಡ್ತಿದ್ದ ನನಗೂ ಸಿಗರೇಟ್ ರುಚಿ ನೋಡಬೇಕು ಅನ್ನಿಸ್ತು.

ಪಕ್ಕೀರಣ್ಣ ಮತ್ತೆ ಪೀಠಿಕೆ ಹಾಕತೊಡಗಿದ. ಬಡವರ ಸುದ್ದಿಗಳಿಗೆ ಬೆಲೆ ಇರೋದಿಲ್ಲಾ. ಸಾಮಾನ್ಯ ಮನುಷ್ಯ ಕೂಡ ಮಾತಾಡುತ್ತಾನೆ. ಅದೇ, ಹಣ ಇರೋ ಶ್ರೀಮಂತರ ಸುದ್ದಿ ಮಾತಾಡಾಕ ಜನ ಹೆದರ್ತಾರ ಅನಿಸಿತು. ಗೌಡರ ಸೊಸಿ, ಜಾನಕಿ ಹದನಾರು ವರ್ಷದವಳಿದ್ದಾಗ ಮದ್ವಿ ಆಗಿತ್ತು ಅಂತ ಸುರು ಮಾಡ್ದ. “ಅರೇ, ಅವಳಿಗ ಮದ್ವಿ ಆದಾಗ ಹದಿನಾರು ವರ್ಷ ಅಂತ ನಿನಗ ಹ್ಯಾಂಗ ಗೊತ್ತು” ಎಂದೆ. ಆ ಚಂದ್ರನ ಮದ್ವಿ ಮಾಡಿದವರು ನಾವು. ಹಗಲು–ರಾತ್ರಿ ದುಡಿದು, ಅವರ ಸಾವುಕಾರತನಕ್ಕ ಅರ್ಧ ನಾವು ಕಾರಣರು. ನಮ್ಮಪ್ಪ ತಗೊಂಡ ಐದುರೂಪಾಯಿ ಸಾಲ ಊಟದಷ್ಟೇ ಮಹತ್ವದ ದೈಹಿಕ ಸುಖಕ್ಕೆ ಯಾವ ರಾಜನ ಅಪ್ಪಣೆ, ದೊಣ್ಣೆನಾಯಕನ ಮುಲಾಜು ಬೇಕಾಗೋದಿಲ್ಲಾ. ಇಷ್ಟವಾದ ಗಂಡಿಗೆ ಇಷ್ಟಪಡೋ ಹೆಣ್ಣು– ನೂರ ಜನರ ಕಣ್ಣು

ತಪ್ಪಿಸಿ, ಸಂಧಿಸಿ ಸುಖ ಪಡಿತಾರ. ಜನ ಇದರ ಕುರಿತು ಮಡಿ ಮಾಡೋದನ್ನ ಬಿಟ್ಟು, ತಮ್ಮತನಕ್ಕಾಗಿ ಬಡದಾಡೋದನ್ನ ಬಿಡೋವರಿಗ, ಯಾರ ಹೆಂಡಿರು ಮತ್ತ್ಯಾರ ಜೊತೆಗೆ– ಎಲ್ಲಿಗೆ ಓಡಿ ಹೋಗುತ್ತಾರೋ ಎನ್ನುತ್ತಿದ್ದಂತೆ, ನಾನು ಹೋಗಬೇಕಾದ ಬಸ್ಸು ಬಂದಿದ್ದರಿಂದ ಓಡಿದೆ. ಜನರ ನಡುವೆ ಸೇರಿಕೊಂಡು ನಮ್ಮವರನ್ನ ಸೇರಿಕೊಳ್ಳಲು.

□

ಕಂಪನಿ – ಕಂಬನಿ

ಊರೂರು ಸುತ್ತಾಡಿ ಅರೆ ಹೊಟ್ಟೆ ಉಂಡು, ಎಲ್ಲೋ ಮೂಲೆಯಲ್ಲಿ ಕಾಗೆ ನಿದ್ದೆ ಮಾಡಿ ಬಂದಿದ್ದ ನಾಟಕದ ಕಂಪನಿಯುವರಿಗೆ ಹುಬ್ಬಳ್ಳಿ ಸ್ವರ್ಗವೆನಿಸ ತೊಡಗಿತು. ಕಂಪನಿ ಮ್ಯಾನೇಜರ್ ರಾಜಣ್ಣ ಸ್ಟೇಜಿನ ಮೇಲೆ ನಿಂತುಕೊಂಡು– "ಸೈಡ್‌ಲೈಟ್ ಆ ಕಡೆ ಹಾಕು, ಸೀನರಿ ಇಲ್ಲಿ ತಾ, ಫೋಕಸ್ ಲೈಟು ತಿರುಗಿಸಿ ಬೆಳಕು ಹೆಚ್ಚು ಮಾಡು ಎಂದು ರಂಗ ಪರಿಕರಗಳ ವ್ಯವಸ್ಥೆ ಮಾಡುತ್ತಿದ್ದ. ಉಮಾ, ಶೋಭ, ಸರೋಜ ತಮ್ಮ ಸನ್ನಿವೇಶಗಳ ಮಾತುಗಳನ್ನು ನೋಡು ತ್ತಿದ್ದರು. ಕುಡಚಿಯಿಂದ ಹುಬ್ಬಳ್ಳಿಗೆ ಬಂದ ಕಂಪನಿ, ಹುಬ್ಬಳ್ಳಿಯಲ್ಲಿ ಪ್ರೇಕ್ಷಕರಿಗೇನು ಕಡಿಮೆ ಇಲ್ಲಾ ಎಂಬ ನಿರ್ಧಾರಕ್ಕೆ ಬಂದಿತ್ತು. ಕುಡಚಿ ಮಾಯವ್ವನ ಜಾತ್ರೆಗೆ ಹಾಕಿದ್ದ ನಾಟಕ ಕಂಪನಿ ಒಂದೆರಡು ಷೋ ಚೆನ್ನಾಗಿ ನಡೆಯಿತು. ಜಾತ್ರೆಯಲ್ಲಿ ಟಿಕೇಟು ಪಡೆಯದೇ, ಪೋಲಿಸರಿಗೂ ಮಾತು ಕೇಳದೆ ನುಗ್ಗಿದ ಜನ, ನಟಿಯರನ್ನ ಕಂಡು ವ್ಹಾ, ವ್ಹಾ ಎಂದು ನಾಟಕದ ದೃಶ್ಯಗಳನ್ನೇ ಹಾಳು ಮಾಡಿದ್ದರಿಂದ ಆರ್ಥಿಕವಾಗಿ ಲಾಭ ಗಳಿಸಲಾಗಲಿಲ್ಲಾ. ಸಿಂಗಾರು, ಮೂಲೆಯಲ್ಲಿ ಬಿದ್ದಿದ್ದ ಅರ್ಧ ಸಿಗರೇಟನ್ನು ಎತ್ತಿಕೊಂಡು ಬೆಂಕಿ ಗೀರಿ, ಹೊಗೆ ಉಗುಳತೊಡಗಿದ. ರಾಜಪ್ಪನನ್ನ ನೋಡಿದವನೇ ಟೇಬಲ್ಲಿಗೆ ತಿಕ್ಕಿ ಕಿಸೆಗೆ ಹಾಕಿಕೊಂಡ.

ರಾತ್ರಿ ಹತ್ತು ಗಂಟೆಯಾಗಿತ್ತು. ಹಾರ್ಮೋನಿಯಂ ಮೇಷ್ಟ್ರು ಮಲ್ಲೇಶಿ, ಇದ್ದ ಹಳೆ ಹಾರ್ಮೋನಿಯಂ ಮಾರಿ, ಹೊಸದಾಗಿ ಬಂದಿದ್ದ ಕ್ಯಾಸಿಯೋ ತಂದು ಸುತ್ತಲ ಹಳ್ಳಿಗಳಿಗೆ ಕ್ಯಾಸಿಯೋ ಮಲ್ಲೇಶಿ ಅಂತ ಹೆಸರುವಾಸಿಯಾಗಿದ್ದ. ಆದರೆ ನಾಟಕ ಕಂಪನಿಗೆ ಪ್ರಯೋಜನವಿರಲಿಲ್ಲಾ. ಅವನೊಬ್ಬನಿಗೆ ದುಡಿಮೆ

ಇದ್ದಿದ್ದರಿಂದ, ಮಲ್ಲೇಶಿ ಕಂಪನಿಯಲ್ಲಿ ದಿಮಾಕಿನಿಂದ ಇರತೊಡಗಿದ. ಸಿಂಗಾರು ಮಲ್ಲಣ್ಣ, ಮಲ್ಲೇಶಣ್ಣ ಎಂದು ಅವನ ಸುತ್ತಾ ತಿರುಗಾಡುತ್ತಿದ್ದ. ರಂಗದ ಮೇಲೆ ನಾಟಕ ಪ್ರಾರಂಭಗೊಂಡಾಗ ಪ್ರೇಕ್ಷಕರು ಸಿಳ್ಳು, ಗದ್ದಲ ಮಾಡಿ ಹಾಡು, ಮಾತುಗಳು ಸರಿಯಾಗಿ ಕೇಳದೆ, ದ್ವಂದ್ವಾರ್ಥದ ಮಾತುಗಳಿಗಾಗಿ ಕಾತರರಾಗಿ– ನಟಿಯರು ಬಂದೊಡನೆ ಇಲ್ಲ–ಸಲ್ಲದ ಮಾತುಗಳು, ಇಡೀ ಸನ್ನಿವೇಶವೇ ಗೌಜಲು–ಗೌಜಲು. ನಟಿಯಾದವಳು ತನ್ನ ಕಳಪೆ ಅಭಿನಯ ದಿಂದ ತನ್ನ ಮುಂದೆ ಕುಳಿತಿರುವ ಪ್ರೇಕ್ಷಕ ಮಹಾಶಯರಿಗೆ ಹಬ್ಬವನ್ನುಂಟು ಮಾಡಿದರೆ ಮಾತ್ರ ಇಡೀ ಕಂಪನಿಯವರ ಹೊಟ್ಟೆಗೆ ಹಿಟ್ಟು. ಇಲ್ಲದಿದ್ದರೆ ಗೋಣಿತಟ್ಟು ಹಾಸಿಕೊಂಡು, ತಣ್ಣೀರು ಬಟ್ಟೆ ಹೊಟ್ಟೆ ಮೇಲೆ ಹಾಕಿಕೊಂಡು ಮಲಗುವುದೇ. ಶೋಭ, ಉಮಾ, ಸರೋಜಾ ಒಬ್ಬರಿಗಿಂತ ಒಬ್ಬರು ಪ್ರೇಕ್ಷಕರ ಗಮನ ಸೆಳೆಯಲು ಸೆಣಸಾಡುತ್ತಿದ್ದರು. ಶೋಭ ರಂಗದ ಮೇಲೆ ಚಾಕಚಕ್ಯತೆ ಯಿಂದ ನಟನೆಯಲ್ಲಿ ಲೀನಳಾಗಲು ಹವಣಿಸಿ, ಸಾಧ್ಯವಾಗದೇ ತಡವರಿಸುತ್ತಾ ಬಾಯಿಗೆ ಬಂದ ಡೈಲಾಗನ್ನ ಹೇಳುತ್ತಾ ಸನ್ನಿವೇಶಕ್ಕೆ ವಿರುದ್ಧವಾದ ಡೈಲಾಗು ಹೇಳಿ, ಪ್ರೇಕ್ಷಕರು ನಕ್ಕಾಗ, ತನ್ನ ಅಭಿನಯಕ್ಕೆ ಎಂದು ತಿಳಿದುಕೊಂಡಿದ್ದಳು. ಶೋಭಾಳ ಮನಸ್ಸಿನಲ್ಲಿ ಏಳುತ್ತಿದ್ದ ಕೋಲಾಹಲ ತಣ್ಣಗಾಗಿರಲಿಲ್ಲಾ. ಪ್ರೇಕ್ಷಕರ ಕಡೆ ನೋಡಿದ ಶೋಭಳಿಗೆ, ಸಿಂಗಾರು ಜನರ ನಡುವೆ ಯಾರನ್ನೋ ಹುಡುಕುತ್ತಿರುವುದು ಕಂಡಿತು. ಒಂದು ಘಳಿಗೆ ಎಲ್ಲವನ್ನೂ ಮರೆತು ಮೌನಳಾಗಿ ನಿಂತುಬಿಟ್ಟಳು. ಸಹಕಲಾವಿದ ಮುಂದಿನ ಡೈಲಾಗಿಗಾಗಿ ಪರದಾಡತೊಡಗಿದ. "ಹೇಳು ಪ್ರಿಯೆ, ಈ ಮೌನವೇಕೆ" ಎಂದು ಸನ್ನಿವೇಶ ದಿಂದ ಪಾರುಮಾಡಿದ.

ನಾಟಕ ಮುಗಿದು ಅರ್ಧ ಗಂಟೆಯಾಗಿತ್ತು. ಟೆಂಟು ಖಾಲಿಯಾಗಿತ್ತು. ಎಲ್ಲರೂ ತಮ್ಮ–ತಮ್ಮ ಪಾತ್ರ, ಅಭಿನಯದ ಕುರಿತು ಮಾತನಾಡುತ್ತಿದ್ದರು. ರಾಜಣ್ಣ ಶೋಭಾಳ ಹತ್ತಿರ ಬಂದು ಜೋರಾಗಿ ಅವಳ ನಿರ್ಲಕ್ಷ್ಯದ ಕುರಿತು ಹೇಳತೊಡಗಿದ. ಶೋಭ ಮೌನಳಾಗಿ ಅವನು ಹೇಳಿದ್ದನ್ನ ಕೇಳಿಸಿಕೊಂಡಳು. ಮರುಮಾತನಾಡಿದರೆ ಕಂಪನಿಯಿಂದಲೇ ಹೊರಗೆ ಹಾಕುವ ಬೆದರಿಕೆ ಹಾಕು ತ್ತಾನೆ. ಕಂಪನಿ ಬಿಟ್ಟರೆ ತನ್ನ ಚಿಕ್ಕ–ಚಿಕ್ಕ ಮಕ್ಕಳನ್ನು ಕಟ್ಟಿಕೊಂಡು

ಹೋಗುವುದು ಎಲ್ಲಿಗೆ ? ಎಂಬ ಪ್ರಶ್ನೆ ಕಾಡತೊಡಗಿದ್ದರಿಂದ ಮರುಮಾತ ನಾಡಲಿಲ್ಲಾ. ಮುಖಕ್ಕೆ ಹಚ್ಚಿಕೊಂಡಿದ್ದ ಮೇಕಪ್ ತೆಗೆಯಲೆಂದು ಕನ್ನಡಿಯ ಮುಂದೆ ಕುಳಿತಿದ್ದಳು. ಕನ್ನಡಿಯನ್ನೊಮ್ಮೆ ನೋಡಿದಾಗ, ಮುಖದ ಮೇಲೆ ಮೂಡಿದ ನೂರಾಎಂಟು ಗೆರೆಗಳು ಎದ್ದುಕಾಣತೊಡಗಿದವು. ಮೇಕಪ್ ತೆಗೆಯುವ ಮನಸ್ಸಾಗಲಿಲ್ಲಾ. ಹಾಗೇ ವಿಚಾರ ಮಾಡುತ್ತಾ ಕುಳಿತುಬಿಟ್ಟಳು. ಸಿಂಗಾರು ಹಿಂದಿನಿಂದ ಬಂದವನೇ– "ಏ, ನೀ ಇಲ್ಲದಿಯೇನು" ಎಂದ. ಮುಂದ ಅವನು ಹೇಳಬಹುದಾದದ್ದನ್ನು ನಿರೀಕ್ಷಿಸಿದ್ದಳು. "ಹುಬ್ಬಳ್ಳಿ ಸಾವುಕಾರರು ನಿನ್ನ ನೋಡಾಕ ಬಂದಾರ" ಎಂದ. ಶೋಭಳ ಮುಖದ ಮೇಲಿನ ಬಣ್ಣ ಕಳಚಿಕೊಂಡ ಹಾಗಾಯಿತು. ಬೆವತು ನೀರಾಗತೊಡಗಿದಳು. ತನ್ನ ಬದುಕಿನ ಪ್ರತಿಕ್ಷಣಗಳು ಸಾಯುತ್ತಿವೆ ಎನಿಸತೊಡಗಿತು. ಒಲ್ಲದ ಮನಸಿನಿಂದ ಪ್ರೇಕ್ಷಕರ ಮುಂದೆ ಅರೆ-ಬರೆ ದೇಹ ಪ್ರದರ್ಶಿಸಿ, ಪ್ರದರ್ಶಿಸಿ ತನ್ನತನವನ್ನು ಕಳೆದು ಕೊಂಡು ತನಗೂ, ಜೀವಪಿಲ್ಲದ ಗೊಂಬೆಗೂ ವ್ಯತ್ಯಾಸವಿಲ್ಲಾ ಎನಿಸಿತ್ತು.

ತನ್ನ ತಾಯಿಗಿಂತ ಭಿನ್ನ ಬದುಕನ್ನ ಆಯ್ಕೆ ಮಾಡಿಕೊಳ್ಳಲು ಪ್ರಯತ್ನಿ ಸಿದ್ದಳು. ಮದುವೆ, ಸಂಸಾರ ಎಂಬೆಲ್ಲಾ ಬಣ್ಣ-ಬಣ್ಣದ ಕನಸು ಕಂಡಿದ್ದಳು. ಅವಳ ತಾಯಿ ಶಶಿಕಲಾ ಅನಾಥೆ. ಯಾರೋ ನಾಟಕ ನೋಡಲು ಬಂದವರು, ನಾಟಕ ನೋಡಿದ ನಂತರ ಎಂಟು ವರ್ಷದ ಶಶಿಕಲಾಳನ್ನು ಟೆಂಟಿನಲ್ಲೇ ಬಿಟ್ಟು ಹೋಗಿದ್ದರಂತೆ. ಛಳಿಯಲ್ಲಿ ಮುದುಡಿಕೊಂಡು ಮಲಗಿದ ಶಶಿಕಲಾ, ಮುಂಜಾನೆ ಎಚ್ಚರಗೊಂಡಾಗ ಅವಳಪ್ಪ, ಚಿಕ್ಕಮ್ಮ ಬೇಕೆಂದೇ ಬಿಟ್ಟು ಹೋಗಿ ದ್ದಾರೆ ಎಂಬುದು ಗೊತ್ತಾಗಿ, ನಿಜವನ್ನ ಮರೆಮಾಚಿ, ತನಗೇನು ಗೊತ್ತಿಲ್ಲಾ ಎಂದು ಹೇಳಿದಳು. ಪೋಲಿಸರಿಗೆ ಕೊಡಲು ಕಂಪನಿ ಮಾಲಿಕರು ತಿಳಿಸಿದಾಗ, ಸ್ತ್ರೀ ಪಾತ್ರ ಮಾಡುತ್ತಿದ್ದ ಮುನಿಯಪ್ಪ– ಬೇಡಾ, ಮುಂದೆ ಸ್ತ್ರೀ ಪಾತ್ರ ಮಾಡುವ ಹುಡುಗಿಯಾದಾಳು ಎಂದು ಮಾಲಿಕರಿಗೆ ಹೇಳಿದಾಗ, ಚಿಕ್ಕ ಮಗುವಿನ ಪಾತ್ರಕ್ಕೆ ಆಯ್ಕೆ ಮಾಡಿಕೊಂಡು ಕಂಪನಿಯಲ್ಲೇ ಇಟ್ಟುಕೊಂಡರು. ಮುಂದೆ ಅದೇ ಸಣ್ಣ ಹುಡುಗಿ, ಕಂಪನಿಗೆ ದೊಡ್ಡ ಬಂಡವಾಳ ಆದಾಳು ಎಂಬುದು ಯಾರಿಗೂ ಗೊತ್ತಿರಲಿಲ್ಲಾ. ವಯಸ್ಸಿಗೆ ಬಂದ ಶಶಿಕಲಾ ರಂಗದ ಮೇಲೆ ಬಂದರೆ, ಪ್ರೇಕ್ಷಕರು ಮೂಗಿನ ಮೇಲೆ ಬೆರಳಿಟ್ಟು ಅವಳ ಅಭಿನಯ,

ಹಾಸ್ಯ ನೋಡಿ ಬೆರಗಾಗಿ, ಸುತ್ತಮುತ್ತೆಲ್ಲಾ ಶಶಿಕಲಾ ಹೆಸರುವಾಸಿಯಾಗ ತೊಡಗಿದಳು. ಅವಳ ಅಭಿನಯ ಹಾಗೂ ಜನಪ್ರಿಯತೆಗೆ ಮಾರು ಹೋದ ಮಾಲಿಕನ ಮಗ ಬಸವ, ಮದುವೆಯಾಗುವುದಾಗಿ ಅವಳನ್ನ ಒಲಿಸಿಕೊಂಡು, ಅವಳಿಂದ ಸಿಕ್ಕ-ಸಿಕ್ಕ ಪಾತ್ರಗಳನ್ನು ಮಾಡಿಸಿಕೊಂಡು ಪ್ರೇಮದ ನಾಟಕವಾಡಿದ ಫಲವಾಗಿ ಶೋಭ ಹುಟ್ಟಿದಳು. ಶೋಭಳನ್ನ ತನ್ನ ಮಗಳೆಂದು ಒಪ್ಪಿಕೊಳ್ಳಲು ನಿರಾಕರಿಸಿ, ಶಶಿಕಲಾಳ ಮೇಲೆ ಕಳಂಕದ ಮಸಿ ಎರೆಚಿ ಅವಳನ್ನು ದೂರ ಮಾಡಿದಾಗ, ಶಶಿಕಲಾ ಕಂಪನಿ ಬಿಡಲು ಹವಣಿಸಿದಳು. ಆದರೆ ಹೋಗುವುದಾದರೂ ಎಲ್ಲಿ ? ಬಾಲ್ಯದಿಂದಲೂ ಕಂಪನಿಯೊಂದಿಗೆ ಊರೂರು ತಿರುಗಿ, ಹೊರಜಗತ್ತಿನ ಭೀಕರತೆಯ ಪರಿಚಯವಿಲ್ಲದೆ ಬದುಕು ದುಸ್ತರವೆನಿಸತೊಡಗಿತು. ಸಾಕಷ್ಟು ಜನ ಅಭಿಮಾನಿಗಳು ದೂರದಿಂದ ಗೌರವಿಸುತ್ತಾರೆ. ಆದರೆ ಹತ್ತಿರ ಬಂದಾಗ ಮುಖಕೊಟ್ಟು ಮಾತನಾಡುವುದಿಲ್ಲಾ. ಕಲಾವಿದೆ ರಂಗದ ಮೇಲಿದ್ದಾಗ ಮಾತ್ರ. ಬಣ್ಣ ಬಳಿದುಕೊಂಡು ಸ್ಟೇಜಿನ ಮೇಲೆ ಕುಣಿದಾಗ ನೋಡಿ ವಾ, ವಾ ಎನ್ನುವ ಜನ, ಹೊರಗೆ ಬಂದಾಗ ಸಂಶಯ ದೃಷ್ಟಿಯಿಂದ ನೋಡುತ್ತಾರೆ. ಅವರ ಮನಸ್ಸಿನಲ್ಲಿ ಶಶಿಕಲಾ ಒಂದು ಹೆಣ್ಣಾಗಿ, ಮನಸಿನ ಕಣ್ಣಿಗೆ ಕಾಮದ ಕಾವು ಕಾಡತೊಡಗುತ್ತದೆ ಎಂಬ ವಾಸ್ತವ ಸತ್ಯವನ್ನು ಅರಿತುಕೊಂಡು, ಕಂಪನಿಯಲ್ಲಿ ಏನೂ ನಡೆದಿಲ್ಲಾ ಎಂಬಂತೆ ಪುಟ್ಟ ಶೋಭಳಿಗಾಗಿ ಕಾಲ ನೂಕುತ್ತಾ, ಅವಳ ಭವಿಷ್ಯದ ಬಗ್ಗೆ ವಿಚಾರ ಮಾಡುತ್ತಾ ಬದುಕಿದ್ದಳು.

ಒಳಗೊಳಗೆ ಚಿಂತಿಸುತ್ತಿರುವ ತಾಯಿಯ ಸ್ಥಿತಿಯನ್ನು ಅರ್ಥ ಮಾಡಿಕೊಳ್ಳುವ ಸ್ಥಿತಿಗೆ ಬಂದಾಗ, ಶೋಭ ತನ್ನ ಸುತ್ತಲ ಪ್ರಪಂಚದಿಂದ ದೂರಾಗಲು ಬಯಸಿದ್ದಳು. ಕಂಪನಿ ಬಿಟ್ಟು ಎಂದೂ ಹೊರಗೆ ಹೋಗದ ಅವಳು, ತಾಯಿಯ ಸಾಮೀಪ್ಯದಿಂದ ತಾಯಿಯ ಅಭಿನಯ ನೋಡಿ-ನೋಡಿ ಅದೊಂದನ್ನೇ ರೂಢಿಸಿಕೊಂಡಿದ್ದಳು. ಅವಳ ತಾಯಿಗೆ ಕಾಡುತ್ತಿರುವ ನೋವಾದರೂ ಏನು ? ಎಂಬುದನ್ನು ತಿಳಿಯಲು ಪ್ರಯತ್ನಿಸಿದಳು. ಶಶಿಕಲಾ, ಶೋಭ ನಾಟಕ ಕಂಪನಿಯಿಂದ ಭಿನ್ನ ಬದುಕನ್ನು ಬದುಕಬೇಕು, ಅವಳು ಮದುವೆಯಾಗಿ ತನ್ನದೇ ಮನೆ, ಸಂಸಾರ, ಮಕ್ಕಳೊಂದಿಗೆ ಜೀವಿಸಬೇಕು ಎಂದು ಕನಸು ಹೆಣೆಯತೊಡಗಿದಳು. ಆದರೆ, ತನ್ನ ಹಿನ್ನೆಲೆಯನ್ನು ತಿಳಿದವರು

ಯಾರು ತಾನೆ ಅವಳನ್ನು ಮದುವೆಯಾಗಲು ಮುಂದೆ ಬಂದಾರು ? ಎಂಬ ವಿಚಾರ ಅವಳ ನರನಾಡಿಯನ್ನೇ ಜಾಲಾಡಿಸಿಬಿಡುತ್ತಿತ್ತು.

ಕಂಪನಿಯ ಸಣ್ಣ ಹುಡುಗರ ಜೊತೆಗೆ ಯಾವಾಗಲೂ ಕಂಪನಿ ಇರುವ ಊರೊಳಗೆ ಅಡ್ಡಾಡಲು ಹೋಗುತ್ತಿದ್ದ ಶೋಭ, ಹರವಿಯಲ್ಲಿ ನಾಟಕ ಕಂಪನಿ ಇದ್ದಾಗ, ಮುನಿಯಪ್ಪನ ಮಗ ಶ್ರೀಶೈಲನ ಜೊತೆಗೆ ಅಡ್ಡಾಡಲು ಹೋಗಿದ್ದಳು. ನಾಟಕ ಕಂಪನಿಯವರೆಂದೇ ತಿಳಿದು ಹರವಿ ಗೌಡರ ಮಗ ಭೀಮು, ಶೋಭಳ ಮೇಲೆ ಸೈಕಲ್ಲು ಹಾಯಿಸಿ ಕಾಡಿಸಿದ. ಆದರೆ ಇಬ್ಬರು ಮಾತಾಡದೇ ಟೆಂಟಿಗೆ ಬಂದರು. ಯಾರಿಗೂ ಸುದ್ದಿ ತಿಳಿಸಲಿಲ್ಲಾ. ಭೀಮು ಮಾತ್ರ ಅವಕಾಶವನ್ನು ಉಪಯೋಗಿಸಿಕೊಂಡು, ಕಂಪನಿಯವರಿಗೆ ಉಳಿದುಕೊಳ್ಳುವ ವ್ಯವಸ್ಥೆ ಮಾಡುವ ನೆಪದಿಂದ ಪ್ರತಿದಿನ ಕಂಪನಿಗೆ ಬಂದು–ಹೋಗಿ ಮಾಡತೊಡಗಿದ. ಕಂಪನಿ ಆರ್ಥಿಕವಾಗಿ ತೊಂದರೆ ಪಟ್ಟಾಗ ಅವನ ಮನೆಯಿಂದಲೇ ಎಲ್ಲ ಕೊಟ್ಟು ಶೋಭಳನ್ನು ಒಲಿಸಿಕೊಳ್ಳಲು ಹವಣಿಸತೊಡಗಿದ. ಯುವಕ ಭೀಮನಗೌಡ, ಬಂದಾಗೊಮ್ಮೆ ಹದಿಹರೆಯದ ಶೋಭಳ ಕಣ್ಣಿಗೆ ಬೀಳದೇ ಹೋಗುತ್ತಿರಲಿಲ್ಲಾ. ಹರವಿಯಲ್ಲೇ ಮಳೆಗಾಲ ಪ್ರಾರಂಭವಾದ್ದರಿಂದ, ಕಂಪನಿ ಅಲ್ಲೇ ಎರಡು ತಿಂಗಳು ಉಳಿಯುವ ಯೋಜನೆ ಹಾಕಿಕೊಂಡಿತು. ಮುಂಗಾರು ಭಯಂಕರವಾದ್ದರಿಂದ, ಟೆಂಟಿನ ಸೂರು ಹಾರಿ ಹೋದದ್ದರಿಂದ ಮುನಿಯಪ್ಪ, ಮ್ಯಾನೇಜರ್ ಶ್ರೀಕಂಠ ಊರಿಗೆ ಶ್ರೀಮಂತರಾದ ಗೌಡರಿಗೆ ಪರಿಸ್ಥಿತಿ ಹೇಳಿದಾಗ ಗೌಡರು, ಭೀಮನಗೌಡರಿಗೆ ವ್ಯವಸ್ಥೆ ಮಾಡಲು ಹೇಳಿದರು. ಅದೇ ಅವಕಾಶ ಕಾಯುತ್ತಿದ್ದ ಭೀಮನಗೌಡ, ತಾನೇ ಕಾಳಜಿಯಿಂದ ಕಂಪನಿಯ ಜನರನ್ನು ಅವರ ಹಾಳುಮನೆಗೆ ಕರೆದುಕೊಂಡು ಬಂದು ವ್ಯವಸ್ಥೆ ಮಾಡಿದ. ಶೋಭಳ ತಾಯಿ ಶಶಿಕಲಾ– ಗೌಡರ ಉಪಕಾರ, ಭೀಮನಗೌಡರ ಉದಾರ ಬುದ್ಧಿಯನ್ನು ಹೊಗಳಿದಾಗ, ಚೂಪ ನೋಟದ ಭೀಮನಗೌಡನ ನೋಟ ಶೋಭಳನ್ನು ಕಾಡತೊಡಗಿತು. ಕಾಕತಾಳೀಯ ಎನ್ನುವಂತೆ ಶಶಿಕಲಾಳ ಆರೋಗ್ಯ ಕೆಟ್ಟಿದ್ದರಿಂದ, ಭೀಮನಗೌಡ ಚಕ್ಕಡಿ ವ್ಯವಸ್ಥೆ ಮಾಡಿ ಹೊಳಲಿಗೆ ಕರೆದುಕೊಂಡು ಹೋಗಿ ದವಾಖಾನೆಗೆ ತೋರಿಸಿದ. ಆವಾಗಿನಿಂದ ಭೀಮನಗೌಡ ಎಂದರೆ ಶೋಭಳಿಗೆ ಆದರದ ಭಾವನೆ ಮೂಡಿತು.

ಎರಡು ತಿಂಗಳು ಖಾಲಿ ಏನು ಮಾಡುವುದೆಂದು, ಕೆಲವರು ತಮ್ಮ-ತಮ್ಮ ಊರಿಗೆ ಹೋದರು. ಶಶಿಕಲಾ, ಶೋಭಳಿಗೆ ಹರವಿಯೇ ತೌರೂರು. ಗೌಡರ ಮನೆಗೆಲಸಕೆಂದು ತಾಯಿ-ಮಗಳು ಹೋಗತೊಡಗಿದರು. ತಾಯಿ ಅನಾರೋಗ್ಯದಿಂದ, ಶೋಭ ಒಬ್ಬಳೆ ಗೌಡರ ಮನೆಗೆ ಹೋಗುತ್ತಿದ್ದಳು. ಭೀಮನಗೌಡ ಆಗಾಗ ಶೋಭಳನ್ನ ಮಾತಾಡಿಸಿ– ಅವಳ ಸೌಂದರ್ಯ, ತನ್ನ ಬಯಕೆ ವ್ಯಕ್ತಪಡಿಸಿದ್ದ. ಆದರೆ ಶೋಭ ಅವನ ಬಣ್ಣದ ಮಾತಿಗೆ ಮರುಳಾಗಲಿಲ್ಲಾ. ನಾಟಕದ ಕಂಪನಿ ಎಂದೊಡನೆ ಅವನಲ್ಲಿದ್ದ ತಪ್ಪು ಕಲ್ಪನೆ ಬದಲಾಗಿ ನಿಜವಾಗಿಯೂ ಶೋಭಳನ್ನ ಹಚ್ಚಿಕೊಂಡ. ತನ್ನ ಅಂತಸ್ತನ್ನು ಬಲ್ಲ ಶೋಭ ಎಂದೂ ದುಡುಕಲಿಲ್ಲಾ. ಭೀಮನಗೌಡ ಮಾತ್ರ ಪ್ರತಿದಿನ ಅವಳಿಗಾಗಿ ಪರಿತಪಿಸತೊಡಗಿದ. ಶೋಭ ನಾಟಕದ ಕಂಪನಿ ಹುಡುಗಿಯಾದರೂ ಹಣ, ಬಂಗಾರಕ್ಕಾಗಿ ಆಶೆಪಡುತ್ತಿರಲಿಲ್ಲಾ. ಭೀಮನಗೌಡನ ಯೋಜನೆಗಳೆಲ್ಲಾ ಕೈಗೂಡದೇ ನಿರಾಶೆಗೊಳಿಸುವುದರಲ್ಲೇ ಮುಂಗಾರು ಕಡಿಮೆಯಾಗತೊಡಗಿತು.

ಇನ್ನೂ ಹದಿನೈದು ದಿನಗಳಲ್ಲಿ ಕಂಪನಿ ಹೊಳಲಿಗೆ ಹೋಗುತ್ತಿದೆ ಎಂದು ಮ್ಯಾನೇಜರ್ ತಿಳಿಸಿ ಹೋದರು. ಶಶಿಕಲಾ ಚೇತರಿಸಿಕೊಳ್ಳತೊಡಗಿದಳು. ಶೋಭ ಮಾತ್ರ ಗೌಡರ ಮನೆಗೆಲಸ ನಿಲ್ಲಿಸಿರಲಿಲ್ಲ. ಹೊಟ್ಟೆಪಾಡಿಗಾಗಿ ಎಲ್ಲಾ ಕೆಲಸ ಒಂದೇ ಎಂದು ಯಾವುದಕ್ಕೂ ಆಶೆಪಡದೇ, ತನ್ನ ಮಿತಿಯನ್ನು ಅರಿತು ತಾನು ತನ್ನ ಕೆಲಸ, ಉಳಿದ ಉಸಾಬರಿಗೆ ಹೋಗುತ್ತಿರಲಿಲ್ಲಾ. ಅದೊಂದು ದಿನ ಮುಂಜಾನೆ ಅವಸರ-ಅವಸರವಾಗಿ ಗೌಡರ ಮನೆಗೆ ಹೋದ ಶೋಭಳನ್ನ ನಗುನಗುತ್ತಾ ಬರಮಾಡಿಕೊಂಡ ಭೀಮನಗೌಡ, ತೋಟಕ್ಕೆ ಹೋಗಿ ಬರುವುದಾಗಿ ತಿಳಿಸಿ ಹೋದ. ಮನೆಯಲ್ಲಿ ಯಾರೂ ಇಲ್ಲದಿದ್ದುದನ್ನು ಕಂಡು, ಹೆದರಿ ವಾಪಸಾಗಲು ಹವಣಿಸಿದಳು. ಆದರೆ ಭೀಮನಗೌಡ ಹೊರಗಿನಿಂದ ಬಾಗಿಲು ಹಾಕಿಕೊಂಡಿದ್ದ. ಅವಳು ವಿಚಾರ ಮಾಡುವುದರಲ್ಲೇ ಗೌಡ ಅನಾಹುತ ಮಾಡಿದ್ದ. ಶೋಭಳಿಗೆ ನಂಬಿಸಿದ್ದ, ಮದುವೆಯಾಗಿ ಇದೇ ಮನೆಯಲ್ಲಿ ಇರುವುದಾಗಿ ಹುಚ್ಚು ಕಲ್ಪನೆಗಳನ್ನು ತುಂಬಿದ್ದ. ಅದಕ್ಕಾಗಿ ಅವನ ತಂದೆ ಹಾಗೂ ತಾಯಿ ಶೋಭಳನ್ನು ಪ್ರತಿದಿನ ನೋಡಲು, ಮನೆಗೆ ಕೆಲಸದ ನೆಪ ಮಾಡಿ ಕರೆಸುವುದಾಗಿ ಹೇಳಿದ. ಸುಳ್ಳು-ನಿಜ ಅರಿಯದ ಯೌವ್ವನ,

ಭೀಮನಗೌಡನ ಚೂಪು ನೋಟಕ್ಕೆ ಮರುಳಾಗಿ, ಅವನ ಗುಲಾಮಳನ್ನಾಗಿ ಮಾಡಿತು.

ಪರವಿ ಬಿಡುವಾಗ ಭೀಮನಗೌಡ ಮರೆಯಾಗಿದ್ದ. ಶೋಭ ಬಂದೇ ಬರುತ್ತಾನೆಂಬ ಆಶೆಯಿಂದ ದಾರಿಕಾಯತೊಡಗಿದಳು. ಆದರೆ ಕಂಪನಿಯ ಸಾಮಾನು ಹೊಳಲಿಗೆ ಹೋಗಿದ್ದರಿಂದ, ಎಲ್ಲರೂ ಹೊಳಲಿಗೆ ಹೋಗುವುದು ಅನಿವಾರ್ಯವಾಯಿತು. 'ಶೋಭ' ಎಂದು ಸಿಂಗಾರು ಕೂಗಿದಾಗಲೇ ಶೋಭಳಿಗೆ ಎಚ್ಚರಾಯಿತು. ಕನ್ನಡಿಯಲ್ಲಿ ನೋಡಿಕೊಂಡಳು. ಭೀಮನಗೌಡ ಬಲಾತ್ಕರಿಸಿದ ಮುನ್ನ ಅವಳಿಗಿದ್ದ ರೂಪವನ್ನು ನೋಡಲು ಹವಣಿಸಿ ಸೋತಳು. "ಏಳೇಳು, ಅವರು ಸಿಟ್ಟಾಗಿ ಹೋದಾರು" ಎಂದ. ಅವನ ಕರ್ಕಷ ಮಾತು ಅವಳಿಗೆ ಹಿಡಿಸಲಿಲ್ಲಾ. "ಸೀ ನಡಿ, ನಾ ಬಣ್ಣ ತೆಗೆದು ಬರ್ತೀನಿ" ಎಂದು ಕಳುಹಿಸಿದಳು. ಶೋಭಳ ತಾಯಿ ಮಾನಸಿಕಳಾಗಿ ಆಘಾತಕ್ಕೊಳಗಾದಳು. ಶೋಭ ಗರ್ಭಿಣಿಯೆಂದು ಕೇಳಿದೊಡನೇ, ಹುಚ್ಚಿಯಾಗಿ ಪರಪರ ಅರಿವೆ ಹರಿದುಕೊಂಡು ಓಡತೊಡಗಿದಳು. ಆದರೆ ಯಾವುದೂ ಪ್ರಕೃತಿನಿಯಮವನ್ನು ತಡೆಯಲಿಲ್ಲಾ. ಭೀಮನಗೌಡನಿಗೆ ಎರಡು ಗಂಡುಮಕ್ಕಳು ಹುಟ್ಟಿದವು. ಆದರೆ ಒಂದು ಮಗು ಮೂಕ, ಮತ್ತೊಂದು ಕುಂಟಾಗಿತ್ತು. ಶೋಭಾ ಮಾನಸಿಕ ತುಮುಲದಿಂದ ಹೊರಬಂದು, ತನ್ನ ಉದರದಲ್ಲಿ ಜನಿಸಿದ ಈ ಮಕ್ಕಳ ಭವಿಷ್ಯಕ್ಕಾಗಿ 'ಸಿಂಗಾರು' ಎಂಬ ನಾಮಮಾತ್ರದ ಪುರುಷನ ಹೆಂಡತಿಯಾದಳು. ನಾಟಕ ಕಂಪನಿ ಆರ್ಥಿಕವಾಗಿ ತೊಂದರೆ ಅನುಭವಿಸಿದಾಗ ಮೂರು-ನಾಲ್ಕು ತಿಂಗಳವರೆಗೆ ಸಂಬಳ ಸಿಗುತ್ತಿರಲಿಲ್ಲಾ. ಎರಡು ಮಕ್ಕಳು, ಆಸ್ಪತ್ರೆಯಲ್ಲಿ ಚೇತರಿಸಿಕೊಳ್ಳುತ್ತಿರುವ ತಾಯಿ, ತನ್ನ ಮಕ್ಕಳಿಗೆ ತಂದೆಯ ಪಾತ್ರ ನಿರ್ವಹಿಸುತ್ತಿರುವ ಸಿಂಗಾರು, ಅವನ ಕುಡಿತ, ಸಿಗರೇಟ್ ಚಟಕ್ಕೆ ಹಣ ಇಲ್ಲಾದಾಗ, ಸಿಂಗಾರು ಲಾಟರಿ ಹೊಡೆದು-ಹೊಡೆದು, ಕೊನೆಗೊಂದು ದಿನ ಶೋಭಳ ಅಳಿದುಳಿದ ಸೌಂದರ್ಯವನ್ನು ವ್ಯಾಪಾರಕ್ಕಿಟ್ಟು ತೆರೆಯ ಮೇಲೆ, ತೆರೆಯ ಮರೆಯಲ್ಲಿ ವಿಭಿನ್ನ ಪಾತ್ರಗಳನ್ನು ಅಭಿನಯಿಸಿ ಬೇಸರಗೊಂಡ ಶೋಭ, ಮೂಕ ಹಾಗೂ ಕುಂಟ ಮಕ್ಕಳ ಭವಿಷ್ಯಕ್ಕಾಗಿ ಬದುಕತೊಡಗಿದಳು. ಅವಳು ಒಂದು ರೀತಿ ಮೂಕಳಾಗಿ ವೇದನೆ ಪಡತೊಡಗಿದಳು.

ಸಿಂಗಾರು ಮತ್ತೊಮ್ಮೆ ಬಂದು– "ಆಗಿಲ್ಲೇನೆ ನಿನದು, ಕಾಯೋರು ಎಷ್ಟೊತ್ತು ಅಂತ ಕಾಯ್ತಾರ, ಬಾ ಜಲ್ದಿ" ಅಂದ. "ಬೇಕಾದವರು ಕಾಯತಾರ, ನೀ ಯಾಕ ಗಡಬಡ ಮಾಡ್ತಿ ಸುಮ್ಮನಿರು" ಎಂದು ಗದರಿಸಿದಳು. ಮತ್ತೊಮ್ಮೆ ಹೊರಗೆ ಓಡಿದ. ಆಸಕ್ತಿ ಇಲ್ಲದೇ ಬಣ್ಣ ತೆಗೆದು, ಹಾಗೆಯೇ ಸಿಂಗಾರು ಕುಳಿತಲ್ಲಿಗೆ ಹೋದಳು. ಅದೇ ಮನಸಿಗೊಪ್ಪದ ಕೆಲಸ. ಹುಬ್ಬಳ್ಳಿ ಸಾವುಕಾರ ಕಾರಿನಲ್ಲಿ ಹಿಂದೆ ಕುಳಿತ. ಸಿಂಗಾರು ಮುಂದೆ ಡ್ರೈವರ್ ಪಕ್ಕ, ಶೋಭ ಹಿಂದೆ ಸಾವುಕಾರನ ಪಕ್ಕ ಕುಳಿತಳು.

ನಾಟಕ ಮುಗಿದಾಗ ಸಿಂಗಾರು ಮತ್ತೊಬ್ಬನ ಜೊತೆಗೆ ಸಿಗರೇಟ್ ಸೇದುತ್ತಿದ್ದ. ಅವನ ಗಂಡಸುತನಕ್ಕೆ ಶೋಭ ಅಸಹ್ಯಪಡುತ್ತಿದ್ದಳು. ಪ್ರತಿದಿನ ಅವಳ ಮೈ ಮಾರಿ, ಅವನಿಗೆ ಕುಡಿಯಲು ಹಣ ಕೊಡಬೇಕು. ನನ್ನ ಒಂದು ತಪ್ಪಿಗಾಗಿ, ಆಸ್ಪತ್ರೆಯಲ್ಲಿ ಮಾನಸಿಕವಾಗಿ ಬಳಲುತ್ತಿರುವ ತಾಯಿ ಈಗ ನನ್ನ ಪರಿಸ್ಥಿತಿಯನ್ನು ನೋಡಿದರೆ ಖಂಡಿತ ಎದೆ ಹೊಡೆದು ಸತ್ತಾಳು; ಎಂದು ವಿಚಾರ ಮಾಡತೊಡಗಿದಳು. ಬಣ್ಣ ತೆಗೆಯಲು ಮುಖಕ್ಕೆ ಎಣ್ಣೆ ಹಚ್ಚಿದ್ದಳು. ಸಿಂಗಾರು ಯಾರೊಂದಿಗೋ ಒಳಗೆ ಬಂದ. ಸಿಂಗಾರೂನ ನೋಡಿದವಳೇ ಬೆಚ್ಚಿದಳು. ಅವನ ಹಿಂದೆ ಬಂದ ಮನುಷ್ಯನ ಆಕೃತಿ ಕನ್ನಡಿ ಯೊಳಗೆ ಸ್ಪಷ್ಟವಾಗಿ ಕಂಡಿತು. ಶೋಭ ಸಿಟ್ಟಿನಿಂದ ಉರಿಯತೊಡಗಿದಳು. ಹೌದು, ಇವನೇ–ಇವನೇ, ನನಗೆ ಮೋಸಮಾಡಿ ಈ ನರಕದ ಬದುಕಿಗೆ ಕಾರಣ ನಾದವನು ಎಂದು ಭೀಮನಗೌಡನ ಅಂಗಿ ಹಿಡಿದು, ಇಡೀ ಕಂಪನಿ ಜನ ಕೇಳುವಂತೆ ಚೀರಿದಳು. ಅವನ ಮುಖ–ಮುಸಡಿಯನ್ನೆಲ್ಲಾ ರೋಷದಿಂದ ಪರಚಿದಳು. ಸಿಂಗಾರು ಗಾಬರಿಗೊಂಡು ಬಿಡಿಸಲು ಬಂದ. ಶೋಭಳ ಸಿಟ್ಟು ಇಳಿದಿರಲಿಲ್ಲಾ. ಗೌಡನ ಅಂಗಿಯನ್ನು ಹರಿದುಬಿಟ್ಟಳು. "ಮರ್ಯಾದಸ್ಥರ ಮೇಲೆ ಕೈ ಮಾಡ್ತಿಯಾ" ಎಂದು ಭೀಮನಗೌಡ ಪಟಾರೆಂದು ಕೆನ್ನೆಗೊಂದು ಬಾರಿಸಿ, ಸಿಲ್ಲದೇ ಹೊರಟು ಹೋದ. ಶೋಭಳಿಗೆ ಹೊಡೆತ ತಡೆಯಲಾಗದೆ ಮೂರ್ಛೆ ಬಂದು ಬಿದ್ದುಬಿಟ್ಟಳು.

ಮಳೆಗಾಲ ಆರಂಭವಾಗಿ ಕಂಪನಿ ನಾಟಕ ನಿಲ್ಲಿಸಿತು. ಕೊಡಬೇಕಾದ ಹಣ ಇಲ್ಲಾ ಎಂದು ಮ್ಯಾನೇಜರ್ ರಾಜಣ್ಣ ಕೊಡಲಿಲ್ಲಾ. ಸಿಂಗಾರು

ವಾರದಿಂದ ನಾಪತ್ತೆಯಾಗಿದ್ದ. ಮೂಕ ಹಸಿವು ತಾಳಲಾರದೇ, ತಾಯಿಗೆ ವ್ಯಕ್ತಪಡಿಸಲೂ ಆಗದೇ ಮೂಲೆ ಹಿಡಿದು ಮಲಗಿದ್ದ – ಕುಂಟ, ಕುಂಟುತ್ತಾ ತನ್ನ ಅಂಗದೌರ್ಬಲ್ಯವನ್ನು ಪ್ರದರ್ಶಿಸುತ್ತಾ ಭಿಕ್ಷೆ ಬೇಡಿ ತಾಯಿಗೆ, ತಮ್ಮನಿಗೆ ಏನಾದರೂ ತಿನ್ನಲು ತರಲೆಂದು ಹವಣಿಸಿದ್ದ. ಶೋಭ, ತಾನು ಮಾನಸಿಕವಾಗಿ ಅಸ್ವಸ್ಥಳಾದರೆ ಈ ಮಕ್ಕಳ ಗತಿ ಏನೆಂದು ವಿಚಾರ ಮಾಡಿದವಳೇ ಮೂಲೆಯಲ್ಲಿ ಮಲಗಿದ್ದ ಮೂಕನ ಹತ್ತಿರ ಹೋಗಿ, ಎತ್ತಿ ತೊಡೆಯ ಮೇಲೆ ಹಾಕಿಕೊಂಡಳು. ವ್ಯಕ್ತಪಡಿಸಲು ಕಾತರಿಸುತ್ತಿದ್ದ ಭಾವನೆಗಳು ಅಸ್ಪಷ್ಟವಾಗಿ, ಹರಕುಮುರುಕಾಗಿ ಅಭಿವ್ಯಕ್ತ ಪಡಿಸುತ್ತಿದ್ದ. ನಾನು ನಿನ್ನ ಹಾಗೆ ಮೂಕಳಾಗಿದ್ದರೆ ಚೆನ್ನಾಗಿತ್ತು, ನಿನ್ನ ಹಾಗೆ ಮುಗ್ಧಳಾಗಿರುತ್ತಿದ್ದೆ. ಕರಳು ಹಿಂಡಿದ ಹಾಗಾಯಿತು. ಅವನನ್ನು ಬಾಚಿ ತಬ್ಬಿಕೊಂಡಳು. ಗೌಡನ ಚೂಪು ನೋಟ ಕಟ್ಟಕಡೆಗೆ ತನ್ನನ್ನು ಅಧೀರಳನ್ನಾಗಿ ಮಾಡಿ, ಯಾವ ಪಾಪದ ಫಲವೋ ಎಂದು ಬಿಕ್ಕಳಿಸತೊಡಗಿದಳು.

ಕುಂಟ ಏನೆಲ್ಲಾ ಪ್ರಯತ್ನಪಟ್ಟರೂ ಯಾರೂ ಭಿಕ್ಷೆ ನೀಡಲಿಲ್ಲಾ. ನಿರಾಸೆಯಿಂದ ಬರಿಗೈಲಿ ಟೆಂಟಿಗೆ ಬಂದ. ತಾಯಿಯ ಬೆನ್ನ ಮೇಲೆ ಹತ್ತಿ, ಅವಳ ಕೊರಳ ಸುತ್ತ ಕೈ ಹಾಕಿ ಕಣ್ಣೀರು ಸುರಿಸತೊಡಗಿದ. ಶೋಭ ಮೌನವಾಗಿ ಎಲ್ಲವನ್ನೂ ಸಹಿಸತೊಡಗಿದಳು. ಯಾರೋ ಬಂದ ಹಾಗಾಗಿ, ಟೆಂಟಿನ ಪರದೆ ಸರಿಸಿ ಇಣಿಕಿದಳು. ಸಿಂಗಾರು ಸಿಗರೇಟ್ ಸೇದುತ್ತಾ ಒಳಗೆ ನುಗ್ಗಿದ. "ನಿನ್ನ ಸಿಟ್ಟಿನಿಂದ ಈ ಅನಾಹುತ ಆಗಿದ್ದು, ಮೆಡ್ಲೇರಿ ಮಲ್ಲಪ್ಪ ನಿನ್ನ ನೋಡಬೇಕಂತೆ ಬಾ" ಎಂದ. ಶೋಭಳ ಗಂಟಲು ಕಟ್ಟಿತು. ಯಾಂತ್ರಿಕವಾಗಿ ಸೀರೆ ಬದಲಿಸಿ, ಅವನ ಹಿಂದೆ ಹೊರಟಳು.

□

ಉಡಾ

ಹಗ್ಯಾಲೇ ಕಳ್ಳ ಸಿಂಗಿ, ಹಗ್ಯಾಲೇ, ಹಗ್ಯೋ... ಅಂತ ಹಸರ ಕಂಡು ಓಡಿಹೊಂಟಿದ್ದ ಸಿಂಗಿ ಆಕಳದ ಬೆನ್ನತ್ತಿದ್ದ ನಿಗರ, ಪೀಕಜಾಲಿ ಮುಳ್ಳು ತುಳದರೂ ಕುಂಟಕೊಂತ ಓಡಿದ. ಹಟ್ಟಿ ನಾಯ್ಕನ ಮಗ ಗನಿ, ದನ ಹೊಲಕ ಹೋದ್ರ ಹಿಗ್ಗಾಮುಗ್ಗ ಹೊಡ್ದು ದನಗಳನ್ನೆಲ್ಲಾ ದಡ್ಡಿಗ ಹಾಕ್ತಿದ್ದ. ಎಷ್ಟ ಅತ್ರೂ, ಕಾಲಿಗ ಬಿದ್ರೂ ಕೇಳ್ತಿರಲಿಲ್ಲಾ. ಇನ್ನೇನು ಗನಿಯ ನೀರಾವರಿ ತ್ವಾಟದ ಮ್ಯಾರಿ ಹತ್ತಬೇಕು ಅನ್ನೋದ್ರಾಗ ಕಲ್ಲು ತಗೊಂಡು ರೊಂಯ್‌ಂತ ಬೀಸಿದ. ಮುಸಡಿಗ ಬಡ್ದು ಮೂತಿ ಸಿಂಡರಿಸಿಕೊಂಡು– ಕೈಗ ಬಂದಿದ್ದು ಬಾಯಿಗ ಬರ್ದಂಗಾಗಿದ್ಕ, ಸಿಟ್ಟಿಂದ ಸಿಂಗಿ ಆಕಳ ನಿಗರಗ ಹಿಡಿ ಶಾಪಾ ಹಾಕ್ತಾ ದನಗಳಿದ್ದ ಮಾಳಿ ಕಡಿಗ ಬಾಲ ಮುದರ್ಕೊಂಡು ಓಡ್ತು.

ನಿಗರ, ಪದ್ದಿ, ಹನ್ಮಂತಿ, ಲಂಗಡಿ, ನೋಳಿಯಾ ಗುಡ್‌ಗುಡ್ ಚೆನ್ನಕ್ಕಿ ಆಟಾ ಆಡ್ತಾ, ಮನ್ನೆ ಪರಸಸಂಗಡಿಯಿಂದ ವಡಿ ತಂದು ತಾನೊಬ್ಬನೇ ತಿಂದಿದ್ದ ನೋಳಿಯಾನ ಮೇಲಿನ ಸಿಟ್ಟು ತೀರಿಸ್ಕೊಳ್ಳಾಕ ಲಂಗಡಿ ಗೆರಿ ಒಳಗ ಇದ್ದು, ಪದ್ದಿನ ಹೊರಗ ಕಳಿಸಿ, ನೋಳಿಯಾ ಕೈ ಕೊಟ್ಟಾಗ ಪದ್ದಿ ಒಡಕೊಂಡಿಂದ ಲಂಗಡಿ ಹೊರಗ ದಬ್ಬಿದ್ಲು. ಪದ್ದಿ ಬೆನ್ನಿನ ಮ್ಯಾಲ ಬಾಸಳ ಮೂಡೊ ಹಂಗ ದನಕ ಹೊಡ್ದಂಗ ಹೊಡಿತಿದ್ಲು. ನಿಗರ ಕಾಯ್ತಿದ್ದ ವಿರಪಾಕ್ಷಿ ಮೇಷ್ಟ್ರ ಸಿಂಗಿ ಆಕಳ ಗನಿ ಹೊಲ್ದ ಕಡಿಗ ಹೊಂಟಿದ್ದ ಹೆಂಗೊ ನೋಡಿದ ಹನ್ಮಂತಿ– "ನಿಗರಣ್ಣ, ಇವತ್ತು ನೀನು ಉಳಿಯಂಗಿಲ್ಲಾ. ಅಲ್ನೋಡು, ನಿನ್ನ ಸಿಂಗಿ, ಕಲ್ಯಾಣಿ ಆಕಳ ಗನಿ ಹೊಲಕ್ಕ ಹೊಂಟಾವು" ಅಂದ್ಲು. ಅವರೊಳಗ ದೊಡ್ಡವಳು ಲೀಡರ್ ಆದ ಲಂಗಡಿ– "ಓಡೋ ನಿಗರ ಓಡು, ಗನಿ ಹೆಣ

ಹಾಕ್ತಾನ" ಅಂದ್ಲು. ನಿಗರ ಒಂದಮುಂದ ನೋಡಾಕತ್ತ. "ಏ ಓಡ್ತಿ ಇಲ್ಲೊ, ಊರ ದನಾನೆಲ್ಲಾ ದೊಡ್ಡಿಗ ಹಾಕ್ತಾನ ಅವನು" ಅಂತ ಗದರಿಸಿದ್ಕ, ಒಂದೇ ಉಸರಿಗ "ಕಲ್ಯಾಣಿ ಲೇ" ಅಂದಿದ್ಕ ಧನಿ ಗುರ್ತುಹಿಡಿದ ಕಲ್ಯಾಣಿ ವಾಪಸಾತು. ಆದ್ರ ಸಿಂಗಿ ಮಾತ್ರ ಬೆರಕಿ, ಓಡಾಕತ್ತು; ಬೆನ್ನತ್ತಿದ ನಿಗರ.

ಆಟದ ಮಜಾ ನೋಡಾಕ ಹುರುಪಿಂದ ಓಡಿ ಬರ್‍ತಿದ್ದ ನಿಗರನ್ನ ನೋಡಿದ ಹೆಂಡದಂಗಡಿ ಬುದ್ನಾ- "ಲೇ, ಗಸಿ ಹೊಲ್ದಾಗ ಆಕಳ ಮೇಯಾಕತ್ತಿತ್ತು ಹೌದಲ್ಲ, ಹೇಳ್ತಿನಿ ತಡಿ" ಅಂದ. "ಹೂಂ, ಹೊಲ್ದಾಗ ಹೋಗಿತ್ತೇನು ನಿನಗ, ಮ್ಯಾರಿ ಮ್ಯಾಲ ಮೇಯಾಕತ್ತಿದ್ದನ್ನ ಹೊಡ್ಕೊಂಡೀನಿ" ಅಂತ ಉತ್ತರ ಕಾಯದೇ ಮಾಳಿಕಡಿಗ ಓಡಿದ.

ಶಿರ್‍ನಳಿಯೊಳಗ ಹೆಂಡ ಮಾರ್‍ತಿದ್ದ ಬುದ್ನಾ- ಬಾಟ್ಲಿ ಹೊಡ್ದು ನೀರ ಹಾಕ್ತಾನಂತ ಊರ ಹೆಂಗ್ಸರೆಲ್ಲಾ ಹೆಂಡದ ಸಾವುಕಾರ ಕರಿಮಪ್ಪಗ ಕಂಪ್ಲೇಂಟ್ ಮಾಡಿಂದ, ಶಿರ್‍ನಳಿ ಸೇಂದಿ ಅಂಗಡಿ ಅವನ ಕೈ ತಪ್ತು. ಅದಕ್ಕ ಊರ ಮಂದಿಗ ಬಾಯಿಗ ಬಂದಗ ಬೋಯ್ದು, ಹೆಂಡ ಕುಡಿಯೋ ಕೊರಚರ ಹಟ್ಟಿಗ ಹಾಕಬೇಕಂತ ಕರೀಮಪ್ಪನ ಕಾಡಿ-ಬೇಡಿ ಹಾಕಿಸಿಕೊಂಡಿದ್ದ, ಐತ್ವಾರಕೊಂದ ದಪಾ ಶಿರ್‍ನಳಿಗ ಬರ್ತಿದ್ದ. ಕೊರಚರಟ್ಟಿ ತಿಮ್ಮ ಐತಾಳ, ದೂರ-ದೂರಕ ಹೋಗಿ ಕುರಿ ಹಿಂಡುಗಳನ್ನ, ಬಂಗಾರದ ಸಾಮಾನುಗಳನ್ನ ಕದ್ಕೊಂಡು ಬಂದು, ಸಿಕ್ಕಸಿಕ್ಕಂಗ ಮಾರಿ ಹೇಣ್ತಿ-ಮಕ್ಕಳಿಗೆಲ್ಲಾ ಹೆಂಡದ ಹೊಳಿ ಹರಸ್ತಿದ್ರು. ಬುದ್ನಾ, ಅವರು ಕದ್ದುತಂದ ಬಟ್ಟಿ-ಬರಿಗಳನ್ನ, ಚೂರುಪಾರು ಬಂಗಾರನ ಶಿರ್‍ನಳಿಗ ರಾತ್ರೋರಾತ್ರಿ ತಂದು ಮುಟ್ಟಿಸಿಹೋಕ್ಕಿದ್ದ. ಮಾಳದ ಅಮಾಸಿ ಮುಂದ ಕೊರಚರ ತಿಮ್ಮ ಮೂಡಗಡಿ ಸೀಮಿಂದ ಅರವತ್ತ ಕುರಿಗಳನ್ನ ತಿರವಿಕೊಂಡು ಬಂದಿದ್ದ. ಅದ್ರಾಗ ಒಂದು ಟಗರಮರಿ ಹೆಂಡದ ಬಾಕಿ ಅಂತ ಬುದ್ನಾಗ ಕೊಟ್ಟಿದ್ಕ, ಪಾಪ್‌ಸಿಕ್ಕರಿನ ಪೋಲಿಸ್ನೋರು ಬಂದು ದಾಳಿಗೇಳಿ ಮಾಡ್ತಾರಂತ, ರಾತ್ರಿ ಸರ್ಪೊತ್ತಿನ್ಯಾಗ ತಂದು ಗಾಂಗ್ಲಪ್ಪಗ ಹೇಳಿ ಬಿಟ್ಟುಹೊಂಟಿದ್ದ.

ಗಸಿ ಹೊಲ ದಾಟಿ, ಕೆಂಗ ಸೋಮ್ಲನ ಹೊಲ್ದ ಮ್ಯಾರಿ ಹತ್ತುತ್ತಿದ್ದ, ಹೆಗ್ಗಣದಂಥಾ 'ಉಡಾ' ಅವನ ಕಂಡಿಷ್ಟೇ ಓಡತೊಡಗಿತು. ಹೆಗ್ಗಣದಂಗೆ

ಕೊಬ್ಬಿದ ಉಡಾ ನೋಡಿದ ಬುದ್ಯಾ, ಕೈಯ್ಯಾಗ ಹಿಡ್ಕೊಂಡಿದ್ದ ಬುತ್ತಿಗಂಟು ರಸ್ತಿ ಪಕ್ಕದಾಗ ಇಟ್ಟವನs ಬೆನ್ನತ್ತಿದ. "ಅಲೆಲೆ ಸಿಗ್ತಲೆ ಇವ್ನವ್ವ ಬ್ಯಾಟಿ, ಬಾಳ ದಿನಾಗಿತ್ತು ಉಡಾ ತಿಂದಿದ್ದು" ಅಂದವನೆ ಅದರ ಹಿಂದಿಂದ ಓಡಿದ. ಉಡಾ ಹೆದರ್ಕೊಂಡು ಮಳಲಿನ್ಯಾಗ ಸಿಕ್ಕೊಂಡು ವದ್ಯಾಡಿ, ಹಂಗಹಿಂಗ ಮಾಡಿ ಗಟ್ಟಿ ನೆಲಕ್ಕ ಬಂದು ಬಿದ್ದಿದ್ದೇ ಕೆಂಗ ಸೋಮ್ಲಪ್ಪನ ಮ್ಯಾರಿ ಕಡಿಂದ ಗನಿ ಹೊಲ್ದ ಕಡಿ ತಿರಗ್ತು. ಆ ಕಡೆ ಓಡಿ ಹೊಂಟಿದ್ದ ಬುದ್ಯಾ ಬ್ರೆಕ್ ಹಾಕ್ದವನೆ, ತಿರುಗಿ ಗನಿ ಹೊಲ್ದ ಕಡಿ ಓಡಿದ. ಮ್ಯಾರಿಗುಂಟ ಓಡಿದ ಉಡಾ, ಹೊಕ್ಕೊಳಾಕ ಹೋರು ಸಿಗ್ದ ಮೂಡಗಡಿಗ ಓಡ್ತು. "ಅಲೆಲೆ ಮಗಳ ಕಬ್ಬಡಿ ಆಡಿಸ್ತಿ, ಆಡ್ಸು ಸಂಜೀಗ ಹೆಂಡದ ಜತಿಗ ಮಸಾಲಿ ಅರಿತೀನಿ" ಅಂದ ಬುದ್ಯಾ. ಮೂಡಗಡಿಯು ಸಾಂತಿ ಹೊಲದ ಅರ್ಧಕ ಹೋಗಿ, ಕೆಳಗ ಓಣಿ ಹೊಲಗಳ ಕಡಿಗ ತಿರಗ್ತು. ಓಡಿ-ಓಡಿ ತೇಕಾಕತ್ತಿದ ಬುದ್ಯಾ, ಪಂಜಿ ಕಿತ್ತೆಸದವನ ಚಣ್ಣದಮ್ಯಾಲ ಕುಸ್ತಿ ಆಡೊ ಪೈಲ್ವಾನನಂಗ ಹಿಂದಿಂದ ಓಡಿದ. ಅಷ್ಟೇನೂ ಜೋರು ಓಡದ ಉಡಾ, ಆನಿಗಾಲಿನ ಬುದ್ಯಾ ನೆಲ್ದಮ್ಯಾಲ ಆನಿ ಚುಚ್ಚತಿದ್ದಕ ಓಡಾಕ ಆಗ್ದ ನೋವಾದ್ರೂ ಓಡ್ತಿದ್ದ- "ಓಡು ಓಡು ಎಟ ಓಡಿ, ಎಲ್ಲಿಮಟ ಓಡಿ, ನಿಮ್ಮಪ್ಪಸತ್ರು ನಾ ಬಿಡೋದಿಲ್ಲಾ ತಿಳ್ಕೊ"ಅಂದವನs ಮೂಗಿನ್ಯಾಗಿಂದ ಸೋರಾಕತ್ತಿದ್ದ ಹೆಂಡದ ನೀರನ್ನ 'ಸೀ' ಅಂತ ಸೀತು ಒಗ್ದು ಓಡತೊಡಗಿದ. ಉಡಾ ಕಾಡ್ತಿರೋದಕ ಸಿಟ್ಟು ಬಂದು, ಓಡ್ತಾ-ಓಡ್ತಾ ಬಗ್ಗಿ ಕಲ್ಲು ಎತ್ತಿಕೊಂಡವನ ಹತ್ರ ಹೋಗಿ ಜೋರಾಗಿ ಅದ್ರ ಮ್ಯಾಲ ಎಸ್ದ. ಸಲ್ಪದ್ರಾಗ ತಪ್ಪಿಸಿಕೊಂಡು ಓಡ್ತು. ಓಡಿ ಹೋಗಿದ್ದ ಕುಲ್ಡ ಹನಮನ ಹೊಲದ ಮ್ಯಾರಿ ಮ್ಯಾಗಿನ ತಾಳಿಮರದ ಬುಡ್ದಾನ ಹೋರಿನ್ಯಾಗ ಹೊಕ್ಕೊಂತು. ಇನ್ನೇನು ಒಳಗ ಓಡಬೇಕು- ಬುದ್ಯಾ ಓಡಿ ಹೋದವನs ಅದ್ರ ಬಾಲ ಹಿಡ್ಕೊಂಡು ಜಗ್ಗಿದ. ಬಿಗಿನೆಲಾನ ಬಿಗಿಯಾಗಿ ಹಿಡ್ಕೊಂಡಿದ್ದ ಉಡಾ ಜಪ್ಪನ್ನಲಿಲ್ಲಾ. ಎಲ್ಲೂಡ್ಡ ಕಾಲುಗಳನ್ನ ಮ್ಯಾರಿಗಾನಿಸಿ, ಮುಕಳಿ ನೆಲಕ್ಕೂರಿ, ಮೈಯಾನ ಕಸವು ತಗ್ದು ಎಳಿಯುಕತ್ತಾ. ಪ್ರಯೋಜನವಾಗ್ಲಿಲ್ಲಾ, ಉಡಾ ಅಲಗಾಡ್ಲಿಲ್ಲಾ. ತಿಣಕಾಕತ್ತ- ಹೂಂ, ಹಾಂ ಅಂತ ಉಸರು ಬಿಗಿ ಹಿಡ್ದು ಜಗ್ಗಿದ. ಅವನ ಅರಬಾಟ ನೋಡಿದ ತಿಗಳ, ಬಾಬುರಿ ಗಳೆ ನಿಲ್ಸಿ ಓಡಿಬಂದ್ರು.

“ಯಾಕೊ ಬುದ್ಯಾ ಏನಾತು, ಹಂಗ್ಯಾಕ ಒದ್ದಾಡಕತ್ತಿ” ಅಂದ ಬಾಬುರಿ. “ಏ ಒಂದ ಉಡಾ ಐತೊ, ಹೋರಿನ್ಯಾಗ ಹೊಕ್ಕೊಂಡೈತಿ, ಹೊರಗ ಬರವಲ್ದು” ಅಂದ. ಅವನ ಕುಸ್ತಿಯನ್ನು ನೋಡಿದ ನಿಗರ– “ಏ ಅಲ್ನೋಡ್ರೋ, ಬುದ್ಯಾ, ಬಾಬುರಿ ಗುದ್ದಾಡಕತ್ಯಾರ” ಅಂದ. ಗುದ್ದಾಟಂದ್ರ ಹಬ್ಬದಷ್ಟು ಖುಷಿ ಪಡೊ ಲಂಗಡಿ, ಪದ್ಡಿ, ನೊಳಿಯಾ, ನಿಗರ, ಹನ್ಮಂತಿ ದನ ಬಿಟ್ಟೇ ಗನಿ ಹೊಲ್ದ ಕಡಿಗ ಓಡಿದ್ರು. ಬಾಬುರಿ, ತಿಗಳ, ಬುದ್ಯಾ ಮೂವರೂ ಕೈಹಾಕಿದ್ರು. “ಏ ಗುಂಗಾಡಸಬ್ಯಾಡ್ರೋ, ತಪ್ಪಸ್ಕೊಂಡ ಹೋದೀತು” ಅಂದ ಬುದ್ಯಾ. “ಹಿಡಿಯಾಕ ಸರಿ ಆಗ್ವಲ್ದೇಳು, ಇಲ್ಲಂದ್ರ ಅದ್ನ ಯಾ ಕಾಲಕ್ಕ ಬಿಟ್ಟೇನು ನಾ” ಅಂತ ಬಾಬುರಿ ಪರೆದ ದಿಮಾಕ ತೋರ್ಸಿದ. ತಿಗಳ ಸಿಟ್ಟು ಬಂದ್ರೂ ತಡ್ಕೊಂಡವನs ಬುದ್ಯಾಗ ಹೇಳ್ದ– “ನಾವಿಬ್ರೂ ಬಿಡಾನ, ಅವನ ದಮ್ಮು ಏಟೈತಿ, ಕಟಕನೀರು ಹನಿಯೊತಂಕ ಜಗ್ಗಿ” ಅಂದ. ದೂರದ ಮಾಳಿಂದ ನೋಡ್ತಿದ್ದ ದನಾ ಕಾಯೊ ಹುಡ್ರುಗ– ಅವರ ಜಗ್ಗಾಟ, ಏತ್ತರದ ಧನಿಯೊಳಗ ಆಡ್ತಿದ್ದ ಮಾತು ಗುದ್ದಾಟ್ದಂಗ ಕೇಳ್ಸಿತ್ತು. ಹೆಂಡ ಕುಡ್ದು, ಕಾಲಾನ ಕೆರವು ಕೈಯ್ಯಾಗ ಹಿಡ್ಕೊಂಡು ಮಾರಿ–ಮಾರಿಗ ಹೊಡ್ಕೋಳು ಜನರನ್ನ ಕಂಡ್ರಂತೂ ದನ್ದ ಹುಡ್ರುಗ ಎಲ್ಲಿಲ್ಲದ ಆನಂದ. ಕ್ಯಾಕಿ ಹಾಕಿ ಕುಣಿತಿರ್ತಾವ. ಮೂಲಿಮನಿ ಜಾನಕಿ, ಹಿಂದ್ಲೋರ ಬಸವ್ವ– ಹೆಂಡ ಸಿಗದಿದ್ಕ ದ್ಯಾಮನ ಅಂಗಡಿಯೊಳಗ ಯಾವುದೋ ಮಾತಿನ ಮ್ಯಾಲ ಕೂದ್ಲು ಹಿಡ್ಕೊಂಡು ಗುದ್ದಾಡ್ತ, ಊರ ಹಿಂದ್ಲ ಹೆಂಡದಂಗಡಿಯಿಂದ ಊರಾಗ ಬಂದಿದ್ರು. ಅವರ ಜಗಳ ನೋಡಿದ ಪದ್ಡಿ, ಮಾರ್ನೆ ದಿನ ಹನ್ಮಂತಿ ಕೂಡ ಹಂಗs ಗುದ್ದಾಡಿದ್ಲು. ಲಂಗಡಿ ಕುಂಟ್ಕೊಂತ, ಲಚಕ್–ಲಚಕ್ಂತ ಕಾಲ ಹೊಳಸಿ ಹಾಕ್ಕೊಂತ ಎಲ್ರಿಗಿಂತ ಹಿಂದಿದ್ಲು. ನಿಗರ ಅಲ್ಲೇ ಓಡಿ–ಓಡಿ ಸಾಕಾಗಿ, ಕುತ್ಕೊಂಡು ಮೂವಾರು ತಿಣಕೋದನ್ನ ನೋಡ್ತಿದ್ದ.

ತಿಗಳ ತಲಿ ಕೆರ್ಕೊಂಡವನ– “ಒಂದ ಕೆಲ್ಸ ಮಾಡನ ತಡಿ, ನೀವಿಬ್ರೂ ಬಿಗಿಯಾಗಿ ಹಿಡ್ಕೊಳ್ರಿ” ಅಂದವನs ಓಡಿ ಹೋಗಿ ತನ್ನ ಗಳೆದಾಗಿಂದ ಕುಂಟಿ ಮಿಣಿ ತಂದ. ಬಂಡಿಹೇರಿಗ ಗಂಟ ಬಿಗಿಯೊ ಹಂಗ ಉಡದ ಬಾಲಕ್ಕ ಬಿಗ್ದ, ಮೂವರಿಗೂ ಹಿಡ್ಕೊಳ್ಳಾಕ ಪಾಡಕ್ಕೈತಿ ಮತ್ತ ಜಗ್ಗಾಕೂ ಅನುಕೂಲಕ್ಕೈತಿ ಅಂದವನs ಗಟ್ಟಿಯಾಗಿ ತಿರಗುಣಕು ಹಾಕ್ದ. “ಭಾರಿ ಭಂಡ ಜಾತಿದೊ

ಮರಾಯ ಇದು, ಜಗ್ಗ-ಜಗ್ಗದಂಗ ನೆಲಾನಽ ಬಿಗಿ ಹಿಡ್ಕೊಂತೈತಿ” ಅಂದ ಬಾಬುರಿ. ಮೂವಾರು ಕೈಗ ಉಗಳಚ್ಚಿ ಮಣ್ಣಾಗ ಕೈ ಅದ್ದಿದ್ರು. ಒಮ್ಮೆಲೆ ಕಸು ತಗ್ದು ಜಗ್ಗಿದ್ರು. ಒಂದ ಇಂಚ ಜಾಗ ಬಿಟ್ಟು ಕದಲ್ಲಿಲ್ಲಾ. ಎಳ್ತದ ಕಸವಿನ್ಯಾಗ ಬುದ್ನಾ ಬುರ್-ಬುರ್‌ಂತ ಊಸು ಬಿಟ್ಟಿದ್ದನ್ನ ಕೇಳಿ, ದನ್ದ ಹುಡ್ರು ಹೊಟ್ಟಿ ಹಿಡ್ಕೊಂಡು ನಗ್ತಿದ್ವು. “ನಗಬ್ಯಾಡ್ರೊ, ದೇವರ ಕೊಟ್ಟ ಪೀಪಿ ಅದು” ಅಂತ ಆದ ಅವಮಾನನ ಸರಿಪಡಸ್ಕೋಳಾಕ ಪ್ರಯತ್ನಪಟ್ಟಾ ಬುದ್ನಾ. ಎಳ್ದಾಟ-ಜಗ್ಗಾಟದಾಗ ಹೊತ್ತು ನೆತ್ತಿಮ್ಯಾಲ ಬಂದಿತ್ತು. ಬಳ್ಳಾರಿ ಬಿಸಲು, ತೊಟ್ಟ ಬಟ್ಟಿಯೊಳಗ ಚುರ್‌ಂತ ಬೆನ್ನ ಸುಡೋದನ್ನ ಸಹಿಸಾಕ ಆಗದ ತಿಗಳ, ಬಾಬುರಿ ಮತ್ತೊಂದ ಸಲಾ ಜೋರಾಗಿ ಜಗ್ಗಿದ್ಕ ಉಡದ ಬಾಲ ತುಂಡಾತು. ಬುದ್ನಾಗ ಪಿತ್ತ ನೆತ್ತಿಗೇರತು. “ಏ ನಿಮ್ಮಪ್ರ ಹಾಳಾದ ಮನಿಯೋರ, ಬಾಲ ಮುರ್ದು ಉಡಾನ ಕೈ ಬಿಟ್ರಲ್ಲೋ” ಅಂದವನಽ ಮುರ್ದ ಬಾಲ ಬಿಸಾಕಿ, ಚೂರ ಬಾಲ ಕೈಗ ಸಿಕ್ಕಿದ್ದನ್ನ ಗಟ್ಟಿಯಾಗಿ ಹಿಡ್ಕೊಂಡ.

ದನಗಳ್ಯಾವಾಗ್ಲೋ ಮನಿ ಸೇರಿದ್ವು. ನಿಗರ, ಲಂಗಡಿ, ಪದ್ದಿ ಮಾತ್ರ ರೊಟ್ಟಿ ತಿಂದವರಽ ಬುದ್ನಾನ ಗುದ್ದಾಟ ನೋಡ್ಕೊಂತ ನಿಂತಬಿಟ್ಟಿದ್ರು. ಅರ್ದ ದನ ಊರಸೇರಿದ್ರ, ಇನ್ನರ್ಧ ಮುನಿಯಪ್ಪನ ಹೊಲ್ದಾಗ ಮೇಯ್ತಿದ್ಕ ಅವರಾಳು ತಿರಪಿಕೊಂಡು ದೊಡ್ಡಿಗ ಹಾಕಿದ್ರು. ಊರಾಗ- ನನ್ನ ಕರ ಬಂದಿಲ್ಲಾಂತ ಒಬ್ರು, ನಮ್ಮ ಎಮ್ಮಿ ಬಂದಿಲ್ಲಾಂತ ಮತ್ತೊಬ್ರು. ದನ ಕಾಯೋರನ್ನ ಕೇಳಾನಂದ್ರ ಯಾರೂ ಸಿಗದಿದ್ಕ, ಏನೋ ಎಡವಟ್ಟಾಗೈತಂತ ಊರ ಮಂದಿ ಗಾಬರಿಯಾಗಿ ಮಾಳಿ ಕಡಿಗ ಓಡಾಕತ್ರು. ಬುದ್ನಾ, ಹೊತ್ತು ಸಾರಥಿ ಗುಡ್ಡದ ಹಿಂದ ಮರಿಯಾಗಿ ಕತ್ಲಾಗಕತ್ತಿಂದ, ಉಡದ ಬಾಲ ಬಿಟ್ಟವನಽ ಕೊಂಚರಟ್ಟಿ ದಾರಿ ಬಿಟ್ಟು, ಹೋರಿಗ ದೊಡ್ಡ ಕಲ್ಲುಗಳನ್ನ ಬಡ್ದಾ. ಸುತ್ತಲು ನೋಡಿ ಪ್ಯಾರಿಮ್ಯಾಗಿನ ಎಲ್ಲಾ ಹೋರುಗಳಿಗ ಅಡ್ಡ ಕಲ್ಲು ಬಡ್ದಾ. “ನಾಳಿ ಮುಂಜಾನಿ ನಸಕಿನ್ಯಾಗ ಬಂದು ನೆಲತೋಡಿ ಹಿಡಿತೀನಿ” ಅಂತ ಪ್ರತಿಜ್ಞೆ ಮಾಡಿ, ತಂದ ಬುತ್ತಿಗಂಟ ತಗೊಂಡು ತಿರ್ನಳಿ ಕಡಿ ನಡದ, ನಿಗರ, ಲಂಗಡಿ, ಹನ್ಮಂತಿ ಬುದ್ನಾನ ಗಾಳಿ ಸುದ್ದಿ ನೆನಸ್ಕೊಂಡು ನಕ್ಕೊಂತ ಹೊಂಟಿದ್ರು. ನಿಗರನಪ್ಪ- “ಎಲ್ಲದಿಯೊ ಬಾಡ್ಯಾ, ಒಂದ ದನ ಮನಿಗ ಬಂದಿಲ್ಲಂತ”

ಒದರೋದು ಕೇಳಿಸ್ಕೊಂಡವನ ಜಣದಾಗ ಉಚ್ಚಿ ಹೊಯ್ಕೊಂಡ. ಕಳು ಹತ್ತಂಗ ಹೊಡಿತ್ತಾಳ ಅಪ್ಪ ಅಂದವನs ನಿಗರ ಮ್ಯಾಳಿ ಕಡಿ ಓಡ್ದಾ.

ಚುಮುಚುಮು ಹೊತ್ತು ಹೊಂಡೊದ್ರಾಗ ಬುದ್ದಾ ಸಲಕಿ, ಗುದ್ಲಿ, ಪುಟ್ಟಿ ತಗೊಂಡಪ್ಪs ಹಿರಿಮಗ ಈಸನನ್ನ ಕರ್ಕೊಂಡು ಕುಲ್ಕ ಹನ್ಮನ ಹೊಲಕ್ಕ ಬಂದಿದ್ದ. ಪಂಜಿ ಬಿಚ್ಚಿ ಹೋರಿನ್ಯಾಗಿಂದ ಕಲ್ಲ ತಗ್ದವನ ನೋಡ್ದ, ಉಡಾ ಕಾಣಲಿಲ್ಲಾ. ಸುತ್ತ್ಲ ಕಲ್ಲುಗಳನ್ನ ಗಮನಿಸಿದ. ಒಂದ ಹೋರಿನ್ಯಾಗ ಓತಿಕಾಟ ಓಡಿ ಹೊಂಟಿದ್ದನ್ನ ನೋಡಿ ಕಲ್ಲ ಬೀಸಿದ, ತಪ್ಪಸ್ಕೊಂಡು ಹೋರಿನ್ಯಾಗಿಳಿತು. ಈಸ ಗುದ್ಲಿಲೆ ನೆಲ ಸಡಲಿಸಿ ಅಗಿಯಾಕತ್ತಾ, ಬುದ್ದಾ ಮಣ್ಣನ್ನೆತ್ತಿ ಪಕ್ಕದಾಗ ರಾಶಿ ಹಾಕ್ದ. "ಒಂದ ಉಡದ ಮಾಸಕ್ಕಿಂತs ಇಡೀ ದಿನ ಕಾಡಸಿ, ತನ್ನ ಪರಾಕ್ರಮಕ್ಕ ಸವಾಲ ಹಾಕ್ಯೆತಿ ಅವನವ್ವನ ಉಡಾ" ಅಂತ ರಾತ್ರಿ ಸೇಂದಿ ಕುಡಕೊಂತ ಹೇಣ್ತಿ ಗಾಂಗ್ಲಿ ಮುಂದ ಗೊಣಗಾಕತ್ತಿದ್ದ. ಹೊತ್ತು ನೆತ್ತಿಮ್ಯಾಲ ಬಂದ್ರು ಹೋರು ಬಗಿಯೋದು ನಿಂತಿರ್ಲಿಲ್ಲಾ. ಸೊಂಟದಮಟ ಗುಂಡಿ ತೋಡಿದ್ರು. ಬುದ್ದ್ನಗ ಸಾಕಾಗಿ, ಮ್ಯಾರಿಮ್ಯಾಲ ಕುಂತ್ಕೊಂಡು ಕೊರಿಬೀಡಿ ತಗ್ಗು ಸೇದಾಕತ್ತಿದ್ದ. ಈಸ– "ಎಲ್ಲಿ ಹಚ್ಚಿ ನಿನ್ನ ಉಡಾ, ಮಾಡಿದ ಕೂಲಿ ಆಗಲಿಲ್ಲಾ, ನಾ ಹೊಕ್ಕಿನ್ನೋಡ" ಅಂದ. "ಲೇ ಬೇಬರ್ಸಿ, ಇದು ನನ್ನ ಪೌರುಸಕ ಹಾಕಿದ ಸವಾಲು. ಹಿಡಿಬೇಕು, ಹಿಡಿಬೇಕು. ಮಗನ, ಅದರ ಮಾಂಸ ತಿಂದ್ರ ಸೊಂಟ ಗಟ್ಟಿಆಕ್ಕೈತಿ ಗೊತ್ತೈತೇನು? ನಮ್ಮಜ್ಜ ಹೇಳಿದ್ಕ, ಕೆರಿ ಏರಿ ಹಿಂದ್ಲ 'ಮಣ್ಣವ್ವ'ನ ಹೊಲ್ದ ಮ್ಯಾರಿ ಮ್ಯಾಲ ಒಂದಸಲ ಮೂರು ಉಡಾ ಸಿಕ್ಕಿದನ್ನ ತಿಂದಿದ್ಕ ಇವತ್ತಿಗೂ ನನ್ನ ನಡ ಗಟ್ಟಿ ಐತಿ. ಅದ್ಕ ನಿಮ್ಮವ್ವ ನೀವು ಹನ್ನೆಲ್ಡ ಮಂದಿ ಹುಟ್ಟಿದ್ದು" ಅಂದ. "ಏ, ಅದರ ಮಾಂಸ ತಿಂದ್ರ ಎಲ್ಲಿ ಗಟ್ಟಿಯಾಗಬೇಕ ಏಳ" ಅಂದವನs ಅವನ ಮಾತಿಗ ಎದರಾಡ್ದ, ತಾಳಿ ಮರದ ಕಾಯಿನಾರ ಬಿಳಸಾನಂತ ಸರ-ಸರಾಂತ ಮರಹತ್ತಿ ತಾಳಿಕಾಯಿ ಕಿತ್ತ.

ಮ್ಯಾಳಿ ಕಡಿ ಬ್ಯಾಡ, ತುಂಬಿಗೇರಿ ಹಳ್ಳಕ ದನ ಹೊಡಿರಿ ಅಂತ ಊರಾನ ಮಂದಿ ತಾಕತು ಮಾಡಕತ್ತಿದ್ರು. ನಿಗರಗ ಮಾತ್ರ ನಿನ್ನೆ ನೋಡಿದ ಬುದ್ದಾನ ಗುದ್ದಾಟ, ಅವನಿಗ ಕಾಡಸ್ತಿರೊ ಉಡಾ ಹ್ಯಾಂಗರ ಇದ್ದೀತು ? ನೋಡಾಕ ಬೇಕಂತ ತುಂಬಿಗೇರಿ ಹಳ್ಳಕ ಹೋಗೊ ಮನಸಿಲ್ದ– "ಅಲ್ಲಿ ದೆವ್ವ ಅದಾವು,

ಬ್ಯಾಡ್ರಲೆ" ಅಂತ ನೊಳಿಯಾ, ಪದ್ದಿಗ ಕಿವಿಯೂದಿದ. "ಯಾವಾನಾರ ಜಾಲಿಯೊಳಗಿಂದ ಬಂದು ಹೆದರಿಸಿದ್ರ ?" ಅಂತ ಲಂಗಡಿ ತನಗ ಓಡಾಕ ಆಗದ್ದನ್ನ ಹೇಳಿಕೊಂಡ್ಲು. "ಅದಕ ಹೂಂ ಅನ್ನಿ, ಆಮ್ಯಾಕ ನಾವು ಕೇರಿ ಹಿಂದಿಂದ ಮಾಳಿ ಕಡಿ ಓಡ್ಸಿಬಿಡಾನಂತ" ಅಂತ ಇಚಾರ ಮಾಡಿ ಹಳ್ಳಕ ದನ ಗದಮಿದ್ರು. ತಿಮ್ಮನ ಹೊಲದಾಗ ಸ್ವಲ್ಪ ಹೊತ್ತು ನಿಲ್ಲಿಸಿ, ಹಳ್ಳದಾಗ ನೀರು ಕುಡ್ಸಿದವರ ಆಲ್ದ ಮರದ ಸಂದ್ಯಾಗಿಂದ ಮಾಳಿಕಡಿಗ ಗದಮಿದ್ರು. "ಆದ್ರ ಒಂದ ಮಾತು– ನಿನ್ನಿ ಹಂಗ ದನ ಬಿಟ್ಟು ಯಾರೂ ಹೋಗಂಗಿಲ್ಲಾ. ಮುನಿಯಪ್ಪನ ಮ್ಯಾರಿಗ ಲಂಗಡಿ, ನಿಗರ ಇರಬೇಕು" ಅಂದ್ಲು ಪದ್ದಿ. ನಿಗರಗ ಪ್ರಾಣ ಹೋದಂಗಾಗಿ– "ಏ ನಾ ಒಲ್ಲೆ. ನೀನು, ಲಂಗಡಿ ಇರ್ರಿ. ನಾನು, ಹನ್ಮಂತಿ ಗನಿ ಹೊಲ್ದ ಕಡಿ ಇರ್ತಿವಿ" ಅಂದ. ನೊಳಿಯಾ ಏನೋ ಅನ್ನಾಕತ್ತಿದ್ದ. ಲಂಗಡಿ ಹೂಂ ಅಂದಿದ್ಕ, ಖುಷಿಯಿಂದ ಹನ್ಮಂತಿ ಕರ್ಕೊಂಡು ಗನಿ ಹೊಲ್ದ ಕಡಿಗ ಓಡಿದ.

ಮಣ್ಣಿನ ರಾಸಿ ಗುಡ್ಡದಂಗ ಬಿದ್ದಿತ್ತು. ಬುದ್ಯಾ ಬೆವರ ಒರಸಾಕತ್ತಿದ್ದ. ಈಸ ಟುವಾಲಿಂದ ಮಕ ಒರಸಿ, ಮನಸಿನ್ಯಾಗ– ಕೆಲ್ಸ ಇಲ್ದ ಹೆಂಡದಂಗಡಿ ಮುಂದ ಕುಂತು ಅಂಡ ಬೆಳಸಕೊಂಡಿದ್ದ ಅವನಪ್ಪ, ತನಗ ಹಚ್ಚಿದ ಕೆಲ್ಸಕ್ಕ ಬೊಯ್ಯಕತ್ತಿದ್ದ. ನಿಗರ ಹನ್ಮಂತಿಗ ಗನಿ ಹೊಲ್ದಾಗ ನಿಲ್ಸಿ ಓಡಿ ಬಂದ. ಬುದ್ಯಾ ಪುಟ್ಟಿತುಂಬಿ ಹೊರಾಗ ಮಣ್ಣು ಚೆಲ್ಲಾಕತ್ತಿದ್ದ. ಮಣ್ಣಿನ್ಯಾಗ ಒಂದೆರಡು ಉಡದ ಮರಿಗಳು ಹೊರಗ ಬಿದ್ವು. "ಹತ್ರ ಬಂದೈತಲೆ ಈಸ, ದಂಡಿ ಕೆಡವಿ ಅಗಲ ಮಾಡು" ಅಂದ ಬುದ್ಯಾ. ದಂಡಿ ಕೆಡವಿ ಮಣ್ಣೆತ್ತಿ ಹಾಕಿದ. ನೆಲದ ಮ್ಯಾಲ ಗಟ್ಟಿಯಾಗಿ ಹಿಡಕೊಂಡಿದ್ದ ಉಡಾ, ಹೊಳ್ಯಾಡದಂಗ ಗಪ್ ಕುಂತಿತ್ತು.

ಹಿಂದ-ಮುಂದ ನೋಡ್ದ ಗುದ್ಲಿ ತಗೊಂಡವನs ಎತ್ತಿ ಉಡದ ತಲಿಗ ಕುಟ್ಟಿದ. ಕಚಕ್‌ಂತ ಧನಿ ತಗ್ಗಿದ್ದ ಕಾಲು–ಕೈ ಆಡಸಾಕತ್ತು. ಗುದ್ಲಿ ಹಾಕಿ ಎತ್ತಿ ಅಂಗಾತ ಮಾಡಿದ. ತನ್ನ ಪರಾಕ್ರಮ ಸವಾಲ ಹಾಕಿದ್ದ ಉಡಾ ಸತ್ತ ಹೆಣ ಆಗಿದ್ದನ್ನ ನೋಡಿದ. ಬುದ್ಯಾನ ಮಕದಾಗ ಮುಗಳ ನಗಿ ಮೂಡಿತ್ತು. ಸತ್ತ ಬಿದ್ದ ಉಡದ ಮ್ಯಾಲ ಹತ್ತಿ ಆಡ್ಯಾಡತ್ತಿದ್ದ ಮರಿಗಳನ್ನ ನೋಡಿದ ನಿಗರಗ ಕಣ್ಣಾಗ ನೀರು ಬಂದ್ವು. ಬುದ್ಯಾನ ಹೊಡ್ತಾ ಬಿದ್ದ ಸತ್ತ ಉಡಾನ

ನೆನಸ್ಕೊಂಡಾಗ– ಯಾರೋ ಅವನಪ್ಪನ್ನ ಕೊಂದಂಗಾಗಿ, ಕಳ್ಳು ಚುರ್ ಅಂದಿತ್ತು, ಬಿಸಲಾಗ ಸಣ್ಣ–ಸಣ್ಣ ಹತ್ತಾರು ಮರಿಗಳು ಚು–ಚು ಅನ್ಕೊಂತ, ಜೀವಂತ ಇದ್ದಾಗ ತಮ್ಮವ್ವ ಕೊಡ್ತಿದ್ದ ಸ್ವರ್ಗ ಇಲ್ಲ, ಆತ್ಮೀಯವಾಗಿ ಸತ್ತ ದೇಹದ ಸುತ್ತ ಅಡ್ಯಾಡೋದನ್ನ ನೋಡಿ ಜೋರಾಗಿ ಬಿಕ್ಕಳಸಾಕತ್ತ. “ಹೂಂ, ಹೂಂ ನಿನ್ನಪ್ಪ, ಆ ಅನಾಥ ಮರಿಗಳ ತಾಯಿ ಕೊಂದಿ. ನಿನಗ ದೇವರು ಸುಮ್ನ ಬಿಡಂಗಿಲ್ಲಾ, ಶಿಕ್ಷಿ ಕೊಡ್ತಾನ” ಅಂತ ಬುದ್ನ್ಯಾಗ ಬಾಯಿಗ ಬಂದಂಗ ಬೊಯ್ಕತ್ತ ನಿಗರ. ನಿಗರನ ಮಾತು ಕೇಳಿ ಸಿಟ್ಟಿಗೆದ್ದ ಬುದ್ನ್ಯಾ– “ಲೇ ನಿನವ್ವನ, ಅದೇನು ನಿಮ್ಮ ಸಾಕಿದ್ದೇನಲೆ” ಅಂದವನ ರಪ್–ರಪ್ಂತ ಕಪಾಳಕ ಬಾರಿಸ್ದ. ಮರಿಗಳಾಟ ಇನ್ನೂ ನಡ್ದಿತ್ತು. ನಿಗರಗ– ಮರಿಗಳಿಗ ನಡ್ದದ್ದನ್ನ ಹೇಳಬೇಕು, ಅವುಗಳನ್ನ ತನ್ನ ತೋಳಿನ್ಯಾಗ ತಗೊಂಡು ಅಪ್ಪಕೊಬೇಕು, ಮುದ್ದಾಡಬೇಕು ಅನಸ್ತು. ಹಾಳು ತಿನ್ನೊ ನಾವು, ನಮ್ಮ ನೆಳ್ಳು ಅವುಗಳ ಮ್ಯಾಲ ಬೀಳಬಾರ್ದು ಅಂದವನ ಬುದ್ನ್ಯಾ ಹೋಗೋದನ್ನ ಕಾಯ ತೊಡಗಿದ. ಸತ್ತ ಉಡಾನೆತ್ತೂ ಮುಂದ ಹೆದರಿದ ಮರಿಗಳು ದಿಕ್ಕಾಪಾಲಾದ್ವು. ಮುಂದ ತಮ್ಮವ್ವ ಕಾಣ್ದಕ್ಕ ಒಂದ ಹತ್ರ ಸೇರಿದ್ವು. “ನಿಮ್ಮಪ್ಪನ್ನ ಕೊಂದ್ರು ಹೂಂ, ಹೂಂ, ದನನಾರ ತಿನ್ನೋದು ಬಿಟ್ಟು ಉಡಾ ತಿಂತಾನ” ಅಂದಿದಕ್ಕ, ಕೆಟ್ಟಗಣ್ಣಿಂದ ನೋಡಿದ ಬುದ್ನ್ಯಾ, ಸಿಟ್ಟಿಲೆ ಕಲ್ಲೆತ್ತಿ ಮರಿ ಮ್ಯಾಲ ಹಾಕಾಕ ನೋಡ್ದ. ಅಡ್ಡ ಬಂದ ನಿಗರನ ಹಣಿಗ ಬಡ್ದು ರಕ್ತ ಬರಾಕತ್ತು. ಹೆದರಿದ ಬುದ್ನ್ಯಾ ಬೊಯ್ಕೊಂತ ಊರಿಗ ನಡ್ದ. ಮರಿಗಳನ್ನ ಸೇರಿಸ್ಕೊಂಡು ಅಳಾಕತ್ತಿದ ನಿಗರನ ನೋಡಿ ಹನ್ಮಂತಿ– ಲಂಗಡಿ, ಪದ್ದಿಯರನ್ನ ಕರಸಿದ್ಲು. ಮುದ್ದು–ಮುದ್ದಾಗಿದ್ದ ಮರಿಗಳನ್ನ ಕಂಡು, ಖುಷಿಲೆ ಎಲ್ಲರೂ ಎಲ್ಕ್ಯಡ್ಡು ಮರಿಗಳನ್ನ ತಗೊಂಡು, ಮಾಳಿ ಪಕ್ಕದ ಈಚಲಾಗ ಬಿಟ್ಟು ಅವಕ ರೊಟ್ಟಿ ಹಾಕಿದ್ರು. ಬಿಟ್ಟ ತಕ್ಷಣ ಓಡಿಹೋದ ಮರಿಗಳು, ರೊಟ್ಟಿ ರುಚಿ ನೋಡಾಕ ಬರ್ತಾವಂತ ನಿಗರ ಪ್ರತಿದಿನ ತನ್ನ ರೊಟ್ಟಿಗಂಟಿಂದ ಅರ್ಧ ರೊಟ್ಟಿ ಈಚಲದ ಸಂದಿಯೊಳಗ ಬಚ್ಚಿಡಕತ್ತ.

ಬದುಕಬಹುದಾಗಿದ್ದ ಸಾವು

ಮೂರು ವರ್ಷಗಳಿಂದ ಮರದ ಹಲಿಗೆಯ ಮೇಲೆ ಜಡದೇಹ ಹೊತ್ತು ತನ್ನ ಸುತ್ತಲೂ ಬದುಕಿರುವ ಮಗ, ಸೊಸೆಯರಿಗೆ ಭಾರವಾಗಿರುವ 'ಬಾಚವ್ವ' ಯೋಚನೆ ಮಾಡುವ ಶಕ್ತಿಯನ್ನ ಕಳೆದುಕೊಂಡಿದ್ದಳು. ಬದುಕಿನ ಅರ್ಥ ತಿಳಿಯುವ ಮೊದಲೇ ಒಂಬತ್ತು ವರ್ಷಕ್ಕೆ ಮದುವೆ. ಪ್ರಾಯ ಬಂದಾಗಲೇ, ಹದಿನೈದು ಮಕ್ಕಳಿಗೆ ಜನ್ಮ ಕೊಟ್ಟು ಪ್ರಾಯ ಕಳೆದುಕೊಂಡಿದ್ದಳು.

ಅತ್ತೆ 'ಗುಜರವ್ವ' ಮುಂಜಾನೆ ಮುಂಗೋಳಿ ಕೂಗುವ ಮೊದಲೇ ಎದ್ದು, ಬಾಚವ್ವ ಬೀಸುವ ಕಲ್ಲಿನ ಮುಂದೆ ಕುಳಿತು ತೂಕಡಿಸುತ್ತಿದ್ದಾಳೊ ಇಲ್ಲಾ ಹಿಟ್ಟು ಬೀಸುತ್ತಿದ್ದಾಳೊ ಎಂಬುವುದನ್ನು ಖಾತ್ರಿ ಮಾಡಿಕೊಳ್ಳಲು ಸಪ್ಪಳ ಮಾಡದೆ ಬರುತ್ತಿದ್ದಳು. ಬಾಚವ್ವ ಮಲಗಿದ್ದು ನೋಡಿದರೆ ಜಾಡಿಸಿ ಒದೆಯುತ್ತಿದ್ದಳು, ಕೂದಲು ಹಿಡಿದು ದರದರ ಎಳೆದು ತಂದು ಬೀಸುವ ಕಲ್ಲಿಗೆ ತಲೆ ಚಚ್ಚುತ್ತಿದ್ದಳು. ತೊಟ್ಟಿಲಲ್ಲಿ ಅಳುವ ಕೂಸು, ಕಣ್ಣು ಪಿಚ್ಚ ತುಂಬಿಕೊಂಡು ಕಣ್ಣು ತೆರೆಯಲಾಗದೆ ಅಳುತ್ತಿದ್ದ ಉಳಿದ ಒಂದೆರಡು ಹುಡುಗರಿಗೆ ಸಮಾಧಾನ ಹೇಳಲಾಗದೆ, ಗುಜರವ್ವ ಬಂದು ಅಪ್ಪಣೆ ಕೊಡುವವರೆಗೆ ಹಿಡಿದ ಕೆಲಸ ಬಿಡುವಂತಿರಲಿಲ್ಲಾ. ಗೊಂದಲದ ಬದುಕಿಸಿಂದಾಗ ಆರು ಮಕ್ಕಳು ತೀರಿಕೊಂಡ ನಂತರ, ಮುದುಕಿ ಗುಜರವ್ವ ಸತ್ತುಹೋದಳು. ಉಳಿದ ಆರು ಗಂಡು, ಮೂರು ಹೆಣ್ಣು ಮಕ್ಕಳ ಸಲುವಾಗಿ ಊರೂರು ಅಲೆದು ಕೂಲಿಮಾಡಿ ರಾಗಿ ತಂದು ಮಕ್ಕಳ ಹೊಟ್ಟೆ ತುಂಬಿಸುತ್ತಿದ್ದ ಬಾಚವ್ವ, ಹಗಲು-ರಾತ್ರಿ ಗಂಡಸಿಗೆ ಹೆಗಲು ಕೊಟ್ಟು ದುಡಿದು, ಶಿರ್ನಳಿಯಿಂದ ಕಟ್ಟಿಗೆ ಹೊರೆ ಹೊತ್ತು

ಪರಿಪರಕ್ಕೆ ಹೋಗಿ ಮಾರಿ, ಕಳ್ಳಭಟ್ಟಿ ಸೆರೆ ಮಾಡಲು ಬಾಸಿಬೆಲ್ಲ ಕೊಟ್ಟು ಹಣ ಮಾಡಿ ಪೊಲ ಕೊಂಡಾಗ ಹುಮ್ಮಸ್ಸುಗೊಂಡಿದ್ದಳು.

ದೂರದ ಅಪ್ಪೇನಹಳ್ಳಿಯಿಂದ ಗುಳೆ ಬಂದಿದ್ದ ಭದ್ರನಾಯ್ಕ ಅಂದರೆ ಬಾಚವ್ವನ ಮಾವ ಕೂಲಿ ಮಾಡುವುದನ್ನ ಬಿಟ್ಟರೆ ಮತ್ತೇನನ್ನು ಮಾಡಿರಲಿಲ್ಲ. ಬಾಚವ್ವನ ಗಂಡ ನಾಗ ಕುಡಿದು, ಅಮಲಿನಲ್ಲಿ ಮೈ ಮೂಳೆ ಮುರಿಯುವಂತೆ ಹೊಡೆಯುತ್ತಿದ್ದ. ಹೊರಗಡೆ ಚೆಂಗವ್ವ, ಗಂಡ ಸತ್ತವಳ ಸಹವಾಸ ಮಾಡಿದ ಮೇಲಂತು ದಿನ ಜಗಳ, ಹೊಡೆದಾಟ. ಒಂದೊಂದು ಸಾರಿಯಂತು ಕಲ್ಲಿಂದ ಬಾಚವ್ವನ ತಲೆ ಚಚ್ಚಿ, ಎಚ್ಚರ ತಪ್ಪಿದಾಗ ಹುಚ್ಚನಾಗಿ ಮನೆ ಬಿಟ್ಟು ಹೋಗಿ ಬಿಡುತ್ತಿದ್ದ. ಹೀಗೆ ಸಂಘರ್ಷದ ಬದುಕನ್ನು ನೂಕಿದ ಬಾಚವ್ವ, ಒಬ್ಬ ಮಗ ಓದುವಾಗ ಗಂಡನ ಹೆದರಿಕೆಯಿಂದ ಬುತ್ತಿ ಗಂಟಿನಲ್ಲಿ ನೋಟುಗಳನ್ನಿಟ್ಟು ಮುಟ್ಟಿಸಿ, ಅವನು ಓದಿ ನೌಕರಿ ಪಡೆದಾಗ ಸಾರ್ಥಕತೆಯ ನಗೆ ಬೀರಿದ್ದಳು.

ಮೂರು ಹೆಣ್ಣುಮಕ್ಕಳ, ನಾಲ್ಕು ಗಂಡುಮಕ್ಕಳ ಮದುವೆಯಾದಾಗಲೆ ಮನೆ ಹೊಡೆಯುವ ಕ್ರಿಯೆ ನಡೆಯತೊಡಗಿತು. ಕುಡಿದ ಅಮಲಿನಲ್ಲಿ ಮಕ್ಕಳು ತಾಯಿಯನ್ನು ನೋಡದೆ ಹೊಡೆದಾಗ, ಹಸಿವಾಗಿದ್ದರೂ, ಅತ್ತ ಮಕ್ಕಳಿಗೆ ಉಣಬಡಿಸಿದ ಮಮತೆ ಮೂಲೆಗುಂಪಾಗಿ, ಮನಸಿನಾಳದ ನೋವನ್ನ ತೋಡಿ ಕೊಳ್ಳಲು ಕುಡುಕ ಗಂಡ ಮುಂದಾದಾಗ ಹಿಡಿತ ತಪ್ಪಿದ ಮನಸು ಹರಿದಾಡ ತೊಡಗಿತು. ಹಾತೊರೆದು ಆಘಾತಗೊಂಡಾಗ ಜಡದೇಹ ಹೊತ್ತು– ಆರು ಜನ ಮಕ್ಕಳು, ಆರು ಜನ ಸೊಸೆಯಂದಿರು, ಮೊಮ್ಮಕ್ಕಳು, ಗಂಡ– ಯಾರ ಪರಿವೆಯೂ ಇಲ್ಲಾ. ದೇಹ ಜಡದೇಹ– ಹೆಸರು, ಘಟನೆ, ಮುಖಚರ್ಯೆ ಯಾವುದು ನೆನಪಿಲ್ಲಾ. ಹೊಟ್ಟೆ ಹಸಿವಾದಾಗ ಮಗಳ–ಮಗಳು 'ಮಲ್ಲಿ'ಯನ್ನ ಕೂಗುತ್ತಿದ್ದಳು. 'ಮಲ್ಲಿ' ಉಳಿದ ಜೀವದ ಆಧಾರಸ್ತಂಭವಾಗಿದ್ದಳು. ಅರವತ್ತು ವರ್ಷಗಳಿರಬಹುದಾದ ಮುದುಕಿ ಬಾಚವ್ವಗೆ ಈಗ ನೆನಪಿರುವುದು ಒಂದೇ ಹೆಸರು– ಮಲ್ಲಿ. ಪ್ರತಿ ತಿಂಗಳು ಖರ್ಚಿಗೆ ನೂರು ರೂಪಾಯಿ ಕಳುಹಿ ಸುತ್ತಿದ್ದ ಕಿರಿಯ ಮಗನಾಗಲಿ; ಅಪ್ರಾಪ್ತ ವಯಸ್ಸಿಗೆ ಮದುವೆಯಾದಂದಿನಿಂದ ಜೊತೆಗೆ ಇದ್ದ ಗಂಡ ನಾಗ, ಹೆಸರು ಯಾವುದು ನೆನಪಿಲ್ಲಾ. ವಾಸ್ತವದ ಕಠಿಣ ಕ್ಷಣಗಳನ್ನ ಒಂದೊಂದಾಗಿ ವೇದನೆಯಿಂದ ನೂಕುತ್ತಾ, ನೋವಾದ

ದೇಹವನ್ನ ಹೊರಳಿಸಲು ಆಗದೆ ಪ್ರಯತ್ನಿಸಿ, ವಿಫಲಳಾಗಿ ನೋವನ್ನ ನುಂಗಿಕೊಂಡು ಬದುಕುವುದನ್ನ ರೂಢಿ ಮಾಡಿಕೊಂಡಿದ್ದಳು.

ತಿಂಗಳಿಗೊಮ್ಮೆ ದೂರ ಊರಿಂದ ಬರುತ್ತಿದ್ದ ಕಿರಿಯ ಮಗ ಬರುವ ದಾರಿ ಕಾಯುತ್ತಾಳೆಂದು ಊರ ಜನ ಹೇಳಿದ್ದನ್ನು ಕೇಳಿದ ಕಿರಿಯ ಮಗ, ಮುದುಕಿಯ ಮನೋವೇದನೆ ಗ್ರಹಿಸಲು ಹವಣಿಸತೊಡಗಿದ. ಹೊಲಸು ಹಾಸಿಗೆ ತೊಳೆದು, ಮೈ ತೊಳಸುವಾಗ ನಡುವಲ ಮಗನ ಸೊಸೆ– "ಹಾಳಮುದುಕಿ ಯಾವಾಗ ಸತ್ತೀತು" ಎಂದು ಗೊಣಗುವುದನ್ನು ಕೇಳಿಸಿಕೊಂಡ ಬಾಚವ್ವ, ಬತ್ತಿದ ಕಣ್ಣುಗಳಲ್ಲೂ ನೀರು ತಂದುಕೊಳ್ಳುತ್ತಿದ್ದಳು. ಕುಡಿದು ಬರುತ್ತಿದ್ದ ಗಂಡ, ಬಾಯಿಗೆ ಬಂದಂತೆ ಬೊಯ್ಯುತ್ತಿದ್ದ– "ಸಾವು ಬಂದಿಲ್ಲೇನು, ಯಾಕ ಸಾಯಬಾರದು ?" ಎಂದಾಗ, ಬಾರದ ಸಾವಿನ ಹಾದಿ ಕಾಯುತ್ತಿದ್ದಳು. ಏನೋ ತಿಳಿದಂತಾಗಿ ಸಾವನ್ನ ಶಪಿಸುತ್ತಿದ್ದಳು. ಬಾಚವ್ವನ ಕಿರಿಯ ಮಗನಿಗೂ ಬಾಚವ್ವ ಹೊರೆಯಾಗತೊಡಗಿದ್ದು ಕಂಡಾಗ, ಭೂಮಿಯ ಋಣ ಹರಿದು ಕೊಳ್ಳಲು ಹವಣಿಸತೊಡಗಿದಳು. ಗಂಡ ಬೇಡವೆಂದಾಗಲೂ, ಬೆಳೆದ ಭ್ರೂಣ ಹತ್ಯೆ ಮಾಡದೆ ಜನ್ಮ ಕೊಟ್ಟ ಕೊನೆಯ ಮಗ– "ಕೊಂದು ಬಿಡ್ತೀನಿ ನಿನ್ನ" ಎಂದು ಹೇಳಿದ್ದಕ್ಕೆ, ಬಾಚವ್ವ ಊಟ ಬಿಟ್ಟು ದೂರದಲ್ಲಿದ್ದ ಕಿರಿಯ ಮಗನನ್ನ ಕರೆಸಿಕೊಂಡು, ಕಣ್ತುಂಬ ನೋಡುವ ಆಶೆ ವ್ಯಕ್ತಪಡಿಸಿದಳು.

ಎಂಟು ದಿನಗಳವರೆಗೆ ಅದೇ ವೇದನೆ, ಸಾವು–ಬದುಕಿನ ನಡುವೆ ದೀರ್ಘವಾದ ಹೋರಾಟ. ನಾಲಿಗೆ ಒಳಗೆ ಎಳೆದುಕೊಂಡಿದ್ದವು. ಕಣ್ಣು ಗುರುತು ಹಿಡಿಯುವ ಸಾಮರ್ಥ್ಯ ಕಳೆದುಕೊಂಡಿದ್ದವು. ತೊಟ್ಟು ಗಂಜಿ, ಸ್ವಲ್ಪ ನೀರು. ಮಲ್ಲಿಯ ಹೆಸರು ಹಿಡಿದು ಕೂಗತೊಡಗಿದಳು ಬಾಚವ್ವ. "ಏ, ಎಲ್ಲೆ ಮಲ್ಲಿ ಹಚ್ಚಿ, ಸುಮ್ನ ಸಾಯಿ" ಎಂದು ಗಂಡ ಗದರಿಸಿದಾಗ, ಶಬ್ದ ಜೋಡಿಸಿ ಮಾತನಾಡಲಾರದೆ ಮೌನವಾಗಿಬಿಡುತ್ತಿದ್ದಳು. ಹಿರಿಮಗಳು–ಮಗ ಅಪರಪ್ಪನಿಗೆ– ಮಲ್ಲಿಯನ್ನ ಕರೆದುಕೊಂಡು ಬರುತ್ತೇವೆ ಎಂದಾಗ– "ಎಲ್ಲಿ ಹಚ್ಚೀರಿ ನೀವು, ಒಂದ ಸಲಾ ಮನಿಬಿಟ್ಟು ಹೋಗ್ಯಾಳ, ಮತ್ತ ಬರೋದು ಬ್ಯಾಡ" ಎಂದು ಹಠ ಹಿಡಿದುಬಿಟ್ಟ. ಎಂದೂ ಸೋಲದ ನಾಗಪ್ಪ, ಹೆಂಡತಿ ಸಾವಿನಲ್ಲೂ ಸೋಲಲು ತಯಾರಿರಲಿಲ್ಲ.

ಮಲ್ಲಿ ಮೇಲೆ ಜೀವ ಓಡಿದಿರಬೇಕೆಂದು ಊರ ಮಂದಿ ವಾದಿಸಿದರೂ, ಇಡಿ ಊರು ಒಂದಾಗಿ ಚುನಾವಣೆ ಎದುರಿಸಿದಾಗ ಸೋಲಲಿಲ್ಲದ ಗಂಡು ನಾನು. ಅದು ಸಾವು ಯಾರಿಗಾಗಿ ಕಾಯೋದಿಲ್ಲಾ, ಬಂದಾಗ ಬಂದೇ ಬರುತ್ತದೆ ಎಂಬ ತನ್ನ ಮೂರ್ಖ ಅಭಿಪ್ರಾಯವನ್ನೆ ಮುಂದುವರೆಸಿದ.

ಮೂರು ವರ್ಷದ ಕೊಸೆಯಲ್ಲಿ ಮಾತಿನ ಜೊತೆಗೆ ಸಂಪರ್ಕದ ಕೊಂಡಿಯನ್ನ ಕಳಚಿಕೊಂಡು ನಿಸ್ತೇಜಳಾಗಿ ಬಿದ್ದುಕೊಂಡಿದ್ದಳು ಬಾಚವ್ವ. ಹೆಣ್ಣು-ಗಂಡೆನ್ನದೆ ಬೋರಾಡಿ ಅಳತೊಡಗಿದರು. ಬಾಚವ್ವ ಕೊಂಡ ಹೊಲ, ಕಟ್ಟಿಸಿದ ದೊಡ್ಡ ಕೆಂಪುಹಂಚಿನ ಮನಿ, ವಿದ್ಯೆ ಕೊಟ್ಟ ಮಕ್ಕಳು ಎಲ್ಲವೂ ಅವಳ ಅಳತೆಯಿಂದ ದೂರವಾಗಿದ್ದವು. ಕ್ಷೀಣವಾಗಿದ್ದ ಉಸಿರಾಟಕ್ರಿಯೆ ಇನ್ನೂ ಬದುಕಿದ್ದಾಳೆ ಎಂಬುದನ್ನ ಸೂಚಿಸುತ್ತಿತ್ತು.

ಮೂರು ದಿನಗಳಿಂದ ಮುಂಜಾನೆ ಬೇಗ ಅಡಿಗೆ ಮಾಡಿ ಊಟ ಮಾಡುವುದು, ರಾತ್ರಿ ಹೊತ್ತು ಮುಳುಗುವುದಕ್ಕಿಂತ ಮುಂಚೆ ಊಟ ಮಾಡುವ ಕ್ರಿಯೆ ಮನೆಯಲ್ಲಿ ನಡೆದಿತ್ತು. "ಸಣ್ಣ ಮಕ್ಕಳಿರುವ ಮನೆ, ಉಂಡಬಿಡ್ರಿ ಸತ್ತಾಳು ಮುದುಕಿ" ಎಂಬ ಊರವರ ಮಾತಿಗೆ ಪ್ರತಿಕ್ರಿಯಿಸಿದಂತಿತ್ತು. ಮುಂಗಾರಿನ ದಿನಗಳು, ಪ್ರತಿವರ್ಷ ಕೈಕೊಡುವ ಮುಂಗಾರು ಸಮಯಕ್ಕೆ ಸರಿಯಾಗಿ ಆಗಿದ್ದರಿಂದ ಜನ ಬಿತ್ತಲು ಬಡಿದಾಡತೊಡಗಿದ್ದರು. ಬಿತ್ತಲು ಹೋದವರು ಆತಂಕದಿಂದ ಮುದುಕಿಯ ಸಾವಿಗಾಗಿ ಎದಿರು ನೋಡುತ್ತಿದ್ದಂತಿತ್ತು. ಸಾವಿಗಿಂತ ಮುಂಚೆ ಗೋದಿ, ಅಕ್ಕಿ, ಬೆಲ್ಲಾ, ಬೇಳೆ ತಿಥಿಗಾಗಿ ತಯಾರಾಗಿದ್ದವು. ಎಲ್ಲರಿಗೂ ಮುದುಕಿಯ ಸಾವು ಅನಿವಾರ್ಯವಾಗಿತ್ತು. ಆದರೆ ದೂರದ ಊರಿನಿಂದ ಬಂದಿದ್ದ ಮಗನಿಗೆ ಮಾತ್ರ ಬೇಡವಾಗಿತ್ತು. "ಮುದುಕಿ ಸಾಯಲಾರಳು, ಎಷ್ಟೊ ಜನರು ಸುಡುಗಾಡಿನಿಂದ ವಾಪಾಸಾಗಿದ್ದಾರೆ. ಹಾಗೇನಾದರೂ ತನ್ನ ತಾಯಿ ಬದುಕಿದರೆ ?" ಎಂಬ ಹುಚ್ಚು ವಿಚಾರಗಳನ್ನ ಬೆನ್ನತ್ತಿದ್ದ. ಮೂಲೆಯಲ್ಲಿ ಕುಳಿತು- ತನ್ನ ತಾಯಿ ಕಳೆದ ಮೂರು ವರ್ಷಗಳಿಂದ ಪಟ್ಟ ಪಾಡನ್ನು ಸ್ಮರಿಸಿಕೊಳ್ಳಲು ಹವಣಿಸಿ ವಿಫಲನಾಗಿದ್ದ.

ನಾಗಪ್ಪ, ಬಾರದ ತನ್ನ ಅಳಿಯಂದರನ್ನ ಬೊಯ್ಯತೊಡಗಿದ. ಚೆನ್ನಾಗಿದ್ದಾಗ ಮನೆ ಮುರಿದು ಹೋದವರು, ಬದುಕಿದಾಗ ಬಂದು ಮುಖ

ನೋಡಲಿಲ್ಲಾ ಎಂದು ಕುಡಿದು ಕೆಂಡ ಕಾರತೊಡಗಿದ. ಯಾವ ಮಾತಿಗೂ ಸ್ಪಂದಿಸದೆ ಮಲಗಿದ್ದ ಬಾಚವ್ವ, ತನ್ನ ಅವಸ್ಥೆಯಿಂದ ಬಿಡುಗಡೆಗೊಂಡಿದ್ದಳು. ಉಸಿರು ನಿಂತಿತ್ತು. ಒಂದು ಕ್ಷಣ ಬದುಕೆ ನಿಂತಂತಾಗಿತ್ತು. ಬಾಚವ್ವನ ದೂರದೂರಿನಲ್ಲಿದ್ದ ಮಗನಿಗೆ ಮುದುಕಿಯ ಸಾವು ನಿಗೂಢವೆನಿಸತೊಡಗಿತು. ಮುದುಕಿ ಬದುಕುತ್ತಿದ್ದಳು, ಆದರೆ ಅವಳನ್ನ ನೀವು ಕೊಂದಿರಿ ಎಂದು ಹೇಳಬೇಕು ಎನಿಸಿತು. ಸಾಯುವುದಕ್ಕಿಂತ ನಾಲ್ಕುದಿನ ಮುಂಚೆ ಅವನ ಕಿರಿಯ ಅತ್ತಿಗೆ- "ಅತ್ತೆ ಯಾವಾಗ ಸಾಯ್ತಿ" ಎಂದು ಕೇಳಿದ್ದಕ್ಕೆ, ಮಾತನಾಡಲು ಸಾಧ್ಯವಾಗದ ಮುದುಕಿ ಒಂದು ಸಾರಿ ಉಸಿರು ಬಿಟ್ಟು, ಅವಳ ಸಾವಿನ ದಾರಿಯನ್ನೇ ಕಾಯುತ್ತಿರುವಳಿವಳು ಎಂಬಂತೆ, ತನ್ನೊಳಗೆ ನೊಂದುಕೊಂಡು ತಿಳಿಯದೆ- "ನಾಳೆ ಸಾಯ್ತೇನಿ" ಎಂದಿದ್ದಳು. ಅವಳ ಮಾತು ಮುದುಕಿಯ ಸಾವಾಯಿತೆ? ಅವನು ಊಹಿಸದಾದ. ಅದೇ ಕಿರಿಯತ್ತಿಗೆ ಮುಸುಕಿನೊಳಗೆ ಮುಸಿಮುಸಿ ಅಳುತ್ತಿರುವುದನ್ನು ನೋಡಿದಾಗ, ಅವನಿಗೆ ಅಳುವಿನಲ್ಲೂ ನಗು ಬಂತು. ಹೊಲದಿಂದ ಬಂದ ಅವನ ತಮ್ಮ ಜೋರಾಗಿ ಅಳುತ್ತಿರುವುದು ಏಕೋ ಅವನಿಗೆ ಸರಿಕಾಣಲಿಲ್ಲಾ. ಮುದುಕಿಯನ್ನ ದವಾಖಾನೆಗೆ ಸೇರಿಸೋಣ ಬದುಕುತ್ತಾಳೆ, ಖಂಡಿತ ಬದುಕುತ್ತಾಳೆ ಎಂದು ಅವನು ಉಳಿದ ಐದು ಜನರ ಹತ್ತಿರ ಅಂಗಲಾಚಿ ಬೇಡಿಕೊಂಡಿದ್ದ; ಪ್ರಯೋಜನವಾಗಲಿಲ್ಲಾ. ಯಾರೂ ಅವನ ಮಾತುಗಳನ್ನ ಕಿವಿಯಲ್ಲಿ ಹಾಕಿಕೊಳ್ಳಲಿಲ್ಲಾ. ಜನರ ಕಣ್ಣಿಗೆ ಮಾತ್ರ 'ಸಾಚಾ' ಎಂಬಂತೆ, ಒಬ್ಬರಿಗಿಂತ ಒಬ್ಬರು ಜೋರು-ಜೋರಾಗಿ ಅಳುವ ನಾಟಕ ನಡೆಸಿದ್ದರು. ಬದುಕಿದ್ದಾಗ ಒಂದು ದಿನವಾದರೂ ಬಂದು ನೋಡದ ಅವನ ಹಿರಿಯಕ್ಕ ರಾಕ್ಷಸಿಯಾಗಿ ಕಾಣತೊಡಗಿದಳು. ತಾಯಿಯ ನೆರವಿಗಿದ್ದ ಮಗಳನ್ನು ತನ್ನೊಂದಿಗೆ ಕರೆದುಕೊಂಡು ಹೋದ ಮತ್ತೊಬ್ಬ ಅಕ್ಕ, ತನ್ನ ತಾಯಿ ಮನೆಗೆ ಬಂದ ಜನರ ಬಳಿ ನಾಲ್ಕಾಣೆ, ಎಂಟಾಣೆಗೆ ಕೈ ಮುಂದೆ ಮಾಡಿ ಬೇಡುತ್ತಿದ್ದಾಗಲೂ ಒಂದು ರೂಪಾಯಿ ಕೊಡದ ಚಿಕ್ಕ ಅಕ್ಕ ಸಂಬಂಧಕ್ಕೆ ಅಪವಾದವೆನಿಸ ತೊಡಗಿದರು.

ಅಜ್ಜಿಯ ರೋಗ ಅಂಟಿಕೊಂಡೀತು, ಬದುಕಿದ್ದಾಗ- ಮುದುಕಿ ನಮ್ಮವ್ವಗೆ ಹಿಂಸೆ ಕೊಟ್ಟಾಳ ಎಂದು ದೂಷಿಸುತ್ತಿದ್ದ ಮೊಮ್ಮಕ್ಕಳು ಅಳುತ್ತಿದ್ದರು. ಅವನಿಗೆ ಕೋಪ ಬಂದಿತ್ತು. "ನಿಲ್ಲಿಸಿ, ನಿಲ್ಲಿಸಿ, ಯಾಕ ಅಳ್ತಿದ್ದೀರಿ,

ಯಾಕ ಅಳ್ತೀರಿ ? ಬದುಕಬಹುದಾಗಿದ್ದ ಮುದುಕಿಯನ್ನ ಬೇಗ ಕೊಂದು ನಿಶ್ಚಿಂತರಾಗಿರುವುದಕ್ಕೋ ?" ಎಂದು ಕೂಗಬೇಕು ಎನಿಸಿತು. ತನ್ನ ಭಾವನೆಯನ್ನ ಅರ್ಥ ಮಾಡಿಕೊಳ್ಳುವ ಶಕ್ತಿ ಈ ಜನರಿಗಿಲ್ಲಾ ಎಂದು ಗೊತ್ತಾಗಿ ಅಂತ್ಯಕ್ರಿಯೆಯೊಳಗೆ ಪಾಲ್ಗೊಂಡ. ಕಟ್ಟಿಗೆ ರಾಶಿಯ ನಡುವೆ ಬಂದ ಹಾಗೆ, ವಾಪಾಸದ ತಾಯಿಯ ದೇಹವನ್ನು ಕೊನೆ ಸಾರಿ ಕಣ್ತುಂಬ ನೋಡಿದ ಅವನು. ಬೆಂಕಿಯ ಜ್ವಾಲೆಗಳ ನಡುವೆ ಕರಗಿ ಹೋಗುತ್ತಿದ್ದಂತೆ ಮನಸಿನಿಂದ, ನೆನಪಿನಿಂದ ತಾಯಿಯ ಮುಖ ದೂರವಾಗತೊಡಗಿತು.

ಸುತ್ತೆಲ್ಲಾ ಸಂಭ್ರಮ. ಕುಡಿದು, ಅಮಲೇರಿ ಓಲಾಡುತ್ತಿದ್ದ ಜನರ ನಡುವೆ– ನೈಜ ದುಃಖಿಯಾಗಿರಬಹುದಾದ ಒಂದು ಜೀವವನ್ನ ಹುಡುಕಲು ಹವಣಿಸತೊಡಗಿದ ಅವಳ ದೂರದೂರಿನ ಮಗ. ಸತ್ತ ಮನೆಯಲ್ಲಿ ಹಬ್ಬದ ವಾತಾವರಣವಿತ್ತು. "ಶನಿಯಾಗಿ ಕಾಡುತ್ತಿದ್ದ ಮುದುಕಿ, ಮನೆ ಬಿಟ್ಟು ತೊಲಗಿದ್ದಕ್ಕೆ ಖುಷಿ ಪಡುತ್ತಿರಬೇಕು ?" ಎಂದು ತನ್ನ ತಾಯಿ ಸಾಯುವ ಮುನ್ನ, ಮನೆಯಿಂದ ಹೊರಗೆ ಕಟ್ಟೆಯ ಮೇಲೆ ಅಂಗಾತವಾಗಿ ಮಲಗಿದ್ದ ಆ ಜಾಗದಲ್ಲಿ ಮುದುಕಿ ಬಾಚವ್ವನ ದೇಹ ಕಂಡೀತು ಎಂದು ಮತ್ತೆ-ಮತ್ತೆ ನೋಡತೊಡಗಿದ. ಅವನಿಗರಿವಿಲ್ಲದೆ ಕಣ್ಣೀರ ಹನಿಯೊಂದು ಕಪೋಲದ ಮೇಲೆ ಹಾಯ್ದು ಜಾರಿ ಅಂಗಿಯ ಮೇಲೆ ಬಿದ್ದು ಮಾಯವಾಯಿತು.

□

ಆಯಾ

ಮಂಡುಕತ್ತಿಯನ್ನು ನುಣುಪಾದ ಕಲ್ಲಿಗೆ ಗಸಾಗಸಾ ತಿಕ್ಕುತ್ತಿದ್ದ ಕಾಯಕದ ಹನುಮಂತ ಕೆಮ್ಮತೊಡಗಿದ. ಅರ್ಧ ಗಂಟೆಯಾದರೂ ಕಡಿಮೆಯಾಗದ ಕೆಮ್ಮು ಪ್ರಾಣ ಹಿಂಡುತ್ತಿತ್ತು. ಕೈಯಲ್ಲಿದ್ದ ಕತ್ತಿ, ಕಲ್ಲು ಪಕ್ಕದಲ್ಲಿಟ್ಟ. ಹನುಮಂತನ ಮುಂದೆ ತಲೆ ಕೊಟ್ಟು ಕುಳಿತಿದ್ದ ಪಕ್ಕೀರನಿಗೆ ಪೇಚಿಗಿಟ್ಟಿತು. ಅರ್ಧ ತಲೆ ಬೋಳಿಸಿದ್ದ. ಕೆಮ್ಮು ಕಡಿಮೆಯಾಗಲಿಲ್ಲಾ, ಅಯ್ಯೋ ಎಂದ ಪಕ್ಕೀರ ಎದ್ದು ಹೋಗಲಾಗದೆ. ಕೆಮ್ಮಿ-ಕೆಮ್ಮಿ ಹನುಮಂತನ ಕರಿಮುಖ ಕೆಂಪಾದದ್ದನ್ನು ಗಮನಿಸಿ, ಪಕ್ಕದ ಮನೆಗೆ ಓಡಿ ನೀರು ತಂದವನೆ ಕುಡಿಯುಲು ಕೊಟ್ಟ. ಮೂವತ್ತು ವರ್ಷದ ಹನುಮಂತ, ಅರವತ್ತು ವರ್ಷ ದಾಟಿರುವಂತೆ ಸುಕ್ಕುಗಟ್ಟಿದ ಮುಖ. ಬಿಳಿಕೂದಲು ಎದ್ದು ಕಾಣುತ್ತಿದ್ದ ಮುಖದ ಮೇಲಿನ ಗೆರೆಗಳಿಂದ ಅವನನ್ನು ಕಾಡುತ್ತಿರುವ ಕಾಯಿಲೆಯನ್ನ ಗಮನಿಸಬಹುದಾಗಿತ್ತು. ಅವನ ಅಪ್ಪ ಚಂದ್ರಪ್ಪ- ಕಾಯಕವನ್ನ ತನ್ನ ಪ್ರಾಣವೆಂಬಂತೆ, ಹಳೆ ಟ್ರಂಕನ್ನ ಕೈಯಲ್ಲಿ ಹಿಡಿದುಕೊಂಡು ತುಂಬಿಗೇರಿ, ಇಂಗಳಗುಂದಿ, ಶಂಕರನಹಳ್ಳಿ ತಿರುಗಿ ಕೋಡಿ ತಾಂಡ ಸುತ್ತಿ ಅಡ್ಡಾಡಿ ಬಂದರೂ- ವಯಸ್ಸಿಗೆ ಬಂದ ಮೂವರು ಹೆಣ್ಣುಮಕ್ಕಳು, ಹಿರಿಮಗ ಹನುಮಂತನ ಹೊಟ್ಟೆ ಹೊರೆಯಲಾಗದೆ, ಪೋಷಿಸಿಕೊಂಡೆ ಬದುಕಿದ್ದ. ಹಸಿವು ಹಿಂಸಿಸಿದರೂ, ಅವನ ಹೆಂಡತಿ ಹನಮವ್ವ ಗುಡಿಸಲ ಬಾಗಿಲು ದಾಟಿ ಹೊರಬಂದಿರಲಿಲ್ಲಾ. ತಾತ-ಮುತ್ತಾತಂದಿರೂ ಕಾಯಕವನ್ನ ಕಾಪಾಡಿಕೊಂಡೆ ಬಂದಿದ್ದಾರೆ. ಅದನ್ನ ಉಳಿಸುವುದು ನಮ್ಮ ಧರ್ಮವೆಂದು, ವಯಸ್ಸಿಗೆ ಬಂದ ಮಕ್ಕಳಿಗೆ ಬುದ್ಧಿ ಹೇಳುತ್ತಿದ್ದ ಚಂದ್ರಪ್ಪ ಕಣ್ಣೊಳಗೆ ನೋವು ನುಂಗಿಕೊಂಡು ನಗುತ್ತಿದ್ದ.

ಉಪವಾಸ ತಾಳಲಾರದೆ ಹನುಮಂತ ಚಂದ್ರಪ್ಪನ ವಿರುದ್ಧ ಬಂಡೆದ್ದಿದ್ದ. "ಏನು ನಿನ್ನ ಕುಲಕಸಬು, ನಾ ವಲ್ಲೆ. ನೂರ ಮಂದಿ ತಲಿ ಬೋಳಿಸಿದರೂ ಸುಗ್ಗಿಗ ನಾಕೆಂಟು ಗಿದ್ನ ಕಾಳು ಸಿಗೋದಿಲ್ಲಾ. ಈ ಹಾಳು ಕಸಬನ್ನ ನಾ ಮಾಡಂಗಿಲ್ಲಾ" ಎಂದು ತನ್ನ ಪ್ರತಿಕಾರ ತೀರಿಸಿಕೊಂಡಿದ್ದ. ತಂದೆಯ ಹಿಂಸೆ ತುಂಬಿದ ಮುಖ ನೋಡಲಾಗದೆ ಚುಟ್ಟಾ ಹನಮು, ಬಲ್ಲು ಶಂಕ್ರಿ ಕೂಡ ಮುಸಿಯಪ್ಪ ಸಾವುಕಾರನ ಹೊಲಕ್ಕೆ ರಾಗಿ ಕೊಯ್ಯಲು ಹೋದ. ಕತ್ತಿ ಹಿಡಿದ ಕೈಗೆ ಕುಡುಗೋಲು ಸಿಕ್ಕಾಗ ರೋಷ ಉಕ್ಕಿತು. ತನ್ನ ಬಡತನಕ್ಕೆ ಕಾರಣರಾದ ತನ್ನ ಮುತ್ತಜ್ಜರನ್ನ ಕಡಕಚ ಕೊಯ್ಯುವಂತೆ, ರಾಗಿ ಹುಲ್ಲನ್ನ ಕೊಯ್ಯಲು ಹೋಗಿ ನಡುಬೆರಳಿಗೆ ಕುಡುಗೋಲು ಹಾಕಿಕೊಂಡು "ಅಯ್ಯೋ, ಅಪ್ಪಾ" ಎಂದು ಕೂಗಿದ. "ಲೇ ತಮ್ಮಾ ಹನಮಂತ, ರಾಗಿ ಕೊಯ್ಯೋದಂದ್ರ ಮುಖಕ್ಷೌರ ಮಾಡದಂಗಲ್ಲಾ" ಎಂದು ಮುಸಿಯಪ್ಪ ಹೇಳಿದ್ದಕ್ಕೆ ಕೂಲಿ ಆಳುಗಳೆಲ್ಲಾ ನಗತೊಡಗಿದರು. ಅವಮಾನವಾದ ಹಾಗಾಗಿ ಮನೆಗೆ ಬಂದುಬಿಟ್ಟ.

ಎಲ್ಲಾ ಕಡೆಗೂ ಅವಮಾನವೇ. ಬೆಳಗ್ಗೆ ಮುಂಜಾನೆ ಮನೆ ಬಿಟ್ಟು ಹೊರಬಂದರೆ– ಊರ ಜನ, ತಮ್ಮ ಮುಖ ನೋಡಿದರೆ ಅಪಶಕುನವೆಂದು, ಮುಖ ತಿರುಗಿಸಿಕೊಂಡು ಹೋಗುತ್ತಾರೆ. ಕೂಲಿ ಮಾಡಿ ಹೊಟ್ಟೆ ತುಂಬಿಕೊಂಡೇವು ಎಂದರೆ, ಅಲ್ಲೂ ಮಂದಿ ಕೆಲಸ ಮಾಡಲು ಬಿಡುವುದಿಲ್ಲಾ. ಈ ಊರನ್ನೇ ಬಿಟ್ಟು ಹೋದರೆ ನೆಮ್ಮದಿಯಿಂದ ಬದುಕಬಹುದೇನೋ ? ಎಂದು ಹನಮಂತ ತಂದೆಯ ಎದುರಿಗೆ ಬುಸುಗುಟ್ಟಿದ್ದ. "ಲೇ ತಮ್ಮಾ, ಹನ್ನೆರಡನೇ ಶತಮಾನದಾಗ ಬಸವಣ್ಣನವರು 'ಕಾಯಕ ಕೈಲಾಸ' ಅಂತ ಸಾರಿ ಹೇಳ್ಯಾರ. ಜನರ ಮಾತಿಗ ನೀ ಯಾಕ ತಲಿ ಕೆಡಸ್ಕೊಂತಿ ? ಯಾರು ನಿನಗ ಹೇಳ್ತಾರಲ್ಲಾ, ಅವರಿಗ ಈ ಕಾಯಕ ಮಾಡು ಅಂತ ಹೇಳು" ಎಂದು ತಮ್ಮ ಕಾಯಕದ ಮಹತ್ವ ತಿಳಿಹೇಳಲು ಪ್ರಯತ್ನಿಸಿದ. ಹನುಮಂತ ಮಾತ್ರ ಅದಾವುದನ್ನೂ ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲಾ.

ಚಂದ್ರಪ್ಪನ ಗೂರು ಹೆಚ್ಚಾಗಿ ಉಸಿರಾಡುವುದು ಕಷ್ಟವಾಗತೊಡಗಿತು. ಕಟಿಂಗ್ ಮಾಡಿಸಿಕೊಳ್ಳಲು ಬರುತ್ತಿದ್ದ ಜನರ ಹತ್ತಿರ ಬೀಡಿ ಸೇದಿ–ಸೇದಿ ಶ್ವಾಸಕೋಶ ಕೆಟ್ಟುಹೋಗಿತ್ತು. ವಾರದಿಂದ ಕೆಮ್ಮು ಹೆಚ್ಚಾಗಿ, ಹೊರಗೆ

ಹೋಗದೆ ಮಲಗಿಕೊಂಡಿದ್ದ. ಮೂರು ದಿನಗಳಿಂದ ಶಂಕ್ರನಹಳ್ಳಿ ಮರಿಯಪ್ಪನ ಆಳು ಚಿಮ್ಮ, ಮರಿಯಪ್ಪನ ಮುಖಕ್ಷೌರ ಮಾಡಲು ಕರೆದು ಹೋಗುತ್ತಿದ್ದ. "ನಾಳೆ ಬರ್ತೀನಿ" ಅಂತ ಮೂರು ದಿನಗಳಿಂದ ಏಳಲಾಗದೇ ಹಾಸಿಗೆಯಲ್ಲೆ ಉರಳಾಡುತ್ತಿದ್ದ ಚಂದ್ರಪ್ಪ, ಅಲ್ಪಸ್ವಲ್ಪ ಕಲಿತುಕೊಂಡಿದ್ದ ಹನುಮಂತನಿಗೆ ಶಂಕ್ರನಳ್ಳಿಗೆ ಹೋಗಲು ಹೇಳಿ-ಹೇಳಿ ಸಾಕಾಗಿದ್ದ. "ಹೋದ್ರ ಒಂದ ಸೇರು ಕಾಳು ಸಿಗುತ್ತದೆ" ಎಂದು ಹೇಳಿದರೂ, ಹನುಮಂತ ದೃಢನಿರ್ಧಾರದಿಂದಲೇ ಹೇಳಿದ್ದ.

"ಚಂದ್ರಪ್ಪ, ಏ ಚಂದ್ರಪ್ಪ, ಮನಿಯೊಳಗ ಇಲ್ಲೇನು ? ಎಷ್ಟು ಸಲ ಹೇಳಿ ಕಳಸಬೇಕೋ ಮಾರಾಯ, ಸುಗ್ಗಿ ಬಂದ್ರ 'ಆಯಾ' ವಸೂಲಿ ಮಾಡಾಕ ಎಲ್ಲರಿಗಿಂತ ಮದ್ಲು ಬಂದಿರ್ತಿ" ಎಂದು ಹೊರಗಿನಿಂದ ಕೂಗಿದ ಮರಿಯಪ್ಪನ ಮಾತು ಕೇಳಿಸಿಕೊಂಡ ಚಂದ್ರಪ್ಪ ಹಾಸಿಗೆಯಿಂದ ಏಳಲು ಪ್ರಯತ್ನಿಸಿದ. ಸಾಧ್ಯವಾಗಲಿಲ್ಲ- "ಸಾವುಕಾರ್ರೆ, ವಾರಾತ್ರಿ ಅರಾಮಿಲ್ಲಾ, ಬರ್ತಿದ್ದೆ" ಎಂದವನೆ ಕೆಮ್ಮತೊಡಗಿದ. "ನಿನ್ನ ಮಗ ಏನ್ಮಾಡ್ತಾನ, ಕಳಸವನ್ನ" ಎಂದು ಒರಟಾಗಿ ಕೂಗಿದ ಮರಿಯಪ್ಪ. "ಕೊಡೋದು ನಾಕ ಗಿದ್ನ ಕಾಳು, ಅದು ಕಾಡಸಿ-ಕಾಡಸಿ. ಆದ್ರ ಈಗ ಸಾವುಕಾರಕಿ ಬಾಬತ್ತು ತೋರಿಸೋದು ನೋಡಿದ್ರs ಹೊಟ್ಟ್ಯಾಗ ರೊಚ್ಚೇಳತೈತಿ" ಎಂದು ಹೊರಗೆ ಹೊರಡಲು ಹವಣಿಸಿದ ಹನುಮಂತನ್ನ ಕೈ ಹಿಡಿದ ಹನುಮವ್ವ, ಪಕ್ಕದಲ್ಲಿದ್ದ ಟ್ರೆಂಕನ್ನ ಅವನ ಕೈಯೊಳಗಿಟ್ಟು- "ಮಗಾ ಇದು ನಮ್ಮ ಕರ್ಮ, ಅನುಭವಿಸಾಕs ಬೇಕು. ಪಡಕೊಂಡು ಬಂದೀವಿ ಏನ್ಮಾಡೋದು" ಎನ್ನುತ್ತ, ಸೆರಗು ಬಾಯಿಗ ಅಡ್ಡ ಇಟ್ಟು ಬಿಕ್ಕತೊಡಗಿದಳು.

ಹನುಮಂತ ಮರುಮಾತನಾಡದೆ ಟ್ರೆಂಕು ಹಿಡಿದು ಗುಡ್ಡಮ್ಮನ ಗುಡಿಯ ಗಾರಿಕಟ್ಟೆಯ ಮೇಲೆ ಬಂದು ಕುಳಿತುಕೊಂಡು ಹಳೆ ಕತ್ತಿ ಹೊರಗೆ ತೆಗೆದಿಟ್ಟು, ಒಡೆದ ಚೂರುಕನ್ನಡಿ ಮರಿಯಪ್ಪನ ಕೈಗೆ ಕೊಟ್ಟ. "ಲೇ ಇದೇನು ನಿಮ್ಮಜ್ಜನ ಕಾಲದ್ದೇನು ?" ಎಂದು ಅಣಕಿಸಿದ. ಹೊಗೆ ಬಡಿದು ಕಪ್ಪಾಗಿದ್ದ ಬ್ರಷ್‌ನ್ನು ಪಾಚಿಕಟ್ಟಿದ ಹಿತ್ತಾಳ ಲೋಟದೊಳಗೆ ಅದ್ದಿ, ಬಟ್ಟೆಗೆ ತಿಕ್ಕುವ ತುಂಡುಸೋಪನ್ನ ಬ್ರಷಿಂದ ತಿಕ್ಕಿದ. ಮರಿಯಪ್ಪನ ಮೋಲಿನ ಸಿಟ್ಟನ್ನು ಸೋಪಿನ ಮೇಲೆ

ತೀರಿಸಿಕೊಳ್ಳುವಂತಿತ್ತು. ಇಷ್ಟವಿಲ್ಲದ ಕಾಯಕವನ್ನ ಬೇಸರದಿಂದಲೇ ಮಾಡುತ್ತಿದ್ದ.

ಮುಖ-ಮುಸುಡಿ ನೋಡದೆ ಸೋಪನ್ನು ತಿಕ್ಕತೊಡಗಿದ. ಮಾತನಾಡಲು ಬಾಯಿ ಬರದಂಗ ಸೋಪು ತಿಕ್ಕಿದ್ದ. ಎಡಗೈ ಬೆರಳಿಂದ ಕೊಳಕು ಬಟ್ಟೆ ಸರಿಸಿ ತುಟಿ ಒರೆಸಿಕೊಂಡ ಮರಿಯಪ್ಪ- "ಹಿಂಗ್ಯಾಕ ಬೇಕಾಬಿಟ್ಟಿ ಮಾಡ್ತಿಯಲೇ, ರೊಕ್ಕ ಇಲ್ದಂಗ ಪುಕ್ಕಟ್ಟೆ ಮಾಡ್ತಿ ಏನು ?" ಎಂದು ಹರಿಹಾಯತೊಡಗಿದ. "ಯಜ್ಜ ನಾ ಏನ ಮಾಡ್ಲಿ ? ನನಗ ಈ ಕಾಯಕ ಪಸಂದಿಲ್ಲಾ. ಆದ್ರೂ ನಮ್ಮವ್ವನ ವತ್ತಾಯಕ್ಕ ಮಾಡ್ತೀನಿ" ಎಂದ. "ಅಯ್ಯೋ ಹುಚ್ಚಪ್ಪ ಹಿಂಗ್ಯಾಕಂತಿ ? ಈ ಕಸಬು ನಿಮ್ಮ ತಾತ-ಮುತ್ತಾತಂದಿರಿಂದ ಬಂದದ್ದು. ಹಿಂಗೆಲ್ಲಾ ಅನ್ನಬಾರದು " ಎಂದ ಮರಿಯಪ್ಪ. "ಏನ ಕತೀನೋ, ಹೊಟ್ಟಿ ತುಂಬದ ಕೆಲಸ ಯಾಕ ಮಾಡಬೇಕು ?" ಎಂದು ಕೇಳಿದ. "ಇದು ನಿಮಗ ತಟ್ಟಿರೋ ಶಾಪ. ಎಷ್ಟು ದುಡದರೂ ಹೊಟ್ಟೆ ತುಂಬದು. ಇದನ್ನ ಬಿಟ್ರ ಮತ್ತೇನು ಮಾಡ್ತಿ ? ಹೊಲ ಉಳುಮೆ ಮಾಡ್ತಿಯೋ ? ಕೂಲಿ ಮಾಡ್ತಿಯೋ? ಕೂಲಿ ಮಾಡೋದಕ್ಕಿಂತ ಒಳ್ಳೆ ಕೆಲಸ ನಿನ್ನದು" ಎಂದು ಹನುಮಂತನಿಗೆ ಸಾಂತ್ವಾನ ಹೇಳಲು ನೋಡಿದ ಮರಿಯಪ್ಪ. ಕೂಲಿ ಮಾಡಿದ ಅನುಭವ ಇದ್ದ ಹನುಮಂತನಿಗೆ, ಅದು ತನ್ನಿಂದಾಗದ ಕೆಲಸವೆಂದು ತಿಳಿದಿದ್ದರೂ ಒಣ ಹರಟೆ ಗೆಂದು- "ಕೂಲಿ ಮಾಡಿದರೆ ಅವತ್ತಿಗಾಗುವಷ್ಟು ಕಾಳಾದರೂ ಸಿಗತೈತಿ. ವರ್ಷಕ್ಕ ಒಂದಸಲ 'ಆಯಾ' ಕೊಟ್ರ ಮುಗೀತು- ಮುದುಕರು, ಹುಡುಗರು, ಮನಿಮಂದಿ ಕಾಯಕ ಮಾಡಿಸ್ಕೊಳ್ತಾರ. ಅದು ಸುಗ್ಗಿ ತುಂಬೆಲ್ಲಾ ಕಾಡಿಸಿ-ಕಾಡಿಸಿ ಕಡೀಗ ಕಾಳು ಕೊಡ್ತಾರ. ಇದ್ಯಾವ ಕೆಲಸ ?" ಎಂದು ಅಸಡ್ಡೆ ತೋರಿಸಿದ. "ಹಿಂಗಂದ್ರ ಹ್ಯಾಂಗಪ್ಪ, ಕಾಲ ಬಂದಂಗ ನಡಿಬೇಕು" ಎಂದು ಎಡಗೈ ಮೇಲೆತ್ತಿದ ಮರಿಯಪ್ಪ.

ಹದಿಹರೆಯದ ಬಯಕೆಗಳನ್ನ ಹಸಿಬಿಸಂತೆ ಅದುಮಿಡಲಾಗದೆ ಮೂವರು ಹುಡುಗಿಯರು ಮುಂದಿನ ಮನೆಯ ಹುಡುಗರೊಂದಿಗೆ ಮಾತನಾಡುವುದನ್ನು ಚಂದ್ರಪ್ಪ ನೋಡಿಯೂ ನೋಡದವನಂತೆ ಮುಖ ತಿರುಗಿಸಿಕೊಂಡು ಬಿಡುತ್ತಿದ್ದ. ಹಿರಿಯ ಮಗಳು ರುದ್ರಿ ಪಕ್ಕದ ಮನೆಯ ಹುಡುಗನ ಮಗುವಿಗೆ ತಾಯಿಯಾಗಿ

ಊರು ಬಿಟ್ಟು ಓಡಿಹೋಗಿದ್ದಳು. ಚಂದ್ರಪ್ಪನಿಗೆ ಏನೂ ಅನಿಸಲಿಲ್ಲಾ. ಆದರೆ ಎದೆಯೊಳಗೆ ನೋವು ಕಾಣಿಸಿಕೊಂಡಿದ್ದು ಮಾತ್ರ ಕಡಿಮೆಯಾಗಲೇ ಇಲ್ಲಾ. ಬಡತನದೊಂದಿಗೆ ಬದುಕನ್ನು ಕೊನೆಗಾಣಿಸಿಕೊಂಡ ಚಂದ್ರಪ್ಪನ ನಂತರ, ಅವನ ಉತ್ತರಾಧಿಕಾರಿ ಕಾಯಕದ ಹನುಮಂತ ಊರ ತುಂಬೆಲ್ಲಾ ಹೆಸರುವಾಸಿಯಾಗತೊಡಗಿದ. ತನ್ನ ತಾಕಲಾಟಗಳನ್ನು ಪತ್ತಿಕ್ಕಲಾರದೆ ಭುಗಿಲೇಳುತ್ತಿದ್ದ ಬಯಕೆಗಳಿಗ ತಣ್ಣೀರೆರಚಿಕೊಂಡು, ಕುಕ್ಕರಗಾಲಿನಿಂದ ಕುಳಿತು ತಲೆ ಬೋಳಿಸುವುದು, ಗಸಾಗಸಾ ತಲೆತಿಕ್ಕಿ ಪಾಲೀಷ್ ಮಾಡುವುದನ್ನ ಕರಗತ ಮಾಡಿಕೊಳ್ಳತೊಡಗಿದ.

ಕಾಲರಾಯನ ಹಿಂದೆ ಓಡಲಾಗದೆ ಸೋತವರಲ್ಲಿ ಹನುಮಂತನೂ ಒಬ್ಬನಾದ. ಅವನಪ್ಪ ಬದುಕಿದ್ದಾಗ ಬರುತ್ತಿದ್ದ ಆಯಾ ಕಡಿಮೆಯಾಗಿತ್ತು. ಪಕ್ಕದ ಪಟ್ಟಣ ಪ್ರಭಾವಕ್ಕೊಳಗಾದ ಜನ, ಹೊಸ ಅನುಭವ ಪಡೆಯಲು ಪೇಟೆಗೆ ಹೋಗತೊಡಗಿದರು. ಕೂಲಿ ಮಾಡುವವನೂ ಕೂಡ ದಾವಣಗೇರಿಯ ಕಟಿಂಗ್ ಅಂಗಡಿಗೆ ಹೋಗಿ, ತಿರುಗುವ ಮೂರುಗಾಲಿಯ ಖುರ್ಚಿಯ ಮೇಲೆ ಕುಳಿತು ಮುಖ-ಮೈ ಕಂಡು ಪುಳಕಿತರಾಗಿ, ಕೇಳಿದಷ್ಟು ಹಣ ಕೊಟ್ಟು ಶಿರ್ನಳಿ ತುಂಬ ಸುದ್ದಿ ಮಾಡಿದ ನಂತರ ಹನುಮಂತ ನೊಣ ಹೊಡೆಯತೊಡಗಿದ. ಊರೂರು ಅಲೆದು ಕೇಳಿದರೂ ಅಲ್ಲೊಬ್ಬ-ಇಲ್ಲೊಬ್ಬ ಮುದುಕರು, ಪಟ್ಟಣಕ್ಕೆ ಹೋದರೆ ಜನರೇನೆಂದಾರು ? ಎಂದು ಮುಲಕುತ್ತಲೇ ಹನುಮಂತನ ಮುಂದೆ ಕುಳಿತುಕೊಳ್ಳತೊಡಗಿದರು. ಹನುಮಂತನ ಕನ್ನಡಿ ಕಂಡ ಹುಡುಗರು ನಗತೊಡಗಿದರು. "ಲೇ, ರೊಕ್ಕ ಕೊಡೋದs ಖರೆ, ಮಕ ನೋಡ್ಕೊಳ್ಳಾಕ ಕನ್ನಡಿ ಇಲ್ಲಾ. ಮೂರುಸಲಾ ಕಚಕಚಂತ ಕತ್ತರಿಸಿ, ಐದನೆ ಸಾರಿಗ ತಲಿ ಚರ್ಮ ಕಚ್ಚಂತ ಕತ್ತರಿಸಿ ರಕ್ತ ಬರಸ್ತಾನ, ಅವನ್ದೇನ ಪಚ್ಚೇರಿ ?" ಎಂದು ಮುಖ ತಿರುಗಿಸಿಕೊಂಡು ಹೋಗುತ್ತಿದ್ದರು.

ಪಟ್ಟಣದ ಅನುಭವ ಪಡೆದ ಹುಡುಗರು, ಬೊಚ್ಚುಬಾಯಿಯ ಮುದುಕರಿಗೆ ಬಾಯಲ್ಲಿ ನೀರೂರುವಂತೆ- "ಯಜ್ಜ, ಅಂಗಿ ಕಳಿಯೋ ಕಾಲ ಹೋತು, ದೊರಿ ಮಗನಂಗ ಕುಂತ್ರ ಮೈಮ್ಯಾಲ ಬೆಳ್ಳಕ್ಕಿಹಂಗ ಬೆಳ್ಳಗಿರೋ ಬಿಳಿ ಬಟ್ಟಿ ಹೊದಸಿ, ಮುಗದಿಂದ ಮಕಕ್ಕ ಘಮ-ಘಮ ಅನ್ನೋ ಪೌಡರ್

ಹಚ್ಚಿ ನಗ್ತಾ ರೊಕ್ಕ ಕೇಳ್ತಾರ" ಅಂದಿಂದ, ಮುದುಕರಿಗೂ ಒಂದಸಾರಿ ನೋಡುವ ಆಶೆಯಾದ ನಂತರ ಹನುಮಂತನ ಆಯಾಕ್ಕೆ ಕೋತಾ ಬಿತ್ತು.

ಹನಮವ್ವ ಹಸಿವನ್ನ ತಡೆಯದಾದಳು. ವಯಸ್ಸು ಕಳೆದರೂ ಅಲ್ಲಿ-ಇಲ್ಲಿ ತನ್ನಿಬ್ಬರೂ ಹೆಣ್ಣುಮಕ್ಕಳನ್ನ ಕರೆದುಕೊಂಡು ಕಳೆ ಕೀಳಲು ಹೋಗ ತೊಡಗಿದಳು. ಹನುಮಂತ ಕಾಯಕದ ಟ್ರೆಂಕನ್ನ ಕಟ್ಟಿ ಮೂಲೆಗೆ ಎಸೆಯಲು ಹವಣಿಸಿದ. ಒಂದಿಬ್ಬರು ಮಕಾಷ್ಟ ಮಾಡಿಸಿಕೊಳ್ಳಲು ಬಂದವರಿಗೆ 'ಮಾಡುವುದಿಲ್ಲಾ' ಎಂದು ವಾಪಾಸು ಕಳುಹಿಸಿ, ಕಷ್ಟವಾದರೂ ಕೂಲಿ ಮಾಡ ತೊಡಗಿದ. ನಾಲ್ಕು ಜನರ ಕೂಲಿಯಿಂದ ಹೊಟ್ಟೆಗೆ ಹಿಟ್ಟು ಸಿಕ್ಕಂತಾಯಿತು. ತನಗೂ ಹೊಲ ಮಾಡುವ ಅವಕಾಶದಿಂದ ವಂಚಿಸಿದ ತನ್ನ ಪೂರ್ವಜರಿಗೆ ಹಿಡಿಶಾಪ ಹಾಕತೊಡಗಿದ. ಯಾರಾದರೂ ತನಗೆ ಊಳಲು ತುಂಡು ಭೂಮಿ ಕೊಟ್ಟಾರೆಂದು ದೊಡ್ಡ ರೈತರ ಹತ್ತಿರ ಕೇಳಿದ. ಅವನ ಮಾತನ್ನು ಕೇಳಿ ನಕ್ಕ ರೈತರು- "ಹೊಲ ಕೊಟ್ಟೇವು, ಊಳಲು ಎತ್ತು ಬೇಕಲ್ಲಾ" ಎಂದಾಗ, "ಎತ್ತಿಗಾಗಿ ಯಾರನ್ನ ಕೇಳಲಿ ?" ಎಂದು ಯೋಚಿಸತೊಡಗಿದ.

ಕೈ-ಕಾಲು ಗಟ್ಟಿ ಇರುವ ಮಂದಿ ಊರೂರು ಅಲೆದಾದರೂ ಕೂದಲು ತೆಗೆಸಿಕೊಂಡಾರು. ಅಡ್ಡಾಡಲಾಗದವರ, ಸಣ್ಣ ಹುಡುಗರ ಗತಿ ಏನು ? ಎಂದು ಊರಜನರು, ಹನುಮಂತನಿಗೆ ಕಾಯಕ ಮುಂದುವರೆಸಲು ದುಂಬಾಲು ಬಿದ್ದರು. "ಯಾವತ್ತೂ ಕತ್ತಿ ಹಿಡಿಯೋದಿಲ್ಲಾ ಎಂದು ನಿರ್ಣಯ ಮಾಡೀನಿ" ಎಂದು ಕಡ್ಡಿ ತುಂಡಾಗುವಂತೆ ಹೇಳಿದ ಹನುಮಂತನ ಮಾತಿಗೆ ಕೆಂಚಜ್ಜ ಹೇಳಿದ- "ನೋಡ ತಮ್ಮಾ, ನಿಮ್ಮಪ್ಪ-ನಾನು ಸಣ್ಣವರಿದ್ದಾಗಿಂದ್ಲೂ ಜತಿಗಾರ್ರು. ಅದಕ್ಕ ಹೇಳ್ತಿನಿ- ಊರಿಗೊಬ್ಬ ಕಾಯಕದವನು, ಒಂದು ಕತ್ತೆ, ಕಾಗೆಗಳ ಹಿಂಡು ಇವು ಇಲ್ಲಿದ್ರ ಅದು ಊರು ಅನಸ್ಕೊಳಂಗಿಲ್ಲಾ" ಎಂದ. "ಹೌದು, ಸುಗ್ಗಿ ಬಂದಗಟ್ಲೆ ಆಯಾ ಕೊಟ್ಟು ಬದಕ್ಲಿ ಬಡವ ಅಂತ" ಕರುಣೆ ತೋರ್ಸಿರಲ್ಲಾ, ಅದಕs ನಾ ಮತ್ತ ಕಾಯಕ ಬಿಡ್ತೀನಿ. ನಾ ಕೂಲಿ ಮಾಡ್ತಿನಿ ಹೊರ್ತು ಕಾಯಕ ಮಾಡಂಗಿಲ್ಲಾ" ಎಂದ. ಮುದಕ ಮುಕ್ರಜ್ಜ- "ಹಂಗಂದ್ರ ಹ್ಯಾಂಗಪ್ಪ, ನಮ್ಮಂತ ಕೈಲಾಗದ ಮಂದಿ ಗತಿ ಏನು ?" ಎಂದ. "ನಾ ಏನ ಮಾಡ್ಲಿ ? ಊರಮಂದಿ ದಾವಣಗೇರಿಗ ಹೊಕ್ಕೈತಿ, ನೀವೂ ಹೋಗ್ರಿ" ಎಂದ.

"ಈಗಿನ ಕಾಲ ನಾಜೂಕ ಆಗೈತಿ. ಆವಾಗಿನಹಂಗ ಮಳಿ ಇಲ್ಲಾ, ಬೆಳಿ ಇಲ್ಲಾ. ನಿನಗ ಸರಿಯಾಗಿ ಆಯಾನೂ ಕೊಡಂಗಿಲ್ಲಾ" ಎಂದ ಕೆಂಚಜ್ಜ. "ಅದಕ್ಕ ನಾ ಏನು ಮಾಡ್ಲಿ ? ಹೊಟ್ಟೀಗ ಕೇರು ಹಾಕ್ಕೊಳ್ಳಿ ?" ಎಂದು ಹೊರಡಲು ಅನುವಾದ ಹನುಮಂತನನ್ನ ಮುಕ್ರಜ್ಜ ಕರೆದು– "ಕಷ್ಟ ಇದ್ದಿದ್ದೇ ತಮ್ಮ, ನಿನಗ ಟೇಂ ಸಿಕ್ಕಾಗ ಆಟs ಹುಡುಗರಗು, ನಮ್ಮಂತ ಕೈಲಾಗದ ಮುದುಕರ್ಬ್ಬ ಕಾಯಕ ಮಾಡಿ ಪುಣ್ಯ ಕಟ್ಕೊ" ಎಂದ ನಂತರ, ತನಗಂಟಿದ ಭೂತ ಬಿಡದೆಂಬು ದನ್ನು ಖಾತ್ರಿ ಮಾಡಿಕೊಂಡ. ತನ್ನಲ್ಲಿ ಏನೋ ನೋವಿದೆ ಎಂದು ಅರಿತು ಕೊಂಡ ಹನುಮಂತ, ಕೂಲಿ ಇನ್ನು ತನ್ನಿಂದ ಆಗದು ಎಂದು ವಿಚಾರ ಮಾಡು ತ್ತಿರುವಾಗಲೇ ಕಕ್ಕರಗೊಳ್ಳದ ತಿಪ್ಪೇಸ್ವಾಮಿ, ತನ್ನ ಮಗನಿಗೆ ಹನುಮಂತನ ತಂಗಿಯನ್ನ ಕೇಳಲು ಬಂದಿದ್ದ. ಅವನಿಗಿದ್ದ ಇಬ್ಬರು ಹೆಣ್ಣುಮಕ್ಕಳಲ್ಲಿ, ಹಿರಿಯವಳನ್ನ ಹನುಮಂತನಿಗೆ ಕೊಡಲು ಮುಂದಾದ.

ಮೂರು ಮಕ್ಕಳ ತಂದೆ ಹನುಮಂತ, ಬದಲಾದ ಬದುಕನ್ನ ಧಿಕ್ಕರಿಸಿ ಬದುಕುವ ದಾರಿ ಹುಡುಕುತ್ತಿರುವಾಗಲೇ ಕ್ಯಾನ್ಸರ್ ಗಡ್ಡೆ ಹೊಟ್ಟೆಯೊಳಗ ತನ್ನ ಭಾಗವನ್ನ ಪಡಕೊಂಡಿತ್ತು. ಮಕ್ಕಳು, ಹೆಂಡತಿ ಭವಿಷ್ಯದ ಚಿಂತೆಯಲ್ಲಿ ವಿಚಾರಗಳೆಲ್ಲಾ ಕೆಮ್ಮಾಗಿ ಹೊರಹೊಮ್ಮುತ್ತಿದ್ದವು. ಬಾಯಿಯಲ್ಲಿ ರಕ್ತ ಜಿನುಗುಡತೊಡಗಿತು. ಸಹಿಸಲಾಗದ ಕ್ಷಣಗಳಿಂದ ಬಿಡುಗಡೆ ಪಡೆಯಲು ಕೆಮ್ಮಿ–ಕೆಮ್ಮಿ ಸಾಕಾದಾಗ, ತನ್ನ ಹಳೆಯ ಹೇಮರೆಡ್ಡಿ ಮಲ್ಲಮ್ಮನ ನಾಟಕದ ಪಾರ್ಟನ್ನ ನೆನಪ್ಮಾಡಕೊಂಡು, ಕಾಯಕ ಸಿಲ್ಲಿ ಒಂದ ಘಳಿಗೆ ಸುಖ ಪಡೆಯು ತೊಡಗಿದ.

☐

ಗಾಂಧಿ ಗೋಪ್ಲ ಮತ್ತು ಮಂಟಕುರಿ

ಎತ್ತಿನ ಗೊಂದ್ಲಿಯೊಳಗ ಕುಂತು ಒಂದೇ ಸಮನೆ ಅಳುತ್ತಿದ್ದ ಗೋಪ್ಲ. ಹೊರಗಡೆ ಮಂದಿ ಕ್ಯಾಕಿ ಹೊಡೆಯುತ್ತ ನಿಲ್ಲಿಸಿದ ಆರು ಕುರಿಗಳ ಮೈ ಮೇಲೆ ನೀರು ಹಾಕಿ, ತುಪ್ಪಳ ತೋಯಿಸಿ ಮೈ ಕೊಡವಿದಾಗ, ದೇವರು ಅವುಗಳನ್ನ ಕಡಿಯಲು ಅನುಮತಿ ಕೊಟ್ಟ ಎಂಬುದನ್ನ ಸ್ಪಷ್ಟಪಡಿಸಿಕೊಂಡ ನಂತರವೇ ಒಂದೇ ಏಟಿಗೆ ಕುತ್ತಿಗೆ ಕಡಿಯಲು ಗಂಡುಗುದ್ಲಿ ಹಿಡಿದು ಮೈ ಕೊಡವುವುದನ್ನೇ ಕಾಯುತ್ತಿದ್ದರು. ಸಾಲಿನ ನಟ್ಟನಡುವೆ ನಿಂತಿದ್ದ ಮಂಟಕುರಿ ಮಾತ್ರ ಎಷ್ಟು ನೀರು ಸುರುವಿದರೂ, ಮೈ ಕೊಡವದೇ ಮೌನವಾಗಿ ನಿಂತುಕೊಂಡಿತ್ತು.

ಗೋಪ್ಲನ ಅಪ್ಪ ತಿರುಪ– "ಯಾಕವ್ವ ಮಾತಾಯಿ, ಏನು ಕಮ್ಮಿ ಆತು ? ಒಂದಲ್ಲಾ–ಎಲ್ಡಲ್ಲಾ, ಆರ ಕುರಿ ಕಡಿಯಕತ್ತೀನಿ. ಇನ್ನೂ ಏನಾಗ್ಬೇಕು ?" ಎಂದವನೆ ಧಪ್‌ಂತ ದೀರ್ಘದಂಡ ಹಾಕಿದ. ಮಂಟಕುರಿ ಒಮ್ಮೆ 'ಬ್ಯಾ' ಎಂದಿತು. ಗೊಂದ್ಲಿಯೊಳಗ ಕುಂತು ಅಳುತ್ತಿದ್ದ ಗೋಪ್ಲ್ಯಾಗ ಜೀವ ಹೋದಂಗಾಗಿ ಜೋರಾಗಿ ಅಳತೊಡಗಿದ, ಜನರು ಮಾತಾಡತೊಡಗಿದರು. ಮೂಲೆಯೊಳಗ ಕುಂತಿದ್ದ ಕೆಂಗಸೋವ್ಲ– "ಲೇ ತಮ್ಮ ತಿರಪ, ಏನಾರ ತೆಪ್ಪ ಮಾಡಿಯೇನು ? ಒಪ್ಕೋ, ಏಟೊತ್ತಂತ ಕಾಯ್ತಿ" ಎಂದ. "ಇಲ್ಲಾ ಮಾವ, ಇನ್ನೇನ ಹರಕಿ ಇಲ್ಲಾ. ಏನ ಸಾಲದಾಗೈತೋ ಇವ್ನವ್ವನ ಇಕೀಗ" ಅಂದವನ ಸಿಟ್ಟಿಂದ ಪಕ್ಕದೊಳಗಿದ್ದ ಪ್ಲಾಸ್ಟಿಕ್ ಕೊಡ ಎತ್ತಿದವನ ಮಂಟಕುರಿ ಮೈಮ್ಯಾಲ ಸುರಿದ. "ಹೇ.... ಮಗನೇ, ಕೊಡೋದು ಕೊಟ್ಟಿ ಏನೋ" ಘರ್ಜನೆ ಸುರುವಾಯಿತು. ಚಕ್ಲಿರಾಮುನ ಹೆಂಡತಿ ಘಮಲಿಗೆ ದೇವರು ಮೈಮೇಲೆ ಬಂದಿದ್ದರಿಂದ ಕೂದಲು ಬಿಚ್ಚಿಕೊಂಡು "ಹು.... ಹು.... ಹು...." ಎಂದು

ಹಲ್ಲು ಕಡಿಯತೊಡಗಿದಳು. "ಸಮಾಧಾನ ಮಾಡವ್ವ ತೆಪ್ಪಾತು, ಹುಲ್ಲಮನಷ್ಯ ತೆಪ್ಪ ಮಾಡ್ಯಾನ, ಹೊಟ್ಯಾಗ ಹಾಕ್ಕೋ" ಕೆಂಚಹನ್ಮಜ್ಜ ಸಮಾಧಾನ ಪಡಿಸಾಕ ನೋಡ್ದ. "ಏ.... ನಿನ್ನ ತಪ್ಪು ನಿನಗs ಗೊತ್ತು", ಕೆಂಡಮಂಡಲ ವಾದ ಕಣ್ಣಿಂದ ತಿರುಪನ ಕಡೀಗ ನೋಡಿದ್ಲು. "ಯವ್ವ ತಾಯಿ, ನಂದು ತೆಪ್ಪಾಗೈತಿ, ಹೊಟ್ಯಾಗ ಹಾಕ್ಕೋ. ಇನ್ನೊಮ್ಮಿಗ ಹಿಂಗ ಮಾಡಂಗಿಲ್ಲಾ" ಎಂದವನ ಘಮಣವ್ವನ ಕಾಲಿಗೆ ಬಿದ್ದ. ಘಮಣವ್ವ ಬೇಪಿನ ತಪ್ಪಲನ್ನ ಕಚಪಚ ಅಗಿಯುತ್ತಾ-ನುಂಗುತ್ತಾ, ಹಿಡಿದಿದ್ದ ನಾಲ್ಕು ಜನರನ್ನ ಅಲುಗಾಡಿಸಿ ಮುಂದಿದ್ದ ಕುರಿಯನ್ನ ಎತ್ತಿ ನೆಲಕ್ಕೆ ಅಪ್ಪಳಿಸುವ ಹಂಗ ರಂಪಾಟ ಮಾಡುತ್ತಿದ್ದಳು. ತಿರುಪನ ತಂಗಿ ಡೋರಿ- "ಯಣ್ಣ, ಇಟಮಾಡಿ ಒಂದೀಟ ಉಡಿ ತುಂಬ್ಸಾಕಿಲ್ಲೇನು ? ಅದ್ಕ ದೇವಿ ಸಿಟ್ಟಾಗ್ಯಾಳ" ಎಂದಳು. "ಏ ನೀ ಸುಮ್ಕಿರು ಡೋರಿ, ಇಟಕ ಎಟೊಂದ ಖರ್ಚ ಮಾಡೀನಿ" ಎಂದು ಎಲ್ಲು ಕೈಗಳನ್ನ ಜೋಡಿಸಿ, ಅಪರಾಧಿಯಂತೆ ಅವಳ ಮುಂದೆ ತಲಿ ಕೆಳಗ ಹಾಕ್ಕೊಂಡು ನಿಂತಿದ್ದ. ಘಮಣೆಯ ವಟಗುಟುವಿಕೆ ನಡದs ಇತ್ತು.

ಗೋಪ್ಲ ಗಪ್ಪಾದ. ಸಾಲಿಯೊಳಗ ಪಾಂಡು ಮೇಷ್ಟ್ರು ಹೇಳಿದ ಗಾಂಧಿ ಪಾಠ ನೆಪ್ಪ ಮಾಡಿಕೊಳ್ಳತೊಡಗಿದ. ಹರಿಕೆ ಕೊಡಾಕ ನಿಲ್ಸಿದ್ದ ಕುರಿಯನ್ನ ಗಾಂಧೀಜಿ ಹೇಗೆ ತಪ್ಪಿಸಿದರು ? ಎಂದು ಹೇಳಿದಾಗ, ಮುಂದೆ ಜವಳಕ್ಕ ಮಂಟಕುರಿ ಬಲಿಯಾಗೋದನ್ನ ನೆನಪ ಮಾಡ್ಕೊಂಡು ತಳಮಳಗೊಂಡಿದ್ದ. ದುಗ್ಗತ್ತಿ ಹನಮು ಕೈಗಡ ಇಸ್ಕೊಂಡ ಹೋಗಿದ್ದ ನಲ್ವತ್ತು ರೂಪಾಯಿ ಕೊಡದಿದ್ದಕ್ಕ, ತಿರಪ ಒಂದು ಹೆಣ್ಣಕುರಿ ಹೊಡ್ಕೊಂಡು ಬಂದಿದ್ದ. ವರ್ಷ ತುಂಬೋದ್ರಾಗ ಟಗರಮರಿ ಹಾಕಿದ್ದಕ್ಕ ತಿರುಪ ಕಂಡಾಪಟ್ಟೆ ಖುಷಿಯಾಗಿದ್ದ. ಗೋಪ್ಲನ ಮೆಟ್ರಿಕ್ ಫೀ ತುಂಬಾಕ ರೊಕ್ಕಾತು ಅಂದಕೊಂಡಿದ್ದ. ಆದ್ರ ಟಗರಮರಿ ಎದ್ದು ಅಡ್ಡಾಡಕ ಆಗದಕ್ಕ ಮೂರದಿನ ನೆಲಾ ಬಿಟ್ಟು ಏಳಲಿಲ್ಲಾ. ಮೂರಕಾಲು ನೆಟ್ಟಗಿದ್ದು ಒಂದಕಾಲು ಮಣಕಾಲಿನ ಭಾಗಕ್ಕ ಬಾಗಿಕೊಂಡಿತ್ತು. ಸುದ್ದಿ ಕೇಳಿದ ಗೋಪ್ಲನ ಅತ್ತಿ ಗಂಡ ರಂಗ ಮಂಟಮರಿ ಅಂತ ಹೆಸರಿಟ್ಟ.

ಮರಿ ಹುಟ್ಟಿದ್ದು ದೆಸಿಗ ಮಾರಬಾರದ್ದು. ಮನಿಯೊಳಗ ಸಾಕಿ, ಕೊಯ್ದು ತಿನ್ನಬೇಕು ಅಂತ ಹೇಳಿಂದ, ಗೋಪ್ಲ ನಾಲ್ಕು ಮಂದಿ ಅಣ್ಣಂದಿರು ಹೊಲಕ್ಕ

ಹೊಂಟರ, ಮಂಟಕುರಿ ಕುಂಟ್ಕೊಂತಾ ಓಂದಿಂದ ಹೊಕ್ಕತ್ತು. ದಸರಿಗ, ಬ್ಯಾಸಗೀಗ ಗೋಪ್ಲ ಊರಿಗ ಬಂದಾಗೊಮ್ಮೆ ಮಂಟಕುರಿ ಸೆವ ಹೇಳಿ, ಊರ ಓಂದ ಏರಿಗ ಬಂದು ಸಾಕಿ ಕೂಟಾಗ ಆಟ ಆಡ್ತಿದ್ದ. ಅವಾಗಲೇ ಮಂಟಕುರಿಯೊಂದಿಗ ನಂಟು ಬೆಳಸಿಕೊಂಡಿದ್ದ. ಓಂದ ದಸರಿ ರಜಾ ಕಳದು ದಾವಣಗೇರಿಗ ಸಾಲಿಗಂತ ಹೊಂಟ ಗೋಪ್ಲಗ ದಾರಿ ಬಿಡದೆ, ಓಂದ-ಓಂದ ದುಗ್ಗ ತಿಮಟ ಬಂದಿತ್ತು. ಅವನ ಏರಿ ಅತ್ತಿಗಿ ಬ್ಯಾಸತ್ತು ಬಸ್ ಹತ್ತಿಸಿ ಬಂದಿದ್ಲು. ಗೋಪ್ಲ ಬಸ್ಸಿನೊಳಗ ಕುಂತಾಗ, ಅವನಿಗ ಗೊತ್ತಿಲ್ದಂಗ ಕಣ್ಣು ತೇವಗೊಂಡಿದ್ವು.

ಬಿಸಲು ಚುರುಗುಡಾಕತ್ತಿತ್ತು. ತಿರುಪಗ ಹೆಂಡದ ಅಮಲು ಜೋರಾಗ ತೊಡಗಿತು. ಕುಂತಲ್ಲೆ ತೂಕಡಿಸತೊಡಗಿದ. ಮುಂಜಾನಿ ಎಂಟ ಗಂಟೆಯಿಂದ ಕುರಿ ಕಡಿಯಾಕ ಸೇರಿದ್ದ ಮಂದಿಗ ಮಂಟಕುರಿಯ ವರ್ತನೆ ಕಂಡು ಬ್ಯಾಸರ ಬರತೊಡಗಿತು. "ಏ ಏನ ನೋಡ್ತಿರಿ, ಎತ್ತಿ ಹೊಡಿರಲೇ ಕುತ್ಗಿ ತುಂಡಾಗಂಗ" ಎಂದು ನೆರದ ಮಂದಿಯೊಳಗಿಂದ ಸಾಮಿ ಕೂಗಿದ. "ಹಂಗಂದ್ರ ಹ್ಯಾಂಗೊ ತಮ್ಮಾ, ದೇವಿ ದಯಾ ಪಾಲಿಸದೆ ನಾವು ಏನು ಮಾಡಂಗಿಲ್ಲಾ" ಎಂದ ರಾಮಣ್ಣ. ಘಮಣೆಯ ಆರ್ಭಟ ಕಡಿಮೆಯಾಗಿತ್ತು. ಕುರಿ ಕಡಿಯೋದನ್ನ ನೋಡಾಕಂತ ಬಂದು ನಿಂತಿದ್ದ ಊರಿನ ಸಣ್ಣ ಹುಡ್ರು, ಕೈಮುಕ್ಕೊಂಡು ಮಾತಾಡುವವರ ಮುಕ-ಮುಕ ನೋಡ್ತಿದ್ರು. ಊರಿಂದ ಬಂದ ಮಂದಿ ಹಸ್ಕೊಂಡ್ರೊ ಏನೋ ? ಗೋಪ್ಲನ ಅವ್ವ ಭೀಮಿ ಚಡಪಡಿಸತೊಡಗಿದಳು. ಬಿಸಲಾಗ ತೂಕಡಿಸುತ್ತಾ ಕುಂತಿದ್ದ ಗಂಡ ತಿರುಪನ ಹತ್ರ ಹೋಗಿ- "ಏನ್ರಿ, ಕುರಿ ಯಾವಾಗ ಕಡಿತೀರಿ, ಸಾರ ಯಾವಾಗ ಮಾಡ್ತೀರಿ, ಬಂದ ಮಂದಿಗ ಉಣ್ಣಾಕ ಯಾವಾಗ ಹಾಕ್ತೀರಿ ?" ಎಂದಳು. ಗರಬಡಿಸಿ ಎದ್ದವನ- "ಏ ಅತ್ಲಾಗ ಹೋಗೆ" ಎಂದವನೇ ರಪ್ಪಂತ ಹೊಡೆದ. "ದೇವರಿಲ್ಲಾ ದಿಂಡ್ರಿಲ್ಲಾ, ಮುದ್ಲು ಅದೇನೋ ಅಂತಾರಲ್ಲಾ ಹಂಗಾತು. ದೇವಿ ಸಿಟ್ಟಾಗ್ಯಾಳ, ನೋಡಾನ ಎಟೊತ್ತಿನವರಿಗ ಓಂಗ ಸಿಟ್ಟುಮಾಡ್ತಾಳ" ಎಂದು ಬಾಯಿಯೊಳಗ ಬಂದಿದ್ದ ಸೇಂದಿಯ ಬುರುಗನ್ನ ಉಗುಳಿ, ಉಟ್ಟಿದ್ದ ಹರಕು ಪಂಚಿಯಿಂದಲೇ ಒರೆಸಿದ. ಅಲ್ಲಲ್ಲೆ ನೆಳ್ಳಾಗ ಕುಂತ-ಕುಂತಲ್ಲೇ ಚಂಡು ಮುದರಿಕೊಂಡಿದ್ರು ಹೆಂಡ ಕುಡಿದ ಬೀಗರು. ಗೋಪ್ಲ ಮಾತ್ರ ಮಂಟಕುರಿಗೆ ಕಾದಿರುವ ವಿಪತ್ತನ್ನ

ನೆನೆದು ಅಳತೊಡಗಿದ. ಹೊಟ್ಟೆ ಹಸಿದಿದ್ದರೂ ಉಣ್ಣಲು ಮನಸ್ಸಾಗುತ್ತಿರಲಿಲ್ಲ. ತನ್ನ ಮನೋವ್ಯಾಕುಲತೆ ಯಾರಿಗೆ ಹೇಳಬೇಕೆಂದು ತಿಳಿಯದೇ ಸಂಕಟಪಡತೊಡಗಿದ.

"ಅವನವ್ವನ, ನಾ ಈ ತಿನ್ನೋ ಕಾಟಕರ ಜಾತ್ಯಾಗ ಯಾಕಾರ ಹುಟ್ಟಿದ್ನೋ ಏನೋ ? ಪಾಂಡುಮೇಷ್ಟ್ರು ತಿನ್ನಂಗಿಲ್ಲಂತ, ಅವರೇ ಪಾಡು. ಗಾಂಧಿನೂ ತಿಂತಿದ್ದಿಲ್ಲಂತ. ಪ್ರಾಣಿಹಿಂಸೆ ಮಾಡಬಾರ್ದು ಅಂತ ಮಂದಿಗ ಹೇಳ್ತಿದ್ರಂತ. ಈಗ ಬದುಕಿದ್ರ ಪಾಡಿತ್ತು" ಒಬ್ಬನೇ ಮಾತಾಡಿಕೊಂಡ. ಮಂಟಕುರಿ ಮೂರು ಕಾಲಿನ ಮೇಲೆ ತನ್ನನ್ನ ಹುಡುಕಿಕೊಂಡು ಬರುತ್ತಿರುವಂತೆ ಅನಿಸಿ "ಬಾ-ಬಾ ಟ್ರss ಟ್ರss".... ಕೂಗತೊಡಗಿದ. ಅವನ ಶಬ್ದ ಕೇಳಿದ ಮಂಟಕುರಿ ಒಂದು ಸಾರಿ 'ಬ್ಯಾ' ಎಂದು ಕೂಗಿದ್ದೆ ಮೈ ಕೊಡವಿತು. ಉಘೋ ಎಂದವರೆ ಗಂಡುಗುದ್ಲಿ ಹಿಡ್ಕೊಂಡಿದ್ದ ಆರು ಮಂದಿ ಒಂದೇ ಸಾರಿಗೆ ಆರು ಕುರಿಗಳ ಶಿರ ಕಡಿದರು. ಕೂಗಿದ ಕೂಗಿಗೆ ಪ್ರತಿಧ್ವನಿಸಿದ ವಾತಾವರಣ ಒಮ್ಮೆಗೆ ಮೌನ ಆವರಿಸಿತು. ತಿರುಪನ ಮುಖದ ಮ್ಯಾಲೆ ಕಳೆ ಬಂತು. ಅಮಲಿನಲ್ಲಿ ಆರು ಹುಡುಗರನ್ನ ಕರೆದು, ಅವರ ಮಾವಂದಿರನ್ನು ಕರೆಸಿ ಜವುಳ ಇಳಿಸುವ ಕೆಲಸ ಮಾಡತೊಡಗಿದ.

ಎತ್ತಿನ ಗೊಂದ್ಲಿಯೊಳಗೆ ಕುಂತಿದ್ದ ಗೋಪ್ಲ ಯಾರಿಗೂ ಪತ್ತೆಯಾಗಿರಲಿಲ್ಲ. "ಎಲ್ಲಿ ಹ್ವಾದ ಹಾಳಾಗಿ, ಬಂದ ಮಂದಿ ಹೊಂಟೈತಿ" ಎಂದು ಆಕಡೆ ಈ ಕಡೆ ಹುಡುಕತೊಡಗಿದ ತಿರಪ, "ಏ, ಎಲ್ಲಾರs ಮಕ್ಕೊಂಡಾನೇನು ನೋಡ್ರಲೇ" ಎಂದು ಉಳಿದವರಿಗೆ ಹೇಳಿದ. "ಯಪ್ಪಾ, ಅಣ್ಣ ಕಾಣವಲ್ಲ" ಎಂದು ಬಂದ ಎಲ್ಲರಿಗೂ ಸಣ್ಣವ ಜೋಪನನ್ನ ಹಿಡಿದು ಕಪಾಳಕ್ಕೆ ಬಾರಿಸಿ "ನಿಮ್ಮಪ್ಪ ಎಲ್ಲದಾಳ ನೋಡು, ಹುಡುಕನ್ನು ಅಕೀಗ" ಎಂದು ಗದರಿಸಿದ. ಜೋಪ ಅತ್ಕೊಂತ "ಯಪ್ಪ, ಯಪ್ಪ" ಎಂದು ಹೊಂಟ. ಗೊಂದ್ಲಿಯೊಳಗ ಬೇಕಂತ್ಲೆ ಮುದಡಿ ಮಕ್ಕೊಂಡಿದ್ದ ಗೋಪ್ಲನನ್ನ ಜಾಡಿಸಿ ಒದ್ದ ಅವನ ಹಿರಿಯಣ್ಣ "ಬೇವರ್ಸಿ, ಹೊರಾಗ ಮಂದಿ ಹುಡಕಾಕತ್ತಾರ ಇಲ್ಲಿ ಮಕ್ಕೊಂಡಿ, ಏಳ" ಅಂದವನೆ ದರದರ ಎಳ್ಕೊಂಡ ಬಂದ.

ಹೆಂಡದ ಕೇಸು ಖಾಲಿಯಾಗಿದ್ದು, ಬೇಯಿಸ್ತಿದ್ದ ಮೂರು ದೊಡ್ಡ ಮಡಕಿ ಸಾರು ಖಾಲಿಯಾಗಿತ್ತು. ಊರ ಮಂದಿ ಜನ-ಜಾತ್ರಿ. ಉಂಡ ಮಂದಿ ಎಲಿಅಡಕಿ ಹಾಕ್ಕೊಂಡು, ಬಾಗಲದಾಗಿನ ಗುದ್ದವ್ವನ ಕಟ್ಟಿಯ ಬೇವಿನ ಮರದ ಕೆಳಗ ಗೋಣಿತಟ್ಟು ಹಾಸ್ಕೊಂಡು ಹೆಂಡದ ಅಮಲು ಹೆಚ್ಚಾಗಿ ಅಡ್ಡಾಗಿದ್ರು. ಚೀಲ ಸಿಗದವರು ಹೆಗಲಮ್ಯಾಲಿನ ಟವಲು ಹಾಸ್ಕೊಂಡು ಅಡ್ಡಾದ್ರು, ಹೆಣ್ಣುಮಕ್ಕಳು ಮನಿ ಅಂಗಳದಾಗ ಅಂಗಾತ ಬಿದ್ಕೊಂಡಿದ್ರು. ಗೋಪ್ಲ ಮಾತ್ರ ಮಂದಿ ಹಗಲ ಹೊತ್ನಾಗ ಉಲ್ಟಿರೋದನ್ನ ನೋಡಿ ಗಾಬಾಗಿದ್ದ. "ಈ ಮಂದಿ ಜೀವನಾನs ಆಟು. ತಲಿಯೊಳಗ ಬುದ್ಧಿ ಇಲ್ಲಾ, ಕತ್ತಿ ದುಡದಂಗ ದುಡಿತಾವ, ಹೆಂಡ ಕುಡಿತಾವ, ಬಿದ್ಕೊಂತಾವ" ಅಂದ್ಕೊಂತ, ಕಣ್ಣು ತೆರೆದು ಕೊಂಡು ದೈನ್ಯ ನೋಟ ಬೀರಿದ ಮಂಟಕುರಿಯ ಚೆಂಡನ್ನ ತದೇಕಚಿತ್ತದಿಂದ ನೋಡತೊಡಗಿದ. ಪಾಂಡು ಮೇಷ್ಟ್ರು ಹೇಳಿದ ಗಾಂಧೀಜಿ ನೆನಪಾತು. ತುಂಡು ಪಂಚೆಯುಟ್ಟು, ಕೈಯೊಳಗೆ ಕೋಲು ಹಿಡಿದುಕೊಂಡಿದ್ದ ತಾತನ ಫೋಟೊ ಸಾಲಿಯೊಳಗ ನೋಡಿದ್ದ. ಹೈಸ್ಕೂಲಲ್ಲಿ, ಹಾಸ್ಟಲಲ್ಲಿ ಗಾಂಧೀಜಿ ಫೋಟೊ ನೋಡಿದ್ದ. ಪಾಂಡು ಮೇಷ್ಟ್ರು ಮಾತ್ರ ಗಾಂಧಿ ಟೋಪಿ ಧರಿಸಿ ಕೊಂಡು ಪ್ರತಿದಿನ ಒಂದು ಸಾರಿಯಾದರೂ ಗಾಂಧೀಜಿಯ ಹೆಸರನ್ನ ಜಪಿಸುತಿದ್ರು. ಜಿ. ಸಿಂಗಪ್ಪ ಮೇಷ್ಟ್ರು- "ಲೇ ಗೋಪ್ಲ, ಅಹಿಂಸೆ ಅಂದ್ರ ಏನ್ಲೆ" ಅಂತ ಹಾಸ್ಟಲ್ ಮುದ್ದಿ, ಹುಳ್ಳಿ ಸಾರು, ಹಾಲಪೌಡರ ಮೊಸರುಂಡು ನಡುಬೆಂಚಿನ್ಯಾಗ ತೂಕಡಸ್ತಿದ್ದ ಗೋಪ್ಲನ್ನ ಕೇಳಿದ್ದಕ್ಕ, ಗಡಬಡಿಯಿಂದ ಎದ್ದ ಗೋಪ್ಲ ಏನು ಹೇಳಬೇಕು ತಿಳಿಯದೇ ಜಿ. ಎಸ್. ಮೇಷ್ಟ್ರ ಎಲ್ಬುವರಿ ಅಡಿಯ ಪ್ಯಾಂಟ ನೋಡ್ತಾ ನಿಂತಿದ್ದ. ಹಸಿ ಬೆತ್ತದಿಂದ ಬಾರಿಸಿ, ಗಾಂಧೀಜಿ ಯವರ ಉದಾಹರಣೆ ಕೊಟ್ಟಿದ್ದು ನೆನಪಾತು. ಒಂದ ಪಕ್ಷ ಗಾಂಧೀ ಅನ್ನೋ ತಾತ ಬದಕಿದ್ರು, ನನ್ನ ಮಂಟಕುರಿ ಬದಕ್ತಿತ್ತಾ ? ಚೆಂಡನ್ನ ಕೈಯೊಳಗ ಹಿಡ್ಕೊಂಡು ವಿಚಾರ ಮಾಡತೊಡಗಿದ. ಸಾಲಿಯಿಂದ ಬಂದೊಡನೆ "ಬ್ಯಾ-ಬ್ಯಾ" ಎಂದು ಮೂರು ಕಾಲುಗಳಿಂದಲೇ ಮೋಟುತ್ತಾ ಹಿಂದೆ ಓಡಿ ಬರ್ತಿದ್ದ ಮಂಟಕುರಿ ಮತ್ತೆಂದೂ 'ಬ್ಯಾ' ಅನ್ನದಂಗ ಸೊಲ್ಲ ಅಡಗಹೋತು. ತಡಕೊಳ್ಳಾಕ ಆಗ್ಲಿಲ್ಲಾ, ಬಿಕ್ಕಳಸತೊಡಗಿದ. ಅವನ ಹಿರಿಯಕ್ಕನ ಮಗಳು

ಅವನಿಗ ಕೊಡಬೇಕಂತ ಮಾತುಕತಿ ಮುಗಿಸಿದ ಜಯಿ ಬಂದಂಗಾಗಿ, ತುಂಬಿದ ಕಣ್ಣೀರನ್ನ ಒರೆಸಿಕೊಂಡ.

ಎದ್ದವನs ಚಂಡನ್ನ ಮೆಲ್ಲಗ ನೆಲ್ದ ಮ್ಯಾಲಿಟ್ಟು, ಉಣ್ಣೊ ವಿಚಾರ ಮಾಡದೇ ಕಣದ ಕಡಿಗ ಹೋದ. ಕೋಡಿ ಸರ ದಾಟುತ್ತಿದ್ದ. ಗದ್ದ ಹನಮ ಬಂದವನೆ– "ಯಾಕ್ಲೆ ಗೋಪ್ಲ ಒಂದು ಥರಾ ಅದಿ, ಮನಿಯಾಗ ಮಂದಿ ಕುಡ್ದು, ತಿಂದು ಮಜಾ ಮಾಡ್ತಾರ, ನೀನು ಕಣಕ್ಕ ಹೊಂಟಿ. ನಡಿಲೆ ಮನಿಗ, ನಂಗೂ ಉಣ್ಣಾಕ ಹಾಕಕ ಹೇಳು" ಎಂದ. ಗದ್ದ ಹನಮನ ಮಾತು ಕೇಳಿ ನಗು ಬಂತು. "ನಾನs ಉಂಡಿಲ್ಲಾ ಹೋಗಲೇ, ನಾ ಸಾಕಿದ ಮಂಟಕುರಿ ಕೊಯ್ದು ಮಾಡ್ಯಾರ. ನಾ ಮಾಂಸಾ ತಿನ್ನಂಗಿಲ್ಲಾ" ಅಂದವನೇ ಕಣದ ಬಾಗಲ ತಗ್ದು, ಬಣವಿ ನೆಳ್ಳಾಗ ಹಾಸಿಕೊಂಡು ಗಾಂಧೀಜಿ ಕುರಿತು ವಿಚಾರ ಮಾಡತೊಡಗಿದ.

ಗೋಪ್ಲ ಎದ್ದಾಗ ಕತ್ಲಾಗಿತ್ತು. ಜೀರ್–ಜೀರ್ ಸದ್ದು ಮಾಡ್ತಾ ಜಿರುಂಡೆಗಳು, ದೀಪದ ಹುಳಗಳು ಅಡ್ಡಾಡ್ತಿದ್ವು. ಹೊಟ್ಟಿ ಹಸದಿತ್ತು. "ಗಾಂಧೀಜಿ ಮ್ಯಾಲ ಆಣಿ ಮಾಡ್ತೀನಿ– ಸತ್ರೂ ಮಾಂಸ, ಮೀನು ಏನು ತಿನ್ನಂಗಿಲ್ಲಾ" ಎಂದು ನಿರ್ಧಾರ ಮಾಡಿಕೊಂಡ. ಯಾಕೊ ಹೆದರಕಿಯಾತು. ಕೋಡಿ ಸರ ದಾಟುವುದು ಕಠಿಣ ಅಂತ ಅಂದ್ಕೊಂಡವನs ಗಟ್ಟಿಯಾಗಿ ಕಣ್ಣು ಮುಚ್ಚಿ ಬಣವಿ ಪಕ್ಕದಲ್ಲೆ ಕುತ್ಕೊಂಡ.

ಮದ್ಯಾಹ್ನದ ಕುಡಿದದ್ದು ಇಳದಿದ್ದರಿಂದ, ಸಂಜಿಗ ವ್ಯವಸ್ಥೆ ಮಾಡಿ ಕೊಳ್ಳಾಕ ಮಂದಿ ಅಡ್ಡಾಡತಿತ್ತು. ಗೋಪ್ಲನ ಸುದ್ದಿಯನ್ನ ಮರತಿದ್ದ 'ಭೀಮಿ'ಗ ಅವನು ಎಲ್ಲೂ ಕಾಣದ್ದಕ್ಕ ಗಾಬರಿ ಆತು. ಹೆಂಡದ ಅಮಲಿನ್ಯಾಗ ಮದ್ಯಾಹ್ನ ಅವನು ಉಂಡಾನೋ ಇಲ್ಲೋ ಅನ್ನೋದು ತಿಳಿಯದೆ ಕಳವಳ ಗೊಂಡಿದ್ಲು. ಮೂಲಿಯೊಳಗ ಕುಂತು ಬೀಡಿ ಎಳಿತಿದ್ದ ತಿರುಪನ ಹತ್ರ ಓಡಿ ಬಂದವಳ "ಕೌಳಾಗ್ಯೆತಿ, ಹುಡ್ಗ ಎಲ್ಲೂ ಕಾಣವಲ್ಲ, ಎದ್ದ ಹುಡಕು" ಎಂದಳು. "ಇಲ್ಲೆ ಎಲ್ಲ್ಯಾರೆ ಇದ್ದಾನು, ಅವನೇನ ಸಣ್ಣಾನs, ಮದ್ವಿ ವಯಸ್ಸಿಗ ಬಂದಾನ" ಎಂದು ಆಕಳಿಸಿ ಎದ್ದ. ಭೀಮಿಯ ಕಳವಳ ಹೆಚ್ಚಾತು. ಗೋಪ್ಲನ ಅಣ್ಣಂದಿರು ಊರ ತುಂಬ ಹುಡುಕತೊಡಗಿದ್ರು. ಅವರ ಹುಡಕಾಟ ನೋಡಿ

ಗದ್ದ ಪಸಮ- "ಮದ್ಯಾಹ್ನ ಕಣದ ಕಡಿಗ ಹೊಂಟಿರೋದನ್ನ ನೋಡಿದೆ" ಎಂದಿದ್ದನ ಕೇಳಿ, ತಿರಪ ಕಣದ ಕಡಿಗ ಓಡಿದ. "ಗೋಪ್ಲ, ಲೇ ಗೋಪ್ಲ" ಎಂದು ಕೂಗಿದಂಗಾಗಿ 'ಓ' ಎಂದ ಗೋಪ್ಲ. "ಇಲ್ಲೇನ ಮಾಡಾಕತ್ತಿ ?" ಎಂದವನೆ ಓಡಿದು ಬಾರಿಸಿದ. ಗೋಪ್ಲ ತಪ್ಪಿಸಿಕೊಂಡವನೆ ಮನಿ ಕಡಿಗ ಓಡಿದ.

ಬಿದ್ದ ಏಟಿನಿಂದಾಗಿ ಮೈ ಚುರುಗುಡುತ್ತಿತ್ತು. ಮುಂಜಾನಿಂದ ಉಣ್ಣದಕ್ಕ ಸಂಕಟ ಆದಂಗಾಗಿ, ತಲೆ ತಿರುಗಿ ನೆಲಕ್ಕ ಬಿದ್ದ. ಮಂಟಕುರಿ ಮತ್ತು ಗಾಂಧಿ ಇಬ್ಬರ ವಿಚಾರಗಳನ್ನ ಬಿಟ್ಟರೆ ಮತ್ತೇನು ನೆನಪಾಗಲಿಲ್ಲಾ ಅವನಿಗೆ. ಅವನ ಸುತ್ಲು ಮಂದಿ ನೆರದಿದ್ರು. ಅವನವ್ವ ಅಮಲು ಏರದ್ದರಿಂದ ಮುಸಿಮುಸಿ ಅಳತಿದ್ಲು. ಅವನಪ್ಪ ರೋಷಾವೇಷದಿಂದ ಹಾರಾಡ್ತಿದ್ದ. "ಮುಂಜಾನಿಂದ ಉಣ್ಣದ ಕಣಕ್ಕ ಹೋಗ್ಯಾನ ಕಿಸಿಯಾಕ. ಏ, ಸಾರ ಐತೇನು ಉಣ್ಣಾಕ ಹಾಕು" ಎಂದು ಅಳುತ್ತಿದ್ದ ಭೀಮಿಗ ಗದರಿಸಿದ "ನಾ ಮಾಂಸ ತಿನ್ನಂಗಿಲ್ಲಾ" ಎಂದ ಗೋಪ್ಲ. "ಯಾಕಲೇ, ನಾಯಿ ತಿಂದಂಗ ತಿಂತಿದ್ದೆ, ಈಗ ಏನಾತು ?" ಅಂದ ತಿರಪ. "ಸತ್ರು ತಿನ್ನಂಗಿಲ್ಲಾ" ಅಂದ ಗೋಪ್ಲ. "ನೀ ಏನ ಬ್ಯಾಂಬ್ರ ಜಾತಿಯೋನು ತಿನ್ನಂಗಿಲ್ಲಾ ಅನ್ನಾಕ, ತಿಂತಿಯಾ, ನಾಕ ಬಿಗಿಲಿ" ಎಂದ. "ನೀ ಏನ ಮಾಡಿದ್ರು ತಿನ್ನಂಗಿಲ್ಲಾ" ಎಂದು ಹಠ ಹಿಡಿದ ಗೋಪ್ಲ. "ಯಾಕ ತಿನ್ನಂಗಿಲ್ಲಾ ?" ಎಂದವನೆ ಕಪಾಳಕ ರಪ್‌ಂತ ಬಾರಿಸಿದ ತಿರಪ. ಬಲಗಣ್ಣಾಗ ದೀಪ ಹತ್ತಿದಂಗಾಗಿ "ಯವ್ವಽಽ.. " ಎಂದು ಕುಂತಲ್ಲೆ ಉಚ್ಚಿ ಹೊಯ್ಯಕೊಂಡ ಗೋಪ್ಲ. ಆದ್ರು ಬಿಡದೆ, ದರದರ ಮನಿಂದ ಹೊರಗ ಎಳಕೊಂಡ ಬಂದವನೆ ಒಲಿ ಹತ್ರ ಕುಂದ್ರಿಸಿ ಎಲ್ಲ ರೊಟ್ಟಿ ಮ್ಯಾಲ ತಾಟಿನ ತುಂಬ ಮಾಂಸದ ಚೂರು ಹಾಕಿದಳು ಅವನವ್ವ. ಕಪಾಳ ಉರಿತಿತ್ತು. ತಾಟಿನ ತುಂಬ ತುಂಬಿದ್ದ ಮಾಂಸ ಒಂದಾಗಿ ಸೇರಿಕೊಂಡು, ಮಂಟಕುರಿಯಾಗಿ 'ಅಂಬ್ಯಾ' ಎಂದು ಕೂಗಿದಂಗಾಗಿ ಮತ್ತೊಂದೀಟು ಜೋರ ಮಾಡ್ದ. ಅವನ ಪಕ್ಕಕ ಬಂದು ಕುಂತ ಜಯಿನ ನೋಡಿ, ಅವಮಾನ ಆದಂಗಾಗಿ ಅಳೋದು ನಿಲ್ಸಿ, ಮೂಗ ಎಳಿಯೋದನ್ನ ಸುರು ಮಾಡ್ದ. ಮೆಟ್ರಿಕ್ ಕಲಿಯೋ ನನಗ ಹಿಂಗ ಹೊಡ್ದಾ ನಮ್ಮಪ್ಪ. ಮಂಟಕುರಿನಽ ಹೋದ ಮ್ಯಾಲ ನಾನು ಈ ಮನಿಯಾಗ ಇರಬಾರದು ಅಂದ್ಕೊಳ್ಳತೊಡಗಿದ. ಹೆಂಡದ ಮ್ಯಾಲ ಮಾಂಸದ ಚೂರನ್ನ ನೆಂಜಿಕೊಳ್ಳುತ್ತಿದ್ದ ತಿರುಪಗ ಒಂದು ಬಾಟಲಿ ತಲಿಯೊಳಗ

ಕೆಲಸ ಮಾಡದಂಗಾಗಿ– “ಏ ಸುಮ್ನ ಕುಂತಾನಲ್ಲ, ಅವ್ನಾ ತಿಂತಾನಂತs ಏನಂತ” ಎಂದವನೆ ಪಕ್ಕದಲ್ಲಿದ್ದ ಹೊಳಕಿ ಕಟ್ಟಿಗಿ ಎತ್ತಿದ. “ಏ ನೀ ಸುಮ್ಕಿರು ಅವನೆಲ್ಲಾ ತಿಂತಾನ, ನೀ ಏನ ಹಚ್ಚಿ. ನೀ ತಿನ್ನ ಮಗ, ಸುಮ್ನ ಯಾಕ ಹಠ ಹಿಡಿತಿ” ಎಂದಳು ಭೀಮಿ. ಪಕ್ಕದಲ್ಲೇ ಕುಂತಿದ್ದ ಜಯಿ ಭಾವಿಗಂಡನ ರಂಪಾಟ ನೋಡಿ ನಗ್ತಿರೋದು ಗಮನಿಸಿದ ಗೋಪ್ಲ, ಮತ್ತೆ ಪೆಟ್ಟು ಬೀಳ್ತಾವಂತ ತಿಳ್ಕೊಂಡವನs ರೊಟ್ಟಿ ಮುರದು, ಮೆತ್ತನ ಒಂದು ಮಾಂಸದ ಚೂರನ್ನ ರೊಟ್ಟಿಯ ತುತ್ತಿನೊಳಗ ತಗೊಂಡು ಬಾಯಿಗ ತುರುಕಿದ. ಮಂಟಕುರಿಯ ಆರ್ತನಾದ ಕಿವಿಗ ಅಮರಿದಂಗಾಗಿ, ಬಾಯಿಯೊಳಗಿನ ತುತ್ತು ವಿಷವೆನಿಸತೊಡಗಿತು. ‘ವಾಕ್’ ಎಂದು ವಾಂತಿ ಮಾಡಿದ. ಮಂಟಕುರಿಯ ಚೆಂಡು ಮಾಯವಾಗಿತ್ತು. ದೂರದಲ್ಲಿ ಅವನ ಹಿರಿಯಣ್ಣ, ಅದರ ಬಾಯಿಯೊಳಗ ಕೋಲು ಹಾಕಿ ಬೆಂಕಿಯಲ್ಲಿ ಹುರಿಯುತ್ತಿದ್ದ. ಗೋಪ್ಲಗ ಸಂಕಟಾತು. ಅವನಣ್ಣ ಅದರ ಎರಡು ಕೋಡುಗಳನ್ನ ಕಿತ್ತು ಬಿಸಾಡಿದ. ಗೋಪ್ಲ ಓಡಿ ಹೋದವನೆ, ಸುಡುತ್ತಿರುವುದನ್ನ ಲೆಕ್ಕಿಸದೆ, ಕೋಡು ಎತ್ತಿಕೊಂಡವನೆ– ಮಂಟಕುರಿಯ ನೆನಪು ಮಾಸದಿರಲಿ ಎಂದು ಕಿಸೆಯೊಳಗಿಟ್ಟುಕೊಂಡ. ದುರಗುಟ್ಟಿ ನೋಡ್ತಿದ್ದ ಅವನಪ್ಪನ ಸಮಾಧಾನಕ್ಕ ಮತ್ತೊಂದು ತುತ್ತು ಬಾಯಿಯೊಳಗಿಟ್ಟ. ಗಾಂಧೀಜಿ ಹೇಳಿದ ಮಾತುಗಳನ್ನ ಪಾಂಡು ಮೇಷ್ಟ್ರ ಹೇಳಿದ್ದು ನೆನಪಾತು. ಬಾಯಿಯೊಳಗಿನ ತುತ್ತು ಗಂಟಲಿಗೆ ಇಳಿಯದಾತು. ಎರಡನೇ ಬಾಟಲಿ ಮುಗಿಸಿದ ತಿರುಪ– “ಬಡಬಡ ತಿನ್ನಲೇ, ನನ್ನ ಬೀಗರು ಹಸ್ಕೊಂಡ್ರು” ಎಂದು ಗದರಿಸಿದ್ಕ, ಅಗಿಯುತ್ತಿದ್ದ ತುತ್ತು ಜುಲುಮಿಯಿಂದ ಗಂಟಲು ಇಳೀತು. ಮಂಟಕುರಿ, ಗಾಂಧಿ ಮಾತು ಎಲ್ಲಾ ಹೊಟ್ಟಿ ಎಂಬ ನರಕ ಸೇರಿದಂಗ ಅನಿಸಿತು ಗೋಪ್ಲನಿಗ. ಜಯಿ “ತಿನ್ನ ಮಾವ” ಅಂದ್ಲು. ಸಿಟ್ಟಿನಲ್ಲೂ ನಕ್ಕ. ಮುಂದಿನ ತಾಟು ಎತ್ತಿದವನs ನಾಯಿಮುಂದ ಎಸದು, ಎದ್ದು ಓಡಿದ–ಓಡಿದ, ಮಂಟಕುರಿ ಮನಸಿಂದ ಮಾಯ ಆಗೋವರಿಗ.

ಉರಿಬಿಸಲ ತಾಪಕ್ಕ ಕಾದ ಹಂಚುಗಳು ತಣ್ಣಗಾಗತೊಡಗಿದಂತೆ, ಸರಾಯಿ ಕುಡಿದ ಊರಮಂದಿ ರಂಗೇರತೊಡಗಿದರು. ಲಿಂಗನ ಅಂಗಡಿ, ಮತ್ರಿ ಅಂಗಡಿ ಸಾಲದಕ್ಕ, ದುಗ್ಗತ್ತಿ ಹಿಂದಲ ಸಾಂತಿನಗರ ತಾಂಡದಾಗ ಕಟ್ಟಿರೋ ಬ್ರಾಂದಿ ಫ್ಯಾಕ್ಟರಿಯ ಬ್ರಾಂದಿ ಬರತೊಡಗಿತ್ತು. □

ವಿಕೃತ ಮನಸಿನ ಒಂದು ಅವತಾರ

ಬದುಕಿನ ಸಂಬಂಧಗಳನ್ನೆಲ್ಲಾ ಕಿತ್ಕೊಗೆದು ವೀರ್ಯಾ ಓಡ್ಹಿದ್ದ. ಹೆಣ್ತಿ, ಮಕ್ಳು, ತಂದಿ-ತಾಯಿ, ಬಂಧು-ಬಳಗ ಅನ್ನೊ ಸಾಗರ ಬಿಟ್ಟು, ದೂರ ಯಾರಿಗೂ ಗುರ್ತು ಸಿಗದ ಜಾಗಕ್ಕ ಹೊಂಟಿದ್ದ. ಕೆರಿ ಏರಿ ಮ್ಯಾಲಿನ ಹುಣಸಿ ಮರ, ನೀರಲಣ್ಣಿನ ಮರಗಳನ್ನ ದಾಟಿ ಆಲದ ಮರಕ್ಕ ಬಂದಾಗ, ಅವನ ಬಾಲ್ಯದ ನೆನಪಾತು. ಕೆರಿ ಮುಂದ ಹುಲ್ಲು ಬತ್ತಿಂದ, ಶಂಕ್ರನಳ್ಳಿ ಹಳ್ಳದಾಗ ದನ ಬಿಟ್ಟು, ಆಲದ ಮರದ ಬಿಳಲಿಗೆ ಜೋತು ಬಿದ್ದು ಜೋಕಾಲಿ ಆಡಾಕ ಹೋಗಿ ಬಿದ್ದು, ಕುಂಡ್ಯಾಗ ಜಾಲಿ ಮುಳ್ಳು ನೆಡಿಸಿಕೊಂಡು, ಮನಿಯಾಗ ಹೇಳಿದ್ರ ಹೊಡ್ತಾ ಬೀಳ್ತಾವಂತ ಕುಂಟ್ತಾ-ಕುಂಟ್ತಾ ಅಡ್ಡಾಡಿ, ಕೊನೆಗೊಂದು ದಿನ ಅವನ ಅಜ್ಜಿ ಪೀರವ್ವ ಕಂಡ ಒಡ್ತು, ಹಣಿ ಹಣಿ ಬಡಕೊಂಡು– “ಇರೋ ಒಬ್ಬ ಮೊಮ್ಮಗನ್ನ ಹೆಣ ಮಾಡಾಕ ಹೊಂಟಾನಂತ” ವೀರ್ಯಾನಪ್ಪನ್ನ ಬಾಯಿಗ ಬಂದಂತೆ ಬೊಯ್ದು, ಸಾಲಿ ಬಿಡಿಸಿದ್ದು– ಮತ್ತ ಸಾಲಿಗ ಹಾಕಿದ.

ವೀರ್ಯಾ ಆಲದ ಮರದ ತೆಳಗ ಕುಂತ, ಪ್ಯಾಯನ್ನ ಪರಪರಾಂತ ಪರಚಿ ಕೊಂಡ, ಜೋರಾಗಿ ಕೂಗಬೇಕೆನಿಸಿ– ಊರಿಂದ ದೂರ ಇರೋ ಆಲದ ಮರದ ತೆಳಗ ನಿಂತು ಕೂಗಿದ. ಮುಗಿಲಿಗ ಮುಟ್ಟೋತನಕ ಕೂಗಿದ. ಕೂಗಿ-ಕೂಗಿ ಕಣ್ಣಾಗ ನೀರು ಬಂದವು. ಗಂಟಲು ಉರಿಯಾಕತ್ತು. ಸಮಾಧಾನ ಆಗ್ಲಿಲ್ಲಾ, ಜಿಗಿದು-ಜಿಗಿದು ಬೀಳತೊಡಗಿದ. ತನಗೇನಾಗಿದೆ ? ಯಾಕಿಂಗ ಮಾಡ್ತೀನಿ ? ಅನ್ನೋ ಪರಿಕಲ್ಪನೆ ಅವನಿಗಿರಲಿಲ್ಲಾ. ವೀರ್ಯಾ ಅಳತೊಡಗಿದ. ಕಾಲೇಜಿನ್ಯಾಗ ಅವನು ಆಡಿದ ನಾಟಕದ ಡೈಲಾಗು ಹೇಳಿ ಅವನೊಬ್ಬನೇ ನಟಿಸತೊಡಗಿದ.

ಅಮವಾಸ್ಯೆ ಸಂಜಿ ಆದ್ದರಿಂದ ಕತ್ತಲು ಆಕ್ರಮಿಸತೊಡಗಿತ್ತು. ವೀರ್ಯಾನಿಗೆ ತನ್ನ ಬಾಲ್ಯದ ನೆನಪು ಮತ್ತ ಮರುಕಳಸ್ತು.

ಅಜ್ಜ–ಅಜ್ಜಿಯ ಹಿರಿಯ ಮುದ್ದಿನ ಒಬ್ಬನೇ ಮೊಮ್ಮಗ ವೀರ್ಯಾ ಹೇಳಿದ್ದೆ ವೇದವಾಕ್ಯ. ಓದಿನಲ್ಲಿ ಅಷ್ಟೇನು ಬುದ್ಧಿವಂತನಲ್ಲದ ಅವನಿಗೆ, ಅಜ್ಜಿ ಪ್ರೀತಿ ಮತ್ತೊಂದಿಷ್ಟು ಅಡ್ಡದಾರಿ ಹಿಡಸ್ತು. ಊರಾಗ ದುರ್ಗವ್ವನ ಗುಡಿಯಾಗ ಸಾಲಿ ನಡೀತಿತ್ತು. ಮಾಸ್ತರ ಬಂದವನೇ ಒಂದು ತಾಸಿದ್ದು, ಕೆರಿ ಏರಿ ಮ್ಯಾಲ ಉಂಡು, ಸಂಜಿಮಟ ಮಲಗಿ ಊರ ಕಡಿ ಹೋಗ್ತಿದ್ದ. ಹುಡುಗ್ರು– ಸಾಲಿ ಬಿಟ್ಟು ಕೆರಿ ಮುಂದ ಹಳ್ಳಕ್ಕ ಏಡಿ, ಮೀನು ಹಿಡಿಯಾಕ ಹೋಗ್ತಿದ್ರು. ವೀರ್ಯಾ ಅಜ್ಜಿ ಕುಡಾಗ ಹೊಲಕ್ಕ ಓಡಿಬಿಡ್ತಿದ್ದ. ಕೆಲ ದಿನಗಳ ನಂತರ ಮಾಸ್ತರ ಬರೋದ ನಿಂತಿಂದ, ವೀರ್ಯಾನಪ್ಪ– ಮಗ ಕಲಿಲಿ ಅಂತ ಪಕ್ಕದ ತೆಲಗಿಗ ಸೇರ್ಸಿದ. ಅಲ್ಲಿಗ ಹೊಕ್ಕಿದ್ದ ಮಂಜ್ಯಾ, ನಾಗ ಜೊತಿಗ ಸೇರಿಕೊಂಡ ವೀರ್ಯಾ, ತೆಲಗಿ ಹಳ್ಳದಾಗ ಮೀನು ಹಿಡಿಯುವ ಕೆಲಸಕ್ಕ ತೊಡಗಿದ. ಸಾಲಿ ಬಿಟ್ಟು ಅಲಸಂದಿಕಾಯಿ, ಹೆಸರಕಾಯಿ, ತೊಗರಿಕಾಯಿ ಹರಕೊಂಡು, ಜೋಳದ ಸೊಪ್ಪಿ ಹಾಕಿ ಹುರದು ತಿನ್ಕೊಂತ, ಸಂಜಿಮುಂದ ಸಾಲಿಂದ ಬರೋರ ಹಂಗ ಮನಿಗ ಮುಟ್ಟತಿದ್ರು. ದಿನಸತ್ಯದ ಅವರ ಸಾಲಿ ನಾಟಕ ಗೊತ್ತಾಗಿ, ಹೊಡದು ದನಾ ಕಾಯಲು ಹಚ್ಚಿಂದ– ಬಿದ್ದು, ಮುಳ್ಳು ನೆಡಿಸಿಕೊಂಡು ಮತ್ತೆ ಸಾಲಿಗ ಹೋದ. ಹಾಗೋ ಹೀಗಂತ ಬಿ.ಎ. ಪಾಸು ಮಾಡಿಂದ, ಇಳಿ ವಯಸಿನ ಮುದುಕಿ– ತಾನು ಸಾಯುವುದರೊಳಗೆ ಮೊಮ್ಮಗನ ಮದ್ವಿ ನೋಡಬೇಕಂತ ಹಠ ಹಿಡದಿದ್ದಕ್ಕ, ಅವಳ ಕರಾರಿಗ ಸಹಿ ಹಾಕಿ ಮದ್ವಿಯಾಗಿ, ಅದ್ಯಾವಳೋ ಇಷ್ಟ ಇಲ್ಲದವಳ ಜೊತಿಗ ಕಷ್ಟ ಆದ್ರೂ, ಬಾಳ್ವೆ ಮಾಡಿಕೊಂಡು ಕಂಡ ಸುಖದ ನೆನಪು ಸಂಜಿ ತಂಗಾಳಿಗೆ ಸರ-ಸರಾಂತ ಬಿಚ್ಚಿಕೊಳ್ಳತೊಡಗಿದ್ವು.

ಎಂಟು ಹೆಣ್ಣು ಒಂದೊಂದಾಗೆ ಹುಟ್ಟಿದಾಗ, ವೀರ್ಯಾ ದಿಕ್ಕು ತಪ್ಪಿದ ಪಟದಂಗ ಪಲಾಯನಗೊಂಡಿದ್ದ. ಗಂಡ ಮಗು ಹುಟ್ಟಿದ್ರ ಸ್ವರ್ಗ ಸಿಗತೈತಿ, ವಂಶಾ ಉದ್ಧಾರ ಆಕ್ಕೈತಿ ಅಂತ ಅವನಪ್ಪ–ಅವ್ವ ಹಟ ಹಿಡಿದು ಮತ್ತೊಬ್ಬಾಕಿಯನ್ನ ಕಟ್ಟಿ, ನೋಡ್ಕೊ ನಿನ್ನ ಫಜೀತಿ ಅಂತ ತಮ್ಮ ಪಾಲಿನ ಕರ್ತವ್ಯ ಮಾಡಿ ಕೈ ತೊಕ್ಕೊಂಡ್ರು. ಮೊದ್ಲಿನ ಹೆಣ್ತಿ, ಎರಡನೇ ಹೆಂಡ್ತಿ ಹೊಡ್ಯಾದ

ಪ್ರಾರಂಭ ಆದಾಗ ವೀರ್ಯಾನ ವೀರಾವೇಶ ತಣ್ಣಗಾಗಿತ್ತು. ಬಿ.ಎ. ಕಲ್ತು ಸಾಹಿತ್ಯವನ್ನ ಅರಗಿಸಿಕೊಂಡಿದ್ದ ವೀರ್ಯಾ, ಸಾಹಿತ್ಯದೊಳಗಿನ ಆದರ್ಶದ ಕಲ್ಪನೆಯು ಬದುಕನ್ನ ಬದುಕಲು ಹವಣಿಸಿದ್ದಾ. ಪರಿಸ್ಥಿತಿಯು ಒತ್ತಡಕ್ಕೆ ಸಿಕ್ಕು, ಮಾತು ಕೇಳದ ಹೆಂಡರಿಬ್ಬರ ನಡುವೆ ಹೊಂದಿಕೊಂಡ ಹಂಗೆಲ್ಲಾ ಉರುಲಾಗ ತೊಡಗಿತು. ಅದಕ್ಕೆ, ಜಂಜಡದ ಬದುಕನ್ನ ಜಾಡಿಸಿ ಒದ್ದು ಬಂದಿದ್ದ.

ನೆಲಕ್ಕೆ ಮುಟ್ಟುತ್ತಿದ್ದ ಆಲದ ಬಿಳಲುಗಳನ್ನ ಹಿಡಿದು, ಒಂದು ಸಲ ರಕ್ತದ ಪರಿಳಿತದಿಂದ ಎದೆಯಲ್ಲಿ 'ಜುಂ' ಅನ್ನೊ ಹಂಗ ಚೀರಬೇಕೆನಿಸಿತು. ಆಲದ ಬಿಳಲುಗಳಂತೆ ಬಿಳಲು ಬಿಟ್ಟು ತನ್ನ ಬದುಕಿನ ಸತ್ಯ ಅರಿವಾದೊಡನೆ, ಮರಳಿನ್ಯಾಗ ಬಟ್ಟೆ ಬಿಚ್ಚಿ, ಮೈಮ್ಯಾಲ ಮರಳನ್ನ ಹಾಕಿಕೊಂಡು ಕೇಕೆ ಹಾಕಿ ಕುಣಿದ. ನಾಗ, ಹನ್ಮಂತ, ಪದ್ದಿ, ಹನ್ಮಂತಿಯರ ಕೂಡ ಕಳೆದ ದಿನಗಳು ಎಷ್ಟೋ ಚೆನ್ನಾಗಿದ್ದುವು ಅಂದುಕೊಂಡ. ಉಳ್ಳಾಗಡ್ಡಿ ಹೊಲ ಕಾಯೋಮುಂದ ಗುಡಸಲಿನ್ಯಾಗ 'ಸಾಕಿ' ಕಲಿಸಿದ ಆಟ ನೆನಪಾತು. ತನಗೆ ಅರಿವಾದ ಜಗತ್ತಿನ ಮೊದಲ ಸತ್ಯ ಅದಾಗಿತ್ತು.

ತನ್ನೂರಿನ ವಿಚಾರವಾದಿಗಳೆದಿರಿಗೆ ತನ್ನ ಸಮಸ್ಯೆಗಳನ್ನ ಒಂದೊಂದಾಗಿ ತೆರೆದು ಇಟ್ಟಿದ್ದ. ಪರಿಹಾರ ಸಿಗದೆ ಸಮಸ್ಯೆಗಳೇ ಬದುಕಾದಾಗ, ದಾರಿ ಉಳಿದುಕೊಂಡಿದೆಯೇ ? ಎಂದು ಹುಡುಕತೊಡಗಿದ. ಪಡೆದ ಪದವಿ ನಿಷ್ಪ್ರಯೋಜನಗೊಂಡಿತ್ತು. ತನ್ನೊಳಗಿನ ಪಾಂಡಿತ್ಯವನ್ನು ಭಜನಿ ಪಕ್ಕೀರ, ಪಂಚಿನಮುನಿ ಸಿದ್ಧರ ಎಂದು ತೋರಿಸುತ್ತಿದ್ದ. ದಿನದ ಇಪ್ಪತ್ನಾಲ್ಕು ತಾಸು ಕುಡಿಯುತ್ತಿದ್ದ ಪಕ್ಕೀರನಿಗೆ ವೀರ್ಯಾ ಸಾಕ್ಷಾತ್ ದೈವಸ್ವರೂಪ. ಅಷ್ಟರಲ್ಲೆ ತೃಪ್ತಿ ಪಡೆದ ವೀರ್ಯಾ, ಊರೊಳಗೆ ಸಾಲಿ ಕಲಿತಿದ್ದ ಹುಡುಗರಿಗೆ ತಲೆಹರಟೆ ಪ್ರಶ್ನೆ ಕೇಳಿ ತಲಿ ಕೆಡಿಸ್ತಿದ್ದ. ವೀರ್ಯಾನ ಕಂಡ ಹುಡ್ರು ಸಂದಿಯೊಳಗ ಮರಿಯಾಗತೊಡಗಿದವು. ವೀರ್ಯಾ ಆಗ ತಾನು ಕಲ್ತಿದ್ದು ಸಾರ್ಥಕ ಅಂದುಕೊಂಡ.

ಸುತ್ತಲೂ ಕತ್ತಲು ಕವಿದಿತ್ತು. ತಾನು ಕುಂತಿದ್ದ ಅಗಸಿಪಳ ದೆವ್ವದಂಗ ಕಾಣಾಕತ್ತು. ಎದಿ ಗುಂಡಗಿ ಬಡಕೊಳ್ಳಾಕತ್ತು. ಆಲದ ಮರದ ಪೊಟರಿನಲ್ಲಿ ಕುಂತಿದ್ದ ಗೂಬೆಗಳ ಹಿಂಡು ಮ್ಯಾಲ ಬಂದಿದ್ದವು. ವಿಕಾರ ಧನಿಯೊಳಗ

ಕೂಗಿದ್ದಕ್ಕ ಹೆದ್ರಿ ಹಾರಿ ಬಿದ್ದ. ಇದೇ ಧನಿ ಅಜ್ಜಿ ಸಾಯೋ ದಿನ ರಾತ್ರಿ ಸಾಮಿ ಮನಿ ಮ್ಯಾಲ ಕೇಳಿದ್ದ. ಆವಾಗ ಅಪ್ಪ ಓಡಿ ಹೋಗಿ ಕಲ್ಲಿಂದ ಹೊಡದು ಓಡಿಸಿದ್ದ. ಇದೊಂದು ಸಾವಿನ ಸೂಚನೆ ಕೊಡೊ ಧನಿ ಅಂತ ಅವ್ವ ಹೇಳ್ತಿದ್ಲು. ಯಾರು ಸಾಯಬಹುದು ? ನಾನೇ ? ಹೆದರಿಕೆಯಾಯಿತು ಉಚ್ಚಿ ಒತ್ತರ ಬಂತು. ಆದ್ರ ಹೋಗಾಕ ಧೈರ್ಯ ಸಾಲಿಲ್ಲಾ. ಇಡೀ ಮೈ ತಣ್ಣಗಾತು. "ಇದರವ್ವನ, ಯಾರ ಹೆಣಕ್ಕ ಹಿಂಗ ಒದರಾಕತ್ತೈತೋ" ಅಂತ ಗೊಣಗಿದ.

ಏನೋ ತಲಿ ಮ್ಯಾಲ ಬಿದ್ದಂಗಾತು, ನೀರಿನಂತಹದು. ವಿಚಾರ ಮಾಡಿ-ಮಾಡಿ ಬಿಸಿಯಾಗಿದ್ದ ತಲಿ ತಣ್ಣಗಾದ ಅನುಭವ. ಹಿಂದೆಂದೂ ಆಗದ ತಂಪು, ಅಗಾಧ ತಂಪು. ಅದು ಬಿದ್ದ ಸ್ವಲ್ಪ ಹೊತ್ತಿನಲ್ಲಿ ವೀರ್ಯಾನ ವಿಚಾರಗಳಿಗೆ ಚಾಲನೆ ಬಂತು. ಅವನ ಕಣ್ಣಿಗೆ ಬೆಳಕು ಕಂಡ ಹಂಗಾತು. ಅಜ್ಜಿ ಸತ್ತ ದಿನ ದಿಂದ ಗ್ರಹಾಚಾರ ಸರಿ ಇಲ್ಲಾ ಅಂತ ಅವರ ಹಳೆ ಮಾಳಿಗಿ ಮನಿ ಬಿಟ್ಟು, ಕಣದೊಳಗ ಗುಡಸಲ ಹಾಕಿ ನಾಕು ತಿಂಗಳು ಕಳಿವಾಗ, ಒಂದು ದಿನ ಪೂರ್ವ ದಿಕ್ಕಿನ್ಯಾಗ ರಾತ್ರಿ ಹೊತ್ತು ಈಚಲ ವನದಾಗ ದೀಪಾ ಅಡ್ಡಾಡುತ್ತಿದ್ದುದು ಕಾಣುತ್ತಿತ್ತು. ವೀರ್ಯಾ ಕುತೂಹಲ ತಡಿಲಾರದೆ ಕೇಳ್ತಿದ್ದ. ಹೆಚ್ಚು-ಕಮ್ಮಿ ಊರಾಗ ಸತ್ತ ಮಂದೀನ ಈಚಲಾಗ ಸುಡ್ತಿದ್ರು. ಬಹುಶಃ ದೆವ್ವ ಇರಬೇಕು ಅಂತ ವೀರ್ಯಾನ ವಾದ. ಆದ್ರ ಅವನವ್ವ- "ಇಲ್ಲಾ, ಅಲ್ಲೊಂದು ಮೂಕ ಚೌಡಿ ಅದಾಳ, ಅಲ್ಲಿಂದ ದಿನ ರಾತ್ರಿ ಈ ಹೊತ್ತಿಗ ದೀಪಾ ತಗೊಂಡು, ನಮ್ಮೂರ ಕೆರಿ ತುಂಬಿನ ಹತ್ರ ಇರೋ ಅವಳ ತಂಗಿ, ತುಂಬಿನs ಚೌಡಿ ಹತ್ರ ಬರ್ತಾಳ" ಅಂತ ಹೇಳಿದ್ದು ನೆಪ್ಪಾತು. ಈಗ ಬೆಳಕು ಕತ್ತಲನ್ನ ಸೀಳಿಕೊಂಡು ಪ್ರಕಾಶಮಾನವಾಗತೊಡಗಿತು. ಬೆಳಕು ಎತ್ತರ-ಎತ್ತರಕ್ಕೆ ಬೆಳೆಯತೊಡಗಿತು, ಅಗಲವಾಯಿತು. ಆ ಬೆಳಕಿನಲ್ಲಿ ಆಲದ ಮರದ ಕೊಂಬೆಯ ಮೇಲೆ ಕುಳಿತಿದ್ದ ಗೂಬೆಗಳು, ಗೂಡಿನಲ್ಲಿ ಮುದುರಿಕೊಂಡಿದ್ದ ಹಕ್ಕಿಗಳು ಸ್ಪಷ್ಟವಾಗಿ ಕಾಣ ತೊಡಗಿದವು. ವೀರ್ಯಾನಿಗೆ ಏನೊಂದೂ ತಿಳಿಯಲಿಲ್ಲಾ. ದೆವ್ವಗಳು ವಿವಿಧ ಅವತಾರಗಳನ್ನು ಹಾಕಿಕೊಂಡು ಬರ್ತಾವಂತ ಹುಚ್ಚಪ್ಪ ಹೇಳಿದ್ದು ನೆನಪಾತು. ಅವನೊಂದು ದಿನ ಭಟ್ಟರ ಹೊಲದಾಗ ಕೊಂಡಿ ಸರದ ಇಳಕಲಿನಲ್ಲಿ ಕುರಿಮರಿ ಯೊಂದು ಒದರಿದಂಗಾಗಿ, ತಿರುಗಿ ನೋಡಿದರೆ ಬಲವಾದ ಮರಿಯೊಂದು

ಮೇಯುತ್ತಿತ್ತು. ಸುತ್ತಲೂ ನೋಡ್ದ, ಯಾರೂ ಕಾಣಲಿಲ್ಲಾ. ಹತ್ತಿರ ಹೋದವನೇ ಎತ್ತಿ ಹೆಗಲಮೇಲೆ ಹಾಕಿಕೊಂಡ. ನಾಕು ಹೆಜ್ಜಿ ಮುಂದಿಟ್ನಂತ, ಹೆಣ ಭಾರ. ನಡಿಯಾಕಾಗದೆ ಹೊತ್ತ ಭಾರ ವಜ್ಜಿಯಾಗತೊಡಗಿದಕ್ಕ ಹೆಗಲ ಮ್ಯಾಲಿದ್ದ ಕುರಿಮರಿಯನ್ನು ಹಂಗ-ಹಿಂಗ ಮಾಡಿ ಎತ್ತಿ ನೆಲ್ಕ ವಗ್ದವನೆ ಹಿಂದ ನೋಡದೇ ಓಟ ಕಿತ್ನಂತ. ಅವನ ಹಿಂದಿಂದ ಬೆನ್ನು ಹತ್ತಿದ ದೆವ್ವ, ದೊಡ್ಡಮನಿ ಸೋಮಣ್ಣನ ಹೊಲದ ಮೂಲಿಗ ಹುಚ್ಚಪ್ಪನ ಮುಂದs ಮುಗಿಲಿಗೂ-ಪಾತಾಳಕ್ಕ ಏಕs ನಿಂತಕೊಂಡಿತ್ತಂತ. ಪಂಜಿಯೊಳಗ ಒಂದು-ಎರಡು ಮಾಡಿಕೊಂಡವನೇ, ಶಂಕ್ರನಳ್ಳಿ ತಿಮ್ಮಪ್ಪನ ಹೊಲ್ದ ಕಡಿಗ ಓಡಿದವನs ಮಿಷನ್ ಮನಿಯೊಳಗಿದ್ದ ಸಣ್ಣದುರಗಪ್ಪನ್ನ ಕೂಗಿದ್ನಂತೆ. ದುರಗಪ್ಪ 'ಯಾರದು ?' ಅಂತ ಕೂಗಿ ಹೊರಗ ಬಂದಾಗ ಹುಚ್ಚಪ್ಪನ ಫಜೀತಿ ನೋಡಿ, ಬ್ಯಾಟರಿ ತಗೊಂಡು ಕೋಡಿಸರದ ಕಡಿಗ ಹೋಗಿ ನೋಡಿದ್ರ ಏನು ಇದ್ದಿಲ್ಲಂತ. "ಏ ಸಿನ್ನಾಪ್ನ ಎಲ್ಲಿs ದೆವ್ವ ತರ್ತಿ, ಕುಡಿದ ಅಮಲಿನ್ಯಾಗ ಪೂಜಾರಿ ರಾಮನ ಮ್ಯಾಗಿ ಮ್ಯಾಲಿನ ರಕ್ಕಸಪಟ್ಟಿಪೆಳಿ ಕರ್‍ರಗ ದೆವ್ವದಂಗ ಕಂಡಿರಬೇಕು" ಅಂತ ಮನಿವರಿಗ ಬಂದು ಬಿಟ್ಟುಹೋಗಿದ್ದು ನೆಪ್ಪಾತು. ವೀರ್‍ಯಾ ಒತ್ತರ ಬರಕತ್ತಿದ ಉಚ್ಚಿ ಒತ್ತಿ ಹಿಡ್ದ. ಆದ್ರೆ ಸಾಧ್ಯ ಆಗ್ಲಿಲ್ಲ. ಸ್ವಲ್ಪ-ಸ್ವಲ್ಪ ಪಂಜಿಯೊಳಗ ಉಚ್ಚಾ ಹೋಯ್ತಿದ್ದ. ಆದ್ರೂ ಧೈರ್ಯ ಮಾಡಿ ಬೆಳಕು ಚಲಿಸುತ್ತಿರುವ ದಿಕ್ಕನ್ನೇ ನೋಡತೊಡಗಿದ. ಅಮಾಸಿ ಕತ್ಲು, ಕ್ಷುದ್ರ ಜೀವಿಗಳು ಈಗs ಏಳ್ತಾವಂತ. ಆಲದ ಮರದ ಹತ್ರ ಬ್ರಹ್ಮರಾಕ್ಷಸಿಯೊಂದು ಅಡಗಿಕೊಂಡು ಕುಂತೈತಿ ಅಂತ ಊರ ಸಣ್ಣ ಹುಡುಗ್ರ ಬಾಯೊಳಗೂ ಕೇಳಿದ್ದ. ಗಾಬರಿ ಹೆಚ್ಚಾತು. ದೂರದಲ್ಲೆಲ್ಲೋ ಮಾತನಾಡಿಕೊಳ್ಳುವ ಶಬ್ದ ಕೇಳಿದ. ಏನೋ ಶಬ್ದ. ಯಾವುದೋ ಹಕ್ಕಿ ಕಿರುಚಿತು. ಪ್ರಾಣ ಹೋಗೋ ಸಂಕಟ ಅನುಭವಿಸ್ತಿರೋ ಹಂಗ ಕೂಗ್ತಿತ್ತು. ಯಾವುದೋ ಪಕ್ಷಿ, ಮತ್ಯಾವುದಕ್ಕೋ ಆಹಾರ. ವೀರ್‍ಯಾನಿಗೆ ಧ್ವನಿ ಕಿವಿಯೊಳಗ ಗುಂಯ್‌ಗುಟ್ಟತೊಡಗಿತು.

ಓಡಿ ಬಂದಿದ್ದ ವೀರ್‍ಯಾನ ವಿಕಾರಗೊಂಡಿದ್ದ ಮನಸು ತಿಳಿಗೊಳ್ಳ ತೊಡಗಿತು. ಅವನಿಗ ಹೆದರಿಕೆಯಾಗಲಿಲ್ಲಾ. ಬಹಳ ಹೊತ್ತಿನವರೆಗೆ ಹಂಗೇ ಕುಂತ. ಮನಸ್ಸನ್ನ ಹಿಡಿಗೊಳಿಸಿಕೊಂಡು ವಿಚಾರ ಮುಕ್ತನಾಗಿ, ಸ್ವಲ್ಪ

ಹೊತ್ತು ಮೊದ್ಲು ತನಗಾದ ಪರಿಸ್ಥಿತಿಯನ್ನ ಪುನರ್‌ವಿಮರ್ಶಿಸಿಕೊಳ್ಳ ತೊಡಗಿದ. ಸೀಮಿತಗೊಳಿಸಿಕೊಂಡಿದ್ದ ಬದುಕನ್ನ ತೊರದು, ಸಮಸ್ಯೆಗಳಿಂದ ಹೆದ್ರಿ, ಓಡಿ-ಓಡಿ ಸಾಧಿಸುವುದಾದ್ರೂ ಏನು ? ನಾನು ಓಡಿ-ಓಡಿ ಯಾವ ಗುರಿ ಮುಟ್ಟಬಲ್ಲೆ ? ಅನ್ನೋದು ಅವನ ಮುಂದ ಧಿಡೀರಂತ ಎದುರಾದ ಮತ್ತೊಂದು ವಿಚಾರ. ಹೊಟ್ಟೆ ಹಸಿವು ಜಾಸ್ತಿಯಾತು, ನೀರು ಕುಡಿಬೇಕು ಅನಿಸಿತು. ಮತ್ತೆ ಮನಿಗ ಹಿಂದಿರುಗಿ ಹೋಗೋದೆ ? ಎದಿಯ ಮೂಲಿ-ಮೂಲಿಗಳನ್ನ ಬಗದು ಹುಡುಕತೊಡಗಿದ. ಪರಿಹಾರ ಸಿಗಲಿಲ್ಲಾ. ಕೆದಕಿದಷ್ಟು ಉಪಯೋಗಕ್ಕೆ ಬಾರದ ವಿಚಾರಗಳೇ ಹೊಂಟವು. ಕತ್ಲಾಗ ಕೈ ಸವರಿದ. ಕೈಗೊಂದು ಕಲ್ಲು ಸಿಕ್ಕಿತು. ಹಾಗೆ ಸವರ್‍ತಾ ಸವರ್‍ತಾ ಕಣ್ಣುಮುಚ್ಚಿದ.

ನಿದ್ದಿಯಿಂದ ಮುಗ್ಗರಿಸಿ ಬೀಳೊಹಂಗ, ತೂಗಡಿಸಿ ಮುಗ್ಗರಿಸಿದಾಗ ಕಣ್ಣುಬಿಟ್ಟ. ಚುಮುಚುಮು ಬೆಳಕು ಹರಿಯತೊಡಗಿತ್ತು. ಅದೇ ಹೊಲ, ದನ, ಎತ್ತು, ಅದೇ ಮನಿ. ಮದ್ವಿಯಾಗಿ ಸಂಸಾರ ಪ್ರಾರಂಭಿಸಿದ ದಿನದಿಂದ ಅದೇ ದುಡಿಮೆ. ಹಗಲು-ರಾತ್ರಿ ಭತ್ತ ಬಿತ್ತಿ, ಕೊಯ್ದು ರಾಶಿ ಮಾಡಿ ಮಾರಿದ್ರೂ, ಮುಂಗಾರಿನಾಗ ಅದ್ತಿ ಅಂಗಡಿ ಸಾವುಕಾರ ಮುಂದ ಕೈ ಕಟ್ಟಿ ಕೊಂಡು ಗೊಬ್ಬರಕ್ಕ, ಬೀಜಕ್ಕ ಅಂತ ತುಟಿ ಕಿಸದು, ಹಲ್ಲು ಗಿಂಜಿ, ತಲಿ ಕೆರಕೊಂಡು, ಅತಿ ವಿನಯ ತೋರ್‍ಸಿ ನಿಲ್ಲಬೇಕು. ಸಾವುಕಾರ 'ಹೂಂ' ಅಂದ್ರ ಮುಗೀತು. ನಾಳೆ ಬಾ, ನಾಡಿದ್ದು ಬಾ ಅಂತ ಲಾಳ-ಲಟ್ಟು ಅಂತ ತಿರಗಾಡಿ, ಕೊಡೊ ರೊಕ್ಕದಾಗಿನ ಅರ್ಧ ಭಾಗ ಖರ್ಚಾಗಿ ಹೊಕ್ಕೈತಿ. ಮತ್ತು ಅದಕ ಬಡ್ಡಿ, ದಲಾಲಿ, ಹಮಾಲಿ ಸೇರ್‍ಸಿ, ಬೆಳದ ಬಿಳಿಯ ಕಾಲುಭಾಗ ಹಕ್ಕಿ, ಕಳ್ಳರು, ಇಲಿ, ಹುಳುಗಳು, ದನ ಕರು ತಿಂದು ಹಾಳ ಮಾಡಿದ್ರ, ಇನ್ನೂ ಕಾಲಭಾಗ ಹಮಾಲಿ-ದಲಾಳಿಗಳು ಹಾಳ ಮಾಡ್ತಾರ. ಉಳಿದಿರೋ ಅರ್ಧ ಭಾಗ, ಕೊಟ್ಟ ಸಾವುಕಾರನ ಬಡ್ಡಿಗ ಅಡ್ಜೆಸ್ಟ್ ಮಾಡಿ, ಮತ್ತದೇ ತಿರಗಾಟ. ಓದಕೊಂಡು ಅಪ್ಪನ ಹತ್ತ ಎಕ್ಕರಿ ಹೊಲ ಒಡುವಳಿಯಿಂದ ಮಾಡಬಹುದೆಂಬ ವೀರ್‍ಯಾನ ವಿಚಾರ, ವ್ಯಾಲ-ವ್ಯಾಲ ಎಂಟು ಹೆಣ್ಣು ಹುಟ್ಟಿದಕ್ಕ ಉಲ್ಟಾಪಲ್ಟಿ ಆತು. ಆದ್ರೂ ಪ್ರಯತ್ನಪಟ್ಟ. ಆದ್ರ ಪ್ರಯೋಜನ ಆಗ್ಲಿಲ್ಲಾ, ಸಾಲದ ಹೊರಿ ಹೆಚ್ಚಾತು. ವೀರ್‍ಯಾನ ಕೂಡ ಓದಿದವರು ಡಾಕ್ಟ್ರು, ತಸೀಲ್ದಾರ್‌ರಾಗಿ

ಹರಪನಹಳ್ಳಿ ತಾಲೂಕಿಗ ಬಂದಾಗ, ವೀರ್‍ಯಾ ಯಾವತ್ತೂ ಅವರನ್ನ ಭೆಟ್ಟಿ ಆಗ್ಲಿಲ್ಲಾ. ಅವರು ತನ್ನ ಕೂಡ ಓದಿದವರಂತ ಅಪ್ಪಿತಪ್ಪಿನೂ ಹೇಳಲಿಲ್ಲಾ.

ಕಾಗಿಯೊಂದು "ಕಾ-ಕಾ" ಅಂತ ತನ್ನ ಸಹಚರರನ್ನ ಎಚ್ಚರಿಸಾಕತ್ತಿತ್ತು. ತನ್ನ ಅಗಲಿಕೆಯಿಂದ, ಯಾರ್‍ಯಾರಿಗೆ ಹೆಚ್ಚು ನೋವಾಗಿರಬಹುದೆಂದು ಊಹಿಸ ತೊಡಗಿದ. ಮದ್ಲು ಮುದುಕಿ ಅವ್ವಗ, ಅಪ್ಪಗ, ನಂತರ ಹಿರಿ ಮಗಳಿಗ, ಎಲ್ಲಾ ಚಂಡಿಗಳಿಗ, ತನ್ನ ಅಗಲಿಕೆ ಜಗಳಕ್ಕ ಮಾರ್ಗ ಮಾಡಿ ಕೊಟ್ಟಿರ್ತಿತು ಎಂದು ಯೋಚಿಸತೊಡಗಿದ. ಉಸಿರುಗಟ್ಟಿಸೋ ವಾತಾವರಣದಿಂದ ಬಂದಿದ್ದಕ್ಕ 'ಹಾಯನ್' ಅನಿಸಿತ್ತು. ಮನಿಯೊಳಗಿನ ಒಳ ಕಿರಿಕಿರಿ ಜೊತಿಗ, ಊರಾಗಿನ ಒಣ ರಾಜಕೀಯ ಹ್ಯಾಂಗಾದ್ರೂ ಬಂದು ಕಾಲಿಗ ಸುತ್ತಿಕೊಂಡು ವೀರ್‍ಯಾನನ್ನ ಮದ್ಲ ಸ್ಥಾನದೊಳಗ ನಿಲ್ಲಿಸಿಬಿಡ್ತಿತ್ತು. ಹನ್ಮಂತದೇವರ ಗೂಳಿ ಹೋರಿಯ ರೊಕ್ಕ ನುಂಗಿದ ಮಾಸ್ತರ ಮತ್ತ ದಗಲಬಾಜಿ ಚಂದ್ರರ ವಿರುದ್ಧ ಮಾತಾಡಿದಕ ವೀರ್‍ಯಾ ಕೆಟ್ಟವನಾಗಿದ್ದ. ಆ ರೊಕ್ಕ ಇಟಕೊಂಡು ಬಡ್ಡಿ ತಿಂದು ಹೊಟ್ಟಿ ಬೆಳಸ್ಕೊಂಡ ಮಾಸ್ತರ, ಗುಡಿ ಕಟ್ಟಾಕ ರೊಕ್ಕ ಕೊಟ್ಟೆನಂತ ಹೇಳಿ ಕೈ ಎತ್ತಿದ್ದ. ಹ್ವಾದ ವರ್ಷದ ಪಂಚಾತಿ ಎಲೆಕ್ಷನ್‌ದಾಗ ಶೇಕ್ರಿ ಕೂಡ ಅಡ್ಡಾಡಿ, ಅಂವ ಸೋತಿದ್ದಕ್ಕ- ಗೆದ್ದ ಮುಂಜ್ಯಾನ ಕಡಿ ಮಂದಿ, ವೀರ್‍ಯಾನ ಹೊಲ್ದಾಗಿನ ಜ್ವಾಳದ ಸೊಪ್ಪಿಗ ಬೆಂಕಿ ಹಚ್ಚಿದ್ದರು. ಎಲ್ಲಾ ನೋವನ್ನ ನುಂಗಿಕೊಂಡಿದ್ದ ಅವನ ಮನಸು ವಿಕಾರವಾಗಿ, ಏನೇನೋ ವಿಚಾರ ಮಾಡಿ-ಮಾಡಿ, ಕೊನಿಗ ಓಡಿ ಹೋಗೋ ವಿಚಾರ ಬಂದಾಗ ಸರಿದಾರಿ ಅಂದ್ಕೊಂಡಿದ್ದ. ಅದೇ ಪರಿಹಾರ ಅಲ್ಲಾ ಅಂತ ಅನಿಸಿ, ದಾರಿ ನಡುವೆ ಆಲದ ಮರದ ತೆಳಗ ಕುಂತು, ಮನಸನ್ನ ಬಿಚ್ಚಿ ಅನಿಸಿದ್ದನ್ನೆಲ್ಲಾ ಮಾಡಿ ಹಗರು ಮಾಡಿಕೊಂಡಿದ್ದ.

ದೂರದಲ್ಲಿ 'ಅಪ್ಪ' ಅಂತ ಯಾರೋ ಕರದಂಗಾಗಿ, ಕಿವಿ ನೆಟ್ಟಗಾದವು. ಕೂಗು ಹತ್ತಿರ-ಹತ್ತಿರ ಆಗ್ತಿದ್ದಂಗ ವೀರ್‍ಯಾನಲ್ಲಿ ಏನೋ ಒಂದು ಬದಲಾವಣೆ ಆಗಾಕತ್ತು. ಯಾವುದಕ್ಕ ಬೆನ್ನು ತೋರಿಸಿ ಓಡಿ ಬಂದಿದ್ದನೋ, ಮತ್ತದೇ ಬದಕು. ಕೂಗು ಅವನ ವಿಚಾರಗಳಿಗೆ ಅಡ್ಡಿ ತಂತು. ಆ ಧನಿಯೊಳಗಿನ ನೋವನ್ನ ಗಮನಿಸಿದ. ಎದಿಯೊಳಗ ಸಣ್ಣಗ ಕಂಪನ ಸುರು ಆತು. ಇಡೀ ರಾತ್ರಿ ಕುಂತು ಚಿಂತಿಸಿದ ವಿಚಾರಗಳು ವಿವೇಚನಾಪೂರ್ಣವಾಗಿದ್ದವು.

ಮಗಳ ಕೂಗಿನಿಂದ ಕರಗತೊಡಗಿದವು. ಮನಸನ್ನ ಕಲ್ಲು ಮಾಡಿಕೊಂಡು ಓಡಬೇಕು; ಅವಳ ಕಣ್ಣಿಗೆ ಬೀಳದಂಗ. ಇಲ್ಲಾ ಪೊದಿಯೊಳಗ ಮರಿ ಆಗಬೇಕು ಅನಿಸಿತು. ಒಬ್ಬಳೇ ವೀರ್ಯಾನ ಹಿರಿಮಗಳು ಭದ್ರಿ ಕೂಗ್ತಾ-ಕೂಗ್ತಾ ಮುಂಗೋಳಿ ಕೂಗುವಾಗಲೇ ಕತ್ಲಿಗೆ ಹೆದರದೆ ಮನಿ ಬಿಟ್ಟು ಬಂದಾಳ. ಯಾರೂ ಬಯಸದ ತನ್ನ, ಇವಳ್ಯಾಕ ಹಚಿಕೊಂಡಾಳ ? ಕಾಲು ಕಿತ್ತು ಇಡಲು ಹವಣಿಸಿದ. ಬಂದಳು, ಬಂದೇ ಬಿಟ್ಲು. ಅದೇ ಆಲದ ಮರದ ಕೆಳಗ ಹೆದರ್ತಾ-ಹೆದರ್ತಾ 'ಅಪ್ಪಾ' ಎಂದು ರೋಧಿಸತೊಡಗಿದಳು. ಬಾಯಿಯನ್ನು ಬಿಗಿ ಹಿಡಿದುಕೊಂಡ. ಭದ್ರಿ ಅಳುತ್ತಾ ಆಲದಮರ ದಾಟಿದಳು. ವೀರ್ಯಾಗ ಸಹಿಸಲಾಗಲಿಲ್ಲಾ; ಕೂಗಿದ. ಜೋರಾಗಿ, ಗಂಟಲು ಕಿತ್ತು ಬರೋ ಹಂಗ, ಕಣ್ಣಾಗ ನೀರು ಬರೋ ಹಂಗ.

□

ಪಯಣಿಗರು

ಬಸ್ಸಿನ ಕಿಟಕಿಯಿಂದ ಮಲೆನಾಡಿನ ಪ್ರಕೃತಿ ಸಿರಿಯನ್ನು ಸವಿಯುತ್ತಾ ಬೆಟ್ಟದ ಏರಿಳಿವುಗಳನ್ನು ನೋಡುತ್ತಿದ್ದ ನನಗೆ ಜೀವನದ ನೆನೆಗುದಿ, ಜೀವನದ ಏರಿಳಿವುಗಳ ನೆನಪಾಗತೊಡಗಿತು. ಬೆಟ್ಟದ ತುದಿಯಿಂದ ಧುಮುಕುವ ಝರಿಯಂತೆ- ಒಂದೊಂದು ಸಾರಿ ಜೀವನದ ಆನಂದದ ಕ್ಷಣಗಳು, ಈ ಮಲೆನಾಡಿನಲ್ಲಿ ಜನಿಸಿದ ಜನ ಎಂಥ ಭಾಗ್ಯವಂತರು ? ಪ್ರತಿದಿನ ನಿಸರ್ಗದ ರಮಣೀಯ ನೋಟವನ್ನು ಸವಿದಾದರೂ ನೋವನ್ನು ಮರೆತಾರು ಎಂಬ ವಿಚಾರದಿಂದ ಮನಸು ಕಲ್ಪನೆಯ ಲೋಕಕ್ಕೆ ಕೊಂಡೊಯ್ಯಿತು.

ಬಸ್ಸಿನ ಸೀಟಿನ ಕಾವಿಗೆ ಉರಿಯುತ್ತಿದ್ದ ಸೀಟನ್ನು ಸರಿ ಮಾಡಿಕೊಳ್ಳಲು ಮೇಲೆದ್ದಾಗ, ಪಕ್ಕದ ಸೀಟಿನಲ್ಲಿ ಕುಳಿತಿದ್ದ ಸುಂದರ ಹುಡುಗಿ ನನ್ನೆಡೆಗೆ ನೋಡಿದಂತಾಗಿ, ನನಗರಿವಿಲ್ಲದೆ ತಿರುತಿರುಗಿ ಅವಳತ್ತ ಓರೆನೋಟ ಹಾಯಿಸ ತೊಡಗಿದೆ. ಇದೇ ಗಂಡಸಿನ ದೌರ್ಬಲ್ಯ, ಹೆಣ್ಣಿನ ಸೌಂದರ್ಯಕ್ಕೆ ಅರಿವಿಲ್ಲದೆ ಮರುಳಾಗಿ ಮಹಾಭಾರತ, ರಾಮಾಯಣ ನಡೆದದ್ದು. ಗ್ರೀಕ್ ದೇಶದಲ್ಲಿ ನಡೆದ ಸಾವಿರ ವರ್ಷಗಳ ಟ್ರಾಯ್ ಯುದ್ಧ ಇದೇ ಸೌಂದರ್ಯಕ್ಕಾಗಿಯೇ ಅಲ್ಲವೆ ? ಪ್ರಕೃತಿ ಸೊಬಗು ಪೇಲವವೆನಿಸತೊಡಗಿತು. ಸುಂದರಿಯ, ಚಿಟ್ಟೆಯಂತೆ ಪಟಪಟ ಬಡಿಯುವ ರೆಪ್ಪೆ, ಆಗೊಮ್ಮೆ-ಈಗೊಮ್ಮೆ ಅಸಹಜವಾಗಿ ನೋಡುವ ನೋಟದ ಮಾದಕತೆ, ನನ್ನೆಲ್ಲಾ ವಿಚಾರಗಳ ಮಾರ್ಗಗಳನ್ನು ಬದಲಾಯಿಸಿ- "ಓಹೋ, ಎಷ್ಟೊಂದು ಚೆಲುವಿದೆ ಅವಳ ಮುಖದಲ್ಲಿ. ಅವಳು.... ನನ್ನ ಪ್ರೀತಿ ಮಾಡಿದರೆ ? ಎಂಬ ಭೂತಾಕಾರದ ಆಶೆಯ ಎದುರು ನಿಲ್ಲದಾಯಿತು ಮನಸು.

ಅವಳೊಡನೆ ಕಡಲತೀರದಲ್ಲಿ ಕುಳಿತು ನಗುತ್ತಿರುವುದು, ತೆರೆಗಳ ನಡುವೆ ನಿಂತು, ದಡಕ್ಕೆ ಬಡಿದು ಹೋಗುತ್ತಿದ್ದ ತೆರೆಗಳೇ ನಾವೆಂದು ಭಾವಿಸಿ ಖುಷಿ ಪಡುತ್ತಿದ್ದು, ಮರದ ಮನೆಗಳ ಕಟ್ಟಿ, ಅದರ ಮೇಲೆ ಬರೆದ ಹೆಸರುಗಳನ್ನು ಅಳಿಸಿ ಹಾಕುತ್ತಿದ್ದ ತೆರೆಗಳನ್ನು ನಿಲ್ಲಿಸಲಾಗದೆ ಬಿಟ್ಟಗಣ್ಣಿಂದಲೇ ನೋಡು ತ್ತಿದ್ದೆವು. ಹತ್ತಿರದ ಮರದ ಮೇಲೆ ಕುಳಿತಿದ್ದ ಬೆಳ್ಳಕ್ಕಿಯ ಜೋಡಿಯನ್ನು ಕಂಡು– "ನೋಡಲ್ಲಿ ಹಕ್ಕಿಗಳು" ಎಂದು ಉಸುರಿದಳು. 'ಹೂಂ' ಎಂದೆ. ಅವಳ ಸಂಗದಲಿ ನನಗೆ ಮಾತಿಗಿಂತ ಮೌನ ಹಿತವೆನಿಸಿತ್ತು. "ನಾನು–ನೀನು" ಅಲೆ ಮತ್ತು ತೀರದಂತೆ ಆಗಿದ್ದರೆ ಎಷ್ಟೊಂದು ಚೆನ್ನ ಅಲ್ಲವೇ ? ನೀನು ಸದಾ ನನ್ನ ಮುತ್ತಿಡುತ್ತಿದ್ದೆ" ಎಂದೆ. "ಆದರೇನಾಯಿತು ? ಸಾವು ಬಂದು ಮುತ್ತಿಗೆ ಹಾಕುವವರೆಗೆ ನಿನ್ನ ತೋಳ ತೆಕ್ಕೆಯಲ್ಲಿರುವೆ, ಬೇಕಾದಷ್ಟು ಮುತ್ತು ಕೊಡ ಬಹುದಲ್ಲಾ ?" ಎಂದಳು. "ನೀನು ಮಾತಿನಲ್ಲಿ ಜಾಣೆ" ಎಂದೆ.

ಬಸ್ಸಿನ ಹಿಂದಿನ ಚಕ್ರಕ್ಕೆ ಕಲ್ಲು ತಾಗಿ ಚಕ್ರ ಪಂಚರ್ ಆದಾಗ, ಡ್ರೈವರ್ ಜೋರಾಗಿ ಬ್ರೇಕ್ ಹಾಕಿದಾಗ, ತಲೆ ಮುಂದಿನ ಸೀಟಿಗೆ ಬಡಿದಾಗ ಮುತ್ತಿನ ಮತ್ತಿನಿಂದ ವಾಸ್ತವಕ್ಕೆ ಬಂದು ಪರಿಸ್ಥಿತಿ ಅರ್ಥ ಮಾಡಿಕೊಳ್ಳುವಷ್ಟರಲ್ಲೇ ಎಲ್ಲರೂ ಇಳಿದಿದ್ದರು. ಆ ಹುಡುಗಿ ಯಾವಾಗಲೋ ಇಳಿದಿದ್ದಳು. ನನಗೆ ನಾಚಿಕೆಯಾಯಿತು. ಗಡಿಬಿಡಿಯಿಂದ ಕೆಳಗಿಳಿದು ಕಾಡಿನಲ್ಲಿ ನಾಲ್ಕು ಹೆಜ್ಜೆ ನಡೆದೆ.

ಎತ್ತರದ ಮರಗಳು ಮುಗಿಲ ಕಡೆಗೆ ಮುಖವಿಟ್ಟು ಮಾತಾಡುತ್ತಿವೆ ಎನಿಸಿತು. ಅವುಗಳ ಆಶ್ರಯದಲ್ಲಿ ಬೆಳೆದ ಹುಲ್ಲು, ಚಿಕ್ಕ ಪೊದೆ, ಸರಳು ಹಿತವೆನಿಸಿತು. ಮುಂದೆ ಹೋಗಲು ಹೆದರಿಕೆ. ಹೆಬ್ಬಾವು, ಚೇಳುಗಳು ಕಾಡಿನಲ್ಲಿ ಅಡ್ಡಾಡುತ್ತಿರುತ್ತವೆ ಎಂದು ಅಜ್ಜಿ ಹೇಳಿದ ನೆನಪು. ಆದರೂ ಧೈರ್ಯದಿಂದ ಮುಂದೆ ಹೋಗಿ ಮರದ ಕೊಂಬೆಯೊಂದನ್ನು ಹಿಡಿದು ಜೋತು ಬಿದ್ದೆ. ನನಗೂ ನನ್ನ ಆಶೆಗಳು, ಕನಸುಗಳು, ನೋವು ಹೀಗೇ ಜೋತು ಬಿದ್ದಿವೆ ಎನಿಸಿ ಕಸಿವಿಸಿಯಾಯಿತು. "ನಾನು ಜೋತು ಬಿದ್ದರೂ, ನನ್ನ ಭಾರವನ್ನು ಹೊತ್ತ ಮರದ ಕೊಂಬೆಯಂತಾಗಬೇಕು" ಎಂದು ನನ್ನೊಳಗೆ ನಾನೇ ಗಟ್ಟಿ ನಿರ್ಧಾರ ಮಾಡಿಕೊಂಡೆ.

"ಬನ್ನಿ ಸಾರ್, ಬಸ್ ರೆಡಿಯಾಯ್ತು" ಎಂದಾಗ, ಅವಸರ-ಅವಸರವಾಗಿ ಬಂದು ನನ್ನ ಸೀಟಿನ ಕಡೆಗೆ ನಡೆದೆ. ನನ್ನ ಸೀಟನ್ನು ಆಕ್ರಮಿಸಿದ್ದ ಯುವಕನೊಬ್ಬ "ಸಮ್ಮಾ ಸರ್, ಬನ್ನಿ-ಬನ್ನಿ" ಎಂದು ಮೂವತ್ತೆರಡು ದಂತಪಂಕ್ತಿಯ ಪ್ರದರ್ಶನಗೈದ. "ಯಾರೂ ಇಲ್ಲ ಅಂತ ಕುಳಿತಿದ್ದೆ, ಬನ್ನಿ" ಎಂದ. "ಪರವಾಗಿಲ್ಲ, ಕೂಡಿ" ಎಂದು ನಾಟಕೀಯವಾದ ಸೌಜನ್ಯ ತೋರಿಸಿ, ನನ್ನ ಸೀಟಿನೆಡೆಗ ನಡೆದೆ. ಕುಳಿತು ನೆಮ್ಮದಿಯಿಂದ ಹಿಂದಿನ ಸೀಟಿಗೆ ತಲೆ ಒರಗಿಸಿದೆ. ಮತ್ತೆ ಅದೇ ಕನಸು, ಕಲ್ಪನೆ. ಮನುಷ್ಯನಿಗೆ ಇವು ಇರದಿದ್ದರೆ ಏನಾಗುತ್ತಿತ್ತು ? ಎನ್ನುವ ವಿಚಾರಕ್ಕೆ ಉತ್ತರ ಹುಡುಕಿದೆ. ತತ್ವಜ್ಞಾನ ವಿಭಾಗದ ಪ್ರೊಫೆಸರ್ ರೇಚಣ್ಣ, ಗಂಟೆಗಟ್ಟಲೆ ಇವುಗಳ ವಿಷಯವಾಗಿ ಹೇಳಿದ್ದು ಹುರುಳಿಲ್ಲವೆನಿಸಿತು. "ಶೇಂಗಾ ಸಾರ್, ಗರಮ್-ಗರಮ್ ಶೇಂಗಾ" ಎಂದು ಹಿಂದಿನ ಬಸ್ ನಿಲ್ದಾಣದಲ್ಲಿ ಶೇಂಗಾ ಮಾರುತ್ತಿದ್ದ ಆ ಸಣ್ಣ ಹುಡುಗನ ನೆನಪಾಯಿತು. ನನ್ನ ಕನಸುಗಳನ್ನು ಹೀಗೆ ಬುಟ್ಟಿಯಲ್ಲಿಟ್ಟುಕೊಂಡು "ಕನಸು ಸರ್, ಗರಮ್-ಗರಮ್ ಕನಸು, ರೂಪಾಯಿಗೆ ನಾಲ್ಕು, ಬೇಕಾದ್ದ ತಗೋಳಿ, ಮಾರುವುದಿದ್ದರೆ ?" ನಾನಂತೂ ಯುನಿವರ್ಸಿಟಿಯಲ್ಲಿ ಕಲಿಯುವುದನ್ನು ಬಿಟ್ಟು ಬಸ್ ನಿಲ್ದಾಣ, ರೈಲ್ವೆ ನಿಲ್ದಾಣಗಳಲ್ಲಿ ಕನಸಿನ ಬುಟ್ಟಿ ತಲೆ ಮೇಲಿಟ್ಟು ಕನಸು ಮಾರುತ್ತಿದ್ದೆ. ನನಗೊಂದು ಅನುಮಾನ–"ಈ ಕನಸು, ಕನವರಿಕೆಗಳೆಲ್ಲಾ ನನಗೊಬ್ಬನಿಗಿವೆಯೋ ಅಥವಾ ಬೇರೆಯವರಿಗೂ ಇದ್ದಾವೆ ?" ಎಂಬುದು. ಇದ್ದರೂ, ನನ್ನಂತಹ ಹುಚ್ಚು ಕನಸುಗಾರರಿರಲು ಸಾಧ್ಯವಿಲ್ಲ ಬಿಡಿ.

ಕೆ.ಸಿ.ಡಿ.ಯ ಗುಡ್ಡ ಹತ್ತುವಾಗ, ಹಿಂದಿ ಪ್ರಚಾರ ಸಭಾದ ಇಳಿಜಾರಿನಲ್ಲಿ ಮುಂಗಾರಿ ಮಳೆ ಬಂದ ಮಾರನೇ ದಿನ ಸೂರ್ಯನ ಎಳೆ ಕಿರಣಗಳು ಕೆಂಪಗೆ ಕೆಂಪಡರಿ ಇಳಿಜಾರಿನಲ್ಲಿ ಇಳಿಯುವಾಗ ಹುಚ್ಚೆದ್ದು ಕುಣಿಯುತ್ತದೆ ಮನಸು. ಭುಜಂಗಶೆಟ್ಟಿ ಡಬ್ಬಾದಂಗಡಿಯ ಚಹಾ ಹೀರುತ್ತಾ, ಸೂರ್ಯರಾಯನ ಸವಾರಿ ಸವಿಯುವುದು ಎಂದರೆ ಎಲ್ಲಿಲ್ಲದ ಖುಷಿ. ಇದರ ಮಧ್ಯ ಕಾಡುವ ಕನಸುಗಳಿಂದ ಬಿಡುಗಡೆ ಪಡೆಯಲು ಪುಸ್ತಕಗಳ ಸಹಾಯ ಪಡೆಯುತ್ತೇನೆ. ನಾನೊಬ್ಬನೆ ಇದ್ದಾಗ ನನಗರಿವಿಲ್ಲದೆ ಗರಿಬಿಚ್ಚುವ ಬಯಕೆಗಳು, ನನ್ನನ್ನು ತಮ್ಮ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿಬಿಡುತ್ತವೆ.

ಬಂಪರ್ ಲಾಟರಿ ನನಗೆ ಒಲಿದರೆ ? ಸ್ಕೂಟರ್, ಕಾರು, ಬಂಗಲೆ ಕೊಂಡು ಊರಿಗೆ ಶ್ರೀಮಂತನಾಗಿ, ಒಳ್ಳೆಯ ಬಟ್ಟೆಗಳು ಗಂಟೆಗೆ ಒಂದರಂತೆ ಬದಲಾಯಿಸುತ್ತಾ– ಎಂದೆಲ್ಲಾ ವಿಚಾರಗಳನ್ನು ತಲೆಯಲ್ಲಿ ತುಂಬಿಕೊಂಡು ರಸ್ತೆಯಲ್ಲಿ ಹೊರಟಿದ್ದೆ. ರಸ್ತೆ ಬದಿಯಲ್ಲಿ ತನ್ನ ಪಾಡಿಗೆ ಮಲಗಿದ ನಾಯಿಯ ಮೇಲೆ ವಿಚಾರದ ಮತ್ತಿನಲ್ಲಿ ಕಾಲಿಟ್ಟಿದ್ದೆ. ನೋವು ತಾಳಲಾರದೇ ಕಾಲನ್ನು ಹಿಡಿದು ಎಳೆದೆ. ಹೀಗಾಗಿ ಕೆಳಗೆ ನೋಡಿದೆ. ನಾಯಿ ನನ್ನ ಜೀನ್ಸ್‌ಪ್ಯಾಂಟ್ ಹಿಡಿದು ಜಿಮುಡುತ್ತಿತ್ತು. ಜೀನ್ಸ್‌ದಿಂದ ಕಾಲನ್ನ ಉಳಿಸಿಕೊಂಡು, ರಸ್ತೆಯಲ್ಲಿ ನಡೆಯುವಾಗ ವಿಚಾರ ಮಾಡುವುದು 'ಬಂದ್' ಎನ್ನುವ ನಿರ್ಧಾರಕ್ಕೆ ಬಂದೆ.

ಅವಸರದಿಂದಾ ದೂಡ್ಡಾ ಮೇಡಂ ಪಿರಿಡಿಗೆ ಹೊರಟಿದ್ದೆ. ಆರಡಿ ಎತ್ತರದ ಸುಂದರ ಹುಡುಗ ಬೈಕಿನ ಮೇಲೆ ಹೊರಟಿದ್ದ. ಅವನ ಜಾಗದಲ್ಲಿ ನನ್ನ ಕಾಣಲು ಹವಣಿಸಿದೆ. ನನ್ನದೊಂದು ಬೈಕು, ದುಬಾರಿಯ ಬಟ್ಟೆಗಳು, ಕಾಲೇಜಿನಲ್ಲಿ ನಾನು ಹೀರೋ ಎನ್ನುತ್ತಾ ಮುಂದೆ ಬರುತ್ತಿದ್ದ ಹುಡುಗಿಗೆ ಡಿಕ್ಕಿ ಹೊಡೆದೆ. ಅವಳು ಬಾಯಿಗೆ ಬಂದಂತೆ ಇಂಗ್ಲೀಷ್ ವರ್ಣಮಾಲೆಯ ಶಬ್ದಗಳನ್ನು ಜೋಡಿಸಿ ಸಿಂಚನಗೈದು ಕೆಟ್ಟಕಣ್ಣಿಂದ, ನಾನು ಉದ್ದೇಶಪೂರ್ವಕವಾಗಿ ಮಾಡಿದ್ದೇನೆಂದು ತಿಳಿದು ಏನೇನೋ ಹೇಳಿದಳು. ನಾನು ನನ್ನ ವಿಚಾರದಿಂದ ಹೊರಬರು ವಷ್ಟರಲ್ಲೇ ಹುಡುಗಿ ಲೈಬ್ರರಿಯತ್ತ ಮರೆಯಾಗಿದ್ದಳು. ಹುಡುಗಿ ಆಡಿದ ಮಾತುಗಳಿಂದ ಬೇಸರವಾಯಿತು. ಪಾಠ ರುಚಿಸಲಿಲ್ಲ. ಕ್ಲಾಸ್ ಮುಗಿಸಿ ರೂಮಿಗೆ ಬಂದಾಗ ಊರ ನೆನಪು ಕಾಡತೊಡಗಿತು.

ಹಣ ಕೊಡದಿದ್ದಕ್ಕೆ ಅಪ್ಪನ ಚಿಂತೆ, ಜಗಳವಾಡಿ ಬಂದಿದ್ದೆ– "ನಿಮಗೆ ಹೆಂಡ, ಸಾರಾಯಿ ಕುಡಿಯಲು ರೊಕ್ಕ ಇದೆ, ನನಗೆ ಕೊಡಲು ಇಲ್ಲವೆ ?" ಎಂದ ಮಾತು ಏಕೋ ಬೇಸರ ತರಿಸಿತು. ಅದರಿಂದ ಹೊರಬರಲು, ಹಳೆ ಕಾದಂಬರಿ ಪುಸ್ತಕದಲ್ಲಿ ಕಣ್ಣು ಹಾಯಿಸಿದೆ. "ಹೌದು ನಾನೇ, ನಾನೇ ಆ ಪಾತ್ರ. ಅದರಲ್ಲಿಯ ಪ್ರತಿಯೊಂದು ಘಟನೆಗಳು ನನ್ನವೇ" ಬೆಚ್ಚಿಬಿದ್ದೆ. ಬರಹಗಾರನ ಬರವಣಿಗೆಗೂ, ನನ್ನ ಜೀವನಕ್ಕೂ ಎಷ್ಟೊಂದು ಸಾಮೀಪ್ಯವಿದೆ. ನನ್ನ ಭಾವನೆಗಳನ್ನು ದೂರದಲ್ಲೆಲ್ಲೋ ಕುಳಿತು ಚಾಚುತಪ್ಪದೇ ಚಿತ್ರಿಸಿದ್ದಾನೆ. ಕಾಡುತ್ತಿರುವ ಈ ವಿಚಾರಗಳಿಂದ ತಪ್ಪಿಸಿಕೊಳ್ಳಲು ಲೈನ್ ಬಜಾರ್‌ನಲ್ಲಿ ತಿರುಗಾಡಲು ಹೋಗುತ್ತೇನೆ.

ದೊಡ್ಡ-ದೊಡ್ಡ ಅಂಗಡಿಗಳು, ಒಳಗೆ-ಹೊರಗೆ ಅಡ್ಡಾಡುತ್ತಿರುವ ಜನ, ತಲೆ ಎತ್ತಿ ಬೋರ್ಡಿನತ್ತ ಕಣ್ಣು ಹಾಯಿಸಿದಾಗ ನನ್ನ ಹೆಸರು. "ನಾನೇ ಅಂಗಡಿ ಮಾಲಿಕ. ನಗುನಗುತ್ತಾ ಗಿರಾಕಿ ಹತ್ತಿರ ವ್ಯವಹರಿಸುತ್ತಿದ್ದೇನೆ". ಯಾರೋ "ಅಪ್ಪಾ ಒಂದು ವಾರ ಆತು ಉಂಡು, ಏನಾದ್ರೂ ಇದ್ರ ಕೊಡಪ್ಪ" ಎಂದ ಹಾಗಾಗಿ ವಿಚಾರಕ್ಕೆ ತಡೆ ಬಂದು ತಲೆ ಕೊಡಪಿಕೊಂಡು ನೋಡುತ್ತೇನೆ. ಎಂಬತ್ತರ ಇಳಿವಯಸ್ಸಿನ ಮುದುಕಿ. ಬಿಳಿ ಕೂದಲು, ಹರಿದ ಬಟ್ಟೆಗಳು, ಬದುಕಬೇಕೆಂಬ ಬಯಕೆ ಹೊಂದಿರುವ ನಿಸ್ತೇಜ ಕಣ್ಣುಗಳು. ಕಿಸೆಯಲ್ಲಿ ಕೈ ಹಾಕಿದೆ. ಖಾಲಿ, ಖಾಲಿ. ಏನೋ ಹೇಳಬೇಕೆಂದೆ– ಮಾತು ಹೊರಡಲಿಲ್ಲಾ. ಆ ಕಡೆ, ಈ ಕಡೆ ನೋಡಿ– "ತನಗಲ್ಲ ಅವಳು ಕೇಳಿದ್ದು" ಎಂಬಂತೆ ಜಾರಿ ಕೊಳ್ಳಲು ನೋಡಿದೆ. ವಯಸ್ಸು, ಮನುಷ್ಯನನ್ನು ಎಂತಹ ಸ್ಥಿತಿಗೆ ಇಳಿಸಿ ಬಿಡುತ್ತದೆ ? ನನ್ನ ಹಾಗೆ ಶಕ್ತಿ ಇದ್ದಾಗ, ಮೈ ಮುರಿದು ದುಡಿದು ಬದುಕಿದ್ದಾಳೆ ಮುದುಕಿ. ಶಕ್ತಿ ಕುಂದಿದಾಗ ಬದುಕು ಸಾಗದಕ್ಕೆ, ಜೀವಂತವಿರಲು ಈ ದಾರಿಯನ್ನು ಹುಡುಕಿಕೊಂಡಿದ್ದಾಳೆ. ಸಣ್ಣ ಹುಡುಗ ಪುಟ್ಟ ಹುಡುಗಿಯನ್ನು ಎತ್ತಿಕೊಂಡು 'ಅಣ್ಣಾ' ಎಂದ. ಇಲ್ಲೂ ಅದೇ ಬದುಕಿನ ಅಸಹಾಯಕತೆ.

ನನ್ನೂರಲ್ಲಿ ಕೂಲಿ ಮಾಡುವ ಹರೆಯದ ಹುಡುಗಿಯರ ಅಸಹಾಯಕ ಆಶೆಗಳಿಗೆ ಹಣ ತೋರಿಸಿ, ಹರೆಯವನ್ನ ಹಿಸುಕಿ ಹಾಕುವ ಮುದಿ ಸಾವುಕಾರರ ನೆನಪು ನನ್ನಾಳದಲ್ಲಿ ಇಳಿದು "ಬಡತನಕ್ಕೆ ಅಂತ್ಯವೇ ಇಲ್ಲವೇ ?" ಎಂಬ ವಿಚಾರದ ಎದಿರು ನಿರುತ್ತರನಾಗುತ್ತೇನೆ. ಹೆಂಡದ ಆಶೆಗಾಗಿ ಹೆಂಡತಿಯನ್ನು ಇಡೀ ರಾತ್ರಿ ಹಣ ಕೊಟ್ಟವನ ಮನಿಯೊಳಗೆ ಬಿಟ್ಟು, ಹೊರಗೆ ನಾಯಿಯಂತೆ ಕಾದ ಪುರುಷ-ಪುರುಷತ್ವಕ್ಕೆ 'ಶಹಭಾಷ್' ಎನ್ನುತ್ತೇನೆ. ತಾಯಿಯ ನಂತರ ಮಗಳ ದೇಹವನ್ನು ಮೂಸಿದ ಮುದಿನಾಯಿಗೆ ಜಾಡಿಸಿ ಒದೆಯಬೇಕೆಂದು ಕಾಲು ಜಾಡಿಸಿ, ಕಲ್ಲಿಗೆ ಬಡಿಸಿಕೊಂಡು ಕುಂಯ್‌ಗೂಡುತ್ತಾ ನನ್ನಲ್ಲಿ ಏಳುವ ನೆನ್ನೆಯ, ಇಂದಿನ ಸವಾಲುಗಳಿಗೆ ಪರಿಹಾರ ಹುಡುಕುತ್ತಾ ಏಕಾಂಗಿಯಾಗಿ ಓಡಾಡುತ್ತೇನೆ.

ನನ್ನ ಕಾಲೇಜಿನ ಮಿತ್ರರ ಜೊತೆಗೆ ಮಾತನಾಡಿಕೊಳ್ಳುತ್ತೇನೆ. ಮನಸ್ಸಿನಲ್ಲಿ ಗಟ್ಟಿಯಾಗಿ ನೆಲೆ ನಿಂತಿರುವ ನನ್ನತನಕ್ಕೆ ನಾನು ಸವಾಲೆಸೆಯು

ತ್ತೇನೆ- "ನನಗೆ ಅಸ್ತಿತ್ವವಿದೆಯೇ ?" ಪಾಠ ಕೇಳುವಾಗ ಬರುವ ಸನ್ನಿವೇಶ, ಉದಾಹರಣೆಗಳು ಬರಿ ಉದಾಹರಣೆಗಳು ಮಾತ್ರ. ಅವೆಂದಿಗೂ ಸತ್ಯವಾಗಲಾರವು. ಕೀಟ್ಸ್‌ನ ಪ್ರೇಮ ಕವಿತೆ, ಅವನ ಅಪ್ರಾಪ್ತ ಸಾವು ಕುತೂಹಲ ಕೆರಳಿಸಿದ್ದವು. ನನ್ನ ಕ್ಲಾಸಿನ ವಂದನಾ, ನನ್ನ ಸಹಪಾಠಿಗಳ ಆರಾಧ್ಯ ದೈವ. ನಾನು, ನನ್ನಂತಹ ನೂರು ಹುಡುಗರ ಮನಸು ಕೆಡಿಸಿದ ಹುಡುಗಿ ಆತ್ಮಹತ್ಯೆ ಮಾಡಿಕೊಂಡಾಗ, ನಿರಾಶೆಯ ಗೆರೆಗಳು ಪ್ರತಿಯೊಬ್ಬರ ಮುಖದಲ್ಲೂ. ಗ್ಯಾಲರಿ ಹಾಲಿನ ಮೂಲೆಯಲ್ಲಿ ಕ್ರಿಮಿನಾಲಜಿ ಹುಡುಗಿ ಅವನ ಪ್ರಿಯತಮನ ಜೊತೆಗೆ ಲಲ್ಲೆ ಹೊಡೆಯುತ್ತಿದ್ದಾಗ ಕದ್ದು-ಕದ್ದು ನೋಡಿ ಖುಷಿಪಟ್ಟಿರಲಿಲ್ಲವೆ ? ನೀರು ತೊಟ್ಟಿಯ ಮೇಲೆ, ಸೈಕಲ್ ಸ್ಟ್ಯಾಂಡಿನ ಹತ್ತಿರ ಪಾನಮತ್ತರಾಗಿ ಅಫೀಮು ಸೇದಿ ತೇಲಾಡುತ್ತಿರುವಾಗ ಅಪ್ಯಾ, ಗಾಂವ್ಕರ್, ಶಿವಾ ನನ್ನ ನೋಡಿದಾಗ, ಕಾಲೇಜು ಜೀವನ ಅಂದರೆ ಹೀಗಿರಬೇಕೆಂದು ಆಸೆ ಪಟ್ಟಿರಲಿಲ್ಲವೆ ? ಅವರಿಗೆ ನನ್ನ ಹಾಗೆ ಕನಸುಗಳಿಲ್ಲ. ಹಣದ ಅಮಲು ಕನಸು ಕಾಣಲು ಬಿಡುವುದಿಲ್ಲ. ದಿನಕ್ಕೊಂದು ಹುಡುಗರ ಗೆಳೆತನ ವಂದನಾಳ ಆತ್ಮಹತ್ಯೆ ತನಿಖೆಯಲ್ಲಿ ಪೋಲಿಸರು ಅವರನ್ನು ಹಿಡಿದಾಗ, "ನನ್ನ ಹುಚ್ಚು ವಿಚಾರಗಳೇ ಒಳಿತು" ಎನಿಸತೊಡಗಿತು.

ಬಿಡುವಿನ ಸಮಯದಲ್ಲಿ ಮುತ್ತಿಬಿಡುವ ಹಳೆ ನೆನಪು, ವಿಚಾರಣೆಗಳನ್ನು ಕಟ್ಟಿ ಸಪ್ತಾಪುರ ಬಾವಿಯಲ್ಲಿ ಒಗೆಯಬೇಕೆಂದುಕೊಳ್ಳುತ್ತೇನೆ. ಆದರೆ, ನನ್ನ ಬದುಕಿಗೆ ಭರವಸೆ ಪೂರೈಸುವಲ್ಲಿ ಅರ್ಧ ಪಾಲುದಾರರಾಗಿರುವ ಅವುಗಳನ್ನು ತೊರೆಯಲು ಹಿಂಜರಿಯುತ್ತೇನೆ. ಅಡ್ಡಾಡುವಾಗ ಕಣ್ಣಿಗೆ ಬಿದ್ದ ಯಾವುದೋ ಸಿನಿಮಾದ ವಾಲ್‌ಪೋಸ್ಟರ್ ಗಮನ ಸೆಳೆಯುತ್ತದೆ. ನಾನೇ ಆ ಸಿನಿಮಾದ ನಾಯಕನಾಗಿಬಿಡುತ್ತೇನೆ. ನನ್ನ ನೋಡಲು ನೂರಾರು-ಸಾವಿರಾರು ಜನರು. ನೂಕು ನುಗ್ಗಲು. ಯಾರೋ ನನ್ನ ಕಡೆ, ಹಸ್ತಾಕ್ಷರಕ್ಕಾಗಿ ಕಿರುಪುಸ್ತಕ ನೀಡುತ್ತಿದ್ದಾರೆ. ಕೈ ಚಾಚುತ್ತಿದ್ದೇನೆ. ಪೋಲಿಸರು ಜನರನ್ನು ತಡೆಯಲು ಲಾಟಿ ಬೀಸುತ್ತಿದ್ದಾರೆ. ನೂರಾರು ಹದಿ-ಹರೆಯದ ಹುಡುಗಿಯರು ನನ್ನ ಸ್ಪರ್ಶಕ್ಕಾಗಿ ಕಾಯುತ್ತಿದ್ದಾರೆ. ಬನ್ನಿ, ಎಲ್ಲಾ ಬನ್ನಿ ಎಂದು ಆಹ್ವಾನಿಸುತ್ತಿದ್ದೇನೆ. ಯಾವುದೋ ಹರತಾಳದಲ್ಲಿ ಜನ ಕಲ್ಲು ತೂರಿದ್ದಕ್ಕಾಗಿ, ಜನರನ್ನು ಚದುರಿಸಲು ಪೋಲಿಸಲು ಲಾಟಿ ಪ್ರಹಾರ ಮಾಡುತ್ತಿದ್ದಾರೆ. ಹೊಡೆತ

ತಪ್ಪಿಸಿಕೊಳ್ಳಲು ಜನರ ನೂಕು-ನುಗ್ಗಲು, ನಾನು ಅವರ ನಡುವೆ ಸಿಕ್ಕಿಕೊಂಡೆ. ಪೋಲಿಸ್ ಲಾಟಿಯಿಂದ ಕಾಲಿಗೆ ಬಲವಾದ ಪೆಟ್ಟು ಬಿದ್ದಾಗಲೇ ನಾನು ನಟ, ಅದರಲ್ಲೂ ನಾಯಕ ನಟನಲ್ಲಾ ಎಂಬುದು. ಪೆಟ್ಟು ಜೋರಾಗಿ ಬಿದ್ದಿದ್ದರಿಂದ ಕಾಲು ಬಾವು ಬಂದಿತ್ತು. ತಾಳಲಾರದ ನೋವು. ಕಾಲನ್ನೆಳೆಯುತ್ತಾ ತಪ್ಪಿಸಿಕೊಳ್ಳಲು ಹವಣಿಸಿದೆ, ಆದರೆ ಪೋಲಿಸರ ಕೈಗೆ ಸಿಕ್ಕಿಬಿದ್ದ ಮೇಲೆ ಮೂರು ದಿನಗಳವರೆಗೆ ಜೈಲು ಸೇರಿ, ಸೊಳ್ಳೆ ಕಾಟ ತಾಳಲಾರದೇ ಅವರು ಹೇಳಿದ ಸುಳ್ಳಿಗೆ 'ಹೂಂ'ಗುಟ್ಟಿ ಸತ್ಯವನ್ನು ಮರೆಮಾಚಿ, ಉಪವಾಸ ಮಾಡಿ, ನಾಲ್ಕನೇ ದಿನ ಕತ್ತಲ ಕೋಣೆಯಿಂದ ಹೊರಗೆ ಬಿಟ್ಟಾಗ ನೆಮ್ಮದಿಯ ಉಸಿರು ಬಿಟ್ಟೆ. ಮತ್ತೊಮ್ಮೆ ಎಂದೂ ಈ ಕಲಾವಿದನಾಗುವ ಕನಸು ಕಾಣಬಾರದೆಂದುಕೊಂಡೆ. ದಾರಿಯಲ್ಲಿ ಸಿಕ್ಕ ಮೂಲಿಮನಿ ರಮೇಶ, ಎದುರಾಗಿ– ಯುನಿವರ್ಸಿಟಿಯ ನಾಟಕ ಸ್ಪರ್ಧೆಗಾಗಿ ಜೋಷಿಯವರು ಹುಡುಕುತ್ತಿದ್ದಾರೆಂದಾಗ, ಮೂರು ದಿನದಿಂದ ಹೊಟ್ಟೆ ಹಸಿದಿದ್ದರೂ, ಮರೆತು ಕಾಲೇಜಿನ ಕಡೆಗೆ ಹೆಜ್ಜೆ ಹಾಕತೊಡಗಿದೆ.

ಒಂದು ನಿರ್ದಿಷ್ಟತೆಗಾಗಿ ಹೋರಾಡುವ ನಮ್ಮ ಗಳಿಗೆ ಕನಸು, ಒಂದು ರೀತಿಯ ವಿಶ್ರಾಂತಿ. ಕಣ್ಣು ಮುಚ್ಚಿದಾಕ್ಷಣ ಅರಿವಿಲ್ಲದೇ ನುಸುಳಿಕೊಳ್ಳುವ ಮನಸು, ಏನು ವಿಚಾರ ಮಾಡುತ್ತಿದೆ ? ಅದನ್ನು ಕಡಿವಾಣ ಹಾಕಿ ನಿಲ್ಲಿಸಲು ಪ್ರಯತ್ನಿಸಿದಾಗ್ಯೂ ಒಂದು ನಿಟ್ಟಿನಿಂದ ಮತ್ತೊಂದು ನಿಟ್ಟಿನೆಡೆಗೆ ಕರೆದೊಯ್ಯುವ ದಾರಿದೀಪದಂತೆ, ಜಂಜಡದಿಂದ ದೂರ-ದೂರಕ್ಕೆ ಕರೆದೊಯ್ದು, ಸ್ವಲ್ಪ ಹೊತ್ತು ಕಾಡುವ ಸಮಸ್ಯೆಗಳಿಂದ ಬಿಡುಗಡೆ ಪಡೆಯುವಂತೆ ಮಾಡುತ್ತವೆ. ನನ್ನಂತಹ ಮಧ್ಯಮ ವರ್ಗದ ಜನರಿಗೆ, ಅರಕ್ಕೇರದೆ, ಮೂರಕ್ಕಿಳಿಯದೇ ಮುಸುಕಿನಲ್ಲಿ ಗುದ್ದಾಡುತ್ತಿರುವವರಿಗೆ ಮಾರ್ಗದರ್ಶನಗಳಾಗಿವೆ.

ನಾನು, ನನ್ನಂತಹ ಸಾವಿರಾರು ಜನ ಒಂದೇ ದೋಣಿಯಲ್ಲಿ ಕುಳಿತು, ಜೀವ ಸಾಗರದಲ್ಲಿ ಕನಸುಗಳನ್ನು ಹುಡುಕುತ್ತಾ ಹೊರಟ ಪಯಣಿಗರು. ರಾಜು, ಸಂತೋಷ್, ರವಿ, ಲಕ್ಷ್ಮಣ– ಹೀಗೆ ಹಲವಾರು ಜನ ಯುವಕರು, ಯೌವನದಲ್ಲಿ ಸಹಜವೆಂಬಂತೆ ಸಾವಿರಾರು ಕನಸುಗಳ ಒಡೆಯರು.

ಒಂದು ಪರ್ಸ್ ಸಿಕ್ಕರೆ, ಅದರಲ್ಲಿ ಒಂದು ಕೋಟಿಯ ಲಾಟರಿ ಇದ್ದು, ಅದೇ ನಂಬರ್ ನಮಗೆ ಹಾಕಿದರೆ ? ಎಂಬ 'ರೇ'ಕಾರದ ವಿಚಾರದಲ್ಲಿ ಲಾಟರಿ ಕೊಳ್ಳಲು ಕಾಸಿಲ್ಲದೇ, ಪಾಲಸಿ ಮಾತುಗಳಿಂದ ಹಣ ಇದ್ದವನಿಗೆ ಮಸ್ಕಾ ಹೊಡೆದು, ಭುಜಂಗಶೆಟ್ಟಿ ಡಬ್ಬಾದಂಗಡಿಯ ಚಹ, ಬಜಿಗೆ ಒಪ್ಪಿಸಿ, ನಾಳಿನ ವಿಚಾರಕ್ಕೆ ತಲೆ ಕೆಡಿಸಿಕೊಳ್ಳದೆ, ರಾತ್ರಿ ನಿದ್ದೆಗಾಗಿ ಮತ್ತೆ ಶರಣು ಹೋಗುತ್ತೇವೆ: ನನಸಾಗದ ಕನಸುಗಳಿಗೆ.

□

ಒಂದು ಘಟನೆಯ ಸುತ್ತ....

ನಿನ್ನ ನೆನಪು ಬಂದಾಗ, ನಿಜವಾಗಿಯೂ ನಾನು ತೆರೆದ ಪುಸ್ತಕವನ್ನು ಮುಚ್ಚಿಬಿಡುತ್ತೇನೆ. ಏಕೆಂದರೆ, ನೀನು ನನ್ನ ಜೀವನದಲ್ಲಿ ಒಂದು ಕತೆಯಾಗಿ ನಿಂತಿರುವಿ. ನನ್ನ ಜೀವನವನ್ನು ಒಂದು ಕಾದಂಬರಿಯಾಗಿ ಮಾಡಿಬಿಟ್ಟಿದ್ದಿ. ಯಾವುದೇ ಪುಸ್ತಕ ಓದಿದರೂ, ಅದರ ಪುಟಗಳಲ್ಲಿ ನಾನು-ನೀನು ಇರುತ್ತೇವೆ. ಬಹಳ ಬೇಸರಗೊಂಡಾಗ ನನ್ನ ಮಂಚದ ಮೇಲೆ ಮಲಗಿಸಿಕೊಂಡ ಭೂತಕಾಲದ ನೆನಪುಗಳ ಮೆಲಕು ಹಾಕುತ್ತೇನೆ. ಮಂಚದ ಮೇಲಣ ಸೊಳ್ಳೆ ಪರದೆ ಗೋಡೆಯನ್ನು ಮರೆ ಮಾಡಿದೆ. ಓ, ವಾಸ್ತವದಲ್ಲಿ ನಾನು-ನೀನು ಹೀಗೆ ಅಲ್ಲವೆ ? ಒಂದೇ ತರಗತಿಯಲ್ಲಿ ಓದುತ್ತಿದ್ದರೂ, ನಾ ನಿನ್ನ ಸರಿಯಾಗಿ ನೋಡುವ ಸ್ವತಂತ್ರ ನನಗಿರಲಿಲ್ಲಾ. ಪಕ್ಕದಲ್ಲಿ ಜೇಡನ ಬಲೆಯು ಎಳೆ ಇಳಿ ಬಿದ್ದಿತ್ತು. ಅದನ್ನು ಹತ್ತುತ್ತಿದ್ದ ಜೇಡ ಮೇಲೇರಲು ಹವಣಿಸುತ್ತಿತ್ತು. ಆದರೆ ಏಕೋ ಕೆಳಗೆ ಬರುತ್ತಿತ್ತು. ತನ್ನ ಬಲೆಯಲ್ಲಿ ಸಿಕ್ಕಿ ಬಿದ್ದಾಗ, ಪ್ರಾಣಿಯನ್ನು ತಿನ್ನಲು ಆತುರ ಅದಕ್ಕೆ. ಆದರೆ ಹತ್ತಲು ಆಗುತ್ತಿಲ್ಲ. ನನ್ನ ಸ್ಥಿತಿ ಜೇಡವೋ ಅಥವಾ ಬಲೆಯಲ್ಲಿ ಸಿಲುಕಿದ ಕೀಟ ಎಂಬುದು ನನಗೆ ಅರ್ಥವಾಗಿಲ್ಲ. ಅರ್ಥವಾಗದ ನಿನ್ನೆ-ನಾಳೆಗಳನ್ನು ನಾನು ನೀ ಹೋದಂದಿನಿಂದ ಮರೆತುಬಿಟ್ಟಿದ್ದೇನೆ. ನಿನ್ನೆ-ಮೊನ್ನೆಯಿಂದ ನಾನು ಕನಸು ಕಾಣುವುದನ್ನೇ ನಿಲ್ಲಿಸಿಬಿಟ್ಟಿದ್ದೇನೆ. ಏಕೆಂದರೆ, ಎಷ್ಟು ಸುಂದರವಾಗಿದ್ದ ನಿನ್ನ ಮುಖ ಈಗ ನನಗೆ ಬಹಳ ಕ್ರೂರವಾಗಿ ಕಾಣುತ್ತದೆ. ನಿನಗೆ ಗೊತ್ತಿರಬಹುದು. ಗಂಡಿನ ಹೃದಯ, ಹೆಣ್ಣಿನ ಹೃದಯಕ್ಕಿಂತ ಬಹಳ ಮೃದುವೆಂದು. ಇತ್ತೀಚೆಗೆ ನಾನು ಎಲ್ಲ ಹೆಣ್ಣನ್ನು ದ್ವೇಷಿಸುತ್ತೇನೆ. ಅವರ ಮೇಲೆ ಸೇಡು ತೀರಿಸಿಕೊಳ್ಳಲು ನೋಡುತ್ತೇನೆ.

ಅಂದು ನಾನು ಬೇಕಂತ ಮಾಡಿದವನಲ್ಲ, ನನಗೆ ಪ್ರೋತ್ಸಾಹ ಕೊಟ್ಟಿದ್ದು ನಿನ್ನ ಮಾತುಗಳು. ನಿನ್ನ ಜಿದ್ದು– ನಾನು, ರಾಜು ಚಾಕಲೇಟ್ ಕೊಟ್ಟು ಫೂಲ್ ಮಾಡುತ್ತಿದ್ದೆವೇನೋ ನಿಜ, ಆಗ ನಿನ್ನ ಬಗ್ಗೆ ನನಗೆ ಗೌರವ ಭಾವನೆ ಇತ್ತು. ನಾನು ಹಾಡಿದಾಗಲೆಲ್ಲಾ ನೀನು ಕಾಂಪ್ಲಿಮೆಂಟ್ಸ್ ಕೊಡುತ್ತಿದ್ದೆ. ಅದಕ್ಕೆ ನೀನು ಒಳ್ಳೆಯ ಹುಡುಗಿ ಅಂತ ತಿಳಿದುಕೊಂಡಿದ್ದೆ. ನಿನ್ನ ಮಿತಭಾಷೆ ನನಗೆ ಬಹಳ ಹಿಡಿಸಿತು. ನಾನು ಊರಿಂದ ಬಂದಾಗಲೇ ನನ್ನ, ಬಲೆಗೆ ಹಾಕಿ ಕೊಳ್ಳಲೋ ಅಥವಾ ಹಳ್ಳಿ ಗುಗ್ಗು ಮಾಡಲೋ ಕೆಲವು ಹುಡುಗಿಯರು ನಾಟಕ ಆಡಿದ್ದರು. ಪಾಪ ಅವರಿಗೇನು ಗೊತ್ತು ? ನಾನೇ ಒಬ್ಬ ನಾಟಕಕಾರ ಅನ್ನೋದು. ಅವರು ಯಾರು ಅಂತ ತಿಳಿದಾಗಲೇ, ನೀ ನನಗೆ ಇಷ್ಟವಾಗಿದ್ದು. ನಮ್ಮ ಸ್ನೇಹವಾಗುವದಕ್ಕಿಂತ ಮುಂಚೆ ನಿಜವಾಗಿಯೂ ಮುಗ್ಧನಿದ್ದೆ. ನಾನು ಬಹಳ ಹುಡುಗರಿಂದ ಬೈಯಿಸಿಕೊಂಡಿದ್ದೆ. ನನ್ನ ಮುಗ್ಧತೆಗಾಗಿ, ಆದರೆ ವಿಧಿ ಲಿಖಿತವೋ ಏನೋ– ಅಂದು ನಾನು ಮೊದಲ ಬಾರಿಗೆ ತಪ್ಪು ಮಾಡಿದೆ. ಅದೇ ನನ್ನ ಜೀವನದಲ್ಲಿ ಮುಳ್ಳಾಗುತ್ತೇ ಎಂದು ನಾನು ನಂಬಿರ ಲಿಲ್ಲಾ. ಅದಾದ ಖುಷಿಯೊಳಗೆ ನಾನು ನಿನಗೆ ತಿಳಿಸಿದ್ದೆ– ನಾನು ಗೋವಾಕ್ಕೆ ಹೊರಟಿದ್ದೇನೆ ಎಂದು. ನೆನಪಿರಬೇಕು ? ಅರೆ ಹಾಂ, ನಾನು ಮೊದಲು ಮಾಡಿದ ತಪ್ಪು ಕ್ಷಮಿಸಲು ಅರ್ಹವಾದದ್ದು. ಏಕೆಂದರೆ– ಪ್ರಕೃತಿದತ್ತವಾದ ತಪ್ಪನ್ನು ಮಾಡಿದ್ದೆ. ನಾನು ಈ ತಪ್ಪನ್ನು ಮಾಡಲು ನೀ ನೂರಕ್ಕೆ ತೊಂಭತ್ತೊಂಬತ್ತು ಭಾಗ ಕಾರಣ. ಮೇಡಂ, ನನ್ನ ಪುಟ್ಟಿಯ ಜೊತೆಗೆ ಕಳುಹಿಸಿದಾಗ ನೀನು ನನ್ನ ಹಿಂದೆ ಏಕೆ ಬಂದೆ ? ಅದು ಹೋಗಲಿ, ಹುಡುಗಿಯರು ನಕ್ಕಾಗ ನೀ ಏಕೆ ಒಂದು ತರ ಮಾಡಿಕೊಂಡೆ ? ಇದು ಒಂದು ಹೆಣ್ಣು, ಒಂದು ಗಂಡಿನ ಸ್ನೇಹಕ್ಕು ಬಳಸುವ ತಂತ್ರ ಎಂದು ನಾನು ಎಲ್ಲೋ ಕೇಳಿದ್ದೆ. ಅದು ಹೋಗಲಿ, ಒಳಗೆ ಕುಳಿತಾಗ ಪುಚ್ರ ಹಾಗೆ ಅವರಿಗೊಂದು ಹೂ, ಇವರಿಗೊಂದು ಹೂ ಕೊಟ್ಟೆ. ಹೋಗಲಿ, ಸುಮ್ಮನೆ ಕೊಡಲಿಲ್ಲಾ, ನನ್ನ ಕೈಯಲ್ಲಿ ಕೊಟ್ಟು, ಅದನ್ನು ಎಲ್ಲೋ ಇಡಲು ಹೇಳಿದೆ. ನಾನು ಹೋಗಲು ಮನಸ್ಸಿಲ್ಲದೇ ತೊಳಲಾಡುತ್ತಿರುವ ಪರಿಸ್ಥಿತಿಯಲ್ಲಿದ್ದಾಗ, ನೀನೇ ಸಹಾಯ ಮಾಡಿ ಹೋಗಲಿ ಬಿಡು ಅಂದೆ. ನಾವಿಬ್ಬರು ಕುಳಿತ ಪರಿಸ್ಥಿತಿ ಹೇಗಿತ್ತು ಹೇಳು ? ಅದರಲ್ಲಿಯೂ ನಿನ್ನ ಬ್ಯಾಗಿನ ಮೇಲೆ ನನ್ನ ಕೈಯು, ನನ್ನ

ಬೆರಳುಗಳಿಗೆ ಆಗಾಗ್ಗೆ ತಾಕುವ ನಿನ್ನ ಬೆರಳುಗಳು. ಈ ವಿಚಿತ್ರ ವರ್ತನೆಯನ್ನು ನಾನು ಏನೆಂದು ಅರ್ಥ ಮಾಡಿಕೊಳ್ಳಲಿ ? ಅವನು ಯಾವದೋ ಆಟವಾಡಿಸಿದಾಗ ನೀನು ಕೂಗುತ್ತಿದ್ದೆ– ಬೇಗ ಬೇಗ ಎಂದು. ನಿನ್ನ ಧ್ವನಿಯಲ್ಲಿಯ ಕಂಪನ ಏನನ್ನು ಸೂಚಿಸುತ್ತಿತ್ತು ? ಹೀಗೆ ನೀನು ಅರಿತು–ಅರಿತು ಮಾಡಿದ ತಪ್ಪು ನನ್ನ ಜೀವನವಿಡಿ ಕೊರಗಿಸುತ್ತಿದೆ ಗೊತ್ತಾ.

ಗೋವಾದಲ್ಲಿ ಪ್ರವಾಸ ಮನಸ್ಸಿಲ್ಲದೇ ನಡೆದಿತ್ತು. ನಿನಗಾಗಿ ನಾನು ಆಸೆಯನ್ನು ತೆಗೆದುಕೊಂಡಿದ್ದೆ– ಜೀವಂತದ್ದಲ್ಲಾ, ಕಲ್ಲಿನದು. ಏಕೆಂದರೆ, ನಿನ್ನ ಸ್ನೇಹಿಜೆಗೆ ಸರಿಯಾಗುತ್ತೆ ಎಂದು ನನಗೆ ಒಂದು ದೌರ್ಬಲ್ಯವಿದೆ. ಅದು ನನ್ನ–ನಿನ್ನ ಕತೆಯನ್ನು ದುಃಖಾಂತಕ್ಕೆ ತಳ್ಳಿತು. ನಾನು ಖುಷಿಯಿಂದ ಎಲ್ಲವನ್ನೂ 'ನನ್ನ' ಹೇಳಿಬಿಟ್ಟೆ. ಆದರೆ ಅದು ಮಹಾನ್ ಗ್ರಂಥದ ಕತೆಯಂತೆ ಇಷ್ಟು ಬೇಗ ಹರಡುತ್ತದೆ ಎಂದುಕೊಂಡಿದ್ದಿಲ್ಲಾ. ಗೋವಾದಿಂದ ಬಿಟ್ಟು ಬೇಗ ಬಂದು ನಿನ್ನ ನೋಡುವೆನೋ ಎಂದುಕೊಂಡು, ನನ್ನ ಗೆಳೆಯರಿಂದ ಬೇರೆಯಾಗಿ ಒಂದು ದಿನ ಮುಂಚಿತವಾಗಿ ನಿನ್ನ ನೋಡಲು. ಆದರೆ, ನೀ ಕ್ಲಾಸಿನಲ್ಲಿ ಕಾಣಲಿಲ್ಲಾ. ಅದನ್ನು ಏನೂಂತ ತಿಳಿದುಕೊಳ್ಳಲಿ ? ಅದೂ ಕಾಲೇಜಿಗೆ ಬಂದು, ಕ್ಲಾಸಿಗೆ ಬರಲಿಲ್ಲಾ. ರಾಜುಗೆ ಎಲ್ಲಾ ಗೊತ್ತಿತ್ತು. ಅವನೇ ಹೇಳಿದ–'ಹೀಗೆ' ಎಂದು. ಆದರೆ ನನಗೆ ಏನು ಮಾಡಲು ತೋಚಲಿಲ್ಲ. ನನಗೆ ಒಂದೂ ಅರ್ಥವಾಗದೇ ಒಂದು ವಾರವನ್ನೇ ಕಳೆದೆ. ಆದರೆ ಅದು ಸ್ವಲ್ಪ–ಸ್ವಲ್ಪವಾಗಿ ಬಯಲಿಗೆ ಬೀಳುತ್ತಿತ್ತು. ನನ್ನ–ನಿನ್ನ ಸಂಬಂಧವನ್ನು ಕುರಿತು ರಂಗೇರಿಸಿತ್ತು. ಕತೆಗೆ ನಾನು ನಿಜವಾಗಿ ಬಹಳ ಹೆದರಿದ್ದೆ. ನಿಮ್ಮ ಅಂಕಲ್‌ಗೆ ತಿಳಿದು, ನನ್ನ ಜೀವನ ಹಾಳಾಗುತ್ತೆ ಅಂತ; ಆದರೆ ಹಾಗಾಗಲಿಲ್ಲ. ಬದಲಾಗಿ ನನ್ನ ಗೆಳೆಯರು ನನ್ನ ಹೆಸರು ನಿನ್ನ ಎದುರಿಗೆ ಕೂಗಿ, ನಿನ್ನ ಮನಸ್ಸನ್ನು ನೋಯಿಸಿದ್ದರು ಎಂಬುದು ತಿಳೀತಾ ಬಂತು. ನಾನು ನಿಸ್ಸಹಾಯಕನಾಗಿದ್ದೆ.

ಆಗ ಏನೂ ಮಾಡಲು ತೋಚದೇ ನಿನ್ನ ಹಿಂದೆ ಸುತ್ತುತ್ತಿದ್ದೆ. ಹುಚ್ಚನಾಗಿ ಅಲ್ಲ, ಏನೋ ಹೇಳಬೇಕೆಂದಿದ್ದೆ. ಬರೆದು ತಿಳಿಸಲು ನಿನ್ನ ನೋಟ್ಸ್ ಕೇಳಿದೆ. ಎಲ್ಲಿ ಕೊಟ್ಟೆ ನೀ ? 'ಇಲ್ಲಾ' ಎಂಬ ಸಣ್ಣ ಸುಳ್ಳನ್ನು ಹೇಳಿ, ನನ್ನ

ಸಾಗು ಹಾಕಿದ್ದೆ. ನೀ ಬಂದಾಗ, ಒಬ್ಬಳೇ ಇದ್ದಾಗ ಏನಾದರೂ ಮಾತಾಡ ಬೇಕೆಂದಿದ್ದೆ. ಆದರೆ ನಿನ್ನ ಗೆಳತಿ– ಓ, ಅವಳನ್ನು ನೋಡಿದರೆ ಇಂದಿಗೂ ನನಗೆ ಏನೋ ಹೆದರಿಕೆಯಾಗುತ್ತೆ. ಅವಳು ಸದಾ ನಿನ್ನ ಜೊತೆಗೆ ಇರುತ್ತಿದ್ದಳು. ಮತ್ತೊಬ್ಬಳು ನನಗೆ ಏನೋ ಒಂದು ಮಾತು ಹೇಳಿದಳು. ಹೀಗೆ ನೀನು ಸುತ್ತುವರಿಯಲ್ಪಟ್ಟಿದ್ದೆ. ನಿನಗೆ ಯಾವ ಚಿಂತೆಯೂ ಇರಲಿಲ್ಲಾ. ಆದರೆ ನೀ ಎಷ್ಟು ಬೇಗ ಬದಲಾದೆ ಗೊತ್ತಾ ? ನಾ ಯಾಕೆ ಹಿಂದೆ ತಿರುಗುತ್ತಿದ್ದೆ ಎಂಬುದು ನೀ ಅರ್ಥ ಮಾಡಿಕೊಳ್ಳಲಿಲ್ಲಾ. ನನಗೆ ಗೊತ್ತು, ನಿನಗೆ ಬಹಳ ನೋವಾಗಿದೆ ಅಂತ. ಏಕೆಂದರೆ, ನನ್ನ ಗೆಳಯರು ತಪ್ಪು ಮಾಡಿದ್ದರು. ಆದರೆ ಬುದ್ಧಿವಂತೆ ಅಂತ ತಿಳಿದಿದ್ದ ನೀನು, ಅವರಿಗಿಂತ ದೊಡ್ಡ ತಪ್ಪು ಮಾಡಿದೆ. ಒಂದು ಮನೆಗೆ ನಾವೆಲ್ಲರೂ ಹೋಗಿದ್ದೆವು. ಆಗ ನೀನು, ನನ್ನ ವಿರುದ್ಧ ಮನಸ್ಸಿಗೆ ಗಾಯವಾಗುವ ಚಟುವಟಿಕೆಗಳನ್ನು ಆರಂಭಿಸಿದ್ದೆ. ಅಂದೇ ನಾನು ನನ್ನ ಭವಿಷ್ಯತ್ತನ್ನು ಊಹಿಸಿಕೊಂಡೆ. ಮುಂದೆ ಹೀಗೆ ಆಗುತ್ತದೆ ಎಂದು ಮೊನ್ನೆ ಪ್ರೊಫೆಸರ್ ಹ್ಯಾಮ್ಲೆಟ್, ನಾಟಕ ಮಾಡುವಾಗ ನಾಯಕ ಹ್ಯಾಮ್ಲೆಟ್ ಹೇಳುವ ಮಾತು ಹೇಳಿದರು. ನಿನಗೆ ಗೊತ್ತಿರಬೇಕು– Fraility thy name is woman.

□



ಗೆಳೆಯ
ಶಾಂತನಾಯ್ಕ ಶಿರಗಾನಹಳ್ಳಿ
ಸದಾ ಶಾಂತವಾಗಿರುವ
ಮನೋಧರ್ಮ ಕಾಯ್ದುಕೊಂಡು
ಬಂದದ್ದರಿಂದಲೇ ನಮ್ಮೆಲ್ಲರಲ್ಲಿ
ಆತ್ಮೀಯತೆ ಹುಟ್ಟಿಸಿದವ.
ಕರ್ನಾಟಕ ವಿಶ್ವವಿದ್ಯಾಲಯದ
ವಿದ್ಯಾರ್ಥಿಯಾಗಿದ್ದಾಗಲೇ ಒಡಲ
ಅಶಾಂತಿಯನ್ನು ಹತ್ತಿಕ್ಕಿಕೊಂಡೇ,
ಬದುಕಿಗಾಗಿ, ಭಾವಗಳಿಗಾಗಿ
ನಡೆಸುತ್ತಿದ್ದ ಹುಡುಕಾಟಗಳ ಸಂದರ್ಭದಲ್ಲಿಯೇ ಈಗ ನಡೆಯುತ್ತಿರುವ ಹಾದಿಯ ಕಿರು ಹೆಜ್ಜೆಗಳನ್ನು ಪರಿಚಯಿಸಿದವ.

ನಾವೆಲ್ಲ ನೋಡ ನೋಡುತ್ತಿರುವಂತೆಯೇ ಚುನಾವಣೆಯ ಕಣ ಪ್ರವೇಶಿಸಿ ಪ್ರಥಮ ಯತ್ನದಲ್ಲೇ ಬೆರಗು ಮೂಡಿಸುವಂತ ಸ್ಪರ್ಧೆ ತೋರಿ, ಇನ್ನೇನು ಅದೇ ಚಕ್ರವ್ಯೂಹದಲ್ಲಿ ಕಳೆದು ಹೋದ ಎನ್ನುತ್ತಿರುವಂತೆಯೇ ಆಕಾಶವಾಣಿಯ ನೆಮ್ಮದಿಯ ಸರ್ಕಾರಿ ನೌಕರಿ ಸೇರಿದ್ದು ಕಂಡ ನಮಗೆ, ಕಥೆಗಳ ಗುಚ್ಛ ಹಿಡಿದು ಎದುರಾದಾಗ ಖಾತ್ರಿಯಾದದ್ದು, ಶಾಂತನಾಯ್ಕನ ಒಳಗಣ ಅಶಾಂತಿ ಇನ್ನೂ ಕೆಲಸ ಮಾಡುತ್ತಲೇ ಇದೆ ಎಂಬುದು.

ನಾವು ಕಂಡ ಶಾಂತನಾಯ್ಕನ ಬದುಕು, ಬವಣೆ, ಹೋರಾಟದ ಆಶಯಗಳೇ ಕಥೆಗಳಾಗಿ ರೂಪುಗೊಂಡಿವೆ. ಕಥೆಗಳನ್ನು ಇಂಥಹುದೇ ವರ್ಗಕ್ಕೆ ಸೇರಿದವುಗಳೆಂದು ವಾದಿಸಿ ಸಾಧಿಸಬೇಕಾದದ್ದೇನೂ ಇಲ್ಲ. ಕನ್ನಡ ಕಥಾಲೋಕದಲ್ಲಿ ಅಷ್ಟಾಗಿ ದಾಖಲಾಗದ, ದಾಖಲಾಗಿಯೂ ಗಮನ ಸೆಳೆಯದೇ ಹೋದ ಜೀವನ ವೃತ್ತಾಂತಗಳ, ವಿವರಗಳ, ಸೆಳಕುಗಳು ಇಲ್ಲಿವೆ. ಓದುವವನ ಒಳಗಣ್ಣೆದುರು ಮೂಡಬಲ್ಲ ಶಕ್ತಿಯಂತೂ ಈ ಕಥೆಗಳಿಗಿದೆ. ಒಳಗಣ್ಣು ತೆರೆದು ಓದುವ ಓದುಗ ಮಾತ್ರ ಬೇಕು !

ಮೋಹನ ನಾಗಮ್ಮನವರ
ಧಾರವಾಡ
ಸದಸ್ಯ
ಕರ್ನಾಟಕ ಸಾಹಿತ್ಯ ಅಕಾಡೆಮಿ